
ಕರ್ನಾಟಕ ನಾಟಕ ಅಕಾಡೆಮಿ



# ಉಡುಪಿ ಜಿಲ್ಲಾ ರಂಗಮಾಹಿತಿ

ಪದ್ಮಾ ಕೊಡಗು

ಜಿಲ್ಲಾ ರಂಗಮಾಹಿತಿ ಮಾಲಿಕೆ

# ಉಡುಪಿ ಜಿಲ್ಲಾ ರಂಗ ಮಾಹಿತಿ

(ಉಡುಪಿ ಜಿಲ್ಲಾ ರಂಗ ನಟರು, ನಿರ್ದೇಶಕರು, ನೇಪಥ್ಯ ಕಲಾವಿದರು ಹಾಗೂ ರಂಗ ಸಂಘಟನೆಗಳ ಮಾಹಿತಿ ಕೈಪಿಡಿ)

ಪ್ರಕಟಣೆಯ ವರ್ಷ: 2019

ಶ್ರೀಮತಿ ಪದ್ಮಾ ಕೊಡಗು

ಕರ್ನಾಟಕ ನಾಟಕ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು –02

**Udupi Jilla Rangamahiti-** *A data collection of theatre practitioners and areal view of Udupi District theatre history written by Padma Kodagu, published by Dr. A.C. Shailaja, Registrar Karnataka Nataka Acdemy, Kannada Bhavana, Bangaluru - 560 002 Phone: 080-22237484*

| | | |
|---|---|---|
| ಹಕ್ಕುಗಳು | : | ಕರ್ನಾಟಕ ನಾಟಕ ಅಕಾಡೆಮಿ |
| ಮೊದಲ ಮುದ್ರಣ | : | 2019 |
| ಪ್ರತಿಗಳು | : | 500 |
| ಪುಟಗಳು | : | VI+101 |
| ಬೆಲೆ | : | ರೂ. 65/- |
| ಪ್ರಕಾಶಕರು | : | ಡಾ. ಎ.ಸಿ. ಶೈಲಜಾ, ರಿಜಿಸ್ಟ್ರಾರ್<br>ಕರ್ನಾಟಕ ನಾಟಕ ಅಕಾಡೆಮಿ<br>ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು<br>ದೂರವಾಣಿ: 080-22237484 |
| ಬೆರಳಚ್ಚು & ಪುಟವಿನ್ಯಾಸ | : | ಕ್ರಿಯೇಟಿವ್ ಐಸ್, ಕಟಪಾಡಿ, ಉಡುಪಿ |
| ಮುಖಪುಟ ವಿನ್ಯಾಸ | : | ಕೃಷ್ಣ ರಾಯಚೂರು |
| ಮುದ್ರಣ | : | ಈಶ್ವರಿ ಗ್ರಾಫಿಕ್ಸ್, ಚಾಮರಾಜಪೇಟೆ,<br>ಬೆಂಗಳೂರು. |

# ಅಧ್ಯಕ್ಷರ ನುಡಿ.

ಅಕಾಡೆಮಿ ಒಂದು ಹರಿಯುವ ನದಿ ಇದ್ದಂತೆ. ನದಿಯು ತನ್ನ ದಾರಿಗುಂಟ ವಿವಿಧ ರೀತಿಯಲ್ಲಿ ಹರಿಯುತ್ತದೆ. ನಿಧಾನವಾಗಿ, ರಭಸವಾಗಿ, ಆಳಕ್ಕೆ ಧುಮುಕುತ್ತಾ, ಅಲ್ಲಲ್ಲಿ ಬಳುಕುತ್ತಾ ಕೆಲವೊಮ್ಮೆ ದೊಡ್ಡ ತಿರುವಿನಲ್ಲಿ ಬಾಗಿ ಬಂದ ದಿಕ್ಕಿನಿಂದಲೇ ಹರಿಯುವಂತೆ ಅನ್ನಿಸುತ್ತದೆ. ಆದರೆ ನಿಜವಾಗಿ ನೀರಿನ ಒಟ್ಟೂ ಹರಿವಿನ ಪ್ರಮಾಣ ಎಲ್ಲ ಕಡೆಯೂ ಬಹುತೇಕ ಒಂದೇ ಇರುತ್ತದೆ. ಆಯಾ ಪ್ರದೇಶಗಳ ಭೌತಿಕ ಪರಿಸರಕ್ಕೆ ಅನುಗುಣವಾಗಿ ನೀರ ಹರಿವು ತನ್ನನ್ನು ತಾನು ಒಗ್ಗಿಸಿಕೊಂಡಿರುತ್ತದೆ. ಕರ್ನಾಟಕ ನಾಟಕ ಅಕಾಡೆಮಿಯು ಕಾಲಕಾಲಕ್ಕೆ ವಿವಿಧ ಅಧ್ಯಕ್ಷರು ಮತ್ತು ಸದಸ್ಯರನ್ನು ಹೊಂದುತ್ತಿದ್ದರೂ, ಅದರ ಆಂತರ್ಯದ ಸೆಲೆ ಒಂದೇ ಆಗಿದೆ. ಇದೇ ಕಾರಣದಿಂದಲೇ ಹಿಂದಿನ ಅಕಾಡೆಮಿಗಳು ಹರಿಯಬಿಟ್ಟಿರುವ ಯೋಜನೆಗಳನ್ನು ನಾವು ಈಗ ಜತನವಾಗಿ ಮುಂದುವರಿಸಿಕೊಂಡು ಹೋಗುತ್ತಿದ್ದೇವೆ. ನಾಡಿನ ವಿವಿಧ ಜಿಲ್ಲೆಗಳ ರಂಗಮಾಹಿತಿಯನ್ನು ಸಂಗ್ರಹಿಸಿ ಹೊರತರಬೇಕೆನ್ನುವ ಬಹಳ ಮೌಲಿಕವಾದ ಕಾರ್ಯವನ್ನು ಶೇಖ್ ಮಾಸ್ತರ, ಗುಡಿಹಳ್ಳಿ ನಾಗರಾಜ, ಎಂ.ಎಸ್. ಗುಣಶೀಲನ್, ಎಸ್.ಕೆ.ಕೊನೆಸಾಗರ ಮತ್ತು ಮದ್ದಣ್ಣ ರಟ್ಟೇಹಳ್ಳಿ ಇವರುಗಳು ಬಹಳ ಚೆನ್ನಾಗಿ ನಿರ್ವಹಿಸಿದ್ದಾರೆ. ಇಂತಹ ಕಾರ್ಯಗಳು ಎಂದಿಗೂ ಪರಿಪೂರ್ಣವಲ್ಲ. ಅದೊಂದು ನಿರಂತರವಾಗಿ ಪರಿಷ್ಕರಣೆಗೆ ಒಳಗಾಗಬೇಕಾದ ಸಂಗತಿ ಎಂಬ ಸತ್ಯದ ಅರಿವು ನಮಗೂ ಇದೆ.

ಈ ಹಿನ್ನೆಲೆಯಲ್ಲಿ ಕರಾವಳಿಯಲ್ಲಿ ಅದೆಷ್ಟೋ ದಶಕಗಳಿಂದ ರಂಗಚಟುವಟಿಕೆಗಳಲ್ಲಿ ಔನತ್ಯವನ್ನು ಕಾಯ್ದುಕೊಂಡಿರುವ ಉಡುಪಿ ಜಿಲ್ಲೆಯ ರಂಗಮಾಹಿತಿಯನ್ನು ಪುಸ್ತಕ ರೂಪದಲ್ಲಿ ಹೊರತರುತ್ತಿದ್ದೇವೆ. ಮೂರು-ನಾಲ್ಕು ತಲೆಮಾರುಗಳಲ್ಲಿ ಹಂಚಿಹೋಗಿರುವ ರಂಗಕರ್ಮಿಗಳ ಮತ್ತು ರಂಗಕ್ರಿಯೆಗಳ ಸಮಗ್ರ ದಾಖಲೆಗಳನ್ನು ಸಂಗ್ರಹಿಸುವುದೇ ಒಂದು ಸವಾಲು. ಆದರೂ ಅಕಾಡೆಮಿ ತಲುಪಬಹುದಾದಷ್ಟು ಜನರನ್ನು ಪ್ರಯತ್ನಪೂರ್ವಕವಾಗಿ ತಲುಪುವ ಮತ್ತು ಅವರಿಂದ ಮಾಹಿತಿ ಸಂಗ್ರಹಿಸುವ ಕಾರ್ಯವನ್ನು ಮಾಡಿದೆ. ಈ ನಿಟ್ಟಿನಲ್ಲಿ ನಮ್ಮ ಸದಸ್ಯರಾದ ಬಾಸುಮ ಕೊಡಗು ಹಾಗೂ ಈ ಕೃತಿಯನ್ನು ಸಂಯೋಜಿಸಿರುವ ಪದ್ಮಾ ಕೊಡಗು ಇವರ ಶ್ರಮ ಶ್ಲಾಘನೀಯ.

ಇದು ಒಂದು ಸಮಗ್ರ ದಾಖಲೆಯಲ್ಲ ಎಂಬ ಅರಿವು ನಮಗಿದೆ. ಅಲ್ಲದೆ ನಮ್ಮ ಕೋರಿಕೆಯ ಅವಧಿಯೊಳಗೆ ತಲುಪದೇ ಇರುವ ಮಾಹಿತಿಗಳು ಅಚ್ಚಾಗಲಿಲ್ಲ ಎಂಬ ವಿಷಾದವೂ ನಮಗಿದೆ. ಇದೊಂದು ಸಮೂಹ ಪ್ರಕ್ರಿಯೆ ಆದ್ದರಿಂದ ಮುಂದೆಯೂ ಎಲ್ಲ ರಂಗಕರ್ಮಿಗಳು ಒಗ್ಗಟ್ಟಿನಿಂದ ಅಪೇಕ್ಷಿತ ಸಾಧನೆ ಮಾಡುವಂತಾಗಲಿ ಎಂದು ಅಕಾಡೆಮಿ ಆಶಿಸುತ್ತದೆ.

– ಜೆ.ಲೋಕೇಶ್

ಅಧ್ಯಕ್ಷರು, ಕರ್ನಾಟಕ ನಾಟಕ ಅಕಾಡೆಮಿ.

## ಲೇಖಕರ ನುಡಿ

ಪ್ರದರ್ಶನ ಕಲೆಗಳಿಗೆ ಹೆಸರಾಗಿರುವ ಕರಾವಳಿಯ ಉಡುಪಿ ಜಿಲ್ಲೆ ರಂಗಭೂಮಿಯಲ್ಲೂ ಹೊಸ ಇತಿಹಾಸವನ್ನೆ ಸೃಷ್ಟಿಸಿದ ಕಲೆಯ ಬೀಡು. ಜನಪದ ರಂಗಭೂಮಿ, ಯಕ್ಷಗಾನ ಹೀಗೆ ಪ್ರದರ್ಶನ ಕಲೆಗಳಲ್ಲದೆ ಕನ್ನಡ ನಾಟಕ ಮತ್ತು ತುಳು ನಾಟಕಗಳ ಮೂಲಕ ರಂಗಭೂಮಿಯನ್ನು ಬೆಳೆಸಿದ ಇತಿಹಾಸ ಈ ನೆಲದ್ದು. ಇಂತಹ ಇತಿಹಾಸವುಳ್ಳ ರಂಗಭೂಮಿಯಲ್ಲಿ ಹೆಸರು ಮಾಡಿ ಹೋದವರೆಷ್ಟೋ ಜನ ನಮ್ಮ ದಾಖಲೆಗಳಲ್ಲಿ ಇಲ್ಲದಿದ್ದರು ಈಗ ನಮ್ಮ ಮುಂದೆ ಎಷ್ಟೋ ಸಾಧಕರಿದ್ದಾರೆ. ಅಂತಹವರು ಸಾಧನೆಯ ವಿವರದೊಂದಿಗೆ ಪರಿಚಯಿಸುವ ಇಚ್ಛೆ ಕರ್ನಾಟಕ ನಾಟಕ ಅಕಾಡೆಮಿಯದ್ದು. ಕಳೆದ ಎರಡು ವರುಷಗಳ ಹಿಂದೆಯೆ ಅಕಾಡೆಮಿ ಈ ಪ್ರಕ್ರಿಯೆ ಪ್ರಾರಂಭಿಸಿದ್ದರೂ ಉಡುಪಿ ಜಿಲ್ಲಾ ಕಲಾವಿದರ ಪರಿಚಯ ಕೃತಿ ಪ್ರಕಟಗೊಂಡಿರಲಿಲ್ಲ.

ಅಕಾಡೆಮಿಯ ಈಗಿನ ಅಧ್ಯಕ್ಷರಾದ ಜಿ. ಲೋಕೇಶರವರ ಅಪೇಕ್ಷೆ ಹಾಗೂ ನಾಟಕ ಆಕಾಡೆಮಿ ಸದಸ್ಯರಾದ ಬಾಸುಮ ಕೊಡಗುರವರ ಕಾಳಜಿಯಿಂದ ಈ ಕಾರ್ಯಕ್ಕೆ ಮತ್ತೆ ಚಾಲನೆ ಸಿಕ್ಕಿದೆ. ಪ್ರದೀಪ್‌ಚಂದ್ರ ಕುತ್ಪಾಡಿಯವರು ಕಲಾವಿದರ ಮಾಹಿತಿ ಸಂಗ್ರಹದಲ್ಲಿ ಸಹಕರಿಸಿರುತ್ತಾರೆ. ಈಗ ಈ ಕಡಿಮೆ ಅವಧಿಯಲ್ಲಿ ನಮಗೆ ಪರಿಚಯವಿರುವ, ನಮ್ಮ ಪರಿಚಯದಲ್ಲಿ ಸಂಗ್ರಹಿಸಲು ಸಾಧ್ಯವಾದ ಕಲಾವಿದರ ಪರಿಚಯ ನಿಮ್ಮ ಮುಂದೆ ಇಡುತ್ತಿದ್ದೇವೆ. ರಂಗದ ಮುಂದೆ ಹಿಂದೆ ಸಕ್ರೀಯರಾಗಿರುವ ಇನ್ನೂ ಅನೇಕರ ವಿವರಗಳು ಸಮಯಕ್ಕೆ ಸರಿಯಾಗಿ ನಮ್ಮ ಕೈಸೇರಲಿಲ್ಲ ಎಂಬ ವಿಷಾದವೂ ನಮಗಿದೆ.

ಕನಿಷ್ಠ 5 ವರ್ಷಗಳಿಗಿಂತ ಹೆಚ್ಚು ಕಾಲ ರಂಗಭೂಮಿಯಲ್ಲಿ ಸಕ್ರೀಯರಾಗಿರುವ ಕಲಾವಿದರ ವಿವರಗಳನ್ನು ಪ್ರಕಟಿಸುವ ಪ್ರಯತ್ನ ಮಾಡಿದ್ದೇವೆ. ಈ ಬಾರಿ ಉಡುಪಿಯಲ್ಲೇ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭ ಆಗುತ್ತಿರುವ ಸಂದರ್ಭದಲ್ಲಿ ಈ ಕೈಪಿಡಿ ಬಿಡುಗಡೆ ಯಾಗುತ್ತಿರುವುದು ಸಂತಸದ ಸಂಗತಿ. ಇದಕ್ಕೆ ಸಹಕರಿಸಿದ ಅಕಾಡೆಮಿಯ ಸರ್ವರಿಗೂ ಕೃತಜ್ಞತೆಗಳು. ನನಗೆ ಈ ಕೃತಿಗಾಗಿ ಮಾಹಿತಿ ಸಂಗ್ರಹಿಸಲು ಅವಕಾಶ ಕೊಟ್ಟದಕ್ಕೂ ಧನ್ಯವಾದಗಳು.

**ಪದ್ಮಾ ಕೊಡಗು**
ನಿರ್ದೇಶಕಿ, ವನಸುಮ ವೇದಿಕೆ ಕಟಪಾಡಿ, ಉಡುಪಿ
ಮೊ : 8762445445, 9900600207

## ಆರಂಭಿಕ ನುಡಿ

ನಾಟಕ ಅಕಾಡೆಮಿ ಸದಸ್ಯನಾಗಿ ಇದೊಂದು ಸಂಭ್ರಮದ ಸಂಗತಿ. 2018ನೇ ಸಾಲಿನ ವಾರ್ಷಿಕ ಪ್ರಶಸ್ತಿ ಸಮಾರಂಭ ನನ್ನ ಸದಸ್ಯವ್ಯಾಪ್ತಿಯ ಉಡುಪಿಯಲ್ಲಿ ಜರುಗುತ್ತಿರುವುದು ಮತ್ತು ಅದೇ ಹೊತ್ತಿಗೆ ಉಡುಪಿ ಜಿಲ್ಲಾ ರಂಗಮಾಹಿತಿ ಪುಸ್ತಕ ಬಿಡುಗಡೆ ಆಗುತ್ತಿರುವುದು. ಇದನ್ನು ಸಾಧ್ಯವಾಗಿಸಿದ ಅಕಾಡೆಮಿ ಅಧ್ಯಕ್ಷರಿಗೂ, ರಿಜಿಸ್ಟ್ರಾರ್‌ರಿಗೂ ಸರ್ವ ಸದಸ್ಯರಿಗೂ ನಾನು ಆಭಾರಿ.

ಉಡುಪಿ ಜಿಲ್ಲೆಯಲ್ಲಿ ನನ್ನ ರಂಗಚಟುವಟಿಕೆ ಆರಂಭವಾದದ್ದು 1999ರ ನಂತರ. ಆಗ ಬೆರಳೆಣಿಕೆಯ ರಂಗತಂಡಗಳು ಉಡುಪಿಯಲ್ಲಿ ಸಕ್ರೀಯವಾಗಿದ್ದವು. ಆದರೆ ಈಗ ಬೆರಗುಗೊಳಿಸುವಷ್ಟು ಸಂಸ್ಥೆಗಳು, ರಂಗಕಲಾವಿದರು ಉಡುಪಿಯಲ್ಲಿ ಸಕ್ರೀಯರಾಗಿದ್ದಾರೆ. ಮೈಸೂರು ಬೆಂಗಳೂರಿನಂತಹ ಪಟ್ಟಣಗಳಲ್ಲಿ ಇರುವ ಸೌಲಭ್ಯಗಳು ರಂಗಚಟುವಟಿಕೆಯ ವಿಸ್ತರಣೆಗೆ ಪೂರಕವಾಗಿದ್ದರೆ, ಉಡುಪಿ ಜಿಲ್ಲೆಯಲ್ಲಿ ಇದೊಂದು ಸಾಹಸ ಅನ್ನಬೇಕು. ಭೌಗೋಳಿಕವಾಗಿ ಬಹುತೇಕ ಹಳ್ಳಿಪ್ರದೇಶಗಳೇ ಆಗಿದ್ದು ರಂಗಕಲಾವಿದರು ಒಂದೆಡೆ ಒಟ್ಟಾಗುವುದೇ ಕಷ್ಟ. ಅದೂ ತಡರಾತ್ರಿ ರಿಹರ್ಸಲ್ ಮುಗಿಸಿ ಮನೆಸೇರಬೇಕಾದರೆ ಬಹಳಷ್ಟು ರಿಸ್ಕ್‌ಗಳನ್ನು ಎದುರಿಸಬೇಕಾಗುತ್ತೆ. ತಂಡಗಳು ಹೆಣ್ಣು ಮಕ್ಕಳನ್ನು ಅವರವರ ಮನೆಗಳಿಗೆ ಬಿಟ್ಟುಬರುವ ಹೊಣೆಯನ್ನು ಹೊತ್ತುಕೊಳ್ಳಬೇಕಾಗುತ್ತದೆ. ಅದೂ ಅಲ್ಲದೆ ಇಲ್ಲಿಯ ಬಹುತೇಕ ತಂಡಗಳು ಸರಕಾರದಿಂದ ಬರುವ ಅನುದಾನಕ್ಕೋ, ಧನಸಹಾಯಕ್ಕೋ ಅವಲಂಬಿಸಿ ಚಟುವಟಿಕೆ ಮಾಡುತ್ತಿಲ್ಲ. ನಾಟಕದ ವೆಚ್ಚ ಭರಿಸುವುದೂ ಒಂದು ಚಾಲೆಂಜ್ ಆಗಿರುತ್ತೆ. ಇನ್ನು ಅನೇಕ ದಶಕಗಳಿಂದ ಪ್ರಭಾವಿತವಾಗಿರುವ ತುಳು ವೃತ್ತಿ ನಾಟಕಗಳು ಹಾಗೂ ಅಮೆಚೂರ್ ಹಾಸ್ಯನಾಟಕಗಳಿಗೆ ಒಗ್ಗಿಕೊಂಡ ಪ್ರೇಕ್ಷಕರನ್ನು ಆಧುನಿಕ ಚಿಂತನೆಯ ಪ್ರಯೋಗ ರಂಗಭೂಮಿಯ ಕಡೆಗೆ ಒಲಿಸಿಕೊಳ್ಳುವುದು ಅಷ್ಟು ಸುಲಭಸಾಧ್ಯವಾಗಿರಲಿಲ್ಲ. ಆದರೆ ಅದನ್ನೂ ಉಡುಪಿಯ ರಂಗತಂಡಗಳು ಸಾಧಿಸಿಬಿಟ್ಟಿವೆ. 90ರ ದಶಕದಲ್ಲಿ ಪ್ರಯೋಗ ರಂಗಭೂಮಿ ನಾಟಕಗಳಿಗೆ ನೂರಿನ್ನೂರು ಪ್ರೇಕ್ಷಕರಿದ್ದರೆ, ಈಗ ಆ ಸಂಖ್ಯೆ 2000 ದಾಟುತ್ತದೆ ಎಂದಾದರೆ ಇದಕ್ಕೆ ಕಾರಣರಾದ ಎಲ್ಲರೂ ಅಭಿನಂದನಾರ್ಹರು.

ಇತ್ತೀಚೆಗೆ ಹೊಸ ಹೊಸ ಕಲಾವಿದರು, ನಿರ್ದೇಶಕರು ಅಕಾಡೆಮಿಕ್ ತರಬೇತಿಗಳನ್ನು ಪಡೆದು ಸಕ್ರಿಯರಾಗಿರುವುದು ಒಳ್ಳೆಯ ಬೆಳವಣಿಗೆ. ಸಾಕಷ್ಟು ಚಟುವಟಿಕೆಗಳು ಆಗುತ್ತಿದ್ದರೂ ಪ್ರಯೋಗರಂಗಭೂಮಿಯ ದೃಷ್ಟಿಯಿಂದ ಅಧ್ಯಯನದ ಕೊರತೆ ಬಹಳಷ್ಟು ರಂಗಕರ್ಮಿಗಳಲ್ಲಿತ್ತು. ಈಗ ಅಧ್ಯಯನಶೀಲರ ಸಂಖ್ಯೆ ವೃದ್ಧಿಸುತ್ತಿದೆ. ಒಟ್ಟಿನಲ್ಲಿ ಉಡುಪಿ ಜಿಲ್ಲೆ ಆಧುನಿಕ ರಂಗಭೂಮಿಯ ಒಂದು ಫಲವತ್ತಾದ ಜಿಲ್ಲೆ ಎಂಬ ಹೆಮ್ಮೆ ನಮ್ಮಲ್ಲಿದೆ.

**– ಬಾಸುಮ ಕೊಡಗು**

ಸದಸ್ಯರು, ಕರ್ನಾಟಕ ನಾಟಕ ಅಕಾಡೆಮಿ

# ಅಕಾಡೆಮಿಯ ಅಧ್ಯಕ್ಷರು, ಸದಸ್ಯರು ಮತ್ತು ಕಛೇರಿ ಸಿಬ್ಬಂದಿ

ಅಧ್ಯಕ್ಷರು
ಶ್ರೀ ಜೆ. ಲೋಕೇಶ್

ರಿಜಿಸ್ಟ್ರಾರ್
ಶ್ರೀಮತಿ ಶೈಲಜಾ ಎ.ಸಿ.

ಸದಸ್ಯರು : ಶ್ರೀ ಆರ್. ವೆಂಕಟರಾಜು
ಶ್ರೀ ವಿಠ್ಠಲ್ ಬಿ. (ಅಪ್ಪಯ್ಯ)
ಶ್ರೀ ಬಿ.ಎಸ್. ವಿದ್ಯಾರಣ್ಯ
ಶ್ರೀ ರಾಮಕೃಷ್ಣ ಬೆಳ್ತೂರು
ಶ್ರೀ ಮೈಲಾರಪ್ಪ
ಶ್ರೀ ಹೊನ್ನ ನಾಯಕ
ಶ್ರೀ ಬೇಲೂರು ರಘುನಂದನ್
ಶ್ರೀ ಬಾಸುಮ ಕೊಡಗು
ಶ್ರೀ ಸಂದೀಪ್ ಬಿ.
ಶ್ರೀಮತಿ ಶಿವಕುಮಾರಿ
ಶ್ರೀಮತಿ ಶಾಂತಾ ಕುಲಕರ್ಣಿ
ಶ್ರೀ ಕೇದಾರಸ್ವಾಮಿ ಶೇಖರಯ್ಯ ಶಿರಹಟ್ಟಿಮಠ
ಡಾ। ಗಣೇಶ ಅಮೀನಗಡ
ಶ್ರೀ ಬಸವರಾಜಪ್ಪ ಶಿವಪ್ಪ ದೊಡ್ಡಮನಿ
ಶ್ರೀ ಜೇವರ್ಗಿ ರಾಜಣ್ಣ
ಶ್ರೀ ಶಶಿಕಾಂತ ಯಡಹಳ್ಳಿ
ಶ್ರೀಮತಿ ಪ್ರತಿಭಾ ಸಾಗರ್

ಯೋಜನಾ ಸಹಾಯಕರು : ಶ್ರೀ ರೇವಣ್ಣ

ಕಛೇರಿ ಸಿಬ್ಬಂದಿ : ಸೌಭಾಗ್ಯಲಕ್ಷ್ಮಿ
ಸುಶೀಲಮ್ಮ
ರಮ್ಯ
ಬೋಜಣ್ಣ
ಶ್ರೀನಿವಾಸ್

# ಉಡುಪಿ ಜಿಲ್ಲೆಯಲ್ಲಿ ಆಧುನಿಕ ರಂಗಭೂಮಿ......

—ಜಯಶೇಖರ ಮಡಪ್ಪಾಡಿ

ನಾಗರೀಕತೆಯ ಅಭಿವೃದ್ಧಿಯಲ್ಲಿ ರಂಗಭೂಮಿ ಮಹತ್ತರ ಪಾತ್ರ ವಹಿಸುತ್ತಲೇ ಬಂದಿದೆ. ಜೀವ ಸಂಕುಲಕ್ಕೆ ಆಹಾರ ತನಗೇ ಗೊತಿಲ್ಲದೇ ಎಷ್ಟು ಪ್ರಮುಖ ಪಾತ್ರ ವಹಿಸುತ್ತಿದೆಯೋ ಅದೇ ರೀತಿ ರಂಗಭೂಮಿ ಮಾನವ ಬದುಕಿನಲ್ಲಿ ತನಗೇ ಅರಿವಿಲ್ಲದಂತೆಯೇ ಹಾಸುಹೊಕ್ಕಾಗಿದೆ. ಸಿಂಧೂ ನಾಗರೀಕತೆಗಿಂತಲೂ ಪೂರ್ವದಲ್ಲಿಯೇ ಸಂವಹನ ಮಾಧ್ಯಮವಾಗಿ ರಂಗಭೂಮಿ ತನ್ನದೇ ಇತಿಹಾಸ ಸೃಷ್ಟಿಸುತ್ತಲೇ ಬಂದಿದೆ. ಮಾನವ ಸಂಬಂಧಗಳನ್ನು ಬೆಸೆಯುವಲ್ಲಿ, ತನ್ನ ಸಾಧನೆಗಳನ್ನು ಸಮಾಜದ ಮುಂದಿಡುವಲ್ಲಿ ಮಾನವನಿಗೆ ಬಹುದೊಡ್ಡ ಅಸ್ತ್ರವಾಗಿ ಸಹಕರಿಸಿದ್ದು ರಂಗಭೂಮಿ ಎಂದರೆ ಖಂಡಿತಾ ತಪ್ಪಾಗದು. ಭಾಷೆಯ ಮಹತ್ವ, ಬಳಕೆ ಇಲ್ಲದೇ ಇದ್ದಾಗಲೂ ಸಂವಹನ ಮಾಧ್ಯಮವಾಗಿ ನಟನೆ, ಸಂಕೇತಗಳು ಬಹುಮುಖ್ಯ ಪಾತ್ರ ವಹಿಸಿವೆ. ಜಗತ್ತಿನಾದ್ಯಂತ ರಂಗಭೂಮಿ ಮಾಧ್ಯಮವು ಭಾಷೆ, ಗಡಿಗಳನ್ನು ಮೀರಿ ಬೆಳೆದಿರುವುದೂ ಇದೇ ಕಾರಣಕ್ಕೆ. ಹಾಗಾಗಿಯೇ ರಂಗಭೂಮಿಗೆ ಬಹುದೊಡ್ಡ ಇತಿಹಾಸ ಸೃಷ್ಟಿ ಸಾಧ್ಯವಾಗಿದೆ.

ರಂಗ ಪ್ರಯೋಗಗಳು ಕರಾವಳಿಯಲ್ಲಿ ವಿಭಿನ್ನ ರೀತಿಯಲ್ಲಿ ತಮ್ಮ ಬೆಳವಣಿಗೆಯನ್ನು ಕಂಡುಕೊಂಡಿವೆ. ಇಲ್ಲಿನ ರಂಗ ಪ್ರಯೋಗಗಳಿಗೆ ಕರಾವಳಿಯ ಗಂಡುಕಲೆ ಎಂದೇ ಪ್ರಸಿದ್ಧವಾದ ಯಕ್ಷಗಾನದ ಕೊಡುಗೆಯೂ ಅಪೂರ್ವವಾಗಿದೆ. ಹಾಗೆ ನೋಡುವುದಾದರೆ ಯಕ್ಷಗಾನವೂ ರಂಗಭೂಮಿಯ ಭಾಗವಾಗಿಯೇ ಸಾಕಷ್ಟು ಅಭಿವೃದ್ಧಿಗೊಂಡಿದೆ. ಒಂದು ಕಾಲದಲ್ಲಿ ಎರಡು ರೂಪಾಯಿ ಟಿಕೇಟು ಪಡೆದು ರಾತ್ರಿಯಿಡೀ ನೆಲದಲ್ಲಿ ಚಾಪೆ, ಚಾದರ ಹಾಸಿಕೊಂಡು ಇಡೀ ಪ್ರಸಂಗವನ್ನು ನೋಡುತ್ತಿದ್ದ ಕಾಲವಿತ್ತು. ಸಾಕಷ್ಟು ಮಂದಿ ಇಡೀ ಪೌರಾಣಿಕ ಕಥಾನಕಗಳನ್ನು ಯಕ್ಷಗಾನದಿಂದಲೇ ಅರಿತುಕೊಂಡಿರುವುದೂ ಇದೆ. ಇದರ ಜೊತೆಗೆ ಕರಾವಳಿಯಲ್ಲಿ ಪ್ರಸಿದ್ಧವಾಗಿರುವ ಧಾರ್ಮಿಕ ಕಾರ್ಯಕ್ರಮಗಳಾದ ಭೂತದ ಕೋಲ, ಜಕ್ಕಿಣಿ, ಗೆಂಡ, ಇವೆಲ್ಲವೂ ಅನಾದಿ ಕಾಲದಿಂದ ರಂಗ ಸಂಬಂಧಗಳ ಜೊತೆಗೆ ಅವೀರ್ಭವಿಸಿದವು. ಇಂದಿಗೂ ಯಕ್ಷಗಾನದ ಪ್ರೇಕ್ಷಕ ಮತ್ತು ಕಲಾವರ್ಗವಿದ್ದಂತೆ ಕೋಲ ಹಾಗೂ ಇತರ ಧಾರ್ಮಿಕ ಪ್ರಯೋಗಗಳಿಗೂ ಅಭಿಮಾನಿಗಳು ಇದ್ದಾರೆ. ಇದೆಲ್ಲದರ ಜೊತೆಗೆ ರಂಗಭೂಮಿ ಬೆಳೆದು ಬಂದಿರುವುದು ಮಾತ್ರ ರೋಚಕವಾಗಿದೆ.

ಮೊದಲು ಆಧುನಿಕ ರಂಗಭೂಮಿಯ ಪರಿಕಲ್ಪನೆಗೆ ಅಷ್ಟೊಂದು ಒತ್ತು ಇರಲಿಲ್ಲ. ಜಾತ್ರೆ, ವಾರ್ಷಿಕೋತ್ಸವಗಳು, ಸಮಾರಂಭಗಳಲ್ಲಿ ಸ್ಥಳೀಯ ಕಲಾಸಕ್ತರು ತಮ್ಮದೇ ರೀತಿಯಲ್ಲಿ ರಂಗಪ್ರಯೋಗಗಳನ್ನು ಸಿದ್ಧಪಡಿಸಿ ಪ್ರಸ್ತುತಪಡಿಸುತ್ತಿದ್ದರು. ರಂಗಭೂಮಿ ಒಂದು ಶಿಕ್ಷಣದ ಭಾಗ ಎನ್ನುವುದರ ಬಗ್ಗೆ ಹೆಚ್ಚು ಅರಿವೂ ಇರಲಿಲ್ಲ ಎಂದರೆ ತಪ್ಪಾಗಲಾರದು. ಅಲ್ಲದೇ ರಂಗ ಪ್ರಯೋಗಗಳು ಜನರಿಗೆ ಅಪರೂಪದ ಮನೋರಂಜನೆಯ ಪ್ರಸ್ತುತಿ ಎನ್ನುವುದರಷ್ಟಕ್ಕೇ ಮಾತ್ರ ಸೀಮಿತವಾಗಿದ್ದೂ ಕೂಡಾ ದೇಶದ ಇತರೆಡೆಗಳಲ್ಲಿ ಬೆಳೆದು ಬಂದ ರಂಗಪ್ರಕ್ರಿಯೆಗಳಿಗಿಂತ ಕರಾವಳಿಯ ರಂಗ ಪ್ರಯೋಗಗಳು ಹಿಂದುಳಿಯಲು ಕಾರಣವಾಗಿದೆ ಎನ್ನುವ ಅಂಶವೂ ಪರಿಗಣನೀಯವಾದದ್ದು. ಆದರೂ ಪೂರ್ವ ರಂಗಭೂಮಿಯಲ್ಲಿ ಉತ್ತರ ಕರ್ನಾಟಕ ಭಾಗದ ವೃತ್ತಿ ನಾಟಕ ಕಂಪೆನಿಗಳು ಕರಾವಳಿಯಲ್ಲಿ ಟೆಂಟ್ ಹಾಕಿಕೊಂಡು ನಾಟಕಗಳನ್ನು ಪ್ರದರ್ಶನ ಮಾಡುತ್ತಾ ರಂಗಭೂಮಿಯ ಒಂದು ವರ್ಗದ ಪ್ರೇಕ್ಷಕರನ್ನು ಹಿಡಿದಿಟ್ಟುಕೊಂಡಿದ್ದವು. ಆದರೆ ಇಲ್ಲಿಯೂ ವೃತ್ತಿ ನಾಟಕಗಳು ಸೀಮಿತ ಮನೋರಂಜನೆಗೆ ಮೀಸಲಾಗಿದ್ದುದು ಕೂಡಾ ಗಮನಾರ್ಹ. ಒಂದರ್ಥದಲ್ಲಿ ಮಡಿವಂತಿಕೆಯ ರಂಗಪ್ರಯೋಗಗಳು, ಸರಿ ತಪ್ಪುಗಳನ್ನು ನಿರ್ಣಯ ಮಾಡುವಂತಹವುಗಳು. ಆದರೆ ಇದೆಲ್ಲವೂ ಕಾಲಕಾಲಕ್ಕೆ ನಿಗಧಿತ ಅವಧಿಯಲ್ಲಿ ಮನೋರಂಜಿಸಿ ಬಳಿಕ ಬೇರೆಡೆಗೆ ವರ್ಗಾಯಿಸಲ್ಪಡುವ ರಂಗಪ್ರಕ್ರಿಯೆಗಳು. ಅಂದರೆ ರಂಗ ಪ್ರಯೋಗಗಳ ಬಳಿಕ ರಂಗಕರ್ಮಿಗಳಿಗೂ ಪ್ರೇಕ್ಷಕನಿಗೂ ಯಾವುದೇ ಗಂಭೀರ ರಂಗ ಸಂಬಂಧಗಳು ಉಳಿಯುತ್ತಿರಲಿಲ್ಲ.

ವಿಶೇಷವಾಗಿ ಕರಾವಳಿಯ ಜನಸಾಮಾನ್ಯರ ಬದುಕು ರಂಗಪ್ರಯೋಗಗಳಲ್ಲಿ ತೊಡಗಿಸಿಕೊಳ್ಳುವುದಕ್ಕೆ ಬಹಳ ದೊಡ್ಡ ಸವಾಲುಗಳಿದ್ದುವು. ಅವು ಸ್ವಲ್ಪ ಮಟ್ಟಿಗೆ ಈಗಲೂ ಮುಂದುವರೆದುಕೊಂಡು ಬಂದಿವೆ. ಇಲ್ಲಿನ ವೃತ್ತಿ ಬದುಕೇ ಹಾಗೆ. ಒಂದು ವರ್ಗದ ಜನ ಉದ್ಯೋಗ ಅರಸಿ ಪರವೂರುಗಳಿಗೆ ವಲಸೆ ಹೋದರೆ ಇನ್ನೊಂದಷ್ಟು ಜನ ಮೀನುಗಾರಿಕೆಯನ್ನೇ ಕುಲಕಸುಬಾಗಿ ಮಾಡಿಕೊಂಡವರು. ವರ್ಷದ ಮುಕ್ಕಾಲೂ ಭಾಗ ಈ ಯುವ ಪಡೆ ಊರಿಂದ ಹೊರಗೇ ಬದುಕು ಕಟ್ಟಿಕೊಂಡವರು. ರಂಗಪ್ರಕ್ರಿಯೆಗಳ ಗಂಭೀರತೆಯ ಮಹತ್ವ ಯಾರಿಗೆ ತಲುಪಬೇಕಿತ್ತೋ, ಆ ಮೂಲಕ ಯಾರು ರಂಗಕ್ರಿಯೆಯನ್ನು ಉತ್ತೇಜನಗೊಳಿಸಬೇಕಿತ್ತೋ ಅಂತಹಾ ಯುವಕರು ರಂಗ ಪ್ರಯೋಗಗಳಿಗೆ ತಮ್ಮನ್ನು ತಾವು ತೊಡಗಿಸಿಕೊಳ್ಳುವುದಕ್ಕಾಗಲೀ ಅಂತಹಾ ರಂಗ ಕ್ರಿಯೆಗಳನ್ನು ಉತ್ತೇಜಿಸುವುದಕ್ಕಾಗಲೀ ಸಾಧ್ಯವಾಗಲೇ ಇಲ್ಲ.

ಕಳೆದ ಐವತ್ತು ವರ್ಷಗಳಲ್ಲಿ ಹವ್ಯಾಸಿ ರಂಗಭೂಮಿ ಕರಾವಳಿಯಲ್ಲಿ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದೆ. ತುಳು ರಂಗಭೂಮಿಯ ಜೊತೆ ಜೊತೆಗೆ ಕಂದಾಪುರ ತಾಲೂಕಿನಲ್ಲಿ ಹವ್ಯಾಸಿ ರಂಗಭೂಮಿಯನ್ನು ಉತ್ತುಂಗಕ್ಕೆ ತಂದವರಲ್ಲಿ ಕುಳ್ಳಪ್ಪು ಮುಂಚೂಣಿಯಲ್ಲಿ ನಿಲ್ಲುತ್ತಾರೆ. ರೂಪಕಲಾ ಎನ್ನುವ ಹೆಸರಿನ ರಂಗ ತಂಡವನ್ನು ಸ್ಥಾಪಿಸುವ ಮೂಲಕ ಹಾಸ್ಯಮಯ ಮನೋರಂಜನಾ ರಂಗಪ್ರಯೋಗಗಳನ್ನು ಮಾಡಿದರು. ಇವರ ಪ್ರಯೋಗಗಳು ಕುಂದಾಪುರ ಗ್ರಾಮೀಣ ಭಾಷೆಯ ಸೊಗಡನ್ನು ಔನ್ನತ್ಯಗೊಳಿಸುವುದರ ಜೊತೆಗೆ ಹವ್ಯಾಸಿ ರಂಗಭೂಮಿಯ ಬೆಳವಣಿಗೆಗೆ ಕಾರಣರಾದರು. ಇದೇ ರೀತಿ ಸಾಕಷ್ಟು ರಂಗಕರ್ಮಿಗಳೂ ಕರಾವಳಿಯಲ್ಲಿ ಹವ್ಯಾಸೀ/ಅರೆವೃತ್ತಿ ರಂಗಭೂಮಿಯನ್ನು ಕಟ್ಟಿ ಬೆಳೆಸುವಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ.

ಇತ್ತ ಹವ್ಯಾಸಿ ರಂಗಕ್ರಿಯೆಗಳು ಜಾಸ್ತಿಯಾಗುತ್ತಿದ್ದಂತೆಯೇ ಒಂದು ತೆರನಾದ ರಂಗ ಚಟುವಟಿಕೆಗಳಿಗೆ ಕರಾವಳಿ ಮೈಯೊಡ್ಡುತ್ತದೆ. ರಂಗಾಸಕ್ತಿಯನ್ನು ಬೆಳೆಸಿಕೊಂಡವರು ನೀನಾಸಂನಂತಹ ರಂಗ ಪ್ರಯೋಗಗಳನ್ನು ಕರಾವಳಿಗೆ ಪರಿಚಯಿಸುತ್ತಾರೆ. ಸಮುದಾಯ ತಂಡವೂ ರಂಗಪ್ರಯೋಗಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳುತ್ತದೆ. ರಂಗ ತರಬೇತಿ ಪಡೆದ ಪರಿಣಿತರು ಕರಾವಳಿಯಲ್ಲಿ ಹೆಚ್ಚಾಗುತ್ತಲೇ, ಕರಾವಳಿಯ ಆಯ್ದ ಭಾಗಗಳಲ್ಲಿ ಆಧುನಿಕ ರಂಗಭೂಮಿಯ ಆಸಕ್ತಿ ವೃದ್ಧಿಯಾಗತೊಡಗುತ್ತದೆ. ವಸಂತ ಬನ್ನಾಡಿ, ದಿ. ಕೂರಾಡಿ ಸೀತಾರಾಮ ಶೆಟ್ಟಿ, ರಾಮಕೃಷ್ಣ ಹೇರ್ಳೆ, ಲಾವಣ್ಯದ ಕಾರಂತರು, ಗಿರೀಶ್ ಬೈಂದೂರು, ಸುರೇಶ್ ಆನಗಳ್ಳಿ, ಹೀಗೆ ಆಧುನಿಕ ರಂಗಭೂಮಿಯಲ್ಲಿ ಕೃಷಿ ಆರಂಭಗೊಳ್ಳುತ್ತದೆ. ಪರಿಣಾಮವಾಗಿ ಹಂಪಿ ವಿಶ್ವವಿದ್ಯಾಲಯದ ಮಾನ್ಯತೆ ಪಡೆದ ರಂಗ ಅಧ್ಯಯನ ಕೇಂದ್ರವೂ ಕುಂದಾಪುರದಲ್ಲಿ ತಲೆ ಎತ್ತುತ್ತದೆ.

ಇದೆಲ್ಲದರ ಜೊತೆಗೆ ಕರಾವಳಿಯ ಬೆಲ್ಟಿನಲ್ಲಿ ಅಲ್ಲಲ್ಲಿ ಆಧುನಿಕ ರಂಗ ಪ್ರಕ್ರಿಯೆಗಳು ಹೆಚ್ಚೆಚ್ಚು ಚಾಲನೆ ಪಡೆದುಕೊಳ್ಳಲಾರಂಭಿಸುತ್ತದೆ. ಹವ್ಯಾಸಿ ನಾಟಕಗಳನ್ನೇ ನೋಡಿ ಖುಷಿ ಪಡುತ್ತಿದ್ದ ರಂಗಾಸಕ್ತರಿಗೆ ಆಧುನಿಕ ರಂಗ ಪ್ರಕ್ರಿಯೆಗಳು ಅರ್ಥವಾಗುವಲ್ಲಿ ಸವಾಲುಗಳನ್ನು ನೀಡಿದ್ದರೂ, ಜಾತ್ರೆಯ ಸಂದರ್ಭದಲ್ಲಿ ಇರುತ್ತಿದ್ದ ಗಲಾಟೆಯ ಸ್ಥಿತಿಯಲ್ಲಿಯೇ ಹವ್ಯಾಸಿ ನಾಟಕಗಳನ್ನು ನೋಡಲು ಸಾಧ್ಯವಾಗುತ್ತಿತ್ತಾದರೂ ಆಧುನಿಕ ರಂಗಭೂಮಿ ಪ್ರೇಕ್ಷಕರಿಗೆ ಅರ್ಥವಾಗುವಲ್ಲಿ ಸವಾಲಾಗಿಯೇ ಪರಿಣಮಿಸಿದ್ದೂ ಸುಳ್ಳಲ್ಲ. ಆರಂಭದಲ್ಲಿ ಹೊಸ ನಾಟಕಗಳಿಗೆ ಬೆರಳೆಣಿಕೆಯ ಪ್ರೇಕ್ಷಕರನ್ನು ಒಟ್ಟು ಮಾಡುವುದು ಸಂಘಟಕರಿಗೆ ಸವಾಲಾಗಿ ಪರಣಮಿಸಿದ್ದೂ ಇದೆ. ಆ ಸವಾಲುಗಳು ಇಂದಿಗೂ ಮುಂದುವರೆದುಕೊಂಡು ಬಂದಿದೆಯಾದರೂ ಅದರ ಪ್ರಮಾಣ ಕಡಿಮೆಯಾಗಿದೆ ಎನ್ನುವುದು ಆಧುನಿಕ ರಂಗಭೂಮಿಯ ಸಾಧನೆ ಎನ್ನುವುದೂ ಸತ್ಯ.

ಉಡುಪಿ ಜಿಲ್ಲೆಯಲ್ಲಿ ಸುಮಾರು ನೂರಕ್ಕೂ ಅಧಿಕ ರಂಗತಂಡಗಳು ಕೆಲಸ ಮಾಡುತ್ತಿವೆ. ಅದರಲ್ಲಿಯೂ ಕುಂದಾಪುರ ತಾಲೂಕಿನಲ್ಲಿ ಹದಿನೈದಕ್ಕೂ ಹೆಚ್ಚು ರಂಗತಂಡಗಳು ಕ್ರಿಯಾಶೀಲವಾಗಿವೆ. ಅದರಲ್ಲಿ ಏಳಕ್ಕೂ ಅಧಿಕ ತಂಡಗಳು ಹೊಸ ಅಲೆಯ ನಾಟಕಗಳನ್ನೇ ಸಮಾಜಕ್ಕೆ ಕಟ್ಟಿಕೊಡುತ್ತಿರುವುದು ರಂಗಬೆಳವಣಿಗೆಗೆ ಪೂರಕವಾಗಿದೆ. ಬುಡಕಟ್ಟು ಸಮುದಾಯಕ್ಕೆ ಸೇರಿದ ಬೈಂದೂರಿನ ಸಂಚಲನ ರಂಗ ತಂಡ, ಸಮುದಾಯ ಕುಂದಾಪುರ, ರಂಗ ಅಧ್ಯಯನ ಕೇಂದ್ರ ಕುಂದಾಪುರ, ಸುರಭಿ ಬೈಂದೂರು, ಲಾವಣ್ಯ ಬೈಂದೂರು ಬದ್ಧತೆ ಹೊಂದಿರುವ ರಂಗ ತಂಡಗಳು. ಅಷ್ಟೇ ಅಲ್ಲದೇ ಇತ್ತೀಚಿನ ದಿನಗಳಲ್ಲಿ ಶಾಲೆ ಹಾಗೂ ಕಾಲೇಜುಗಳಲ್ಲಿಯೂ ಹೊಸ ಅಲೆಯ ನಾಟಕಗಳನ್ನು ವಿದ್ಯಾರ್ಥಿಗಳು ಕಟ್ಟುತ್ತಿರುವುದು ಆಧುನಿಕ ರಂಗಭೂಮಿಯ ಹೆಮ್ಮೆ. ಅಂತೆಯೆ ಉಡುಪಿ ತಾಲೂಕಿನಲ್ಲಿ ಕಳೆದ ಆರೇಳು ದಶಕಗಳಿಂದ ಸಕ್ರೀಯವಾಗಿರುವ ಬೆರಳೆಣಿಕೆಯ ರಂಗತಂಡಗಳಿದ್ದರೆ, ಇತ್ತೀಚಿನ ಎರಡು ದಶಕಗಳಲ್ಲಿ 20ಕ್ಕೂ ಹೆಚ್ಚು ಸಕ್ರೀಯ ತಂಡಗಳು ರಂಗಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿವೆ. ಕಾರ್ಕಳ ತಾಲೂಕಿನಲ್ಲಿಯೂ ಹಲವಾರು ಅರೆವೃತ್ತಿ/ಹವ್ಯಾಸಿ ತಂಡಗಳ ಜೊತೆಗೆ ಆಧುನಿಕ ರಂಗಪ್ರಕಾರಗಳನ್ನು ನೆಚ್ಚಿಕೊಂಡ ಕೆಲವು

ತಂಡಗಳಿವೆ. ಕರಾವಳಿಯಲ್ಲಿ ನಾವು ಗಮನಿಸಬೇಕಾದ ಒಂದು ಅಂಶ ಭಾಷೆ. ಕನ್ನಡ ಮತ್ತು ತುಳು ನಾಟಕಗಳು ಸ್ಪರ್ಧಾತ್ಮಕವಾಗಿ ಪ್ರದರ್ಶನಗೊಳ್ಳುತ್ತಿವೆ. ಇತ್ತೀಚೆಗೆ ಕೊಂಕಣಿ ನಾಟಕಗಳೂ ಹೆಚ್ಚು ಹೆಚ್ಚು ಪ್ರದರ್ಶನ ಕಾಣುತ್ತಿರುವುದು ಗಮನಾರ್ಹ.

ಇನ್ನು ಮುಖ್ಯವಾಗಿ ರಂಗೋತ್ಸವಗಳು. ಉಡುಪಿ ರಂಗಭೂಮಿ ಸಂಸ್ಥೆ ಆಯೋಜಿಸುತ್ತಿದ್ದ ರಾಜ್ಯ ಮಟ್ಟದ ಸ್ಪರ್ಧೆಯನ್ನು ಹೊರತು ಪಡಿಸಿದರೆ ಅಲ್ಲೋ ಇಲ್ಲೋ ಕೆಲವು ರಂಗೋತ್ಸವಗಳು ಮೊದಲು ನಡೆಯುತ್ತಿದ್ದವು. ಆದರೆ ಇತ್ತೀಚಿನ ಎರಡು ದಶಕಗಳಲ್ಲಿ ಹತ್ತಕ್ಕೂ ಹೆಚ್ಚು ರಂಗೋತ್ಸವಗಳು ಅಲ್ಲಲ್ಲಿ ನಡೆಯುತ್ತಿವೆ. ಸಾಮಾನ್ಯವಾಗಿ ಸೆಪ್ಟೆಂಬರ್ ಅಕ್ಟೋಬರ್ ತಿಂಗಳಲ್ಲಿ ಆರಂಭವಾಗುವ ನಾಟಕ ಪ್ರದರ್ಶನಗಳು ಫೆಬ್ರವರಿ–ಮಾರ್ಚ್‌ತನಕವೂ ನಿರಂತರವಾಗಿ ಮುಂದುವರಿಯುತ್ತಿದೆ. ಸಂಖ್ಯೆಯ ದೃಷ್ಟಿಯಿಂದ ಉಡುಪಿಯಲ್ಲಿ ಅಪರಿಮಿತ ರಂಗಪ್ರಯೋಗಗಳು ಆಗುತ್ತಿವೆ. ಗುಣಮಟ್ಟದಲ್ಲೂ ಇನ್ನು ಬೆಳೆಯಲು ಅವಕಾಶವಿದೆ.

ರಾಜ್ಯದಲ್ಲಿ ರಂಗಭೂಮಿಯ ಏಳ್ಗೆಗಾಗಿ ಕರ್ನಾಟಕ ನಾಟಕ ಅಕಾಡೆಮಿ ಕೆಲಸ ಮಾಡುತ್ತಿದೆ. ಆದರೆ ಇದುವರೆಗೆ ರಂಗಭೂಮಿಯ ಅಭಿವೃದ್ಧಿಗೆ ಕರಾವಳಿಯಲ್ಲಿ ಅಕಾಡೆಮಿಯ ಕೊಡುಗೆ ಏನು ಎನ್ನುವ ಪ್ರಶ್ನೆಗೆ ಸ್ಪಷ್ಟವಾದ ಉತ್ತರ ಸಿಕ್ಕಿರಲಿಲ್ಲ. ಆದರೆ ಇದೀಗ ಅಕಾಡೆಮಿಯ ಸದಸ್ಯರಾಗಿರುವ ಬಾಸುಮ ಕೊಡಗು ಕರಾವಳಿಯಲ್ಲಿ ರಂಗ ಸಂಚಲನ ಸೃಷ್ಟಿಸಿರುವುದು ಸತ್ಯ. ರಂಗಭೂಮಿಯಲ್ಲಿ ದುಡಿಯುತ್ತಿರುವ ಪ್ರತಿಯೊಬ್ಬ ಕಲಾವಿದನಿಗೂ ಗುರುತಿಸಿಕೊಳ್ಳುವ ಅವಕಾಶಕ್ಕಾಗಿ ಹೋರಾಡುತ್ತಿರುವ ಬಾಸುಮ ಕೊಡಗು ಪ್ರಯತ್ನ ಕರಾವಳಿಯ ರಂಗ ಕಲಾವಿದರಲ್ಲಿ ಹೊಸ ಸಂಚಲನ ಸೃಷ್ಟಿಸಿದೆ. ಕಳೆದ ನಲ್ವತ್ತು ವರ್ಷಗಳಿಂದ ಕುಂಟುತ್ತಾ ಸಾಗುತ್ತಿರುವ ರಂಗಪ್ರಕ್ರಿಯೆ ಈಗಿನ ನಾಟಕ ಅಕಾಡೆಮಿಯ ವೇಗ ಹೊಸ ಹುರುಪು ನೀಡುತ್ತಿರುವುದು ಶ್ಲಾಘನೀಯ. ಆಧುನಿಕ ರಂಗಭೂಮಿ ಮತ್ತಷ್ಟು ವೇಗವಾಗಿ ಬೆಳೆಯಲಿ. ಶಿಕ್ಷಣ ಪದ್ಧತಿಯಲ್ಲಿ ರಂಗಭೂಮಿ ಭಾಗವಾಗಲಿ ಆ ಮೂಲಕ ಮನುಷ್ಯ ಸಹಜ ಬದುಕಿನಲ್ಲಿ ಹಾಸು ಹೊಕ್ಕಾಗಿರುವ ಸೃಜತೆಯ ರಂಗಭೂಮಿ ತೆರೆದುಕೊಳ್ಳಲಿ ಎಂದು ಆಶಿಸೋಣ.

***9480206725***


madappadijai@gmail.com



ರಂಗಭೂಮಿ ಉಡುಪಿ ಸಂಸ್ಥೆಯ 'ಯುಗಾಂತ' ನಾಟಕದ ದೃಶ್ಯ

# ತುಳು ರಂಗಭೀಷ್ಮ 'ಕೆಮ್ತೂರು ದೊಡ್ಡಣ್ಣ ಶೆಟ್ಟಿ'

–ಬಾಸುಮ ಕೊಡಗು



1927 ರಿಂದ 1985ರ ತನಕ ಬಾಳಿ ಬದುಕಿದ ಕೆಮ್ತೂರು ದೊಡ್ಡಣ್ಣ ಶೆಟ್ಟಿ ಜೀವನ ಚರಿತ್ರೆಯೇ ಅದ್ಭುತ. ಪಟೇಲ ವಂಶಸ್ಥನಾಗಿ ಒಂದಷ್ಟು ಗ್ರಾಮಗಳ ಅಧಿಕಾರ ವಹಿಸಿಕೊಂಡು ದರ್ಪದಿಂದ, ಅಧಿಕಾರದಿಂದ, ಅಹಂಕಾರದಿಂದ ಮೆರೆಯಲು ಸಾಕಷ್ಟು ಅವಕಾಶವಿದ್ದ ಸ್ವಾತಂತ್ರ್ಯಪೂರ್ವದ ಆ ಕಾಲದಲ್ಲಿ ತನ್ನೆಲ್ಲ ಅಧಿಕಾರವನ್ನು, ಸಂಪತ್ತನ್ನು ಜನರಿಗೆ ಬಿಟ್ಟುಕೊಟ್ಟು ನಾಟಕ ಕಂಪೆನಿಯೊಂದನ್ನು ಸ್ಥಾಪಿಸಿ ಊರು ಸುತ್ತಲು ಹೊರಟದ್ದನ್ನು ಕಲ್ಪಿಸಿಕೊಳ್ಳುವುದು ಅಸಾಧ್ಯ. ತುಳು ರಂಗಭೂಮಿಯಲ್ಲಿ ಮೊದಲ ತಿರುಗಾಟ ನಾಟಕ ಕಂಪೆನಿ ಸ್ಥಾಪಿಸಿದ ಹೆಗ್ಗಳಿಕೆ ದೊಡ್ಡಣ್ಣ ಶೆಟ್ಟರದು. ತನ್ನ ಪಟೇಲಗಿರಿಯುಳ್ಳ ಗ್ರಾಮದ ಶಾಲೆಗಳ ವಾರ್ಷಿಕೋತ್ಸವದಲ್ಲಿ ನಡೆಯುತ್ತಿದ್ದ ನಾಟಕಗಳಿಗೆ ಅತಿಥಿಯಾಗಿ ಹೋಗುತ್ತಿದ್ದ ಶೆಟ್ಟರಿಗೆ ನಾಟಕದ ಪ್ರಾಮುಖ್ಯತೆ ಬಗ್ಗೆ ಅರಿವಿತ್ತು. ವರ್ಷಕ್ಕೊಂದಾವರ್ತಿ ನಾಟಕ ಆದರೆ ಸಾಲದು, ಅದು ನಿರಂತರ ನಡೆಯಬೇಕು ಅನ್ನುವ ಇರಾದೆ, ಮತ್ತು ಆ ಕಾಲದಲ್ಲಿ ಕನ್ನಡ ನಾಟಕಗಳು ಮಾತ್ರ ಆಗುತ್ತಿದ್ದ ಸಂದರ್ಭದಲ್ಲಿ ತುಳು ಭಾಷೆಯ ನಾಟಕಗಳೂ ಆಗಬೇಕು ಎನ್ನುವ ತುಡಿತ ಇವರನ್ನು ರಂಗತರಬೇತಿ ಕಡೆಗೆ ಸೆಳೆಯಿತು. ತಾವೇ ಶಾಲೆಗಳಿಗೆ ಹೋಗಿ ಮಕ್ಕಳಿಗೆ ತರಬೇತಿ ನೀಡಿ ತಮ್ಮದೇ ರಚನೆಯ ತುಳು ನಾಟಕಗಳನ್ನು ನಿರ್ದೇಶನ ಮಾಡಲು ಆರಂಭಿಸಿದರು. ಇದೆಲ್ಲ ಪಟೇಲರ ಹುಚ್ಚು ಎಂದು ಜನ ಆಡಿಕೊಂಡರು. ಆದರೆ ಅವರು ಆರಂಭಿಸಿದ ರಂಗತರಬೇತಿ ಚಳುವಳಿ ರೂಪ ಪಡೆಯಿತು. ವರ್ಷವರ್ಷ ಹೆಚ್ಚು ಹೆಚ್ಚು ಶಾಲೆಗಳಲ್ಲಿ ಈ ಪ್ರಯತ್ನಗಳು ನಡೆದವು. ಕನ್ನಡ ನಾಟಕಗಳು ನಡೆಯುತ್ತಿದ್ದ ಎಲ್ಲಾ ಸ್ಥಳಗಳಲ್ಲಿ ತುಳು ನಾಟಕಗಳೂ ನಡೆಯಲಾರಂಭಿಸಿದವು. ಆರಂಭದಲ್ಲಿ ಹಾಸ್ಯ ಮಾಡುತ್ತಿದ್ದವರು ಹುಬ್ಬೇರಿಸತೊಡಗಿದರು.

ಮುಂದೆ ತಾವೆ ನಾಟಕಗಳನ್ನು ಬರೆದು ದೊಡ್ಡವರಿಗೆ ಆಡಿಸುವುದರ ಮೂಲಕ ಹಳ್ಳಿಗಳಲ್ಲಿ ಸಾರ್ವಜನಿಕವಾಗಿ ಪ್ರದರ್ಶನ ಮಾಡಲು ಆರಂಭಿಸಿದರು. ಈ ಹೊತ್ತಿಗೆ ಊರಿನ ಪಟೇಲನಾಗಿ ಅವರು ಸರಿಯಾಗಿ ಕಾರ್ಯ ನಿರ್ವಹಿಸುತ್ತಿಲ್ಲ ಎಂದು ಟೀಕಿಸುವವರು ಒಂದೆಡೆಯಾದರೆ, ಊರಿನ ಯಾವುದೇ ನ್ಯಾಯತೀರ್ಮಾನಕ್ಕೆ ದೊಡ್ಡಣ್ಣ ಶೆಟ್ಟರೇ ಸರಿ, ಅವರಿಲ್ಲದಿದ್ದರೆ ನ್ಯಾಯ ಪಂಚಾಯಿತಿಕೆ ಸರಿಯಾಗುವುದಿಲ್ಲವೆಂಬ ಅಳಲೂ ಆರಂಭವಾಯಿತು. ಇದು ದೊಡ್ಡಣ್ಣ ಶೆಟ್ಟರನ್ನು ಇಕ್ಕಟ್ಟಿಗೆ ಸಿಲುಕಿಸಿತು. ಹಿರಿಯರಿಂದ ಬಂದ ಅಧಿಕಾರವನ್ನು ಬಿಡುವುದೋ... ತನ್ನನ್ನೇ ನಂಬಿ ಗೌರವಿಸುತ್ತಿರುವ ಜನರಿಗೆ ನ್ಯಾಯ ಒದಗಿಸುವುದೋ... ಏನೂ ಸಂಕಷ್ಟಗಳಿಲ್ಲದ ತನ್ನ ದಿನಚರಿ ಬದಲಾಯಿಸಿ ಕೊಳ್ಳುವುದೊ..... ಈ ಎಲ್ಲಾ ಗೊಂದಲಗಳಿಗೆ ಕೊನೆಗೆ ಅವರೇ ಪರಿಹಾರ ಕಂಡುಕೊಂಡರು.

ತನ್ನ ಪಟೇಲಗಿರಿಯನ್ನು ತನ್ನ ಹತ್ತಿರದ ಸಂಬಂಧಿಯೊಬ್ಬನಿಗೆ ಬಿಟ್ಟುಕೊಟ್ಟರು. ನ್ಯಾಯತೀರ್ಮಾನದ ಅಧಿಕಾರವನ್ನುತನ್ನ ಆತ್ಮೀಯನಿಗೆ ಹಸ್ತಾಂತರಿಸಿದರು. ಅಧಿಕೃತವಾಗಿ ವೃತ್ತಿ ನಾಟಕ ತಂಡವೊಂದನ್ನು ಕಟ್ಟಿಕೊಂಡು ಹೊರಟೇಬಿಟ್ಟರು. ಇದೆಲ್ಲ ಸ್ವಲ್ಪ ದಿನದ ಚಟ, ಶೆಟ್ರು ಎಲ್ಲ ಬಿಟ್ಟು ವಾಪಾಸ್ ಬರ್ತಾರೆ ಅಂತ ಜನ ಆಡಿಕೊಂಡರು. ಆದರೆ ಅದು ನಿಜ ಆಗಲಿಲ್ಲ. ತನ್ನೆಲ್ಲ ಶ್ರೀಮಂತಿಕೆಯ ಬದುಕಿನ ರೀತಿಯನ್ನು ಬದಿಗೊತ್ತಿ ನಾಟಕದ ಟೆಂಟ್‌ಗಳಲ್ಲೇ ತನ್ನ ದಿನಚರಿಯನ್ನು ಕಳೆದರು. ವಾಹನ ಸೌಕರ್ಯವಿಲ್ಲದ ಆ ಕಾಲದಲ್ಲಿ ಎತ್ತಿನ ಗಾಡಿಗಳಲ್ಲಿ ನಾಟಕದ ಪರಿಕರಗಳನ್ನು ಊರಿಂದೂರಿಗೆ ಸಾಗಿಸಿದರು. ವಿದ್ಯುತ್ ಇಲ್ಲದ ಸಂದರ್ಭ ಪೆಟ್ರೋಮ್ಯಾಕ್ಸ್ ಬೆಳಕಿನಲ್ಲೇ ನಾಟಕಗಳನ್ನು ಆಡಿದರು. ಉಚಿತವಾಗಿ ನಾಟಕ ಆಡಬಾರದು ಎಂಬ ಅವರ ನಿಲುವು ಕೆಲವರಿಗೆ ಹಾಸ್ಯಾಸ್ಪದವಾಗಿ ಕಂಡುಬಂದರೂ ಅದನ್ನು ಲೆಕ್ಕಿಸದೆ ತನ್ನೆಲ್ಲಾ ಪ್ರದರ್ಶನಗಳಿಗೂ ಕನಿಷ್ಠ ಟಿಕೇಟ್ ಇಡುತ್ತಿದ್ದರು. ಅದೇ ಹಣದಲ್ಲಿ ತಂಡದ ಕಲಾವಿದರ ವೆಚ್ಚಗಳನ್ನು ಭರಿಸುತ್ತಿದ್ದರು.

ದೊಡ್ಡಣ್ಣ ಶೆಟ್ಟರ ಬದುಕಿನಲ್ಲಾದ ಬದಲಾವಣೆ ರಂಗಭೂಮಿಯಲ್ಲೊಂದು ಹೊಸ ಇತಿಹಾಸ ಸೃಷ್ಟಿ ಮಾಡಿತ್ತಾದರೂ ಅವರ ಗ್ರಾಮಗಳ ಜನರು ಅನಾಥಪ್ರಜ್ಞೆಯಿಂದ ಬಳಲಿದರು. ತನ್ನ ಎಂಟು ಜನ ಮಕ್ಕಳು ಮತ್ತು ಇವರ ಅನುಪಸ್ಥಿತಿಯಲ್ಲಿ ಆ ಎಲ್ಲಾ ಮಕ್ಕಳ ಜವಾಬ್ದಾರಿ ವಹಿಸಿದ್ದ ಅವರ ಮಡದಿ ನೇತ್ರಾವತಿ ಬದುಕಿನಲ್ಲಿ ಕಷ್ಟದ ದಿನಗಳು ಬರಲಾರಂಭಿಸಿದವು. ಸಂಬಂಧಿಕರು, ಊರವರು ಮಾಡಿದ ಸಂಧಾನಗಳಿಗೆ ಒಪ್ಪುವ ಸ್ಥಿತಿಯನ್ನು ದಾಟಿ ಹೋಗಿದ್ದರು ಶೆಟ್ಟರು. ಮತ್ತೆ ಹಿಂತಿರುಗುವುದು ಸಾಧ್ಯವಿರಲಿಲ್ಲ.

ತನ್ನ ದೃಢನಿರ್ಧಾರದ ಓಟ ದೊಡ್ಡಣ್ಣ ಶೆಟ್ಟರನ್ನು ತುಳು ರಂಗಭೂಮಿಯ ದೊಡ್ಡಣ್ಣನಾಗಿಸಿತು. ಇವರ ನಾಟಕಗಳಿಗೆ ಎಲ್ಲಿಲ್ಲದ ಬೇಡಿಕೆ ಬರಲಾರಂಭಿಸಿತು. ಬೆಂಗಳೂರು, ಮದರಾಸು, ಪೂನಾ, ಮುಂಬೈಗಳಿಂದ ಇವರ ನಾಟಕಗಳಿಗೆ ಕರೆಬಂತು. ಅಲ್ಲಿಗೂ ಟೆಂಟ್ ಕಟ್ಟಿಕೊಂಡು ಹೋಗಿ ನಾಟಕ ಆಡಿದರು. ಕೆಲವೇ ವರ್ಷಗಳಲ್ಲಿ




ಎಲ್ಲರೊಳಗೊಂದಾಗಿ ಬಾಳುತ್ತಿದ್ದ ಪಟೇಲ.

ಇವರ ಕಂಪೆನಿ ಸುಮಾರು 25 ನಾಟಕಗಳನ್ನು ಸಿದ್ಧಪಡಿಸಿ ಸಾವಿರಾರು ಪ್ರದರ್ಶನ ನಿಡಿದರು. ದಾಖಲೆಗಳ ಪ್ರಕಾರ 6043 ಪ್ರದರ್ಶನಗಳನ್ನು ನೀಡಿದ ಹಿರಿಮೆ ಇವರ ಕಂಪೆನಿಯದ್ದು. ಉತ್ತಮ ಗಾಯಕರು, ಕವಿಗಳೂ ಆಗಿದ್ದ ಶೆಟ್ಟರ ತುಳು ಸಾಹಿತ್ಯರಚನೆಗಳು ಇಂದಿಗೂ ಮಾಸ್ಟರ್‌ಪೀಸ್‌ಗಳು. ಅವರ ನಾಟಕಗಳಲ್ಲಿ ಹಾಸ್ಯವೇ ಪ್ರಧಾನವಾಗಿದ್ದರೂ ಸಮಾಜ ಸುಧಾರಣೆಯ ಸಂದೇಶಗಳು ಢಾಳಾಗಿದ್ದವು. ಸ್ವಾತಂತ್ರ್ಯಪೂರ್ವ ಹಾಗೂ ಸ್ವಾತಂತ್ರ್ಯಾನಂತರದ ಕಾಲಘಟ್ಟದಲ್ಲಿ ಆಗಬೇಕಾದ ಸುಧಾರಣೆಗಳ ಅರಿವು ಅವರಿಗೆ ಚೆನ್ನಾಗಿತ್ತು. ಅದರ ಒಂದು ಉದಾಹರಣೆ:

ಹೆಣ್ಣು ಮಕ್ಕಳು ಸಮಾಜದಲ್ಲಿ ತಲೆ ಎತ್ತಿ ಓಡಾಡುವುದೇ ಅಪರಾಧ ಅಂದುಕೊಂಡಿದ್ದ ಆ ಕಾಲದಲ್ಲಿ ಅಂದರೆ 1955ನೇ ಇಸವಿಯಲ್ಲಿ ತನ್ನ ನಾಟಕ ಕಂಪೆನಿಯಲ್ಲಿ ಹೆಣ್ಣು ಮಕ್ಕಳನ್ನೇ ಹೆಣ್ಣು ಪಾತ್ರಕ್ಕೆ ಸೇರಿಸಿಕೊಂಡರು. ಶೆಟ್ರು ಊರು ಹಾಳು ಮಾಡಹೊರಟರು ಎಂದು ಗುಲ್ಲೆಬ್ಬಿಸಿದರು ಬಹಳ ಮಂದಿ. ಆದರೆ ಆ ಗುಲ್ಲಿಗೆ ನಾಟಕದಲ್ಲೆ ಉತ್ತರ ಕೊಟ್ಟರು ಶೆಟ್ರು. ಮಹಿಳಾ ಸ್ವಾಂತಂತ್ರ್ಯದ ಬಗ್ಗೆಯೇ ನಾಟಕ ಬರೆದು ಅವರಿಂದಲೇ ಆಡಿಸಿದರು. ಇವರ ಗರಡಿಯಲ್ಲಿ ನಾಟಕ ಆಡಿದ ಅನೇಕ ಹಿರಿಯರು ಇಂದಿಗೂ ಅವರ ಬಗ್ಗೆ ಅಭಿಮಾನದಿಂದ 'ಅವರು ಎಲ್ಲರಿಗೂ ದೇವರಿದ್ದ ಹಾಗೇ ಇದ್ದರು' ಎನ್ನುತ್ತಾರೆ.

ಬರಬರುತ್ತಾ ನಮ್ಮಲ್ಲುಂಟಾದ ಸಾಮಾಜಿಕ ಹಾಗೂ ಆರ್ಥಿಕ ಬದಲಾವಣೆಗಳ ಕಾರಣಕ್ಕೋ, ಸಾಂಸ್ಕೃತಿಕ ಪಲ್ಲಟದ ಕಾರಣಕ್ಕೋ ದೊಡ್ಡಣ್ಣ ಶೆಟ್ಟರ ಕಂಪೆನಿ ನಷ್ಟ ಅನುಭವಿಸಲು ಆರಂಭಿಸಿತು. ಹೇಗೊ 20 ವರ್ಷ ಪೂರೈಸಿದ ದೊಡ್ಡಣ್ಣ ಶೆಟ್ಟರ ಕಂಪೆನಿ ನಿಂತು ಹೋಗುವ ಅನಿವಾರ್ಯತೆ ಸೃಷ್ಟಿ ಆಯಿತು. 38 ವರ್ಷಗಳ ಕಾಲ ತುಳು ನಾಟಕರಂಗವನ್ನು ಉಚ್ಛ್ರಾಯಕ್ಕೇರಿಸಿದ ದೊಡ್ಡಣ್ಣಶೆಟ್ಟರು ತನ್ನ ಬದುಕಿನಲ್ಲಿ ಅವನತಿಯೆಡೆಗೆ ಹೆಜ್ಜೆ ಹಾಕುವಂತಾಯಿತು. ಈಗ ಪಟೇಲಿಕೆ ಕೈಯಲ್ಲಿರಲಿಲ್ಲ. ಯಾವುದೇ ಸಂಪತ್ತು ಉಳಿದಿರಲಿಲ್ಲ. ಸರಕಾರದ ಹಲವು ನೀತಿಗಳಿಂದಾಗಿ ಆಸ್ತಿಯೂ ಕರಗಿತ್ತು. ಉಳಿದಿದ್ದದ್ದು ಜನಪ್ರೀತಿ ಮಾತ್ರ. ಇಷ್ಟಾಗಿಯೂ ಉಳಿದ ಸ್ವಲ್ಪ ಹಣ ಇಟ್ಟುಕೊಂಡು ಪಂಡರೀಬಾಯಿ, ಅಶ್ವಥ್ ಮೊದಲಾದ ತಾರೆಯರನ್ನು ಹಾಕಿಕೊಂಡು, 'ಇಂಕ್ವಿಲಾಬ್ ಜಿಂದಾಬಾದ್' ಅನ್ನೋ ಸಿನಿಮಾವೊಂದನ್ನು ನಿರ್ಮಾಣ ಮಾಡಿದರು, ಆದರೆ ದುರದೃಷ್ಟ ಅದು ತೆರೆ ಕಾಣಲೇ ಇಲ್ಲ.



ಭರ್ತಿ ಆರಡಿ ವ್ಯಕ್ತಿತ್ವದ
ಕೆಮ್ತೂರು ದೊಡ್ಡಣ್ಣ ಶೆಟ್ಟಿ


ತುಳು ನಟಸಾರ್ವಭೌಮ, ತುಳು ರತ್ನಾಕರ ಭೂಷಣ, ತುಳುಸಾಹಿತ್ಯ ಭರತ, ತುಳು ರಂಗಬ್ರಹ್ಮ ಹೀಗೆ ಅನೇಕ ಬಿರುದುಗಳಿಂದ ಸನ್ಮಾನಿತರಾದ ದೊಡ್ಡಣ್ಣ ಶೆಟ್ಟರು ಕೊನೆಕೊನೆಗೆ ಮೂಲೆಗುಂಪಾಗುತ್ತೇನೂ ಎಂಬ ಭಯಕ್ಕೆ ಬಿದ್ದರು. ರಾಜಕೀಯಕ್ಕೆ ತೆರೆದುಕೊಂಡರು. ಚುನಾವಣೆಯಲ್ಲಿ ಸ್ಪರ್ಧಿಸಿದರು. ಆದರೆ ಅಷ್ಟರಲ್ಲಿ ಅವರ ಅಭಿಮಾನಿವರ್ಗವಿದ್ದ ತಲೆಮಾರು ಬದಲಾಗಿ ಹೊಸತಲೆಮಾರು ಬಂದಾಗಿತ್ತು. ಚುನಾವಣೆಯಲ್ಲೂ ಸೋತರು. ದುಃಖದ ಸಂಗತಿಯೆಂದರೆ ಒಂದು ಕಾಲದಲ್ಲಿ ಪತೇಲನಾಗಿ ಮೆರೆದ ಶೆಟ್ಟರು ಸರಕಾರದ 250/- ರೂ ಪಿಂಚಣಿಗಾಗಿ ಕಾಯುವ ಪರಿಸ್ಥಿತಿ ಬಂದದ್ದು. ಈ ಪಿಂಚಣಿ ಬಿಟ್ಟರೆ ಸರಕಾರ ಇವರ ಹೆಸರಲ್ಲಿ ಏನೂ ಮಾಡಿಲ್ಲವೆಂಬುದು ಅವರ ಅಭಿಮಾನಿಗಳ ಕೊರಗು. ಕೊನೆಗೂ ತುಳು ನಾಟಕರಂಗದ ಹರಕಾರ 1985ರಲ್ಲಿ ಹರಿಪಾದ ಸೇರಿದರು. ತುಳುವಿನ ಜನ ಅನ್ನುವ ಹಾಗೆ 'ತುಳುನಾಡ ಬೊಳ್ಳಿ' ಅಸ್ತಂಗತವಾಯಿತು.



ಸಾಮಾಜಿಕ ಹೋರಾಟವೊಂದರಲ್ಲಿ ಕೆಮ್ತೂರು ದೊಡ್ಡಣ್ಣ ಶೆಟ್ಟಿ

# ಉಡುಪಿಯ ರಂಗಭೂಮಿ ಸಂಸ್ಥೆ.

–ಮೇಟಿ ಮುದಿಯಪ್ಪ



ಗುರುಪರಂಪರೆಯ ವೆಂಕಟಾಚಲ ಭಟ್, ಆನಂದ ಗಾಣಿಗರು, ಕೆ.ಎಲ್. ಐತಾಳರು, ಬಿ.ಬಿ. ಶೆಟ್ಟಿ, ಯು. ಉಪೇಂದ್ರ, ಹೆಚ್. ಶಾಂತಾರಾಮ್, ನಕ್ಕತ್ತಾಯರು, ಮೋಹನ್ ದಾಸ್ ಪೈ, ಯು. ದಾಮೋದರ, ಪಿ. ವಾಸುದೇವ ರಾವ್ ಇವರ ನೇತೃತ್ವದಲ್ಲಿ 1965ರಲ್ಲಿ ಪ್ರಾರಂಭವಾದ ರಂಗಭೂಮಿ 1966ರಲ್ಲಿ ರಂಗಭೂಮಿ (ರಿ.) ಉಡುಪಿ ಎಂದೇ ಅಸ್ತಿತ್ವಕ್ಕೆ ಬಂದಿದ್ದು ಈಗ ಇತಿಹಾಸ. ಆ ಕಾಲದಲ್ಲಿ ಈ ರಂಗಭೂಮಿ ಮೂಲಕ ಹಲವಾರು ಪರದೆ ನಾಟಕಗಳನ್ನು ಆಡಲು ಆರಂಭಿಸಿದರು. ಈ ನಾಟಕಗಳ ನಿರ್ದೇಶಕರಾಗಿ ವೆಂಕಟಾಚಲ ಭಟ್, ಆನಂದ ಗಾಣಿಗರು, ರಾಮದಾಸ್, ಉದ್ಯಾವರ ಮಾಧವ ಆಚಾರ್ಯ ಮುಂತಾದವರು ನಿರ್ದೇಶಿಸಿ, ಉಡುಪಿ ಸುತ್ತಮುತ್ತ ಪ್ರದರ್ಶಿಸುತ್ತಿದ್ದರು. ಆ ಹಿಂದಿನ ನಾಟಕಗಳಲ್ಲಿ ನಟಿಸಿದ ಶ್ರೀನಿವಾಸ ಶೆಟ್ಟಿಗಾರ್, ಎನ್.ಆರ್. ಬಲ್ಲಾಳರು ಹಿರಿಯ ನಟ ದಿಗ್ಗಜರು ಇಂದಿಗೂ ನಮ್ಮೊಂದಿಗಿದ್ದು ಮಾರ್ಗದರ್ಶನ ನೀಡುತ್ತಿರುವುದು ಸಂತಸದ ಸಂಗತಿ. ಆಗ ಬರಿ ನಾಟಕಗಳಲ್ಲದೆ ಆರ್ಕೆಸ್ಟ್ರಾ ಕೂಡಾ ಮಾಡುತ್ತಿದ್ದರು ಎಂದು ನಾನು ಕೇಳಿ ಬಲ್ಲೆ. ದೊಡ್ಡ ದೊಡ್ಡ ನಾಟಕ ಕಂಪೆನಿಗಳನ್ನು ಉಡುಪಿಗೆ ಕರೆಸಿ, ಮಾಸ್ಟರ್ ಹಿರಣ್ಣಯ್ಯ ಮುಂತಾದವರ ನಾಟಕಗಾರರ ತಂಡಗಳನ್ನು ಕರೆಸಿ, ಆಡಿಸುತ್ತಿದ್ದುದು ಉಡುಪಿಯ ನಾಟಕ ಅಭಿಮಾನಿ ಬಳಗವನ್ನು ಸೃಷ್ಟಿಸಿತು ಎಂದರೆ ತಪ್ಪಾಗಲಾರದು. ಉಡುಪಿ ರಂಗಭೂಮಿಯ ನಾಟಕಗಳು ಬೆಹರಿನ್, ದೆಹಲಿಯಲ್ಲಿ ಪ್ರದರ್ಶನಗೊಂಡದ್ದು ಕೂಡಾ ಆ ಸಂದರ್ಭದಲ್ಲಿ ಒಂದು ಹವಾ ಸೃಷ್ಟಿಸಿತ್ತು.

ಹೀಗೆ ಚಟುವಟಿಕೆಯಲ್ಲಿ ತೊಡಗಿದ್ದ ರಂಗಭೂಮಿ 1980ರಲ್ಲಿ ಡಾ. ಎಚ್. ಶಾಂತಾರಾಮ್ ಅವರ ಕನಸಿನ ರಾಜ್ಯಮಟ್ಟದ ನಾಟಕ ಸ್ಪರ್ಧೆಗೆ ಚಾಲನೆ ನೀಡಿತು. ಉಡುಪಿಯ ರಾಜ್ಯಮಟ್ಟದ ನಾಟಕ ಸ್ಪರ್ಧೆಯಲ್ಲಿ ಪಾಲ್ಗೊಳ್ಳುವುದೆಂದರೆ ಕರ್ನಾಟಕದ ಬೇರೆ ಬೇರೆ ತಂಡಗಳಿಗೆ ಅದೊಂದು ದೊಡ್ಡ ಸಾಧನೆ ಎನ್ನುವ ಸಂಭ್ರಮ ತರಿಸಿತ್ತು. 39 ವರ್ಷಗಳ ಕಾಲ ನಮ್ಮೀ ಉಡುಪಿಯ ರಂಗಭೂಮಿ ಅಚ್ಚುಕಟ್ಟಾಗಿ ರಾಜ್ಯಮಟ್ಟದ ಸ್ಪರ್ಧೆ ನಡೆಸುತ್ತಿರುವುದು ಹೆಮ್ಮೆಯ ಸಂಗತಿ. ಬಹುಮಾನ ವಿತರಣಾ ಸಮಾರಂಭ ಗಳಲ್ಲಿ ಸಾಧನೆ ಮಾಡಿದವರನ್ನು ಗುರುತಿಸಿ, ಪ್ರಶಸ್ತಿ ಪ್ರದಾನ ಸಮಾರಂಭವನ್ನು ಹಮ್ಮಿಕೊಳ್ಳಲು ಆರಂಭಿಸಿತು. ಆರಂಭದಲ್ಲಿ ಬರೀ ಪ್ರಶಸ್ತಿ ಪ್ರಮಾಣಪತ್ರವನ್ನು ನೀಡಿ ಗೌರವಿಸಲಾಗುತ್ತಿತ್ತು, ನಂತರದ ದಿನಗಳಲ್ಲಿ ನಗದು ಸಹಿತ ಬಹುಮಾನಗಳನ್ನು ಕೊಡುತ್ತಿರುವುದು ತಂಡಗಳಿಗೆ ಇನ್ನಷ್ಟು ಸ್ಫೂರ್ತಿಯನ್ನು ತುಂಬಿತು.

ಹೀಗೆ ಉಡುಪಿ ರಂಗಭೂಮಿಯು ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದು, ವಿಚಾರ ಸಂಕಿರಣ, ನಾಟಕಗಳ ವಿಚಾರ ಸಂಕಿರಣ, ನಾಟಕ ಕೃತಿಗಳ ವಿಚಾರ ಸಂಕಿರಣ, ಸಮೂಹದ ಗೋಷ್ಠಿಗಳನ್ನು ನಡೆಸುತ್ತಾ 25 ವರ್ಷದ ಸಂಭ್ರಮಾಚರಣೆಯನ್ನು ಅದ್ದೂರಿಯಾಗಿ ಆಚರಿಸಲಾಯಿತು.

ಎರಡನೆಯ ತಲೆಮಾರಿನವರಾಗಿ ಪ್ರದೀಪಚಂದ್ರ ಕುತ್ಪಾಡಿ, ರವಿರಾಜ ಹೆಚ್. ಪಿ., ರಂಗಭೂಮಿಯ ನಾಟಕಗಳಲ್ಲಿ ನಟರಾಗಿ ಅಭಿನಯಿಸಿ, ನಿರ್ದೇಶನ ಮಾಡಲು ಆರಂಭಿಸಿದರು. ರಂಗಭೂಮಿಯ ಆರಂಭದ ನಾಟಕಗಳು 15–20 ಪ್ರದರ್ಶನಗಳಿಗಷ್ಟೇ ಸೀಮಿತವಾಗಿದ್ದವು. ಆದರೆ ಇತ್ತೀಚೆಗೆ ಇವರು ನಿರ್ದೇಶಿಸಿದ 'ಕಾಲಚಕ್ರ' 60 ಪ್ರದರ್ಶನಗೊಂಡರೆ, 'ನಾಗಮಂಡಲ' 36 ಪ್ರದರ್ಶನಗೊಂಡಿತು. 'ನಿದ್ರಾನಗರಿ' ಹಾಗೂ ಇತ್ತೀಚೆಗೆ ಬಂದ 'ಐ.ಸಿ.ಯು.' ನಾಟಕ ಉದಾಹರಿಸಬಹುದು. ಸುವರ್ಣ ಸಂಭ್ರಮದ ಆಚರಣೆಯ ಸಂದರ್ಭದಲ್ಲಿ ರಂಗಭೂಮಿಯ ಹಿರಿಯ ಸದಸ್ಯರಾದ ಶ್ರೀ ವಾಸುದೇವ ರಾವ್‌ರವರು ನೀಡಿದ ಜಾಗದಲ್ಲಿ ರಂಗಭೂಮಿಯ ಬಹು ದಿನಗಳ ಕನಸಿನ ಕಛೇರಿಯು ದೊಡ್ಡಣಗುಡ್ಡೆಯ ವೆಂಕಟರಮಣ ದೇವಸ್ಥಾನದ ಬಳಿ ಆರಂಭಗೊಂಡಿತು.

ಇತ್ತೀಚಿನ ದಿನಗಳಲ್ಲಿ 'ರಜಾ–ಮಜಾ' ಶಿಬಿರ, ಮಕ್ಕಳ ನಾಟಕ, ಸಾಧಕರೊಂದಿಗೆ ಸಂವಾದ, ನಾಟಕ ಹಾಗೂ ಸಾಹಿತ್ಯ ಪುಸ್ತಕಗಳ ಬಿಡುಗಡೆ, ಆನಂದೋತ್ಸವ, ನೀನಾಸಂ ನಾಟಕಗಳ ಪ್ರದರ್ಶನ ಆರಂಭಗೊಂಡವು. ವಿಶ್ವರಂಗಭೂಮಿ ದಿನಾಚರಣೆಯನ್ನು ಬಹಳಷ್ಟು ಸಂಭ್ರಮದಿಂದ ಪ್ರತೀವರ್ಷವೂ ಆಚರಿಸುತ್ತಿರುವುದು ಸಂತಸದ ವಿಷಯ. ಉಡುಪಿಯ ಹಿರಿ–ಕಿರಿಯ ರಂಗ ನಟ–ನಟಿಯರು ಪ್ರತೀವರ್ಷವೂ ಮೂಡಿ ಬರುತ್ತಿರುವುದು ನಮ್ಮ ರಂಗಭೂಮಿಯ ಸೌಭಾಗ್ಯವೆಂದೇ ನಾನು ಭಾವಿಸುತ್ತೇನೆ. ಹಿಂದಿನ ಹಿರಿಯರು ಹಾಕಿಕೊಟ್ಟ ತಳಪಾಯದೊಂದಿಗೆ ಅವರ ಮಾರ್ಗದರ್ಶನದಂತೆ ರಂಗಭೂಮಿಯು ದಿನದಿನಕ್ಕೂ ಚಟುವಟಿಕೆಯಿಂದ ಒಡಗೂಡಿದೆ ಎಂದರೆ ತಪ್ಪಾಗಲಾರದು.

ಉಡುಪಿಯಲ್ಲಿ ಹಿಂದಿನಿಂದಲೂ ಒಂದು ನಾಟಕದ ಪರಂಪರೆ ಇದ್ದೇ ಇತ್ತು. ಒಂದು ರಂಗಪ್ರಕ್ರಿಯೆ ದೃಷ್ಟಿಯಿಂದ ಯೋಚಿಸಿದ್ದಾರೆ ಇಲ್ಲಿಯ ಯಕ್ಷಗಾನ ತುಳು ಜನಪದ ಆಚರಣೆಗಳು ಎಲ್ಲವೂ ರಂಗ ಸಂಸ್ಕೃತಿಯ ಭಾಗವೇ. ಈ ಎಲ್ಲಾ ಅಂಶಗಳ ಮಧ್ಯೆಯೇ ಹವ್ಯಾಸಿ ರಂಗಭೂಮಿ ಕೆಲವು ಹೊಳಹುಗಳು ಕರಾವಳಿಯಲ್ಲಿ ಕಂಡುಬಂದವು.

ಐದು ದಶಕಗಳಿಂದಲೂ ರಂಗಭೂಮಿಯಲ್ಲಿ ತೊಡಗಿಸಿಕೊಂಡಿರುವ ರಂಗಭೂಮಿ (ರಿ.) ಸಂಸ್ಥೆ ಒಂದು ಹವ್ಯಾಸಿ ಸಂಸ್ಥೆಯಾಗಿ ವೃತ್ತಿಪರತೆಯನ್ನು ಕಾಪಾಡಿಕೊಂಡಿದೆ. 90ರ ದಶಕದವರೆಗೂ ಸಾಂಪ್ರದಾಯಿಕ ರಂಗಪ್ರಕ್ರಿಯೆಗಳಿಗೆ ತೆರೆದುಕೊಂಡಿದ್ದ ರಂಗಭೂಮಿ ಹೊಸ ಪ್ರಯೋಗಶೀಲ ನಾಟಕಗಳ ಪ್ರಭಾವಕ್ಕೆ ಒಳಗಾಯಿತು. ಇದೇ ಸಂದರ್ಭದಲ್ಲಿ ಹೊಸ ಪ್ರಯೋಗದ ಹಂಬಲದಿಂದ ಹುಟ್ಟಿಕೊಂಡ ರಥಬೀದಿ ಗೆಳೆಯರು ಈ ಸಂಸ್ಥೆಯು ವಿಶಿಷ್ಟ ನಾಟಕಗಳನ್ನು ಪ್ರಯೋಗಿಸತೊಡಗಿತ್ತು.

ಪೂರ್ಣಪ್ರಜ್ಞ ಕಾಲೇಜಿನ ಪ್ರಾಧ್ಯಾಪಕರು ಆರಂಭಿಸಿದ ಕೆಲವು ನಾಟಕಗಳ ಮಾದರಿಗಳು ಇಲ್ಲಿ ಉಲ್ಲೇಖನೀಯ. ಉದ್ಯಾವರ ಮಾಧವ ಆಚಾರ್ಯ, ಬಿ.ಆರ್. ನಾಗೇಶ್ ಇವರಲ್ಲದೇ ನೀನಾಸಂ ಜೊತೆಗೆ ನಿಕಟ ಸಂಬಂಧ ಹೊಂದಿದ್ದ ಕೆ.ಜಿ.

ನಾರಾಯಣ, ಡಿ.ಜಿ. ಹೆಗ್ಡೆ ಆ ಕಾಲದಲ್ಲಿ ಹವ್ಯಾಸಿ ಪ್ರಯೋಗಶೀಲತೆಗೆ ಜೀವ ತುಂಬಿದರು. ರಂಗಭೂಮಿ ನಾಟಕ ಸ್ಪರ್ಧೆಯು ಈ ಹಂತದಲ್ಲಿ ಹಲವು ಬದಲಾವಣೆಗೆ ಒಳಪಟ್ಟಿತು. ಒಂದು ರೀತಿಯಲ್ಲಿ ಈ ಹವ್ಯಾಸಿಗಳ ಎಲ್ಲಾ ರಂಗಪ್ರಕ್ರಿಯೆ ನಡೆಯುತ್ತಿರುವಾಗಲೇ ಹಲವು ಎನ್.ಎಸ್.ಡಿ. ಪದವೀಧರರು, ನೀನಾಸಂ ಪದವೀಧರರು ಉಡುಪಿಯಲ್ಲಿ ಕೆಲವು ನಾಟಕಗಳನ್ನು ನಿರ್ದೇಶಿಸಿದರು. ಬಿ.ವಿ. ಕಾರಂತ್, ಕೆ.ವಿ. ಅಕ್ಷರ, ಸುರೇಶ ಅನಗಳ್ಳಿ, ಹೀಗೆ ಹಲವರು ಹೊಸ ರಂಗ ವ್ಯಾಕರಣಕ್ಕೆ ಮುನ್ನುಡಿ ಬರೆದರು.

1990ರ ನಂತರ ಹೊಸ ಅಲೆಯ ನಾಟಕಗಳು ರಂಗಭೂಮಿಯಲ್ಲಿ ಮೂಡಿಬರಲು ಆರಂಭಗೊಂಡವು. ಈ ಸಂದರ್ಭದಲ್ಲಿ ಶ್ರೀನಿವಾಸ ಪ್ರಭು, ಚಿದಂಬರ ರಾವ್ ಜಂಬೆ, ಪ್ರಸನ್ನ, ಮಾಲತೇಶ ಬಡಿಗೇರ್, ಮಂಡ್ಯ ರಮೇಶ್, ಬಾಸುಮ ಕೊಡಗು, ಜೀವನರಾಮ್ ಸುಳ್ಯ, ಗುರುರಾಜ ಮಾರ್ಪಳ್ಳಿ, ನಾಟಕ ನಿರ್ದೇಶನ ಮತ್ತು ಶಿಬಿರಗಳನ್ನು ಏರ್ಪಡಿಸಿ ಒಳ್ಳೊಳ್ಳೆ ನಾಟಕಗಳನ್ನು ರಂಗಭೂಮಿಗೆ ನೀಡಿದರು.

***ರಂಗಭೂಮಿ ಮತ್ತು ಬಾಸುಮ ಕೊಡಗು***

ನೀನಾಸಂ ಪದವೀಧರರಾದ ಖ್ಯಾತ ನಿರ್ದೇಶಕರಾದ ಬಾಸುಮ ಕೊಡಗು 1999ರಲ್ಲಿ 'ತಿಪ್ಪೇಕ್ರಾಸಿನ ಹುಡುಗಿ' ನಾಟಕವನ್ನು ರಂಗಭೂಮಿ ನಡೆಸುವ ರಾಜ್ಯಮಟ್ಟದ ಸ್ಪರ್ಧೆಗೆ ತಂದರು. ಸಂಗಮ ರಂಗತಂಡ ಸುಳ್ಯ ಇವರು ಪ್ರದರ್ಶಿಸಿದ ಈ ನಾಟಕ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನವನ್ನು ಪಡೆದುಕೊಂಡಿತು. ಅನಂತರ ಉಡುಪಿಯಲ್ಲಿಯೇ ನೆಲೆಯೂರಿದ ಬಾಸುಮ ತನ್ನ ಸಂಪೂರ್ಣ ರಂಗಶ್ರಮವನ್ನು ಉಡುಪಿಯಲ್ಲಿ ವಿನಿಯೋಗಿಸಿದರು. ಇಲ್ಲಿಯ ರಂಗಭೂಮಿ ಸಂಸ್ಥೆಯೂ ಸೇರಿದಂತೆ ಹಲವು ತಂಡಗಳಿಗೆ ನಾಟಕಗಳನ್ನು ನಿರ್ದೇಶಿಸಿದರು. ತುಳು, ಕನ್ನಡ ಎರಡೂ ಭಾಷೆಗಳಲ್ಲಿಯೂ ನಾಟಕ ನಿರ್ದೇಶಿಸಿದ ಬಾಸುಮ ಸಾಂಪ್ರದಾಯಿಕ ತುಳು ರಂಗಭೂಮಿಯೊಂದಿಗೂ ಹವ್ಯಾಸಿ ಪ್ರಯೋಗಶೀಲ ರಂಗಭೂಮಿಯೊಂದಿಗೂ ಸೇತುವೆಯಾಗಿ ದುಡಿದರು. ಮುಂದೆ ಅವರೇ ಕೊಡವೂರಿನಲ್ಲಿ ಕಟ್ಟಿದ 'ಸುಮನಸಾ' ಕೊಡವೂರು ಈ ಸಂಸ್ಥೆ ಉಡುಪಿಯ ರಂಗ ಸಂಸ್ಕೃತಿಯಲ್ಲಿ ಮಹತ್ವದ ಹೆಜ್ಜೆಯಿಟ್ಟಿತು. ಅತ್ಯಂತ ಪ್ರತಿಭಾವಂತ ನಿರ್ದೇಶಕರಾದ ಬಾಸುಮಾ ರಂಗಭೂಮಿಯ ಎಲ್ಲಾ ವಿಭಾಗಗಳಲ್ಲೂ ಪರಿಣಿತರು. ಆದುದರಿಂದ ಅವರು ನಡೆಸಿದ ಹಲವು ರಂಗ ತಾಲೀಮುಗಳು, ಕಾರ್ಯಾಗಾರಗಳು ಉಡುಪಿಯಲ್ಲಿ ಯುವಜನರನ್ನು ನಟನೆಗೆ ಸೆಳೆಯಿತು. ಸುಮನಸಾ ಕೊಡವೂರು ಬೃಹತ್ ಸಂಸ್ಥೆಯಾಗಿ ಬೆಳೆಯಲು ಕಾರಣವಾಯಿತು. ಅನೇಕ ಪ್ರತಿಭಾವಂತ ನಟರು, ಕಲಾವಿದರು ಇವರಿಂದ ಹುಟ್ಟಿಕೊಂಡರು. ಪ್ರಯೋಗಶೀಲ ನಾಟಕಗಳಲ್ಲಿದ್ದ ಭಯ ಮತ್ತು ಅಂಜಿಕೆಯನ್ನು ದೂರಮಾಡಿ, ರಂಗಭೂಮಿಯನ್ನು ತೀರಾ ಹತ್ತಿರಕ್ಕೆ ತಂದರು. ತುಳು ರಂಗಭೂಮಿ ಜೊತೆಗೆ ನಿಕಟ ಸಂಬಂಧ ಹೊಂದಿದ್ದ ಬಾಸುಮ ಕೆಮ್ತೂರು ತುಳು ನಾಟಕ ಸ್ಪರ್ಧೆಗಳಿಗೂ ಭಾಗವಹಿಸುವುದರ ಮೂಲಕ ತುಳು ರಂಗಭೂಮಿಗೂ ಪ್ರಯೋಗಶೀಲತೆಯ ನಂಟನ್ನು ಅಂಟಿಸಿದರು.


ರಂಗಭೂಮಿ ನಾಟಕ ಸ್ಪರ್ಧೆಯಲ್ಲಿ ಪ್ರಯೋಗಶೀಲ ನಾಟಕಗಳು ಪ್ರಯೋಗಗೊಳ್ಳುತ್ತಾ ಬಂದವು. ಎಲ್ ಐ ಸಿ ಯಲ್ಲಿ ವೃತ್ತಿಯಲ್ಲಿದ್ದರೂ ರಂಗಕಾಯಕದ

ನಿರಂತರತೆಗಾಗಿ ಪದೋನ್ನತಿಯನ್ನು ನಿರಾಕರಿಸಿ ಉಡುಪಿಯಲ್ಲೇ ಉಳಿದುಕೊಂಡ ರಂಗಭೂಮಿಯಲ್ಲಿ ಭೀಷ್ಮಾಚಾರ್ಯರೆಂದೇ ಪ್ರಸಿದ್ಧಿಯಾದ ಆನಂದ ಗಾಣಿಗರು ಕೂಡಾ ಇಂತಹ ಪ್ರಯೋಗಗಳಿಗೆ ಬಾಸುಮಾ ಹಾಗೂ ಜೀವನರಾಂ ಸುಳ್ಯರಂತಹ ನಿರ್ದೇಶಕರನ್ನು ಆಹ್ವಾನಿಸಿ, ಹೊಸ ಆಶಯದ ನಾಟಕಗಳನ್ನು ನೀಡುವುದರಲ್ಲಿ ಯಶಸ್ವಿಯಾದರು. ಬಾಸುಮಾರ ನಿರ್ದೇಶನದಲ್ಲಿ ರಂಗಭೂಮಿಯ ಪ್ರದೀಪಚಂದ್ರ ಕುತ್ಪಾಡಿ, ರವಿರಾಜ ಹೆಚ್.ಪಿ. ಅಭಿನಯಿಸುವುದರೊಂದಿಗೆ ನಿರ್ದೇಶಕರಾಗಿ ಮೂಡಿಬಂದರು. ರಂಗಭೂಮಿ ಅನೇಕ ಹಿರಿ–ಕಿರಿಯ ನಟರೊಂದಿಗೆ ನಾಟಕಗಳನ್ನೂ ಹಾಗೂ ಮಕ್ಕಳ ನಾಟಕಗಳನ್ನೂ, ಬೀದಿ ನಾಟಕಗಳನ್ನೂ ಮಾಡುತ್ತಾ ಬಂದಿರುವುದು ಪ್ರಶಂಸನಾರ್ಹ.

ನೂರಾರು ನಾಟಕಗಳನ್ನು ನಿರ್ದೇಶಿಸಿದ ಹೆಗ್ಗಳಿಕೆ ಬಾಸುಮ ಕೊಡಗು ಇವರದು. ಜೊತೆಜೊತೆಗೆ ರಾಜ್ಯಾದ್ಯಂತ 24 ರಂಗತಂಡಗಳನ್ನು ಕಟ್ಟಿ ರಂಗಭೂಮಿಯ ಸೇವೆಗೆ ತೊಡಗಿಸಿರುವುದು ಪ್ರಶಂಸನಾರ್ಹವಾದುದು. ಎಲ್ಲಿಯೂ ಪದಾಧಿಕಾರಿಯಾಗಿ ಗುರುತಿಸಿಕೊಳ್ಳದೆ, ರಂಗತಂಡಗಳನ್ನು ಪೋಷಿಸಿಕೊಂಡು ಬಂದ ಇವರು ಈಗ್ಗೆ 5 ವರ್ಷಗಳಿಂದ ವನಸುಮ ಟ್ರಸ್ಟ್ ಹಾಗೂ ವನಸುಮ ವೇದಿಕೆ ಕಟಪಾಡಿ ಎಂಬ ಸಂಸ್ಥೆಗಳನ್ನು ಕಟ್ಟಿಕೊಂಡು ಒಂದೆಡೆ ನೆಲೆನಿಂತಿದ್ದಾರೆ. ನಾಟಕ ಅಕಾಡೆಮಿಯ ಸದಸ್ಯನಾಗಿ ಇವರು ರಂಗದಲ್ಲಿ ಮಾಡಿದ ಕೆಲಸ ಗುರುತರವಾದುದು. 'ವನಸುಮ' ತಂಡದ ಪೋಷಕನಾಗಿ ಇನ್ನಷ್ಟು ಪ್ರವರ್ಧಮಾನಕ್ಕೆ ಬರಲಿ ಎಂದು ಹಾರೈಸುತ್ತೇನೆ.




ಗುರುರಾಜ ಮಾರ್ಪಳ್ಳಿ ನಿರ್ದೇಶನದ 'ಮಹಾಕಾಲ' ನಾಟಕದ ದೃಶ್ಯ



ಉಡುಪಿಯ ರಂಗಚಳುವಳಿಗೊಂದು ಆಧುನಿಕ ಸ್ಪರ್ಷ ನೀಡಿದ ದಿ| ಆನಂದ ಗಾಣಿಗರು ಅಭಿನಯಿಸಿದ ಬಾಸುಮ ಕೊಡಗು ನಿರ್ದೇಶನದ 'ಚಮ್ಮಾರನ ಚಾಲಾಕಿ ಹೆಂಡತಿ' ನಾಟಕದ ದೃಶ್ಯ

## ಗಂಭೀರ ರಂಗಪ್ರಜ್ಞೆಗೆ ಕಾವು ಕೊಡುತ್ತಿರುವ ಉಡುಪಿಯ ಹವ್ಯಾಸಿ ತಂಡಗಳು..

– *ಜಿ ಪಿ ಪ್ರಭಾಕರ ತುಮರಿ ಮಣಿಪಾಲ*



ಉಡುಪಿ ಜಿಲ್ಲೆ ರಾಜ್ಯದ ಒಂದು ಪ್ರಮುಖವಾದ ಸಾಂಸ್ಕೃತಿಕ ಕೇಂದ್ರ, ಧಾರ್ಮಿಕ, ಆಧ್ಯಾತ್ಮಿಕ, ಶೈಕ್ಷಣಿಕ, ಔದ್ಯಮಿಕ ಬೆಳವಣಿಗೆಗಳ ಜೊತೆಗೆ ನಿರಂತರ ಒಂದು ಸಾಂಸ್ಕೃತಿಕ ಎಚ್ಚರ ಉಳಿಸಿಕೊಂಡ ಜಿಲ್ಲೆ ಎನ್ನುವುದು ಹೆಮ್ಮೆಯ ಸಂಗತಿ.

ಯಕ್ಷಗಾನ, ತುಳುಸಂಸ್ಕೃತಿ, ತುಳುಜನಪದ ಆಚರಣೆ, ಬಹುಭಾಷೆ, ಬಹುಸಂಸ್ಕೃತಿಗಳ ಆಡಂಬೊಲದಂತಿರುವ ಕರಾವಳಿ ರಂಗಸಂಸ್ಕೃತಿಯ ದೃಷ್ಟಿಯಿಂದಲೂ ಹಿಂದೆ ಬಿದ್ದಿಲ್ಲ. ಈ ಎಲ್ಲಾ ಪಾರಂಪರಿಕ ಅಭಿವ್ಯಕ್ತಿಯಲ್ಲೂ ರಂಗಸಂಸ್ಕೃತಿ ಎದ್ದು ಕಾಣುತ್ತದೆ. ಮನುಷ್ಯನ ಯಾವುದೇ ಸೃಷ್ಟಿಶೀಲತೆಯು ಪ್ರದರ್ಶನ ಮತ್ತು ಕಲಾತ್ಮಕತೆಯೊಂದಿಗೆ ಕೂಡಿ ಪ್ರಯೋಗಗೊಂಡರೆ ಅದಕ್ಕೊಂದು ರಂಗಸಂವೇದನೆ ತಾನೇ ತಾನಾಗಿ ಬರುತ್ತದೆ. ಈ ಹಿನ್ನೆಲೆಯಲ್ಲಿ ಕರಾವಳಿಯ ವಿಶೇಷವಾಗಿ ಉಡುಪಿಯ ಸಂಸ್ಕೃತಿ ಮತ್ತು ಪರಂಪರೆ ತುಂಬಾ ಶ್ರೀಮಂತವಾಗಿದೆ.

ಇನ್ನು ನಾಟಕಕ್ಕೆ ಸಂಬಂಧಿಸಿ ಹೇಳುವುದಾದರೆ ಹಳೆಯ ಕಂಪನಿ ನಾಟಕದಿಂದ ಹಿಡಿದು ಅತ್ಯಾಧುನಿಕ ನಾಟಕ ಪರಂಪರೆವರೆಗೂ ಉಡುಪಿ ಎಲ್ಲದಕ್ಕೂ ತೆರೆದುಕೊಂಡಿದೆ. 5 ದಶಕ ಮೀರಿದ ರಂಗಭೂಮಿ ಸಂಸ್ಥೆ ಈಗಲೂ ಸಕ್ರಿಯವಾಗಿದೆ. ಪಾರಂಪರಿಕ ನಾಟಕದಿಂದ ತೊಡಗಿ ಹೊಸ ಅಲೆಯ ನಾಟಕದವರೆಗೂ ಅದು ಪ್ರಯೋಗಶೀಲವಾಗಿದೆ. ನಾಟಕ ಪ್ರಯೋಗದ ಬಹುಆಯಾಮಕ್ಕೆ ಅವಕಾಶ ಒದಗಿಸಿದ ರಂಗಭೂಮಿ ಸಂಸ್ಥೆಯ ರಾಜ್ಯಮಟ್ಟದ ನಾಟಕ ಸ್ಪರ್ಧೆ ಪ್ರಯೋಗಶೀಲತೆಯ ದೃಷ್ಟಿಯಿಂದ ತುಂಬಾ ಮಹತ್ವದ್ದು. ಬಹುಶಃ ಇದೇ ಸಂದರ್ಭದಲ್ಲಿ ಹೊಸ ಹಂಬಲ ಆಶಯದೊಂದಿಗೆ ಹುಟ್ಟಿಕೊಂಡ ರಥಬೀದಿ ಗೆಳೆಯರು ಸಂಸ್ಥೆ ಶುದ್ಧವಾಗಿ ಹೊಸ ನಾಟಕ ಪ್ರಯೋಗಗಳ ಕಡೆಯೇ ಹೊರಳಿಕೊಂಡಿತು. ಹಲವು ರಂಗಸಂವಾದಗಳಿಗೆ ಎಡೆ ಮಾಡಿಕೊಟ್ಟಿತು.

80 ಮತ್ತು 90ರ ದಶಕದಲ್ಲಿ ಇಡೀ ರಾಜ್ಯಾದ್ಯಂತ ಹುಟ್ಟಿಕೊಂಡ ಹೊಸ ಅಲೆಯ ಹವ್ಯಾಸಿರಂಗತಂಡಗಳ ಪ್ರಯೋಗಶೀಲತೆ ಆಧುನಿಕ ರಂಗಭೂಮಿಯ ವಿಕಾಸಕ್ಕೆ ಮುನ್ನುಡಿಯಾಯಿತು. ವೃತ್ತಿರಂಗಭೂಮಿಯ ಕಾವು ಕಳೆದು ಹೊಸ ಚಿಂತನೆ ಪ್ರಯೋಗಗಳು ಹೆಚ್ಚತೊಡಗಿದವು. ದೆಹಲಿಯಲ್ಲಿ ಎನ್ ಎಸ್ ಡಿ, ಬೋಪಾಲ್‌ನಲ್ಲಿ ಭಾರತಭವನ, ಹೆಗ್ಗೋಡಿನ ನೀನಾಸಂ ಹೀಗೆ ಹಲವು ವೃತ್ತಿಪರ ರೆಪರ್ಟರಿಗಳು ಹೊಸ ವಾತಾವರಣ ನಿರ್ಮಿಸಿದವು. ಬಿ ವಿ ಕಾರಂತರ ರಂಗಪ್ರಯೋಗ ಉಡುಪಿಗೆ ಹೊಸ ಚೈತನ್ಯ ನೀಡಿತು. ಕುಶಿ ಹರಿದಾಸ ಭಟ್ಟರು ಕಾರಂತರ ಪ್ರಯೋಗಗಳಿಗೆ ತುಂಬಾ ಒತ್ತಾಸೆ ನೀಡಿದ್ದು ಮುಂದೆ ಉಡುಪಿಯಲ್ಲಿ ಹವ್ಯಾಸಿ ರಂಗಪ್ರಯೋಗದ ಬಲವರ್ಧನೆಗೆ ಸಹಕಾರಿಯಾಯಿತು.

ನೀನಾಸಂ, ಎನ್‌ಎಸ್‌ಡಿಯಿಂದ ತರಬೇತಾದ ಹಲವು ನಿರ್ದೇಶಕರು, ರಂಗಕರ್ಮಿಗಳು ಕರಾವಳಿಯಲ್ಲಿ ಸಕ್ರಿಯರಾದರು. ಹೊಸ ರಂಗವ್ಯಾಕರಣ, ರಂಗಭಾಷೆಗಳ ಶೋಧಕ್ಕೆ ಇದು ಕಾರಣವಾಯಿತು. ಇದು ಇಲ್ಲಿಯ ನಾಟಕಪ್ರಜ್ಞೆಯನ್ನು ವಿಸ್ತರಿಸಿತು.

ನೀನಾಸಂನ ಅಕ್ಷರ ಕೆ ವಿ, ಅ ರಾ ಚಂದ್ರಶೇಖರ, ಸುರೇಶ ಆನಗಳ್ಳಿ ಮೊದಲಾದವರು ಉಡುಪಿಯಲ್ಲಿ ಸಕ್ರಿಯವಾಗಿ ರಂಗತರಬೇತಿ ನಡೆಸಿದರು. ರಥಬೀದಿ ಗೆಳೆಯರು ಸಂಸ್ಥೆಯ ನೇತೃತ್ವದಲ್ಲಿ ಹಲವು ಹೊಸ ಆಧುನಿಕ ರಂಗಪ್ರಯೋಗಗಳು ಹುಟ್ಟಿಕೊಂಡವು.

ಯಾವಾಗ ಕೊಡವೂರಿನಲ್ಲಿ ಸುಮನಸಾ ರಂಗ ತಂಡ ಆರಂಭ ವಾಯಿತೋ ಒಂದು ರೀತಿಯಲ್ಲಿ ಹೆಚ್ಚು ರಂಗ ಚಟುವಟಿಕೆಗಳಿಗೆ ಇದು ದಾರಿ ಮಾಡಿತು. ರಂಗಪ್ರಯೋಗಗಳಿಗೆ ಹೊಸ ವೇಗ ಆವೇಗ ದೊರಕಿತು ಎಂದರೆ ತಪ್ಪಿಲ್ಲ. ಬಾಸುಮ ಕೊಡಗು ಉಡುಪಿಯಲ್ಲೆ ನೆಲೆ ನಿಂತು ತುಳು ರಂಗಭೂಮಿಯ ಜೊತೆ ಹಾಗೆ ಹವ್ಯಾಸಿ ರಂಗತಂಡಗಳ ಜೊತೆ ನಿರಂತರ ಪ್ರಯೋಗಶೀಲತೆಗೆ ಇಳಿದರು. ಇದರಿಂದ ಹಲವು ರಂಗಕಲಾವಿದರು ಪ್ರೇರಣೆ ಪಡೆದರು. ತುಳುಕೂಟದ ಸ್ಪರ್ಧೆಗಳಲ್ಲೂ ಅತ್ಯುತ್ತಮ ತುಳು ನಾಟಕಗಳು ಮೂಡಿಬಂದವು. ಹಲವು ರಂತಂಡಗಳು ಹುಟ್ಟಿಕೊಂಡು ಹವ್ಯಾಸಿಗಳ ಪ್ರಯೋಗಶೀಲ ರಂಗಭೂಮಿಗೆ ಹೊಸ ಆಯಾಮ ನೀಡಿತು. ನೂರಾರು ರಂಗಕಲಾವಿದರು ಇಂದು ಉಡುಪಿಯ ಹವ್ಯಾಸಿ ತಂಡಗಳಲ್ಲಿ ಸಕ್ರಿಯರಾಗಿದ್ದಾರೆ.

ಉಡುಪಿಯ ಎಲ್ಲ ರಂಪ್ರಯೋಗಗಳಲ್ಲಿ ಶಾಸ್ತ್ರೀಯ, ಜನಪದ, ಆಧುನಿಕ ರಂಗ ಕಲ್ಪನೆಗಳು ಟಿಸಿಲೊಡೆದವು. ಸೈದ್ಧಾಂತಿಕ ಮತ್ತು ತಾಂತ್ರಿಕ ಅಂಶಗಳ ಅರಿವು ಇಲ್ಲಿಯ ರಂಗಕರ್ಮಿಗಳಲ್ಲಿ ಢಾಳಾಗಿಯೇ ಮೂಡತೊಡಗಿತು. ಎಲ್ಲ ರಂಗಪ್ರಯೋಗಗಳಲ್ಲಿ ಉತ್ತಮ ಯೋಜನೆ, ಬಳಕೆ, ನಿರ್ವಹಣೆಯ ಗಂಭೀರ ರಂಗಪ್ರಜ್ಞೆ ಎದ್ದುಕಾಣುತ್ತದೆ. ಇದೊಂದು ರಂಗಭೂಮಿಯ ಮಟ್ಟಿಗೆ ಮಹತ್ವದ ಆಶಾದಾಯಕ ಬೆಳವಣಿಗೆ.

***ಉಡುಪಿಯ ಸಾಂಸ್ಕೃತಿಕ ಪರಂಪರೆಗೆ ಕ್ರಿಯಾಶೀಲತೆಗೆ ಕೊಡುಗೆ ನೀಡುತ್ತಿರುವ ರಂಗಸಂಸ್ಥೆಗಳ ಸಂಕ್ಷಿಪ್ತ ನೋಟ ಇಲ್ಲಿದೆ.***

ರಂಗಭೂಮಿ ಉಡುಪಿ, ರಥಬೀದಿ ಗೆಳೆಯರು ಉಡುಪಿ, ವನಸುಮ ವೇದಿಕೆ ಕಟಪಾಡಿ, ಸುಮನಸಾ ಕೊಡವೂರು, ಭೂಮಿಕಾ ಹಾರಾಡಿ, ಭೂಮಿಗೀತ ರಂಗತಂಡ ಪಟ್ಲ, ಸಂಗಮ ಕಲಾವಿದರ್ ಮಣಿಪಾಲ, ರಂಜನಾ ಕಲಾವಿದರು ಕಟಪಾಡಿ, ತುಳುಕೂಟ ಉಡುಪಿ, ಸಮೂಹ ಉಡುಪಿ, ಅನ್ವೇಷಣ ಉಡುಪಿ, ನಮ ತುಳುವೆರ್ ಮುದ್ರಾಡಿ, ಅಮಾಸ ಕಲಾವಿದೆರ್ ಉಡುಪಿ, ಕರಾವಳಿ ಕಲಾವಿದರು ಮಲ್ಪೆ, ರಂಗತರಂಗ ಕಾಪು, ಕೋಶಿಕಾ ರಂಗತಂಡ ಚೇರ್ಕಾಡಿ, ಅಮೋಘ ಉಡುಪಿ, ರಂಗಚಾವಡಿ ಅಂಬಲಪಾಡಿ, ಕೂಡ್ಲಿ ಕಲಾವಿದೆರ್ ಪೆರ್ಡೂರು, ರಂಗಬಸದಿ ಬಾರ್ಕೂರು, ಲಾವಣ್ಯ ಬೈಂದೂರು, ಸಾಧನಾ ಕ್ರಿಯೇಷನ್ ಸಾಸ್ತಾನ, ಸಂಚಲನ ಹೊಸೂರು (ಜಿಲ್ಲೆಯ ಏಕೈಕ ಗಿರಿಜನ ತಂಡ) ಸುರಭಿ ಬೈಂದೂರು, ಸನ್ನಿಧಿ ಕಲಾವಿದೆರ್, ರಂಗಸಂಪದ ಕೋಟ, ಅನಂತಮಕ್ಕಳ ನಾಟಕಸಮಿತಿ ಪೆರ್ಡೂರು, ರಸರಂಗ ಕದ್ರಿಕಟ್ಟು, ಕೈಲಾಸ

ಕಲಾಕ್ಷೇತ್ರ ತೆಕ್ಕಟ್ಟೆ ಹೀಗೆ ಹತ್ತು ಹಲವು ರಂಗಸಂಸ್ಥೆಗಳು ಸಕ್ರಿಯವಾಗಿ ಉಡುಪಿಯ ರಂಗಸಮೃದ್ಧಿಗೆ ಕಾರಣವಾಗಿವೆ.

ಇದಲ್ಲದೆ ಉಡುಪಿ ಜಿಲ್ಲೆಯ ಹಲವು ಶಾಲಾ ಕಾಲೇಜುಗಳಲ್ಲಿ ಮಕ್ಕಳ ರಂಗ ತಂಡಗಳು ಸಕ್ರಿಯವಾಗಿವೆ. ಅತ್ಯುತ್ತಮ ರಂಗಪ್ರಯೋಗಗಳ ಮೂಲಕ ಹೊಸ ರಂಗಕಲಾವಿದರನ್ನು ತಂತ್ರಜ್ಞರನ್ನು ಸೃಷ್ಟಿಸುತ್ತಿದೆ. ಎಸ್ ಎಂ ಎಸ್ ಬ್ರಹ್ಮಾವರ, ಎಂಜಿಸಿ ಮಣಿಪಾಲ, ಭುವನೇಂದ್ರ ಕಾಲೇಜು ಕಾರ್ಕಳ, ಭಂಡಾರ್ಕರ್ಸ್ ಕಾಲೇಜು ಕುಂದಾಪುರ ಈ ಸಂಸ್ಥೆಗಳಲ್ಲಿ ಉತ್ತಮ ರಂಗತಂಡಗಳು ಉತ್ತಮ ರಂಗಪ್ರಯೋಗಗಳು ನಡೆಯುತ್ತಿವೆ.

ಇತ್ತೀಚಿನ ದಿನಗಳಲ್ಲಿ ಪ್ರವರ್ಧಮಾನಕ್ಕೆ ಬರುತ್ತಿರುವ ಬಾಲಕೃಷ್ಣ ಕೊಡವೂರು, ರಾಘವೇಂದ್ರ ರಾವ್, ಎಂ. ಗಣೇಶ್, ರವಿರಾಜ್, ಪ್ರದೀಪ್‌ಚಂದ್ರ, ಪ್ರಶಾಂತ್ ಉದ್ಯಾವರ್, ದಿವಾಕರ ಕಟೀಲ್ ಮೊದಲಾದವರು ಹೆಚ್ಚು ಹೆಚ್ಚು ಯುವಕಲಾವಿದರು ರಂಗಭೂಮಿಯ ಕಡೆ ಒಲವು ತೋರುವಂತೆ ತಮ್ಮ ಚಟುವಟಿಕೆಗಳ ಮೂಲಕ ಶ್ರಮಿಸುತ್ತಿದ್ದಾರೆ. ಉಡುಪಿಯಲ್ಲೊಂದು ಪರಿಪೂರ್ಣ ರಂಗಭೂಮಿಯ ಕಲ್ಪನೆಗೆ ಹೊರಟ ಹಲವು ಕ್ರಿಯಾಶೀಲ ಮನಸ್ಸುಗಳು ಸಿದ್ಧಗೊಳ್ಳುತ್ತಿವೆ ಎಂಬುದು ಇಲ್ಲಿ ಉಲ್ಲೇಖನೀಯ.

## ಯುವ ಮನಸ್ಸುಗಳನ್ನು ರಂಗಭೂಮಿಯ ಕಡೆ ಸೆಳೆಯುವ ಪ್ರಯತ್ನಗಳು

ನಾನೊಬ್ಬ ಮಕ್ಕಳ ಶಿಬಿರದಿಂದ ರಂಗಪ್ರವೇಶ ಮಾಡಿದ ಕಲಾವಿದನಾಗಿ ನನಗನ್ನಿಸಿದ್ದು, ರಂಗಶಿಕ್ಷಣ ಬಾಲ್ಯದಿಂದಲೇ ಸಿಗಬೇಕು ಎಂದು. ಉಡುಪಿ ಜಿಲ್ಲೆಯಲ್ಲಿ ಇಂತಹ ಅನೇಕ ಪ್ರಯತ್ನಗಳು ನಿರಂತರ ನಡೆಯುತ್ತಿರುವುದರಿಂದ ಇಂದು ಅನೇಕ ಯುವ ಕಲಾವಿದರು ರಂಗಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಮಂಡ್ಯ ರಮೇಶ್ ಸಾರಥ್ಯದಲ್ಲಿ ರಂಗಭೂಮಿ ಸಂಸ್ಥೆ ಆಯೋಜಿಸಿದ ರಜಾ ಮಜಾ ಶಿಬಿರ, ಸತ್ಯನಾ ಕೊಡೇರಿ ನಿರ್ದೇಸಿಸುತ್ತಿದ್ದ ಚಿಣ್ಣರ ಅಂಗಳ ಶಿಬಿರಗಳು, ಮುರಹರಿ ಕಾಸರಗೋಡು, ಜಯಶೇಖರ್ ಮಡಪ್ಪಾಡಿ, ಬಾಸುಮ ಕೊಡಗು, ಪದ್ಮಾ ಕೊಡಗು, ಎ.ಕೆ. ಹಿಮಕರ್, ಐ.ಕೆ. ಬೊಳುವಾರು ಮೊದಲಾದವರು ನಿರಂತರ ಮಾಡುತ್ತಿದ್ದ ಮಕ್ಕಳ ಶಿಬಿರಗಳು ಅನೇಕ ಹೊಸ ರಂಗಕರ್ಮಿಗಳನ್ನು ತಯಾರು ಮಾಡಿವೆ. ಶಾಲೆಗಳಲ್ಲಿ ನಡೆಯುವ ಅನೇಕ ಶಿಬಿರಗಳು ಇಂದು ಆಧುನಿಕ ರಂಗದ ಶಿಸ್ತುಗಳನ್ನು ಇಟ್ಟುಕೊಂಡಿರುವುದು ಶ್ಲಾಘನೀಯ. ಕೆಲವು ಇಲಾಖೆಗಳು ಮಕ್ಕಳ ಶಿಬಿರಗಳಿಗೆ ಪ್ರಾಮುಖ್ಯತೆ ನೀಡುತ್ತಿರುವುದು ಗಮನಾರ್ಹ. ಕಾಲೇಜು ರಂಗಭೂಮಿ ಕೂಡ ಇಂದು ಉಚ್ಛ್ರಾಯ ಸ್ಥಿತಿಯಲ್ಲಿ ಕಾಣುತ್ತಿರುವುದು ಯುವ ಮನಸ್ಸುಗಳನ್ನು ಧನಾತ್ಮಕ ಚಿಂತನೆಯ ಕಡೆಗೆ ಸೆಳೆಯುತ್ತಿದೆ. ವಿ.ವಿ. ಮಟ್ಟದಲ್ಲಾಗುವ ಸಾಂಸ್ಕೃತಿಕ ಹಾಗೂ ನಾಟಕ ಸ್ಪರ್ಧೆಗಳು, ವಿದ್ಯಾರ್ಥಿಗಳ ಉತ್ಸವಗಳಲ್ಲಿ ನಡೆಯುವ ಸ್ಪರ್ಧೆಗಳು ಯುವಕ ಯುವತಿಯರಿಗೆ ವೇದಿಕೆ ಕಲ್ಪಿಸುತ್ತಿದೆ. ಇಂತಹ ಅವಕಾಶಗಳು ಮತ್ತಷ್ಟು ಸೃಷ್ಟಿಯಾಗಲಿ.

– *ರಾಮಾಂಜಿ ನಂಭೂಮಿ*



## ರಾಮದಾಸ್‌ರ ರಂಗದಾಸೋಹ

ಕವಿ, ಕತೆಗಾರ, ಕಾದಂಬರಿಕರ, ನಾಟಕಕಾರ, ವಿಮರ್ಶಕ, ರಂಗನಟ, ಚಿತ್ರನಟ, ನಾಟಕ ನಿರ್ದೇಶಕ, ಚಿತ್ರಕಲಾವಿದ, ಅನುವಾದಕ, ಪ್ರಕಾಶಕ ಹೀಗೆ ಬಹುರೂಪಿಯಾಗಿ ಕಾಣಿಸಿಕೊಳ್ಳುವ ಉಡುಪಿಯ ಕುಂಜೂರಿನ ರಾಮದಾಸರು ಸಾವಿರ ಸಿನೆಮಾಗಳ ಕಥೆಗಳ ಕಣಜದಂತಿರುವ ಬದುಕನ್ನು ಬದುಕಿದವರು. ಮಕ್ಕಳನ್ನು ಬೆನ್ನಿಗೆ ಕಟ್ಟಿಕೊಂಡು ಹೋಟೆಲ್ ವೃತ್ತಿಗಾಗಿ ಊರೂರು ಅಲೆಯುತ್ತಿದ್ದ ರಾಮದಾಸರ ಹೆತ್ತವರ ಬದುಕಿನ ಯಾತ್ರೆಯೇ ಹಾದಿಯಲ್ಲಿ ದಕ್ಕಿದ ಬಾಲ್ಯದ ಅನುಭವಗಳೇ ಅವರ ಬಹುರೂಪಿ ವ್ಯಕ್ತಿತ್ವದ ತಳಹದಿ. ಹೇಗೋ ಮೈಸೂರಿನ ನಂಜನಗೂಡಿನಲ್ಲಿ ಶಾಲಾ ಶಿಕ್ಷಣಕ್ಕೆ ತೆರೆದುಕೊಂಡ ಇವರು ಉನ್ನತ ಪದವಿವರೆಗೆ ಸಾಗಿದ ಹಾದಿಯೇ ಬಹಳ ನಾಟಕೀಯವಾದ ಕಥಾನಕ. ಮುಂಧೆ ಶಿಕ್ಷಕವೃತ್ತಿಗೆ ಅಂಟಿಕೊಂಡ ಇವರು ತಮ್ಮ ಪ್ರಗತಿಪರ ಧೋರಣೆಗಳಿಂದ ಹೆಸರು ಮಾಡಿದರು ಹಾಗೂ ಒಂದಷ್ಟು ಸವಾಲುಗಳನ್ನೂ ಸ್ವೀಕರಿಸಿದರು. ಬಾಲ್ಯದಲ್ಲಿ ಅನುಭವಕ್ಕೆ ಸಿಕ್ಕಿದ ಎಲ್ಲಾ ಪ್ರಕಾರಗಳಲ್ಲೂ ಬೆಳೆಸಿಕೊಂಡ ಆಸಕ್ತಿಯ ಫಲವಾಗಿ ಕಲೆ ಸಾಹಿತ್ಯ ಚಿತ್ರಕಲೆ ಹೀಗೆ ತಮ್ಮ ಜ್ಞಾನಭಂಡಾರವನ್ನು ಬೆಳೆಸುತ್ತಾ ಸಾಗಿದರು.

ರಾಮದಾಸರ ರಂಗಾಸಕ್ತಿಗೆ ಸಮರ್ಪಕ ವೇದಿಕೆ ಒದಗಿದ್ದು ಬಹುಶಃ ಅವರು ಉಡುಪಿಯಲ್ಲಿ ನೆಲೆಸಿದ ಮೇಲೆ ಅನ್ನಬಹುದು. ಆಗಲೇ ಒಂದು ರಂಗವಾತಾವರಣ ಸೃಷ್ಟಿಯಾಗಿದ್ದ ಪೂರ್ಣಪ್ರಜ್ಞಾ ಕಾಲೇಜಿನಲ್ಲಿ ಉದ್ಯಾವರ ಮಾಧವ ಆಚಾರ್ಯರ ಮಾರ್ಗದರ್ಶನದಲ್ಲಿ ಹೊಸ ಅಲೆಯ ನಾಟಕಗಳಲ್ಲಿ ಪಾತ್ರ ಮಾಡಲು ಮುಂದಾದರು, ಸಂಕ್ರಾಂತಿ, ತುಘಲಕ್ ಹೀಗೆ ಆರಂಭವಾಧ ರಂಗಪಯಣ ಕೆಲವು ದಶಕಗಳ ಕಾಲ ಮುಂದುವರಿಯಿತು. ನಂತರದ ದಿನಗಳಲ್ಲಿ ನಾಟಕರಚನೆ, ಅನುವಾದ ಮತ್ತು ನಿರ್ದೇಸನಕ್ಕೆ ಮುಂದದ ರಾಮದಾಸರು ಉಡುಪಿಯಲ್ಲಿ ಒಂದು ರಂಗದಾಸೋಹವನ್ನೇ ಆರಂಭಿಸಿಬಿಟ್ಟರು. ನೀನಾಸಂನಂತಹ ಸಂಸ್ಥೆಗಳು ಮಾಡಬಲ್ಲ ಕೆಲಸವನ್ನು ರಾಮದಾಸರು ಮಾಡಿದರು ಎನ್ನಬಹುದು. ಇಂದಿಗೂ ಉಡುಪಿಯಲ್ಲಿರುವ ಹಳೆಯ ರಂಗನಟರ ಬಾಯಲ್ಲಿ ರಾಮದಾಸರ ಹೆಸರು ಮೊದಲಿಗೆ ಬರುತ್ತೆ. ಸುಮಾರು 70ರಿಂದ 90ರ ದಶಕವನ್ನು ಪೂರ್ಣಪ್ರಜ್ಞಾ ಕಾಲೇಜಿನ ರಂಗಚಟುವಟಿಕೆಗಳ ಸ್ವರ್ಣಯುಗ ಎಂದೇ ಕರೆಯಲಾಗುತ್ತಿದೆ. ಅದರಲ್ಲಿ ರಾಮದಾಸರ ಪಾತ್ರವೂ ಹಿರಿದು ಎನ್ನುವುದು ಇಲ್ಲಿ ಉಲ್ಲೇಖನೀಯ. ಉಡುಪಿಯಲ್ಲಿ ರಂಗಭೂಮಿ ಸಂಸ್ಥೆ ಆರಂಭಿಸಿದ ನಾಟಕ ಸ್ಪರ್ಧೆಯೂ ರಾಮದಾಸರಿಗೆ ಒಂದು ಸನ್ನೆಗೋಲಾಯಿತು. ಆ ನೆಪಕ್ಕೆ ಹಲವಾರು ನಾಟಕಗಳನ್ನು ನಿರ್ದೇಶನ ಮಾಡಿ ರಾಜ್ಯದ ವಿವಿದೆಡೆಯಿಂದ ಬರುವ ಪ್ರೇಕ್ಷಕರೂ ಅಚ್ಚರಿ ಪಡುವಂತಹ ಪ್ರಯೋಗಗಳನ್ನು ನೀಡಿದರು. ರಂಗಚಟುವಟಿಕೆಗಳ ಜೊತೆಗೆ ಇವರ ವಿವಿಧ ಕ್ಷೇತ್ರಗಳ ಸಾಧನೆ ಅನನ್ಯ. ಪ್ರಶಸ್ತಿಗಳ ಪಟ್ಟಿಯೂ ದೊಡ್ಡದಿದೆ. ಇವರ ಸಾಟಿಯಿಲ್ಲದ ಸಾಧನೆಗೆ ಒಂದು ಸಲಾಮ್.

*(ಡಾ. ಕಾತ್ಯಾಯಿನಿ ಕುಂಜಿಬೆಟ್ಟು ಇವರ ಪುಸ್ತಕದಿಂದ ಆಯ್ದ ಭಾಗ)*

## ಶಾಂತವಾಗಿ ರಂಗಕಾಯಕ ಮಾಡಿದ ಶಾಂತಾರಾಮ



ಬಹುಶಃ ಉಡುಪಿ ಜಿಲ್ಲೆಯ ಒಟ್ಟಾರೆ ರಂಗಚಟುವಟಿಕೆಯ ಹಿಂದೆ ಡಾ. ಎಚ್. ಶಾಂತಾರಾಮ್ ಕೊಡುಗೆ ಮಹತ್ವದ್ದು. ಕು.ಶಿ.ಹರಿದಾಸ ಭಟ್ಟರು ಎಂ.ಜಿ.ಎಂ. ಕಾಲೇಜನ್ನು ಒಂದು ಸಾಂಸ್ಕೃತಿಕ ಕೇಂದ್ರವನ್ನಾಗಿ ಮಾಡದರೆ, ಶಾಂತಾರಾಮರು ಕುಂದಾಪುರದ ಭಂಡಾರ್‌ಕಾರ್ಸ್ ಕಾಲೇಜಿನಲ್ಲಿ ರಂಗ ಅಧ್ಯಯನ ಕೇಂದ್ರ ಸ್ಥಾಪಿಸುವ ಮೂಲಕ ನೂರಾರು ಯುವಕ ಯುವತಿಯರು ರಂಗಭೂಮಿಗೆ ಪ್ರವೇಶಿಸಲು ಅನುಕೂಲ ಮಾಡಿಕೊಟ್ಟರು. ಉಡುಪಿ ಜಿಲ್ಲೆಯ ಯಾವುದೇ ರಂಗತಂಡದ ಕಾರ್ಯಕ್ಷಮತೆಯ ಹಿಂದೆ ಶಾಂತಾರಾಮರ ಮಾರ್ಗದರ್ಶನ ಇರುತ್ತದೆ. ಇಳಿವಯಸ್ಸಿನಲ್ಲು ರಂಗ ಸಂಭ್ರಮಗಳನ್ನು ತಪ್ಪಿಸುವುದಿಲ್ಲ ಇವರು.

ರಂಗಭೂಮಿ (ರಿ) ಉಡುಪಿ ಸಂಸ್ಥೆ ಸ್ಥಾಪನೆಗೆ ಕಾರಣರಾದವರಲ್ಲಿ ಇವರೂ ಒಬ್ಬರು. ಇಂದಿನವರೆಗೂ ನಿರಂತರವಾಗಿ ರಂಗಭೂಮಿಯ ಎಲ್ಲ ಸಾಧನೆಗಳ ಹಿಂದೆ ಇರುವವರು ಶಾಂತಾರಾಮ್. ಮಣಿಪಾಲ ಸಮೂಹದ ಆಡಳಿತ ಅಧಿಕಾರಿಯಾಗಿದ್ದುಕೊಂಡ ಇವರ ಆಡಳಿತದ ಅಧೀನಕ್ಕೊಳಪಡುವ ಎಲ್ಲ ಶಿಕ್ಷಣ ಸಂಸ್ಥೆಗಳಲ್ಲಿಯೂ ನಿರಂತರ ರಂಗಪ್ರಕ್ರಿಯೆ ನಡೆಯುವಂತೆ ನೋಡಿಕೊಂಡವರು.


ರಂಗಭೂಮಿ ಉಡುಪಿ ಆಯೋಜಿಸುತ್ತಿರುವ ರಾಜ್ಯಮಟ್ಟದ ನಾಟಕ ಸ್ಪರ್ಧೆಯ ಯಶಸ್ಸಿನ ರೂವಾರಿಗಳು ಶಾಂತಾರಾಮರು. ಸಂಸ್ಥೆಯ ಅಧ್ಯಕ್ಷರಾಗಿ ಹಲವಾರು ವರ್ಷ ಮುನ್ನಡೆಸಿದಲ್ಲದೆ, ಈಗ ಗೌರವಾಧ್ಯಕ್ಷರಾಗಿ ಮಾರ್ಗದರ್ಶನ ಮಾಡುತ್ತಿದ್ದಾರೆ. ಸಂಸ್ಥೆಗೊಂದು ಕಛೇರಿ ಕಟ್ಟಡ ನಿರ್ಮಾಣದ ಹಿಂದೆಯು ಇವರ ಶ್ರಮ ಇದೆ.

ಯುವಕರನ್ನು ಯಾವತ್ತೂ ಬೆನ್ನು ತಟ್ಟುತ್ತಾ, ಹಸನ್ಮುಖಿಯಾಗಿಯೇ ಪ್ರೋತ್ಸಾಹಿಸುತ್ತಾ ರಂಗದ ಬಗ್ಗೆ ಯಾವತ್ತೂ ಒಳಿತನ್ನೇ ಮಾತನಾಡುತ್ತಾ ಇರುವ ಶಾಂತಾರಾಮರು ಶಾಂತವಾಗಿಯೇ ರಂಗಕಾಯಕ ಮಾಡುತ್ತಿದ್ದಾರೆ.



ರಂಗಅಧ್ಯಯನ ಕೇಂದ್ರದ ವಿದ್ಯಾರ್ಥಿಗಳ ಒಂದು ತಂಡ ಮ್ಯಾಕ್‌ಬೆತ್ ನಾಟಕದಲ್ಲಿ

# ಬಿ.ವಿ.ಕಾರಂತರ ಉಡುಪಿ ಪರ್ವ
# 'ಅಂಧಯುಗ'ದ ನೆನಪು



"ಊ ಓ ಆ ಏ ಈ"

"ಊ....ಓ.....ಆ....ಏ....ಈ" ಸ್ಥಳ ಉಡುಪಿಯ ಎಂ.ಜಿ.ಎಂ ಕಾಲೇಜಿನ ರವೀಂದ್ರ ಮಂಟಪ. ವರ್ತುಲಾಕಾರದಲ್ಲಿ ನಿಂತು ಊ.. ಈ.. ಹಾಡುತ್ತಿದ್ದಾರೆ. ಸ್ವರ ಲಹರಿ ಮಲೇರುತ್ತದೆ, ಕೆಳಗಿಳಿಯುತ್ತಿದೆ. ಈ ಮಂದಿ ಒಮ್ಮೆ ನಗುತ್ತಾರೆ, ಇನ್ನೊಮ್ಮೆ ಅಳುತ್ತಾರೆ, ಮತ್ತೊಮ್ಮೆ ಚಿಕ್ಕ ಮಕ್ಕಳಂತೆ ಆಟವಾಡುತ್ತಾರೆ, ಜಗಳವಾಡುತ್ತಾರೆ. ಓಡುತ್ತಾರೆ ಕುಣಿಯುತ್ತಾರೆ. ಇವರೆಲ್ಲ ಗಡ್ಡಗುರು ಷರ್ಟ್‌ಧಾರಿ ಹೇಳಿದಂತೆ ಕೇಳುತ್ತಿದ್ದಾರೆ. ಇದೇನು ಹಿಪ್ನೋಟಿಸಮ್ಮೋ ಎಂದು ಕೇಳಬೇಡಿ. ಆ ಗಡ್ಡಗುರು ಷರ್ಟ್‌ಧಾರಿ ವ್ಯಕ್ತಿ ಬಿ.ವಿ.ಕಾರಂತ.... ನಡೆಯುತ್ತಿದ್ದುದು ನಾಟಕ ನಿರ್ದೇಶನ ತರಬೇತಿ....

ಮಹಾತ್ಮಗಾಂಧಿ ಮೆಮೋರಿಯಲ್ ಕಾಲೇಜಿನಲ್ಲಿ ತಾ10-01-1973ರಿಂದ 04-02-1973ರವರೆಗೆ ನಡೆದ ನಾಟಕ ನಿರ್ದೇಶನ ತರಬೇತಿ ಶಿಬಿರದಲ್ಲಿ ಭಾಗವಹಿಸಿದ 30ಮಂದಿಯಲ್ಲಿ ನಾನೂ ಒಬ್ಬ. ಅಭ್ಯರ್ಥಿಗಳನ್ನು ಬಿ.ವಿ.ಕಾರಂತರೆ ಇಂಟರ್‌ವ್ಯೂ ಮಾಡಿ ಆಯ್ಕೆ ಮಾಡುತ್ತಾರೆ ಎಂದು ಪ್ರೊ.ಕು.ಶಿ.ಹರಿದಾಸ ಭಟ್ಟರು ಉದಯವಾಣಿಯಲ್ಲಿ ಪ್ರಕಟಿಸಿದಾಗ ಹೆದರಿಕೊಂಡೆ ಹೋಗಿದ್ದೆ. ಸಂದರ್ಶನದಲ್ಲಿ ನಾವು ಮಾತನಾಡಿದ ರೀತಿ ಸ್ವರ ಕೇಳಿಯೇ ನಮ್ಮ ಯೋಗ್ಯತೆ ನಿರ್ಧರಿಸಿದರು ಕಾರಂತರು. ಅವರು ಹೇಳಿದ ಶಿಬಿರದ ನಿಯಮಗಳನ್ನು ಕೇಳಿ ಆಯ್ಕೆಯಾದವರಲ್ಲಿ ಕೆಲವರು ಮರುದಿನ ಬರಲೇ ಇಲ್ಲ. ತರಬೇತಿ ಪ್ರತಿದಿನ ಸಂಜೆ ಐದು ಗಂಟೆಯಿಂದ ಹತ್ತರವರೆಗೆ ನಡೆಯುತ್ತಿತ್ತು. ಕಾರಂತರು ಮೊದಲ ಕೆಲವು ದಿನ ತಳ ಸ್ವರ (ಬೇಸ್ ವಾಯ್ಸ್) ತರಬೇತಿ, ಆಂಗಿಕ ತರಬೇತಿ ನೀಡಿ ರಂಗಭೂಮಿಯ ಬಗ್ಗೆ ಉಪನ್ಯಾಸ ನೀಡಿದರು. ಕಾರಂತರು ಬೇಸ್ ವಾಯ್ಸ್‌ಗೆ ಯಾಕೆ ಅಷ್ಟು ಮಹತ್ವ ಕೊಡುತ್ತಾರೆಂದು ಕೊನೆಗೂ ಕೆಲವರಿಗೆ ಅರ್ಥವಾಗಲಿಲ್ಲ. ನಾಟಕಗಳಲ್ಲಿ ಸಣ್ಣ ಸಣ್ಣ ವಿಷಯಗಳು (ನಗು, ಅಳು, ಕೆಮ್ಮು, ನಡೆಯುವ ರೀತಿ, ಕಣ್ಣು ತಿರುಗಿಸುವುದು) ಎಷ್ಟು ಮುಖ್ಯವಾಗುತ್ತದೆ ಎಂಬುದನ್ನು ಕಾರಂತರು ಸ್ವಾರಸ್ಯಪೂರ್ಣವಾಗಿ ವಿವರಿಸಿದರು. ಒಂದು ಕುರ್ಚಿಯನ್ನು ಎಷ್ಟು ರೀತಿಯಲ್ಲಿ

*ಉಡುಪಿಯಲ್ಲಿ ಪ್ರಯೋಗ ರಂಗಭೂಮಿಯ ಆಸಕ್ತಿ ಢಾಳಾಗಿ ಹಬ್ಬಿಕೊಂಡಿದ್ದು ಬಿ.ವಿ. ಕಾರಂತರ ಪ್ರವೇಶದಿಂದ ಅನ್ನುವುದು ಹಲವರ ಅಂಬೋಣ. ಅದಕ್ಕೆ ಸಾಕ್ಷಿಯಾಗಿ ಅವರ ಶಿಬಿರದಲ್ಲಿ ಪಾಲ್ಗೊಂಡ ಅನೇಕ ಶಿಬಿರಾರ್ಥಿಗಳು ಇಂದಿಗೂ ರಂಗದ ನಂಟನ್ನು ಬಿಟ್ಟಿಲ್ಲ. ಹಾಗಾಗಿ ಕಾರಂತರನ್ನು ನೆನಪಿಸಿಕೊಳ್ಳುವ ನಿಟ್ಟಿನಲ್ಲಿ ಪ್ರೊ. ಮುರಳೀಧರ ಉಪಾಧ್ಯ ಹಿರಿಯಡಕ ರವರು 'ಬಿ.ವಿ.ಕಾರಂತ' ಎನ್ನುವ ಪುಸ್ತಕದಲ್ಲಿ ಉಡುಪಿಯ ರಂಗಶಿಬಿರದ ಬಗ್ಗೆ ಬರೆದ ವಿಮರ್ಶೆಯ ಆಯ್ದ ಭಾಗವನ್ನು ಇಲ್ಲಿ ಬಳಸಿಕೊಂಡಿದ್ದೇವೆ.*

*– ಸಂಪಾದಕಿ*

ಉಪಯೋಗಿಸಬಹುದು ಎಂದು ಅವರು ಕಲಿಸಿದಾಗ ಆಶ್ಚರ್ಯವಾಯಿತು.

ನಿರ್ದೇಶಕನ ಸ್ಥಾನ ಪಾತ್ರ ಹಂಚುವ ಮುಂಚೆ ನಾಟಕವನ್ನು ಅಭಿನಯಿಸುವ ವರಿಗೆ ಓದಿ ಹೇಳುವುದರ ಪ್ರಯೋಜನ, ನಿರ್ದೇಶಕನ ಇಂಟರ್‌ಪ್ರಿಟೇಶನ್ ಮಹತ್ವ, ಮ್ಯಾನರಿಸಮ್(ಆಂಗಿಕ ಚಟ)ಗಳಿಂದ ನಟರಿಗಾಗುವ ತೊಂದರೆಗಳು, ರಂಗಭೂಮಿಯ ವಿನ್ಯಾಸ ಇವನ್ನೆಲ್ಲಾ ಕಾರಂತರು ತಮ್ಮ ಉಪನ್ಯಾಸಗಳಲ್ಲಿ ವಿವರಿಸಿದರು. Direction is an Institution ಎಂಬುದು ಕಾರಂತರ ವಾದ. ನಿರ್ದೇಶಕನ ಅರ್ಥೈಸುವಿಕೆ (Interpretation)ಯ ಮಹತ್ವವನ್ನು ಮತ್ತೆ ಮತ್ತೆ ಒತ್ತಿ ಹೇಳುತ್ತಿದ್ದರು. (ದೆಹಲಿಯ ಶಿವಪುರಿಯವರ ನಿರ್ದೇಶನದ ತುಘಲಕ್ ಭಾವಜೀವಿಯಾಗಿ ಕಂಡುಬಂದರೆ ಅಲ್ಕಾಜಿಯವರ ತುಘಲಕ್ ಕ್ರೂರಿಯಾಗಿ ತೋರಿದನಂತೆ. ಕೆಲವು ಸಂಭಾಷಣೆಗಳನ್ನು ತೆಗೆದು ಹಾಕುವ ಮೂಲಕ ಇದನ್ನು ಸಾಧಿಸಲಾಯಿತಂತೆ. ನಾನು ಒಮ್ಮೆ ತುಘಲಕ್ ನಿರ್ದೇಶಿಸಿದಾಗ ತುಘಲಕ್ Counterpart ಅಜೀಜ್‌ನಿಗೆ Importance ನೀಡಿದೆ ಎಂದರು ಕಾರಂತರು. ನಿರ್ದೇಶಕನ ವ್ಯಾಖ್ಯೆಯಿಂದಾಗಿ ಬೇಂದ್ರೆಯವರ ಸಾಯೋ ಆಟದಂಥ ಹಳೆಯ ನಾಟಕಕ್ಕೂ ಹೊಸ ಅರ್ಥ ಬರಬಹುದು. ಇಂದಿರಾಗಾಂಧಿ ಯುಗದಲ್ಲಿ ಸದಾರಮೆ ನಾಟಕಕ್ಕೂ ಹೊಸ ಅರ್ಥಕೊಡಬಹುದು ಎಂದರು. ಹಯವದನದ ಭಾಗವತರ ಪದ್ಯದಲ್ಲಿರುವ ಕೊನೆಯ ಶಬ್ದ ಗಣೇಶ ಹಾಡುವಾಗ "....ಣೇಶ" "....ಶ್" "ಶ" ಹೀಗೆ ತುಂಡು ಮಾಡುವುದು ಮುಂದಿನ ಕಥೆಯನ್ನು ಹೇಗೆ ಧ್ವನಿಸಬಲ್ಲುದು ಎಂದು ಕಾರಂತರು ತಿಳಿಸಿದರು. ಉಪನ್ಯಾಸದ ನಂತರ ನಾವು ಕೇಳಿದ ಪ್ರಶ್ನೆಗಳಿಗೆ ಕಾರಂತರು ಉತ್ತರ ಕೊಡುತ್ತಿದ್ದರು. ಥಿಯರಿ ಹೇಳುವಾಗ ಕಾರಂತರು ತಮ್ಮ ಪ್ರಾಯೋಗಿಕ ಅನುಭವಗಳನ್ನು ಹೇಳುತ್ತಿದ್ದುದರಿಂದ ಲೆಕ್ಚರ್ ಕುತೂಹಲ ಹುಟ್ಟಿಸುತ್ತಿತ್ತು. ಆದರೂ ಕಾರಂತರು ಉತ್ತಮ ಒರೇಟರ್ ಅಲ್ಲ ಎಂಬ ನಿರ್ಣಯಕ್ಕೆ ನಾನು ಬಂದೆ. ಕನ್ನಡ ಉಪನ್ಯಾಸದಲ್ಲಿ ಶೇಕಡ ನಲವತ್ತು ಇಂಗ್ಲೀಷ್ ಶಬ್ದಗಳೇ ಇರುತ್ತಿದ್ದವು. ಅನೇಕ ವೇಳೆ ಕಾರಂತರು ಶಬ್ದಗಳಿಗೆ ತಡವರಿಸಿದಂತೆ ಅನಿಸುತ್ತಿತ್ತು. ('ನನ್ನ ಮಾತು ಕೇಳಿ ಕೇಳಿ ನನಗೆ ಬೋರ್ ಆಗುತ್ತಿತ್ತು' ಎಂದು ಕೊನೆಗೆ ಕಾರಂತರೇ ಹೇಳಿದರು. ನಾನಂತು ಅನೇಕ ಸಾರಿ ಅವರು ಪಾಠ ಮಾಡುವಾಗ ಅಂದು ಅವರು ಧರಿಸಿದ್ದ ಗುರುಷರ್ಟ್ ಎಷ್ಟನೆಯದ್ದು ಎಂದು ಲೆಕ್ಕ ಹಾಕುತ್ತಿದ್ದೆ.)

ಶಿಬಿರದ ಎರಡನೆ ವಾರದಲ್ಲಿ ಧರ್ಮವೀರ ಭಾರತೀಯವರ ಹಿಂದೀ ನಾಟಕ ಅಂಧಯುಗ'ದ (ಕನ್ನಡ ಭಾಷಾಂತರ: ಎಚ್.ವಿ.ರಾಮಚಂದ್ರ ರಾವ್)ತಾಲೀಮು ಪ್ರಾರಂಭವಾಯಿತು. ಪಾತ್ರಗಳನ್ನು ಹಂಚುವ ಮೊದಲು ಕಾರಂತರು ಪ್ಲಾಟ್ ಓದಿ ಹೇಳಿದರು. ಅನಂತರ ಎಲ್ಲರಿಗೂ ನಾಟಕದ ಯಾವುದಾದರೂ ಪಾತ್ರದ ಕೆಲವು ಸಾಲುಗಳನ್ನು ಕಲಿತು ಬಂದು ಅಭಿನಯಿಸಲು ಹೇಳಿದರು. ಆಮೇಲೆ ಪಾತ್ರಗಳನ್ನು ಹಂಚಿದರು. ಜನ ಹೆಚ್ಚಿಗೆ ಇದ್ದುದರಿಂದ ಹನ್ನೆರಡು ಮಂದಿಯನ್ನು ಮೇಳಕ್ಕೆ ಆರಿಸಿದರು. (ನಾನು ಮೇಳದಲ್ಲಿ ಒಬ್ಬನಾದೆ.) ಮೊದಲ ದೃಶ್ಯದ ಅಭ್ಯಾಸ ನಮಗೆ ತೃಪ್ತಿ ನೀಡಿದ ಅನಂತರವೇ ಮುಂದಿನ ದೃಶ್ಯಕ್ಕೆ ಹೋಗುತ್ತಾರೆ. ಕಾರಂತರು ಎರಡು ರಿಹರ್ಸಲ್‌ಗಳ ಅನಂತರ ಬಾಯಿಪಾಠಕ್ಕೆ ಮಹತ್ವ ನೀಡುವುದು, ಅಭಿನಯದೊಂದಿಗೆ

ತಾಲೀಮು ಆರಂಭಿಸುವುದು, ಪ್ರವೇಶಗಳ ಜಾಗೃತೆ ವಹಿಸುವುದು, ಪ್ರತಿ ಪಾತ್ರದ ಪ್ರತಿಯೊಂದು ಮಾತನ್ನು ತಾನು ಆಡಿ ತೋರಿಸಿ ತಿದ್ದುವುದು....ಇವು ಕಾರಂತರ ನಿರ್ದೇಶನದ ವೈಶಿಷ್ಟ್ಯಗಳು. ತಾಲೀಮು ಮುಂದುವರಿದಂತೆ ಅನವಶ್ಯಕವೆಂದು ಕಂಡು ಬಂದ ಸಂಭಾಷಣೆಗಳನ್ನು ಕಿತ್ತು ಹಾಕಿದರು. ತಾಲೀಮಿನ ದಿನಗಳಲ್ಲಿ ಕಾರಂತರು ಕಲ್ಪನೆಯ ಗುಂಗಿನಲ್ಲೆ ಇರುತ್ತಿದ್ದರು. ರಿಹರ್ಸಲ್ ನಡೆಯುವಾಗ ಯಾರಾದರೂ ಪ್ರಶ್ನೆ ಕೇಳಿದರೆ, ಅಭಿನಯಿಸುವವರು ನಕ್ಕರೆ ಕಾರಂತರು ಖಾರಂತರಾಗುತ್ತಿದ್ದರು. ಅವರು ಸಿರಿಯಸ್ಸಾಗಿ ಕಂಡರೂ ತಾಲೀಮಿನ ವೇಳೆ ಅನೀರಿಕ್ಷಿತವಾಗಿ ಹಾಸ್ಯ ಚಟಾಕಿ ಹಾರಿಸುತ್ತಿದದರು.

'Go to the script' ಎಂಬುದು ಕಾರಂತರು ಪಾತ್ರಧಾರಿಗಳಿಗೆ ಅಗಾಗ್ಗೆ ನೀಡುತ್ತಿದ್ದ ಎಚ್ಚರ. ಆಡಿಯನ್ಸ್ ಇದ್ದಾರೆ ಎಂಬುದನ್ನೇ ನಟ ಮರೆಯಬೇಕು ಎಂದು ಅವರು ಹೇಳುವಾಗ ನಮಗೆ ಆಶ್ಚರ್ಯ, 'ಸ್ಟೇಜಿನ ಯಾವ ಭಾಗವೂ ಖಾಲಿ ಉಳಿಯಬಾರದೆಂದು ಕಾರಂತರ ಅಭಿಪ್ರಾಯ ಖಾಲಿ ಸ್ಟೇಜ್ ತುಂಬಿದಾಗ ನನಗೆ ವಿಚಿತ್ರ ಆನಂದವಾಗುತ್ತದೆ' ಎನ್ನುತ್ತಾರೆ. ನಾಟಕ ಪ್ರಯೋಗದ ವೇಳೆ ನಿರ್ದೇಶಕ ಸ್ಟೇಜ್‌ನಲ್ಲಿ ಇರಬಾರದು. ಅವನು ಪ್ರೇಕ್ಷಕರಲ್ಲೊಬ್ಬನಾಗಬೇಕು ಎಂದ ಕಾರಂತರು ಮುಂದೆ ಹಾಗೆಯೇ ಮಾಡಿ ತೋರಿಸಿದರು. ನಾಟಕದ ಕೊನೆಯ ರಿಹರ್ಸಲ್ ಪೂರ್ತಿ ಮೇಕಪ್, ದೀಪ ವ್ಯವಸ್ಥೆಯೊಂದಿಗೆ ನಡೆಯಿತು.

ಆಧುನಿಕ ಭಾರತೀಯ ನಾಟಕಗಳಲ್ಲಿ ಪ್ರಸಿದ್ಧವಾಗಿರುವ 'ಅಂಧಯುಗ'ದ ಮೊದಲ ಕನ್ನಡ ಪ್ರಯೋಗ ತಾ 04–02–1973ರಂದು ಉಡುಪಿಯ ನಾಟಕ ನಿರ್ದೇಶನ ಶಿಬಿರದಲ್ಲಿ ಮುಗಿಯಿತು. ಅಶ್ವತ್ಥಾಮ(ಲಕ್ಷ್ಮೀನಾರಾಯಣ ಸಾಮಗ ಎಂ.), ಸಂಜಯ ಕೃಷ್ಣಮೂರ್ತಿ ಆಚಾರ್ಯ), ವಿದುರ(ಶಶಿಧರ ಹೆಗ್ಡೆ.ಕೆ.) ಧೃತರಾಷ್ಟ್ರ(ಉದ್ಯಾವರ ಮಾಧವ ಆಚಾರ್ಯ), ವೃದ್ಧಯಾಚಕ ಜರ (ರಾಮದಾಸ್), ಯುಯುತ್ಸು (ಪ್ರೇಮಾನಂದ ಶೆಟ್ಟಿ ). ಈ ಪಾತ್ರಗಳನ್ನು ವಹಿಸಿದವರ ಅಭಿನಯ ತೃಪ್ತಿಕರವಾಗಿತ್ತು, ಚಿಕ್ಕ ಪಾತ್ರಗಳಾದರೂ ಚೊಕ್ಕದಾಗಿ ಅಭಿನಯಿಸಿ ಪ್ರೇಕ್ಷಕರ ಮೆಚ್ಚುಗೆ ಗಳಿಸಿದವರು ಪ್ರಹರಿಗಳು (ಸುಬ್ರಮಣ್ಯ ಕೆದಿಲಾಯ, ಗೋವಿಂದ್ ಭಟ್.ಎಂ.ವಿ.) ಗಾಂಧಾರಿ (ಶ್ರೀಮತಿ ಆಲ್ಬರ್ಟಿನ್ ಮೆಂಡೋನ್ಸ್) ಭಾವಪೂರ್ಣವಾಗಿ ಅಭಿನಯಿಸಿದರೂ ಮಾತುಗಳ ಏರಿಳಿತ ಸರಿಯಾಗಿರಲಿಲ್ಲ. ಮೇಳ ತನ್ನ ಉದ್ದೇಶ ಸಾಧಿಸುವಲ್ಲಿ ಸಂಪೂರ್ಣ ಸೋತಿತು. ಗೂಬೆ ಕಾಗೆಗಳ ನೃತ್ಯವನ್ನು ಯಕ್ಷಗಾನ ವೇಷಗಳ ಮೂಲಕ ಅಭಿನಯಿಸುವ ಕಾರಂತರ ಕಲ್ಪನೆ ಯಶಸ್ವಿಯಾಯಿತು. ಉಡುಪಿಯ ಯಕ್ಷಗಾನ ಕೇಂದ್ರದ ವಿದ್ಯಾರ್ಥಿಗಳು ಅಭಿನಯಿಸಿದ ಈ ನೃತ್ಯ ನಾಟಕದ ಟೆಂಪೊಕ್ಕೆ ಅಡ್ಡಿ ಮಾಡಲಿಲ್ಲ. ('ನಾಟಕದಲ್ಲಿ ನೃತ್ಯ ಇದ್ದರೆ ಇಮ್ಯಾಜಿನೇಷನ್ ಇದ್ದರೆ ನನಗೆ ಪ್ರಿಯ'ಎಂದು ಹೇಳುತ್ತಿದ್ದರು.)

ರಂಗಭೂಮಿ ವ್ಯವಸ್ಥೆ, ದೀಪದ ವ್ಯವಸ್ಥೆ ಚೆನ್ನಾಗಿದ್ದವು. ನಾಟಕದ ಎಲ್ಲಾ ವಸ್ತ್ರಗಳನ್ನು ಖಾದಿ ಸೀರೆಗಳಿಂದ ತಯಾರಿಸಿದ್ದರಲ್ಲೂ ಹೊಸತನವಿತ್ತು. (ಮರುದಿನದ 'ತುಘಲಕ್' ನಾಟಕದ ವಸ್ತ್ರಗಳನ್ನು ಬೆಡ್‌ಶೀಟ್‌ಗಳಿಂದ ತಯಾರಿಸಲಾಗಿತ್ತು) ಒಟ್ಟಿನಲ್ಲಿ ಅಂಧಯುಗದ ಪ್ರಥಮ ಪ್ರಯೋಗ ಪೂರ್ತಿ ಸಕ್ಸಸ್ ಎನ್ನುವಂತಿರಲಿಲ್ಲ. ನಿರ್ದೇಶಕ

ಕಾರಂತರಿಗೆ ಪ್ರಯೋಗ ತೃಪ್ತಿ ನೀಡಲಿಲ್ಲ. 'ನಾಟಕ ಸ್ಲಿಂಕ್ ಆಗಲಿಲ್ಲ ಡ್ರಾಗಿಂಗ್ ಆಯಿತು'ಎಂದರು ಕಾರಂತರು. ಮರುದಿನ ಕಾರಂತರ ನಿರ್ದೇಶನದಲ್ಲಿ ಎಂ.ಜಿ.ಎಂ. ಕಾಲೇಜಿನ ವಿದ್ಯಾರ್ಥಿಗಳು ಅಭಿನಯಿಸಿದ ತುಘಲಕ್ ತಕ್ಕ ಮಟ್ಟಿಗೆ ಯಶಸ್ವಿಯಾಯಿತು.

ನಾಟಕ ನಿರ್ದೇಶನ ತರಬೇತಿ ಶಿಬಿರ ನಮಗೆಲ್ಲ ಹೊಸ ಅನುಭವವಾಗಿತ್ತು. ಕಾರಂತರ ಸಹವಾಸ, ಪಾಠ, ಪ್ರೊ. ಅಲ್ಕಾಜಿ, ಪ್ರೊ. ಜೈನ್ ಅವರ ಉಪನ್ಯಾಸ, 'ಅಂಧಯುಗ' ಪ್ರಯೋಗ ನಮಗೆಲ್ಲ ತೃಪ್ತಿ ನೀಡಿತು. ಶಿಬಿರದಲ್ಲಿ ದೀಪದ ವ್ಯವಸ್ಥೆಯ ಬಗ್ಗೆ ತರಬೇತಿ ನೀಡಬೇಕು, ನಾಟಕ ಸಾಹಿತ್ಯ ಕುರಿತ ಪ್ರದರ್ಶನವೊಂದನ್ನು ಏರ್ಪಡಿಸಬೇಕು ಎಂದು ಕಾರಂತರಿಗೆ ಆಸೆಯಿತ್ತು. ಆದರೆ ಸಮಯದ ಅಭಾವದಿಂದ ಅದು ಸಾಧ್ಯವಾಗಲಿಲ್ಲ. ಶಿಬಿರದ ಕಾಫಿ, ತಿಂಡಿ, ಊಟ, ಕಷಾಯಗಳ ಜೊತೆಗೆ ಡೈರೆಕ್ಟರ್ ಕು.ಶಿ. ಮತ್ತು ಮೇಲ್ವಿಚಾರಕರಾಗಿದ್ದ ಎಂ.ಜಿ.ಎಂ.ನ ಇತಿಹಾಸ ಪ್ರಾಧ್ಯಾಪಕ ಶ್ರೀ ಬಾಲಚಂದ್ರರ ಸೌಜನ್ಯವನ್ನು ನಾನು ಮರೆಯುವಂತಿಲ್ಲ. ಶಿಬಿರದಿಂದಾಗಿ ನನಗೆ ಮತ್ತು ಇತರ ಹಲವರಿಗಾದ ಇನ್ನೊಂದು ಲಾಭವನ್ನು ನಾನಿಲ್ಲಿ ಬರೆಯಬೇಕು. 'ಲಂಕೇಶ- ಮುಕ್ತ ಎಪಿಸೋಡ್'ನಿಂದಾಗಿ ಕಾರಂತರ ಕುರಿತು ನನ್ನಲ್ಲಿ ಉಂಟಾಗಿದ್ದ ಸಂಶಯ ಪೂರ್ವಗ್ರಹಗಳೆಲ್ಲ ಶಿಬಿರದಲ್ಲಿ ಕಾರಂತರ ಒಡನಾಟದ ಅನಂತರ ದೂರವಾದವು.

ಶಿಬಿರದ ಸಮಾರೋಪ ಸಮಾರಂಭ 6-2-73ರಂದು ನಡೆಯಿತು. ಪ್ರೊ. ಹರಿದಾಸ ಭಟ್ಟರು ಶಿಬಿರದಲ್ಲಿ ಭಾಗವಹಿಸಿದವರಿಗೆಲ್ಲ ಬಹುಮಾನ ಮತ್ತು ಪ್ರಶಸ್ತಿ ಪತ್ರಗಳನ್ನು ನೀಡಿದರು. ಬಿ.ವಿ.ಕಾರಂತರು ತಮ್ಮ ಭಾಷಣದಲ್ಲಿ ಶಿಬಿರದ ಗೆಲುವು-ಸೋಲುಗಳನ್ನು ಸ್ಪಷ್ಟವಾಗಿ ತಿಳಿಸಿದರು. "ಶಿಬಿರದಲ್ಲಿ ನಾನು ಯೋಚಿಸಿದ್ದೆಲ್ಲ ಸಾಧಿಸಲು ಸಾಧ್ಯವಾಗಲಿಲ್ಲ. ಸಮಯ ಕಡಿಮೆಯಾಯಿತು. ಮೇಳದವರಲ್ಲಿ ತಾವು ಒಂದು ಎಂಬ ಫೀಲಿಂಗ್ ಬರಲಿಲ್ಲ. ಆದ್ದರಿಂದ ಕೋರಸ್ ವಿಫಲವಾಯಿತು. ಪಾತ್ರವಹಿಸಿದವರಲ್ಲಿ ಕೆಲವರು ರಿಹರ್ಸಲಿನ ಕೊನೆಯ ದಿನಗಳಲ್ಲಿ ಸ್ಕ್ರಿಪ್ಟ್ ಓದುವುದನ್ನು ಬಿಟ್ಟರು. ಇದರಿಂದಾಗಿ ನಾಟಕದ ಯಶಸ್ಸಿಗೆ ತೊಂದರೆಯಾಯಿತು. ಒಬ್ಬರು ಯಾವಾಗಲೂ ಒಂದೇ ರೀತಿಯ ಪಾತ್ರಗಳನ್ನು ಮಾಡಬಾರದು. ನಾಟಕ ಮುಗಿದ ಮೇಲೆ ಅವರ ಮಾತುಗಳನ್ನು ಮರೆತುಬಿಡಬೇಕು. ಇಂತಹ ಶಿಬಿರಗಳು ಆಗಾಗ ಏರ್ಪಡಬೇಕು. ಹೆಚ್ಚು ಹೆಚ್ಚು ಜನ ಅದರಲ್ಲಿ ಭಾಗವಹಿಸಬೇಕು. ನಾಟಕವನ್ನು ನಾವು ಹಾಬಿಯಾಗಿ ತೆಗೆದುಕೊಂಡಾಗ ಅದರಲ್ಲಿ ಡಿವೋಶನ್ ಹೆಚ್ಚು ಇರಬೇಕು" ಎಂದರು.

'ಅಂಧಯುಗ' ನಾಟಕದ ಕೊನೆಯಲ್ಲಿ ಜರ "ನಾನು ಪ್ರಭುವಿನ ಸಂದೇಶ ತಂದಿದ್ದೇನೆ. ಯಾರಾದರೂ ಕೇಳಿಸಿಕೊಳ್ಳುವಿರಾ? ಯಾರಾದರೂ ಕೇಳಿಸಿಕೊಳ್ಳುವಿರಾ?" ಎಂದು ಕರೆಯುತ್ತಾನೆ. ಕನ್ನಡ ರಂಗಭೂಮಿಗೆ ಹೊಸ ಸತ್ವ-ಸ್ವತ್ವ ಕೊಡಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಿರುವ ಬಿ.ವಿ.ಕಾರಂತರ ಶ್ರದ್ಧೆ ಇದೇ ರೀತಿಯದು.

-ಮುರಳೀಧರ ಉಪಾಧ್ಯ ಹಿರಿಯಡಕ

# ಉಡುಪಿ ಜಿಲ್ಲೆ–ನನ್ನ ರಂಗನೋಟಗಳು

**–ಡಾ. ಮಾಧವಿ ಎಸ್. ಭಂಡಾರಿ**

ರಂಗಭೂಮಿ ಒಂದು ಪ್ರದೇಶದ ಜೀವಂತಿಕೆಯ ಪ್ರತೀಕ. ಸಾಂಸ್ಕೃತಿಕವಾಗಿ ಅದೆಷ್ಟು ಸಮೃದ್ಧವಾಗಿದೆ ಎಂಬುದನ್ನು ಅಲ್ಲಿಯ ರಂಗ ಚಟುವಟಿಕೆಗಳ ಮೂಲಕ ಗುರುತಿಸಬಹುದು. ನನ್ನ ಸಮಕಾಲೀನರು ಯಾರಾದರೂ ಮಾತಿಗೆ ಸಿಕ್ಕರೆ ಅವರ ಪೂರ್ವದೀಪ್ತಿ ಹೊರಳುವುದು, ಪೂರ್ಣಪ್ರಜ್ಞ ಕಾಲೇಜಿನ ಎಂಬತ್ತರ ದಶಕದ ರಂಗ ಚಟುವಟಿಕೆಗಳತ್ತ! ಪ್ರೊ. ಕೆ.ಜಿ.ತಂತ್ರಿಗಳು ಪ್ರಾಂಶುಪಾಲರಾಗಿದ್ದ ಆ ಕಾಲದಲ್ಲಿ ಸಾಂಸ್ಕೃತಿಕ ನವಿಲು ಗರಿಬಿಚ್ಚಿ ನರ್ತಿಸುತ್ತಿತ್ತು! ಇದರರ್ಥ ಕಾಲೇಜು ಕೇವಲ ರಂಗ ಚಟುವಟಿಕೆಗಳನ್ನಷ್ಟೇ ಮಾಡುತ್ತ ಶೈಕ್ಷಣಿಕವಾಗಿ ಸೊರಗಿತ್ತು, ಎಂದೇನಲ್ಲ. ರ್‍ಯಾಂಕ್ ಬರುವ ವಿದ್ಯಾರ್ಥಿಗಳು, ಸಂಶೋಧನೆಗಾಗಿ ತೆರಳುವ ಅಧ್ಯಾಪಕರು ಆಗಲೂ ಇದ್ದರು. ಆದರೆ ಸಾಂಸ್ಕೃತಿಕ ಜೀವಂತಿಕೆಯನ್ನು ಸಮಾಜ ಗುರುತಿಸಿ ಗೌರವಿಸುತ್ತಿತ್ತು. ಇದು ಕೇವಲ ಕಾಲೇಜಿನ ಸಾಂಸ್ಕೃತಿಕ ಇತಿಹಾಸವಾಗಿರದೆ, ಉಡುಪಿಯ ಸಾಂಸ್ಕೃತಿಕ ಹೆಜ್ಜೆಗುರುತೂ ಆಗಿರುವುದು ಮಹತ್ತ್ವದ್ದಾಗಿದೆ. ಕಾರಣವಿಷ್ಟೆ, ಈ ಕಾಲೇಜಿನ ಹೆಚ್ಚಿನ ಅಧ್ಯಾಪಕರು ಕಾಲೇಜಿನ ಹೊರಗೂ ಸಾಂಸ್ಕೃತಿಕ ರಂಗದಲ್ಲಿ ಒಂದಿಲ್ಲೊಂದು ರೀತಿಯಲ್ಲಿ ತೊಡಗಿಸಿಕೊಂಡಿದ್ದರು.

1979ರಲ್ಲಿ ಅಂತಹ ಪೂರ್ಣಪ್ರಜ್ಞ ಕಾಲೇಜಿನ ಹಿಂದಿ ವಿಭಾಗಕ್ಕೆ ಉಪನ್ಯಾಸಕಿಯಾಗಿ ಆಯ್ಕೆಗೊಂಡೆ. ಸಾಂಸ್ಕೃತಿಕವಾಗಿ ಶ್ರೀಮಂತವಾಗಿರುವ ಉಡುಪಿಯಲ್ಲಿ ನೆಲೆನಿಂತೆ, ಬದುಕನ್ನು ಕಟ್ಟಿಕೊಂಡೆ, ಮತ್ತೆ ಉಡುಪಿಯವಳೇ ಆಗಿಬಿಟ್ಟೆ. ಇದು ಇತಿಹಾಸ. ಆಗಲೇ ವೃತ್ತಿಯ ಜೊತೆ ಆಸಕ್ತಿಯಾಗಿ ನನ್ನೊಡನಿದ್ದುದು, ಬರವಣಿಗೆ ಮತ್ತು ಅಭಿನಯ. ಪುಸ್ತಕ ರೂಪದಲ್ಲಿ ಪ್ರಕಟಿಸುವಷ್ಟು ಕವನಗಳು ಕೈಯಲ್ಲಿದ್ದವು. ಮುಂದೆ ಸಂಕಲನ ರೂಪದಲ್ಲಿ ಪ್ರಕಟವೂ ಆಯ್ತು.

ಅಭಿನಯದ ಈ ಗೀಳು ಹತ್ತಿದ್ದಾದರೂ ಎಲ್ಲಿ, ಎಂಬುದನ್ನು ಹೇಳಲೇಬೇಕು. 1972ರಲ್ಲಿ ಮಹರ್ಷಿ ದಯಾನಂದ ಕಾಲೇಜು ಪರೇಲ್‌ನಲ್ಲಿ ಕಥೆಗಾರ ವಿಶ್ವನಾಥ ಕಾರ್ನಾಡರ ಶಿಷ್ಯಳಾಗಿದ್ದೆ. ಅಲ್ಲವರು ಕನ್ನಡ ಭಾಷಾ ಅಧ್ಯಾಪಕರಾಗಿದ್ದರು. ಅಲ್ಲಿಯ ಸಂಧ್ಯಾ ಕಾಲೇಜಿನ ವಿದ್ಯಾರ್ಥಿಗಳೆಲ್ಲ ಸೇರಿ 'ಕಣ್ಣು ತೆರೆಯಿತು' ನಾಟಕ ಮಾಡಿದ್ದರು. ಅದರಲ್ಲಿ ಭಾಗವಹಿಸುವ ಮೂಲಕ ನಾಟಕದ ಗೀಳು ಹಿಡಿಸಿಕೊಂಡಿದ್ದೆ.

1973ರಲ್ಲಿ ಕುಮಟಾದ ಡಾ.ಎ.ವಿ.ಬಾಳಿಗಾ ಕಾಲೇಜಿಗೆ ಪದವಿಗಾಗಿ ಬಂದು ಸೇರಿದೆ. ಅಭಿನಯದ ಹುಚ್ಚು ಹಾಗೆಯೇ ಇತ್ತು. ಹುಡುಗರೊಂದಿಗೆ ಬೆರೆತು ನಾಟಕ ಮಾಡುವ ಕಾಲ ಅದಾಗಿರಲಿಲ್ಲ. ಆದರೆ ನಾನು ತಯಾರಾಗಿದ್ದೇನೆ ಎನ್ನುವ ಕಾರಣ ಹೇಳಿ, ಸಾಕ್ಷಿಗೆ ನನ್ನನ್ನು ಮುಂದಿಟ್ಟುಕೊಂಡು, ಒಂದಿಬ್ಬರು ಆಸಕ್ತ ವಿದ್ಯಾರ್ಥಿನಿಯರು ಬಂದು ಸೇರಿಕೊಂಡರು. ಮೂರು ವರ್ಷದ ಪದವಿ ತರಗತಿ ಪೂರೈಸುವಷ್ಟರಲ್ಲಿ ನಾಲ್ಕು ನಾಟಕಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದೆ.

1977ರಲ್ಲಿ ಹಿಂದಿ ಎಮ್.ಎ. ಮಾಡಲು ಧಾರವಾಡಕ್ಕೆ ಹೋದೆ. ಹಿಂದಿ ವಿಭಾಗದಲ್ಲಿ ಅಂತಹ ಯಾವುದೇ ಸಾಂಸ್ಕೃತಿಕ ವಾತಾವರಣವಿರಲಿಲ್ಲ. ಕನ್ನಡ ವಿಭಾಗದ ವಿದ್ಯಾರ್ಥಿಗಳು

ಡಾ. ಬುದ್ಧಣ್ಣ ಹಿಂಗಮಿರೆಯವರ 'ತೀರ್ಪು'ನಾಟಕ ಮಾಡಲು ಮಗ್ದಲಿನಾ ಮೇರಿ ಪಾತ್ರಕ್ಕಾಗಿ ತಡಕಾಡುತ್ತಿದ್ದಾರೆಂಬ ಸುದ್ದಿ ಸಿಕ್ಕಿತು. ಹೇಗೋ ನಾನು ಹೋಗಿ ಸೇರಿಕೊಂಡಿದ್ದು ಅವರ ಸಂತಸವನ್ನು ಇಮ್ಮಡಿಸಿತ್ತು. ಪಾತ್ರವೂ ಅತ್ಯಂತ ಪ್ರಶಂಸೆಗೆ ಒಳಗಾಗಿತ್ತು. ಭಯದಲ್ಲಿ ಮುದುಡಿನಿಂತ ಮೇರಿಯನ್ನು... ಅವಳಿಗೆ ಹೊಡೆಯುವುದಕ್ಕಾಗಿ ಅಲ್ಲಿ ಪಾತ್ರಧಾರಿಗಳಾಗಿದ್ದ ಡಾ. ಅರವಿಂದ ಮಾಲಗತ್ತಿ ಮತ್ತು ಸಮೂಹ ಕಲ್ಲು ಎತ್ತುವ ದೃಶ್ಯವನ್ನು ಕಳೆದ ಬಾರಿ ನಾಟಕ ಅಕಾಡೆಮಿಯ ಕಾರ್ಯಕ್ರಮಕ್ಕೆ ಮಾಲಗತ್ತಿಯವರು ಉಡುಪಿಗೆ ಬಂದಾಗ ನೆನಪಿಸಿಕೊಂಡೆವು. ಮೇಟಿ ಮುದಿಯಪ್ಪ ಸಿಕ್ಕಾಗೆಲ್ಲ ನೆನಪಿಸುತ್ತಾರೆ! ಕಾರಣ ಅವರಾಗ ಕನ್ನಡ ವಿಭಾಗದ ವಿದ್ಯಾರ್ಥಿ. ಧಾರವಾಡದಲ್ಲಿರುವಾಗಲೇ ವಿಷ್ಣು ನಾಯ್ಕರ ಆಮಂತ್ರಣವನ್ನು ಸ್ವೀಕರಿಸಿ, ಅಂಕೋಲಾಕ್ಕೆ ಹೋಗಿ ಮೂರು ನಾಟಕಗಳಲ್ಲಿ ಭಾಗವಹಿಸಿದ್ದು ಮನದಾಳದಲ್ಲಿ ಇನ್ನೂ ಅಚ್ಚಳಿಯದೇ ಉಳಿದಿದೆ.

ಇಷ್ಟೆಲ್ಲ ರಂಗಾಸಕ್ತಿ ಹೊತ್ತು 1979ರಲ್ಲಿ ನಾನು ಕಾಲೂರಿದ್ದು ಉಡುಪಿ ಪೂರ್ಣಪ್ರಜ್ಞ ಕಾಲೇಜಿನ ರಂಗಸ್ಥಳಕ್ಕೆ! ನಾಟಕದ ಹುಚ್ಚಿಗೆ ನೀರೆರೆದು, ಗೊಬ್ಬರ ಹಾಕಿ ಪೋಷಿಸುವಂತಹ ವಾತಾವರಣ ಅಂದು ಅಲ್ಲಿತ್ತು. 1980ರಲ್ಲಿ ಅದಮಾರು ಹಿರಿಯ ಸ್ವಾಮೀಜೀ, ಶ್ರೀ. ಶ್ರೀ. ವಿಬುಧೇಶ ತೀರ್ಥರ 50ನೆಯ ಹುಟ್ಟುಹಬ್ಬದ ಸಂದರ್ಭದಲ್ಲಿ ಅರ್ಥಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಉದ್ಯಾವರ ಮಾಧವ ಆಚಾರ್ಯರು ಅಧ್ಯಾಪಕರು ಮತ್ತು ವಿದ್ಯಾರ್ಥಿಗಳನ್ನು ಸೇರಿಸಿಕೊಂಡು ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿಯವರು ಅನುವಾದಿಸಿದ ಧರ್ಮವೀರ ಭಾರತಿಯವರ 'ಅಂಧಯುಗ' ನಾಟಕದ ತಾಲೀಮು ನಡೆಸಿದರು. ಗಾಂಧಾರಿಯಾಗಿ ನನ್ನನ್ನು ಆಯ್ಕೆ ಮಾಡಿಕೊಂಡರು. ಒಟ್ಟೂ ಏಳು ಪ್ರಯೋಗಗಳನ್ನು ಕಂಡ 'ಅಂಧಯುಗ'ದಲ್ಲಿ ಧೃತರಾಷ್ಟ್ರನ ಪಾತ್ರಧಾರಿಯಲ್ಲಿ ಬದಲಾವಣೆಯಾಗಿದೆ, ಆದರೆ ಗಾಂಧಾರಿಯಾಗಿ ಪಾತ್ರ ನಿರ್ವಹಿಸಿದವಳು ಆದ್ಯಂತ ನಾನೇ! ಕಾಲೇಜಿನಲ್ಲಿ ಅಲ್ಲಿಯವರೆಗೆ ಸ್ತ್ರೀ ಪಾತ್ರಗಳನ್ನು ಪುರುಷರೇ ಮಾಡುತ್ತಿದ್ದ ಅಥವಾ ಆಯಾ ಪಾತ್ರಧಾರಿಗಳ ಜೊತೆಯಲ್ಲಿ ಅವರವರ ಶ್ರೀಮತಿಯರು ನಟಿಸುತ್ತಿದ್ದ ದಾಖಲೆಯಿತ್ತು. ಅದನ್ನು ಮುರಿದವಳು ನಾನು ಎಂಬುದನ್ನು ಹೆಮ್ಮೆಯಿಂದ ಉಲ್ಲೇಖಿಸ ಬಯಸುತ್ತೇನೆ. ನಾಟಕ ಆಗಲೇಬೇಕೆಂಬ ಅನಿವಾರ್ಯತೆಯಿಂದಾಗಿ ಅಧ್ಯಾಪಕರು ತಮ್ಮ ಶ್ರೀಮತಿಯವರನ್ನು ಭಾಗವಹಿಸುವಂತೆ ಮಾಡಿದ್ದರು ಎಂಬುದು ಮತ್ತೆ ಅವರ ಬಾಯಿಂದಲೇ ಕೇಳಿ ತಿಳಿದೆ. 'ಅಂಧಯುಗ'ದಲ್ಲಿ ನಟಿಸಿದ ಅಧ್ಯಾಪಕ ಪಾತ್ರಧಾರಿಗಳ ಹೆಸರು ಕೇಳಿದರೆ, ಈ ತಲೆಮಾರು ನಿಬ್ಬೆರಗಾಗಬಹುದು. ಪ್ರೊ. ಆರ್.ಎಲ್ ಭಟ್, ಪ್ರೊ. ನಟರಾಜ್ ದೀಕ್ಷಿತ್, ಪ್ರೊ. ಸಿ.ಎಸ್. ಯಾದವಾಡ್, ಪ್ರೊ. ರಾಮದಾಸ್, ದಿ.ಪ್ರೊ. ಬಿ. ಜಿ. ನವರತ್ನ, ಪ್ರೊ. ರಾಜಮೋಹನ್, ಪ್ರೊ. ಸದಾಶಿವ ರಾವ್, ಪ್ರೊ. ಅಂಬಲಪಾಡಿ ಮಾಧವಾಚಾರ್ಯ, ಪ್ರೊ. ಜೋಸೆಫ್ ಮೆಥ್ಯು, ಪ್ರೊ. ವೇಣುಗೋಪಾಲ ಮುಳ್ಳೇರಿಯಾ, ಡಾ. ಬಿ.ಎಮ್. ಸೋಮಯಾಜಿ, ದಿ। ಡಿ .ಜಿ. ಹೆಗಡೆ. ಧರ್ಮಸ್ಥಳದಲ್ಲಿ ಅದರ ಪ್ರಯೋಗ ಮುಗಿದ ನಂತರ ನಾವೆಲ್ಲ ಪಾತ್ರಧಾರಿಗಳು ವೇಷಭೂಷಣದಲ್ಲೇ ಮಾನ್ಯ ವೀರೇಂದ್ರ ಹೆಗ್ಗಡೆಯವರೊಂದಿಗೆ ತೆಗೆಸಿಕೊಂಡ ಫೋಟೋ ಇನ್ನೂ ನನ್ನ ಆಲ್ಬಂನಲ್ಲಿ ಸುರಕ್ಷಿತವಾಗಿದೆ.

ನಚಿಕೇತ ಎಂಬ ಕಾವ್ಯನಾಮದಿಂದ ಸಾಕ್ಷಿ, ಋಜುವಾತು ಪತ್ರಿಕೆಗಳಲ್ಲಿ ಗಂಭೀರ ಲೇಖನಗಳನ್ನು ಬರೆಯುತ್ತಿದ್ದ ಪ್ರೊ. ಬಿ. ಆರ್. ನಾಗೇಶರದ್ದು ಪೂರ್ಣಪ್ರಜ್ಞ ಕಾಲೇಜಿನ ಸಾಂಸ್ಕೃತಿಕ ಇತಿಹಾಸದಲ್ಲಿ ಬಲು ಗಟ್ಟಿಯಾದ ಮೈಲುಗಲ್ಲು. ಅವರು ಬೇರೆ-ಬೇರೆ ನಾಟಕ ಸ್ಪರ್ಧೆಗಳಿಗಾಗಿ ಅಧ್ಯಾಪಕರಿಂದ ಹಾಗೂ ವಿದ್ಯಾರ್ಥಿಗಳಿಂದ ಹಲವಾರು ನಾಟಕಗಳನ್ನು

ಮಾಡಿಸಿದ್ದಾರೆ. ಅವರು ನಿರ್ದೇಶಿಸಿದ ನಾಟಕಗಳಲ್ಲಿ ನನಗೆ ಒಪ್ಪುವ ಪಾತ್ರ ಇರಲಿಲ್ಲ. ಅವರು ಪಾತ್ರಕ್ಕೆ ಒಪ್ಪುವಂಥ ಕಲಾವಿದರನ್ನೇ ಆಯ್ಕೆ ಮಾಡಿಕೊಳ್ಳುತ್ತಿದ್ದರು. ಹಾಗೆಯೇ ಅವರನ್ನು ಅಭಿನಯದಲ್ಲಿ ಪಳಗಿಸುತ್ತಿದ್ದರು. ಪ್ರೊ. ಸುಧಾಕರ ರಾವ್ ಪ್ರಾಂಶುಪಾಲರಾಗಿದ್ದಾಗ ಮರಾಠಿ ಮೂಲದ ಒಂದು ನಾಟಕವನ್ನು ಪ್ರೊ.ಆರ್.ಎಲ್. ಭಟ್ಟರಿಂದ ಅನುವಾದಿಸಿ ಪರೀಕ್ಷಾವಧಿಯ ರಜೆಯಲ್ಲಿ ಅಧ್ಯಾಪಕರಿಂದ ಮಾಡಿಸಬೇಕೆಂದು ಕೆಲಕಾಲ ತಾಲೀಮು ಮಾಡಿಸಿದ್ದರು. ಅದರಲ್ಲಿ ನನಗೆ ಗಯ್ಯಾಳಿ ಪಾತ್ರ ಕೊಟ್ಟಿದ್ದರು. ನೀವು ಸ್ಟೇಜ್ ಮೇಲೆ ಕುಣಿಯುವ ಹಾಗೆ ಮಾಡುತ್ತೇನೆ, ಇದು ನನ್ನ ಶಪಥ ಎಂದಿದ್ದರು. ಆದರೆ ಆ ಕಾಲಕ್ಕಾಗಲೇ ಅಧ್ಯಾಪಕರುಗಳ ಅಂತಸ್ಸಂಬಂಧಗಳಲ್ಲಿ ಬಿರುಕು ಬಿಡಲಾರಂಭಿಸಿತ್ತು. ಹಾಗಾಗಿ ಅಧ್ಯಾಪಕರನ್ನೆಲ್ಲ ಒಟ್ಟಿಗೆ ಸೇರಿಸುವುದು ಕಪ್ಪೆಯನ್ನು ತಕ್ಕಡಿಯ ಮೇಲಿಟ್ಟು ತೂಗುವುದಕ್ಕಿಂತ ಕಷ್ಟದ ಕೆಲಸವಾಗಿಬಿಟ್ಟಿತ್ತು. ಅನಿವಾರ್ಯವಾಗಿ ಆ ನಾಟಕ ನಿಂತುಬಿಟ್ಟಿತು.

'ರಂಗಭೂಮಿ(ರಿ)ಉಡುಪಿ' 1980ರಲ್ಲಿ ನಾಟಕಸ್ಪರ್ಧೆಯನ್ನು ಆರಂಭಿಸಿತ್ತು. ಅದೇ ವರ್ಷ ಪ್ರೊ. ಬಿ.ಆರ್.ನಾಗೇಶರ ನಿರ್ದೇಶನದಲ್ಲಿ ಪೂರ್ಣಪ್ರಜ್ಞ ಕಲಾವಿದರು ಸಿದ್ಧಪಡಿಸಿದ 'ಕಾಲಿಗುಲ' ನಾಟಕಕ್ಕೆ ಪ್ರಥಮ ಬಹುಮಾನ ಬಂದಿತ್ತು. ಪುನಃ 1981 ರಲ್ಲಿ ಬಿ.ಆರ್. ನಾಗೇಶರು 'ಹಿಟ್ಟಿನ ಹುಂಜ'ನಾಟಕಕ್ಕಾಗಿ ದ್ವಿತೀಯ ಬಹುಮಾನ ಪಡೆದರು. ಮರುವರ್ಷ ಅವರು ಸ್ಪರ್ಧೆಯಲ್ಲಿ ಭಾಗವಹಿಸುವ ಮನಸ್ಸು ಮಾಡಲಿಲ್ಲ. ಪ್ರೊ. ಆರ್.ಎಲ್ ಭಟ್ಟರು ತುಷಾರದಲ್ಲಿ ಧಾರಾವಾಹಿಯಾಗಿ ಪ್ರಕಟವಾದ ಎಂ.ವ್ಯಾಸರ ಕಥೆಯನ್ನು ನಾಟಕ ರೂಪಾಂತರ ಮಾಡಿದ್ದರು. ಅವರದೇ ನಿರ್ದೇಶನದಲ್ಲಿ 1982ರಲ್ಲಿ ಪೂರ್ಣಪ್ರಜ್ಞ ಕಲಾವಿದರು, ಎಂಬ ಬ್ಯಾನರ್ ಅಡಿಯಲ್ಲಿ ರಂಗಭೂಮಿ ನಾಟಕ ಸ್ಪರ್ಧೆಗಾಗಿ ಅದನ್ನು ಸಿದ್ಧಪಡಿಸಿದರು. ಡಿ .ಜಿ. ಹೆಗಡೆ, ವಿನಯಾ ಭಟ್, ನಟರಾಜ್ ದೀಕ್ಷಿತ್, ವೇಣುಗೋಪಾಲ ಮುಳ್ಳೇರಿಯಾ, ಬಿ. ಜಿ. ನವರತ್ನ ಮುಂತಾದವರು ನಟಿಸಿದ್ದ ಈ ನಾಟಕದಲ್ಲಿ ನನ್ನದು ಪಾಪಪ್ರಜ್ಞೆಯಿಂದ ಬಳಲುತ್ತಿರುವ ಸ್ವಾಮೀಜೀಯ ಅಮ್ಮನ ಪಾತ್ರ. ಇದು ಅತ್ಯುತ್ತಮ ನಾಟಕ ಪ್ರಶಸ್ತಿಯನ್ನು ಗೆದ್ದುಕೊಂಡಿತ್ತಲ್ಲದೆ, ಉತ್ತಮ ದಿಗ್ದರ್ಶನ, ರಂಗಸಜ್ಜಿಕೆಯಲ್ಲಿ ಪ್ರಥಮ ಹಾಗೂ ಅಭಿನಯದಲ್ಲಿ ಡಿ .ಜಿ. ಹೆಗಡೆ ಮತ್ತು ನನಗೆ ಅಭಿನಯಕ್ಕೂ ಪುರಸ್ಕಾರಗಳು ಬಂದವು.

1983ರಲ್ಲಿ ಪ್ರೊ. ಆರ್.ಎಲ್ ಭಟ್ಟರು ಶ್ರೀಮತಿ ಗೀತಾ ನಾಗಭೂಷಣರ 'ಮಾಪುರ ತಾಯಿಯ ಮಕ್ಕಳು' ಕಾದಂಬರಿಯ ನಾಟಕ ರೂಪಾಂತರ ಮಾಡಿಕೊಂಡು 'ರಂಗಭೂಮಿ' ಸ್ಪರ್ಧೆಗಾಗಿ ಸಿದ್ಧಪಡಿಸಿದರು. ಮೂರು ಪ್ರಯೋಗಗಳನ್ನು ಕಂಡ ಈ ನಾಟಕದಲ್ಲಿ ನನ್ನದು ದುರ್ಗಿಯ ಪಾತ್ರ. ನಾಟಕಕ್ಕೆ ದ್ವಿತೀಯ ಬಹುಮಾನ ಬಂದಿತ್ತು. 1984ರಲ್ಲಿ ಆರ್.ಎಲ್.ಭಟ್ಟರು ಸತೀಶ್ ಆಳೇಕರ್ ರವರ 'ಶನಿವಾರ-ರವಿವಾರ' ಮರಾಠಿ ನಾಟಕವನ್ನು ರೂಪಾಂತರಿಸಿ ರಂಗಭೂಮಿ ಸ್ಪರ್ಧೆಗೆ ಸಿದ್ಧಪಡಿಸಿದರು. ನಾಟಕ ಚೆನ್ನಾಗಿಯೇ ಮೂಡಿಬಂದಿದ್ದರೂ, ಕೆಲವು ಮಿತಿಗಳಿಂದಾಗಿ ಅದಕ್ಕೆ ಮೂರನೆಯ ಬಹುಮಾನ ದೊರಕಿತು. 1985ರಲ್ಲಿ 'ರಂಗಭೂಮಿ' ಸ್ಪರ್ಧೆಗಾಗಿ ಪೂರ್ಣಪ್ರಜ್ಞ ಕಲಾವಿದರು ಸಿದ್ಧ ಪಡಿಸಿದ ನಾಟಕ ಮನಃಸಾಕ್ಷಿ. ಇದು ಮೂಲ ಇಂಗ್ಲಿಷ್ ನಾಟಕ. ಇದನ್ನು ಅನುವಾದಿಸಿ, ನಿರ್ದೇಶಿಸಿದವರು ಪ್ರೊ. ರಾಮದಾಸ್. ಇದರಲ್ಲಿ ನನ್ನದು ಕ್ಯಾಥರಿನ್ ಆ್ಯಂಗರ್ ಪಾತ್ರ. ನಾನು ಅತಿಥಿ ಕಲಾವಿದೆಯಂತೆ ಒಂದು ದೃಶ್ಯದಲ್ಲಿ ಬಂದು ಹೋಗುತ್ತೇನೆ. 1986ರಲ್ಲಿ ರಂಗಭೂಮಿ ಸ್ಪರ್ಧೆಗಾಗಿ ಆರ್.ಎಲ್. ಭಟ್ಟರು ಮರಾಠಿ ಮೂಲದ 'ಬೆಂಕಿ' ಎಂಬ ನಾಟಕವನ್ನು ರೂಪಾಂತರಿಸಿ ಆಡಿಸಿದರು. ಅದರಲ್ಲಿ ನನ್ನದು ಜಾನಕಮ್ಮ ಎಂಬ ಪಾತ್ರ. 1987ರಲ್ಲಿ ಆರ್.ಎಲ್.ಭಟ್ಟರು ಮರಾಠಿ ಮೂಲದ 'ಸಂಧ್ಯಾ-

ಛಾಯಾ' ನಾಟಕದ ರೂಪಾಂತರವನ್ನು ರಂಗಭೂಮಿ ಸ್ಪರ್ಧೆಗಾಗಿ ಎತ್ತಿಕೊಂಡರು. ಅದರಲ್ಲಿಯ ಪ್ರಧಾನ ಭೂಮಿಕೆಯಲ್ಲಿ ರಾಮದಾಸ್ ಮತ್ತು ನಾನು, ನಾನಾ ಮತ್ತು ನಾನಿಯಾಗಿ ಅಭಿನಯಿಸಿದ್ದೆವು. ನಾನಿ ಪಾತ್ರಕ್ಕೆ ತೃತೀಯ ಬಹುಮಾನ ಬಂದಿತ್ತು. ಅನಂತರ 1990ರಲ್ಲಿ ಭಟ್ಟರು ನಿರ್ದೇಶಿಸಿದ 'ಭಾರತ ಭಾಗ್ಯ ವಿಧಾತ' ಎಂಬ ನಾಟಕಕ್ಕೆ ತೃತೀಯ ಬಹುಮಾನ ಬಂತು. 1993ರಲ್ಲಿ ದಿ. ಡಿ.ಜಿ.ಹೆಗಡೆಯವರು ಗಿರೀಶ್ ಕಾರ್ನಾಡರ 'ನಾಗಮಂಡಲ'ವನ್ನು ಎತ್ತಿಕೊಂಡರು. ನಾಟಕಕ್ಕೆ ತೃತೀಯ ಬಹುಮಾನ ಬಂತು ಅದರೊಂದಿಗೆ ಕುರುಡವ್ವನ ಪಾತ್ರಕ್ಕಾಗಿ ನಾನು ದ್ವಿತೀಯ ಬಹುಮಾನವನ್ನು ಪಡೆದೆ ಹಾಗೂ ಡಿ.ಜಿ. ಹೆಗಡೆ ಮತ್ತು ಬಿ.ಎ ವಿದ್ಯಾರ್ಥಿನಿ ಸ್ಮಿತಾ ಕಾಸರವಳ್ಳಿ ತೃತೀಯ ಬಹುಮಾನ ಪಡೆದರು. ಅನಂತರದ ವರ್ಷಗಳಲ್ಲೂ ಸ್ಪರ್ಧಾ ನಾಟಕಗಳಲ್ಲಿ ಪೂರ್ಣಪ್ರಜ್ಞ ಕಲಾವಿದರು ಭಾಗವಹಿಸಿದ್ದರಾದರೂ, ಅದು ಅಷ್ಟಾಗಿ ನನ್ನ ಗಮನದಲ್ಲಿಲ್ಲ ಎನ್ನುವುದಕ್ಕಿಂತ ನನ್ನ ನೇರ ಸಹಭಾಗಿತ್ವ ಇರಲಿಲ್ಲ.

1985ರಲ್ಲಿ ಆರ್.ಎಲ್. ಭಟ್ಟರು ಕಾಲೇಜು ವಾರ್ಷಿಕೋತ್ಸವಕ್ಕಾಗಿ ವಸಂತ್ ಕಾನೇಟಕರ್ ಬರೆದ 'ಚಕ್ರ' ಎಂಬ ಮರಾಠಿ ನಾಟಕದ ರೂಪಾಂತರವನ್ನು ಸಿದ್ಧಪಡಿಸಿದ್ದರು. ಆ ದಿನಗಳಲ್ಲಿ ಪೂರ್ಣಪ್ರಜ್ಞ ಕಾಲೇಜಿನವರು ಪ್ರಸ್ತುತ ಪಡಿಸುವ ನಾಟಕಗಳೆಂದರೆ ತಡವಾಗಿ ಹೋದರೆ ರಂಗಭೂಮಿಯ ಸ್ಪರ್ಧೆಯಲ್ಲೂ ಆಸನ ಸಿಗುತ್ತಿರಲಿಲ್ಲ ಹಾಗೆಯೇ ಕಾಲೇಜಿನ ಬಯಲು ರಂಗಮಂಟಪದ ಮುಂಭಾಗದಲ್ಲೂ ಸರಿಯಾಗಿ ಕುಳಿತುಕೊಂಡು ನೋಡಲು ಜಾಗ ಇರುತ್ತಿರಲಿಲ್ಲ. ಈ ನಾಟಕ ಪ್ರಯೋಗದ ಸಂದರ್ಭದಲ್ಲೂ ಹಾಗೆಯೇ ಆಯಿತು. ನಮ್ಮ ಮನೆಗೆ ಬಂದ ನೆಂಟರು ನನ್ನ ಪಾತ್ರವಿದೆ ಎಂಬ ಕಾರಣಕ್ಕಾಗಿ ಬಂದು, ಬಯಲಿನ ತುಂಬ ಕುಳಿತವರನ್ನು ಅವರ ಸುತ್ತ ನಿಂತವರನ್ನು ಬೇಧಿಸಲಾಗದೆ ಹಿಂದಿರುಗಿದರಂತೆ! ಪ್ರೊ, ನಟರಾಜ್ ದೀಕ್ಷಿತ್ ಮತ್ತು ನಾನು ಪ್ರಧಾನ ಭೂಮಿಕೆಯಲ್ಲಿದ್ದ ಈ ನಾಟಕ ಒಟ್ಟೂ ಮೂರು ಪ್ರಯೋಗಗಳನ್ನು ಕಂಡಿದೆ. ಆರ್.ಎಲ್.ಭಟ್ಟರು 'ಸೀರೆ ಹಾರುತಿದೆ ನೋಡಿದಿರಾ?' ಎಂಬ ನಾಟಕವನ್ನು ಕಾಲೇಜು ವಾರ್ಷಿಕೋತ್ಸವಕ್ಕಾಗಿ ಮಕ್ಕಳಿಂದ ಸಿದ್ಧಪಡಿಸಿದ್ದರಾದರೂ ಅದರಲ್ಲಿಯ ಒಂದು ಅಜ್ಜಿ ರೋಲ್‌ಗೆ ನಾನು ಮಾತ್ರ ಫಿಟ್ ಆಗ್ತಿದ್ದೆ. ಅಂತೂ ಅದನ್ನೂ ನನ್ನಿಂದ ಮಾಡಿಸಿದರು.

1992ರಲ್ಲಿ ಮಂಗಳೂರು ಆಕಾಶವಾಣಿ ಕಾಲೇಜು ವಿದ್ಯಾರ್ಥಿಗಳಿಗಾಗಿ ನಾಟಕ ಸ್ಪರ್ಧೆ ಏರ್ಪಡಿಸಿತ್ತು. ಅವರೇ ಪ್ರತಿಯೊಂದು ಕಾಲೇಜಿಗೆ ಬಂದು ನೋಡಿಕೊಂಡು ಹೋಗುತ್ತಿದ್ದರು. ಭೀಷ್ಮ ಸಹಾನಿಯವರ ಹಿಂದಿ ನಾಟಕ 'ಮಾಧವಿ'ಯನ್ನು ನಿರ್ದೇಶಿಸುವ ಅವಕಾಶ ಆ ಬಾರಿ ನನಗೆ ಬಂದಿತ್ತು. ಬಹುಮಾನ ಬಂದಿಲ್ಲ, ಆದರೆ ಬೇರೆ–ಬೇರೆ ಸಂದರ್ಭದಲ್ಲಿ ಅದು ಮೂರು ಪ್ರಯೋಗಗಳನ್ನು ಕಂಡಿತು, ಎಂಬ ನೆಮ್ಮದಿ ಈಗಲೂ ಇದೆ. ಅನಂತರದ ದಿನಗಳಲ್ಲೂ ವಿದ್ಯಾರ್ಥಿಗಳಿಗಾಗಿ ನಾಟಕ ನಿರ್ದೇಶಿಸುತ್ತ ಅದರಲ್ಲಿ ಪುಟ್ಟದೊಂದು ಪಾತ್ರ ಅವರೊಂದಿಗೆ ಮಾಡುತ್ತ ನನ್ನ ಅಧ್ಯಾಪನ ವೃತ್ತಿಯಲ್ಲಿ ಅನನ್ಯ ಅನುಭವವನ್ನು ಸಂಪೂರ್ಣ ಸವಿದಿದ್ದೇನೆ. ಹೀಗೆ ರೂಪುಗೊಂಡ ನಾಟಕಗಳು, 'ಸಾವಿನ ಸಹವಾಸದಲ್ಲಿ ಬದುಕು', ಬಡಪಾಯಿ ಬ್ರಹ್ಮರಾಕ್ಷಸ', 'ಅಧ್ವಾನಪುರ', 'ಮರಳಿ ಬಾ ಬದುಕಿಗೆ', 'ಚೂರಿಕಟ್ಟೆ ಅರ್ಥಾತ್ ಕಲ್ಯಾಣಪುರ', 'ಚೋರ ಚರಣದಾಸ', 'ನಾಯೀಕತೆ' ಹೀಗೆ... ನನ್ನ ನಾಟಕಾಭಿರುಚಿಗೆ ಸಂಸ್ಥೆಯಲ್ಲಿ ಸಾಕಷ್ಟು ಇಂಬು ದೊರಕಿದೆ. ಜೊತೆಗೆ 2008ರಲ್ಲಿ ಭಯೋತ್ಪಾದನಾ ವಿರೋಧಿ ಅಭಿಯಾನದಲ್ಲಿ ಬೀದಿ ನಾಟಕವನ್ನು ವಿದ್ಯಾರ್ಥಿಗಳಿಂದ ಆಡಿಸಿ, ಸರಕಾರಕ್ಕೆ ವರದಿ ಸಲ್ಲಿಸುವ ಜವಾಬ್ದಾರಿಯನ್ನು

ನಮ್ಮ ಕಾಲೇಜಿಗೆ ಕಾಲೇಜು ಶಿಕ್ಷಣ ಇಲಾಖೆ ನೀಡಿತ್ತು. ಅದಕ್ಕಾಗಿ 'ಅಜಿತ್..ಅನ್ವರ್..ಆ್ಯಂಟನಿ' ಯನ್ನು ಬರೆದು, ಆಡಿಸುವ ಸಂತಸದ ಕ್ಷಣ ನನ್ನ ಪಾಲಿಗೆ ಬಂದಿತ್ತು.

2010ರಲ್ಲಿ ಕಾನೂನು ಜಾಗೃತಿ ಸಪ್ತಾಹದ ಅಂಗವಾಗಿ ವಿದ್ಯಾರ್ಥಿಗಳಿಗಾಗಿ ಬರೆದು ಆಡಿಸಿದ ನಾಟಕ 'ಅರಿವು ವರವಾದಾಗ' ವಂತೂ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದವರಿಂದ ಅತ್ಯಂತ ಮೆಚ್ಚುಗೆಗೆ ಪಾತ್ರವಾಗಿತ್ತು.

2012ರಲ್ಲಿ ಪೂರ್ಣಪ್ರಜ್ಞ ಡೇ ಕಾಲೇಜಿನಲ್ಲಿ ಫೆಬ್ರುವರಿಯಲ್ಲಿ ಕಾಲೇಜು ವಾರ್ಷಿಕೋತ್ಸವಕ್ಕಾಗಿ ನಾಯೀಕತೆ ನಾಟಕ ಆಡಿಸಿದವಳು, ಪ್ರಾಂಶುಪಾಲೆಯಾಗಿ ಭಡ್ತಿಹೊಂದಿ ಅದೇ ವರ್ಷ ಜೂನ್‌ನಲ್ಲಿ ಸಂಧ್ಯಾ ಕಾಲೇಜಿಗೆ ಹೋದೆ. ವಿದ್ಯಾರ್ಥಿಗಳ ದಾಖಲಾತಿ ಮಾಡಿಸಿಕೊಳ್ಳುವಾಗ, ಅಲ್ಲಿಯ ವಿದ್ಯಾರ್ಥಿಗಳು ಕೇಳಿದರು, "ಮೇಡಂ, ನಮ್ಮಲ್ಲಿಯೂ ನಾಟಕ ಮಾಡಿಸುತ್ತೀರಲ್ಲಾ?" ...ಅಂತಹ ಸಂದರ್ಭ ಅಲ್ಲಿ ಒದಗಿ ಬರದೇ ಇದ್ದುದು ನನ್ನ ದುರಾದೃಷ್ಟವೆಂದೇ ಹೇಳಬೇಕು! ಆದರೆ, ನಾನು ಇನ್ನೂ ಸಂಧ್ಯಾ ಕಾಲೇಜಿನಲ್ಲಿ ಇರುವಾಗಲೇ 2014ರಲ್ಲಿ ಆರ್.ಎಲ್.ಭಟ್ಟರು, 1987ರಲ್ಲಿ ರಂಗಭೂಮಿ ಸ್ಪರ್ಧೆಗಾಗಿ ಮಾಡಿದ 'ಸಂಧ್ಯಾ–ಛಾಯಾ' ನಾಟಕವನ್ನು ನೀವು ಮತ್ತು ರಾಮದಾಸ್‌ರು ಮತ್ತೊಮ್ಮೆ ಮಾಡಲು ಸಿದ್ಧರಿದ್ದೀರಾ ಎಂದು ಕೇಳಿದರು. ಇತ್ತ ನಾನೂ ಒಪ್ಪಿಗೆ ಕೊಟ್ಟೆ, ಅತ್ತ ರಾಮದಾಸ್‌ರೂ ಒಪ್ಪಿದರು. 87ರಲ್ಲಿ ಮುದುಕ–ಮುದುಕಿಯರ ಪಾತ್ರವನ್ನು ನಾವು ಅಭಿನಯಿಸಬೇಕಿತ್ತು, ಆದರೆ ಇಪ್ಪತ್ತೇಳು ವರ್ಷಗಳ ಬಳಿಕ ಪಾತ್ರಗಳ ನಿರ್ವಹಣೆ ಅತ್ಯಂತ ಸಹಜವಾಗಿ ಮೂಡಿಬಂದಿದ್ದವು! ಇಲ್ಲಿಯವರೆಗೆ ನಾನು ನನ್ನ ರಂಗಾನುಭವದ ಒಂದು ಮಗ್ಗುಲನ್ನಷ್ಟೇ ತೋರಿಸಿದೆ. ಉಡುಪಿಯ ರಂಗ ಚಟುವಟಿಕೆಗಳಲ್ಲಿ ತಕ್ಕಮಟ್ಟಿಗೆ ತೊಡಗಿಕೊಂಡಿದ್ದನ್ನೂ ಇದೇ ಸಂದರ್ಭದಲ್ಲಿ ದಾಖಲಿಸಿ ಕೊಳ್ಳಲಿಚ್ಛಿಸುತ್ತೇನೆ.

'ರಂಗಭೂಮಿ(ರಿ) ಉಡುಪಿ' ಉಡುಪಿಯ ಹಳೆಯ ಸಂಸ್ಥೆ. ಅದರ ಒಂದು ವಿಶೇಷತೆಯೆಂದರೆ, ಅದು ನಾಟಕ ಸ್ಪರ್ಧೆಯ ಬಹುಮಾನ ವಿತರಣೆಯ ಸಂದರ್ಭದಲ್ಲಿ ತನ್ನ ಸದಸ್ಯರಿಗಾಗಿ ಒಂದು ನಾಟಕವನ್ನು ಸಿದ್ಧಪಡಿಸುತ್ತದೆ. ಅನಂತರದ ದಿನಗಳಲ್ಲಿ ಅದನ್ನು ಬೇರೆ–ಬೇರೆ ಕಡೆಗಳಲ್ಲಿ ಪ್ರಯೋಗಿಸುವ ಪರಂಪರೆಯನ್ನು ಇಟ್ಟುಕೊಂಡಿದೆ. ಈಗಲೂ ಆ ಪರಿಪಾಠವನ್ನು ಮುಂದುವರಿಸಿಕೊಂಡು ಬಂದಿದೆ. 1982ರಲ್ಲಿ ಅದು ಚಂದ್ರಶೇಖರ್ ಕಂಬಾರರ 'ನಾಯೀಕತೆ' ನಾಟಕವನ್ನು ಆಯ್ಕೆ ಮಾಡಿಕೊಂಡಿತ್ತು. ಅದಕ್ಕೆ ಪ್ರೊ. ರಾಮದಾಸ್‌ರ ನಿರ್ದೇಶನ. ಅಜ್ಜರಕಾಡಿನಿಂದ ಹಿಡಿದು ಅಜ್ಜಂಪುರದ ವರೆಗೆ ಒಟ್ಟೂ ಹನ್ನೊಂದು ಪ್ರಯೋಗಗಳನ್ನು ಕಂಡ ಈ ನಾಟಕದಲ್ಲಿ ನನ್ನದು ಸಾಹುಕಾರ ಸೋಮಣ್ಣನ ತಾಯಿಯ ಪಾತ್ರ.

1986ರಲ್ಲಿ 'ಸಮೂಹ ಉಡುಪಿ' ತಂಡದ ವತಿಯಿಂದ ಉದ್ಯಾವರ ಮಾಧವ ಆಚಾರ್ಯರು ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿಯವರಿಂದ ಅನುವಾದಗೊಂಡ ಶ್ರೀ. ಸುರೇಂದ್ರ ವರ್ಮರ 'ಸೂರ್ಯಾಸ್ತದಿಂದ ಸೂರ್ಯೋದಯದವರೆಗೆ' ನಾಟಕವನ್ನು 'ರಂಗಭೂಮಿ'ಗಾಗಿ ಸಿದ್ಧಪಡಿಸುತ್ತಿದ್ದರು. ರಾಜ ಒಕ್ಕಾಕನ ಪಾತ್ರಕ್ಕೆ ಪ್ರೊ. ಎಂ.ಎಲ್.ಸಾಮಗರು, ಪ್ರಿಯಕರನ ಪಾತ್ರಕ್ಕೆ ರಾಜಗೋಪಾಲ ಶೇಟ್ ಆಯ್ಕೆಯಾಗಿದ್ದರು. ಆದರೆ ಶೀಲವತಿ ಪಾತ್ರದ ಹುಡುಕಾಟದಲ್ಲಿ ಆಚಾರ್ಯರು ಇನ್ನಿಲ್ಲದಂತೆ ತೊಡಗಿಕೊಂಡಿದ್ದರು. ಯಾರ್ಯಾರನ್ನು ಕೇಳಿದರು ಎಂಬುದನ್ನು ಅವರ ಬಾಯಿಂದಲೇ ಕೇಳಬೇಕು. 'ಹರಿ ಅನಂತ; ಹರಿಕಥಾ ಅನಂತ' ಎನ್ನುತ್ತಾರಲ್ಲ...

ನಾನು ಹೇಳಹೊರಟರೆ ಅದೇ ಒಂದು ಪುರಾಣವಾಗಬಹುದು. ನಾಟಕದ ದಿನ ನಿಗದಿಯಾಗಿದೆ, ಪ್ರಧಾನ ಪಾತ್ರಕ್ಕೆ ನಾಯಕಿಯ ಆಯ್ಕೆಯಾಗಿಲ್ಲ. ನಾಯಕಿಯೂ ಬೇಕು ದಾಸಿಯೂ ಬೇಕು.. ಆ ದಿನಗಳಲ್ಲಿ ಮಾಧವ ಆಚಾರ್ಯರು ಸರಿಯಾಗಿ ನಿದ್ದೆ ಮಾಡಿದ್ದಾರೋ, ಇಲ್ಲವೋ ಗೊತ್ತಿಲ್ಲ! ನನ್ನನ್ನೊಮ್ಮೆ ಕೇಳಿದ್ದರು, ಆಗ ನಾನವರಿಗೆ ನಾಯಕಿಯ ಸೌಂದರ್ಯಕ್ಕೆ ನಾನು ಹೊಂದಾಣಿಕೆಯಾಗುವುದಿಲ್ಲ, ಎಂದು  ನನ್ನ ಲಿಮಿಟೇಶನ್ಸ್ ಹೇಳಿದ್ದೆ. ಆದರೂ ಸ್ಕ್ರಿಪ್ಟ್ ಕೈಯಲ್ಲಿಟ್ಟು, ಓದಿಕೊಳ್ಳುತ್ತ ಇರಿ, ಎಂದು ಹೇಳಿ ಹೋಗಿದ್ದರು. ಬೇರೆ–ಬೇರೆ ಕಾರಣಗಳನ್ನು ಮುಂದಿಟ್ಟು ಹುಡುಗಿಯರು ರಾಣಿ ಶೀಲವತಿಯ ಪಾತ್ರ ಮಾಡಲು ಮುಂದೆ ಬರಲಿಲ್ಲ. ಹಟಕ್ಕೆ ಬಿದ್ದವರಂತೆ ಕೊನೆಗೆ ಆಚಾರ್ಯರು ಹೇಳಿದ್ದಿಷ್ಟೇ, “ನಾನು ಈ ನಾಟಕವನ್ನು ಮಾಡಿಯೇ ಸಿದ್ಧ. ನೀವು ರಾಣಿಯಾಗಿ. ಜಯಂತಿಯಿಂದ (ಅವರ ಪತ್ನಿ) ದಾಸಿಯ ಪಾತ್ರ ಮಾಡಿಸುತ್ತೇನೆ. ನಾನು ಒಪ್ಪಿಕೊಂಡೆ. ದ್ವಿತೀಯ ಬಿ.ಕಾಂ. ತರಗತಿಗೆ ಹೋದಾಗ ಲೋಕಾಭಿರಾಮವಾಗಿ ನಡೆದುದನ್ನೆಲ್ಲ ಬಿಚ್ಚಿಟ್ಟೆ, ಮತ್ತೆ ನನ್ನ ಎಂದಿನ ಪಾಠ ಆರಂಭವಾಯ್ತು, ಬೆಲ್ಲಾಯ್ತು, ತರಗತಿಯಿಂದ ಹೊರಬಂದೆ. ಒಬ್ಬಳು ಹುಡುಗಿ ನನ್ನನ್ನು ಹಿಂಬಾಲಿಸಿಕೊಂಡು ಅಧ್ಯಾಪಕರ ಕೊಠಡಿಯವರೆಗೆ ಬಂದಳು. ಅವಳೇ ಶಶಿರೇಖಾ. “ಮೇಡಂ, ನನಗೆ ಅಭಿನಯಿಸಬೇಕೆಂಬ ಆಸೆಯಿದೆ. ಹೇಗೂ ನೀವು ಜೊತೆಯಲ್ಲಿ ಇದ್ದೇ ಇರ್ತೀರಿ. ನಾನು ಅಮ್ಮನನ್ನು ಕೇಳಿಕೊಂಡು ಬಂದು ನಾಳೆ ತಿಳಿಸಲಾ?...” ಮಾರನೆಯ ದಿನ ಅವಳಿಂದ ಸಕಾರಾತ್ಮಕ ಉತ್ತರ ಕೇಳಿ ನಮ್ಮೆಲ್ಲರಿಗಾದ ಸಂತಸ ಅಷ್ಟಿಷ್ಟಲ್ಲ. ಎರಡು ಪ್ರಯೋಗ ಕಂಡ ಈ ನಾಟಕದ ಮೊದಲ ಪ್ರಯೋಗದ ಕುರಿತಾಗಿ ಶರತ್ ಕಲ್ಕೋಡ್‌ರು ‘ಉದಯ ವಾಣಿ’ಯಲ್ಲಿ ಬರೆದ ಧನಾತ್ಮಕ ವಿಮರ್ಶೆ ನನ್ನಲ್ಲಿ ಇನ್ನೂ ಭದ್ರವಾಗಿದೆ!

ಕರ್ನಾಟಕ ನಾಟಕ ಅಕಾಡೆಮಿ ನಡೆಸಿದ ನಾಟಕ ರಚನಾ ಸ್ಪರ್ಧೆಯಲ್ಲಿ ಪ್ರೊ. ರಾಮದಾಸ್‌ರು ಬರೆದ ನಾಟಕ ‘ಸಾಕ್ಷಾತ್ಕಾರ’ ಕ್ಕೆ ಪ್ರಥಮ ಬಹುಮಾನ ಬಂದಿತ್ತು. 1987ರಲ್ಲಿ ‘ರಂಗಭೂಮಿ’ ಗಾಗಿ ‘ಸಮೂಹ ಉಡುಪಿ’ಯ ವತಿಯಿಂದ ಉದ್ಯಾವರ ಮಾಧವ ಆಚಾರ್ಯರು ಈ ನಾಟಕವನ್ನು ನಿರ್ದೇಶಿಸಿದ್ದರು. ಮೂರು ಪ್ರಯೋಗಗಳನ್ನು ಕಂಡ ಈ ನಾಟಕದಲ್ಲಿ ನನ್ನದು ರೇಣುವಿನ ಪಾತ್ರ.

1986ರಲ್ಲಿ ‘ಸಮೂಹ’ ಬಿ.ಎಮ್.ಶ್ರೀಯವರ ಹಳೆಗನ್ನಡ ನಾಟಕ ‘ಅಶ್ವತ್ಥಾಮನ್’ ಎತ್ತಿಕೊಂಡಿತು. ಎರಡು ಪ್ರಯೋಗಗಳನ್ನು ಕಂಡ ಈ ನಾಟಕದಲ್ಲಿ ಉಡುಪಿಯಲ್ಲಾದ ಪ್ರಯೋಗದಲ್ಲಿ ಡಾ. ರಾಜೇಂದ್ರ ಕೆದಿಲಾಯ ಅಶ್ವತ್ಥಾಮ ಪಾತ್ರ ಮಾಡಿದ್ದರು ಮತ್ತು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಡಿ.ಜಿ.ಹೆಗಡೆ ಆ ಪಾತ್ರವನ್ನು ನಿರ್ವಹಿಸಿದ್ದರು. ನನ್ನದು ಭಾರ್ಗವಿಯ ಪಾತ್ರ, ಹಳೆಗನ್ನಡದ ಪ್ರಯೋಗ ನೋಡಿ ಬೆಂಗಳೂರಿನ ಪ್ರೇಕ್ಷಕರು ನಿಬ್ಬೆರಗಾಗಿದ್ದರು.

‘ಸಮೂಹ ಉಡುಪಿ’ ಕೇವಲ ನಾಟಕ ಪ್ರದರ್ಶನಕ್ಕಷ್ಟೇ ಸೀಮಿತವಾಗಿರದೆ, ನೃತ್ಯ ಸಾಹಿತ್ಯ ಹಾಗೂ ಸಂಗೀತ ಕ್ಷೇತ್ರಕ್ಕೂ ತನ್ನದೇ ಕೊಡುಗೆಯನ್ನು ಸಲ್ಲಿಸುತ್ತ ಬಂದಿದೆ. 2003ರಲ್ಲಿ ಮಾಧವ ಆಚಾರ್ಯರು ಬರೆದ ಏಕವ್ಯಕ್ತಿ ಭರತನಾಟ್ಯ–ಯಕ್ಷಗಾನ ಸಂಗಮದ ಕೃತಿಯನ್ನು ನಾನು ಹಿಂದಿಗೆ ಅನುವಾದಿಸಿದ್ದೆ. ಉಡುಪಿಯಲ್ಲಿ ಹಿಂದಿ ಭಾಷೆಯಲ್ಲಿ ಪ್ರಸ್ತುತ ಪಡಿಸುವ ಮೂಲಕ ಅದಕ್ಕೊಂದು ಹೊಸ ಆಯಾಮವನ್ನು ಕೊಟ್ಟರು. ಮಂಗಳೂರು ಆಕಾಶವಾಣಿಗಾಗಿ ಮಾಧವ ಆಚಾರ್ಯರು ಸೇಡಿಯಾಪು ಅವರ ‘ಶ್ವಮೇಧ’ ನಾಟಕವನ್ನು ಎತ್ತಿಕೊಂಡಿದ್ದರು. ಅದರಲ್ಲಿ ಪದ್ಮಾವತಿಯ ಪಾತ್ರ ನನ್ನದಾಗಿತ್ತು.

ದಿ.ಕೆ.ಎಸ್. ಕೆದ್ಲಾಯ ಹಾಗೂ ದಿ.ಮುರಾರಿ ಬಲ್ಲಾಳರು ಹುಟ್ಟುಹಾಕಿದ ಸಂಘಟನೆ, 'ರಥಬೀದಿ ಗೆಳೆಯರು(ರಿ) ಉಡುಪಿ'. ಇದು ಸಾಹಿತ್ಯಿಕ-ಸಾಂಸ್ಕೃತಿಕ ಸಂಘಟನೆಯಾಗಿದ್ದು, ಅದರಲ್ಲಿ ನಾಟಕಗಳ ಜೊತೆ ಚಿಂತನ-ಮಂಥನ ಕಾರ್ಯಕ್ರಮಗಳು ನಡೆಯುತ್ತಿರುತ್ತವೆ. ಹಾಗೆ ನೋಡಿದರೆ ಉಡುಪಿಯ ಎಲ್ಲ ನಾಟಕ ಸಂಸ್ಥೆಗಳು ಇತ್ತೀಚೆಗೆ ತಮ್ಮನ್ನು ಕೇವಲ ನಾಟಕಗಳಿಗಷ್ಟೇ ಬಿಗಿದುಕೊಂಡಿಲ್ಲ; ವರ್ಷದ ಕೊನೆಯಲ್ಲಿ ತಮ್ಮ ಸದಸ್ಯರಿಗಾಗಿ ಎರಡು ನಾಟಕ ತೋರಿಸಿ ಕೈ ತೊಳೆದುಕೊಳ್ಳುವುದಿಲ್ಲ. 1985ರಲ್ಲಿ ವಿಜಯ ತೆಂಡೂಲ್ಕರ್‌ರ ಮೂಲ ಮರಾಠಿ ನಾಟಕದ ಕನ್ನಡಾನುವಾದ 'ಸದ್ದು : ವಿಚಾರಣೆ ನಡೆಯುತ್ತಿದೆ'ಯನ್ನು ದಿ. ಕೆ.ಜಿ.ನಾರಾಯಣರ ನಿರ್ದೇಶನದಲ್ಲಿ ತಯಾರುಮಾಡಿದ್ದರು. ಇಂಟಿಮೇಟ್ ಥಿಯೇಟರ್ ಪರಿಕಲ್ಪನೆಯಲ್ಲಿ ಮೂಡಿಬಂದ ಈ ನಾಟಕ ಎಂಟು ಪ್ರಯೋಗಗಳನ್ನು ಕಂಡಿದ್ದು, ಅದರಲ್ಲಿ ನನ್ನದು ಶ್ರೀಮತಿ ಕಾಶೀಕರ್ ಪಾತ್ರ.

ಇನ್ನು ಕೆಲವು ನಾಟಕ ತಂಡಗಳ ಕುರಿತಾಗಿ ನಾನು ಇಲ್ಲಿ ಉಲ್ಲೇಖಿಸಲೇಬೇಕು. 'ಸುಮನಸಾ ಕೊಡವೂರು', 'ನವಸುಮ ರಂಗಮಂಚ್, ಕೊಡವೂರು', 'ವನಸುಮ ವೇದಿಕೆ ಕಟಪಾಡಿ', 'ರಂಜನಾ ಕಲಾವಿದರು" ಹಾಗೂ 'ನಮ್ಮ ತುಳುವೆರ್' ಸಂಘಟನೆಗಳು ರಂಗ ಹಬ್ಬಗಳನ್ನು ಮಾಡುತ್ತವೆ. ಸಾಧಕರನ್ನು ಗುರುತಿಸಿ ಸನ್ಮಾನಿಸುತ್ತವೆ, 'ರಂಗಭೂಮಿ, ಉಡುಪಿ' ನಡೆಸುವ ಸ್ಪರ್ಧೆಗಳಲ್ಲಿ ಹೊಸತನದ ತುಡಿತಗಳನ್ನಿಟ್ಟುಕೊಂಡು ಭಾಗವಹಿಸುತ್ತವೆ.

ಅಮೋಘ(ರಿ) ಉಡುಪಿ ಸಂಘಟನೆಯ ಕುರಿತಾಗಿ ಪ್ರಸ್ತಾಪಿಸಲೇಬೇಕು. ಬಹುಮುಖ ಪ್ರತಿಭೆಯ ಶ್ರೀಮತಿ ಪೂರ್ಣಿಮಾ ಸುರೇಶ್ ಸಾಕಷ್ಟು ಸಾಹಿತ್ಯಿಕ ಕಾರ್ಯಕ್ರಮಗಳನ್ನು ಈ ಸಂಘಟನೆಯ ಮೂಲಕ ಮಾಡುತ್ತಿರುತ್ತಾರೆ. ಪರದೆಯ ಮೇಲೆ ನಟಿಯಾಗಿ ಗುರುತಿಸಿಕೊಂಡ ಪೂರ್ಣಿಮಾರು ಇತ್ತೀಚೆಗೆ ಏಕವ್ಯಕ್ತಿ ಪ್ರದರ್ಶನದ ಮೂಲಕವೂ ಜನ-ಮನ ಗೆದ್ದಿರುತ್ತಾರೆ. 2011ರಲ್ಲಿ ವಿಶ್ವ ರಂಗಭೂಮಿ ದಿನಾಚರಣೆಯಂದು ಖ್ಯಾತ ರಂಗ ಹಾಗೂ ಚಲನಚಿತ್ರ ನಟಿ ಉಮಾಶ್ರೀಯವರಿಂದ ರಂಗ ಸಾಧನೆಗಾಗಿ ನನ್ನನ್ನು ಸನ್ಮಾನಿಸಿದ್ದರು.

ಈ ನಡುವೆ ಬಂದು ಹೋದ ಒಂದು ಸಂಘಟನೆಯ ಕುರಿತಾಗಿ ಹೇಳಲೇಬೇಕು. ಡಿ.ಜಿ.ಹೆಗಡೆಯವರು 'ಯವನಿಕಾ ತಂಡ'ಎಂಬ ಸಂಘಟನೆಯನ್ನು ಹುಟ್ಟು ಹಾಕಿದರು. 1992ರಲ್ಲಿ ಡುಂಡೀರಾಜರನ್ನೂ ಸೇರಿಸಿಕೊಂಡು 3-4 ದಿನಗಳಲ್ಲಿ ದ.ರಾ.ಬೇಂದ್ರೆಯವರ 'ಸಾಯೋ ಆಟ' ನಾಟಕದ ತಾಲೀಮು ನಡೆಸಿದ್ದೆವು. ಇನ್ನಂಜೆ ಜ್ಯೂನಿಯರ್ ಕಾಲೇಜಿನಲ್ಲಿ ನಡೆದ ನಾಟಕೋತ್ಸವದ ಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನ ಪಡೆದುಕೊಂಡಿದ್ದೆವು. ಅದರಲ್ಲಿ ನನ್ನದು ಕಳ್ಳಿಯ ಪಾತ್ರ. ಮಂಗಳೂರು ಆಕಾಶವಾಣಿಗಾಗಿ ಇದೇ ತಂಡ ಕಾರ್ನಾಡರ 'ಯಯಾತಿ'ಯ ರೇಡಿಯೋ ನಾಟಕ ಮಾಡಿಸಿತು. ಅದರಲ್ಲಿ ನನ್ನದು ಸ್ವರ್ಣಲತೆಯ ಪಾತ್ರ. ಡಿ.ಜಿ.ಯ ಜೊತೆಗೆ ಆ ತಂಡವೂ ಈಗ ಉಳಿದಿಲ್ಲ ಎಂದು ತಿಳಿಸಲು ವಿಷಾದವಾಗುತ್ತಿದೆ.

ಒಟ್ಟಿನಲ್ಲಿ ಉಡುಪಿಯ ಎಲ್ಲ ರಂಗ ಸಂಘಟನೆಗಳು, ಕಲೆಯನ್ನು ಉಳಿಸಿ, ಬೆಳೆಸುವ ಕೆಲಸ ಮಾಡುತ್ತಿವೆ. ರಂಗ ತರಬೇತಿ, ರಂಗ-ರಸ-ಗ್ರಹಣ ಶಿಬಿರ, ಪ್ರಸಾಧನ ತರಬೇತಿಗಳ ಮೂಲಕ ಯುವ ಪೀಳಿಗೆ ಮತ್ತು ಮಕ್ಕಳನ್ನು ನಾಟಕದ ಕಡೆಗೆ ಸೆಳೆಯುತ್ತ ರಂಗ ಸಂಸ್ಕೃತಿಯನ್ನು ಬೆಳೆಸುತ್ತಿವೆ. ಅವನ್ನೆಲ್ಲ ಗುರುತಿಸಿ ಪೋಷಿಸುವ ಒಂದು ವರ್ಗ ಮಂದಗತಿಯಲ್ಲೇ ಆದರೂ, ಉಡುಪಿಯಲ್ಲಿ ತಯಾರಾಗುತ್ತಿದೆ, ಎಂಬುದು ಆಶಾದಾಯಕ ಬೆಳವಣಿಗೆ!

# ಉಡುಪಿ ಜಿಲ್ಲೆ- ತುಳು ರಂಗಭೂಮಿ ಇತ್ತೀಚಿನ ದಿನಗಳಲ್ಲಿ....

– ಗಂಗಾಧರ ಕಿದಿಯೂರು

ತುಳು ಮಾತೆಯ ಸೇವೆಯಲ್ಲಿ ತೊಡಗಿಸಿಕೊಂಡಿರುವ ಹಲವಾರು ಸಂಘಟನೆಗಳಲ್ಲಿ ಪ್ರಮುಖ ಸಾಲಿನಲ್ಲಿ ನಿಲ್ಲುವ ಒಂದು ಹೆಸರು ಉಡುಪಿ ತುಳುಕೂಟದ್ದು. ಕಳೆದ ಮೂವತ್ತೆರಡು ವರ್ಷಗಳಿಂದ ತುಳುಕೂಟವು ಅನೇಕ ಕೆಲಸಗಳನ್ನು ಮಾಡಿಕೊಂಡು ಬರುತ್ತಿದೆ. ಕಳೆದ 18 ವರ್ಷಗಳಿಂದ ಉಡುಪಿಯ ತುಳು ರಂಗಭೂಮಿಯಲ್ಲಿ ಕೆಮ್ತೂರು ನಾಟಕ ಸ್ಪರ್ಧೆಯನ್ನು ಏರ್ಪಡಿಸಿ ತುಳು ರಂಗಭೂಮಿಯ ಚಿತ್ರಣವನ್ನೇ ಬದಲಿಸಿ ದೇಶ–ವಿದೇಶಗಳಲ್ಲಿ ಹೆಸರು ಗಳಿಸಿದೆ.

ಹಿಂದೆ ಉಡುಪಿಯಲ್ಲಿ ಹೊಸ ನಾಟಕಗಳನ್ನು ರಂಗಭೂಮಿಯ ನಾಟಕ ಸ್ಪರ್ಧೆಗಳಲ್ಲಿ ಕಾಣಬೇಕಿತ್ತು. ನಾಟಕ ಕ್ಷೇತ್ರದಲ್ಲಿ ಉಡುಪಿಯ ರಂಗಭೂಮಿ, ರಥಬೀದಿ ಗೆಳೆಯರು, ನೀನಾಸಂ ಸಂಸ್ಥೆಯ ನಾಟಕಗಳು ಉಡುಪಿಗೆ ಪರಿಚಯವಾಗುತ್ತಿತ್ತು.

ಹೆಚ್ಚಿನ ತುಳು ಸಾಮಾಜಿಕ ನಾಟಕಗಳು ಶಾಲಾ–ಕಾಲೇಜುಗಳಲ್ಲಿ, ಸಂಘ–ಸಂಸ್ಥೆಗಳಲ್ಲಿ ಪ್ರದರ್ಶನ ಗೊಳ್ಳುತ್ತಿದ್ದವು. ತುಳು ರಂಗಭೂಮಿಯಲ್ಲಿ ಹೊಸ ನಾಟಕಗಳು ಅಪರೂಪದಲ್ಲಿ ಪ್ರದರ್ಶನಗೊಳ್ಳುತ್ತಿದ್ದವು.

2002ರಲ್ಲಿ ತುಳುಕೂಟ ಉಡುಪಿ ಕೆಮ್ತೂರು ನಾಟಕ ಸ್ಪರ್ಧೆಯನ್ನು ಪ್ರಾರಂಭ ಮಾಡಿದ ನಂತರ ತುಳುವಿನಲ್ಲಿಯೂ ಹೊಸತನದ ಪ್ರಯೋಗ ರಂಗಭೂಮಿಯ ನಾಟಕಗಳು ಚಾಲನೆಗೆ ಬಂದು ರಂಗಭೂಮಿಯಲ್ಲಿ ಒಂದು ಹೊಸ ಕ್ರಾಂತಿಯಾಯಿತೆನ್ನ ಬಹುದು. ತುಳುವಿನಲ್ಲಿ ಕನ್ನಡಕ್ಕಿಂತ ಜಾಸ್ತಿ ನಾಟಕಗಳು ರಚನೆಗೊಂಡರೂ ಪ್ರಯೋಗ ರಂಗಭೂಮಿ ನಾಟಕಗಳು ವಿರಳ.

ತುಳು ನಾಟಕ ಸ್ಪರ್ಧೆಯಲ್ಲಿ ಬೇರೆ ಬೇರೆ ಭಾಷೆಯ ಪ್ರಸಿದ್ಧ ನಾಟಕಕಾರರ ನಾಟಕಗಳು ತರ್ಜುಮೆಗೊಂಡು ತುಳುವಿನಲ್ಲಿ ಪ್ರದರ್ಶನಗೊಂಡು ಇಂದು ತುಳು ರಂಗಭೂಮಿಯು ಕನ್ನಡ ರಂಗಭೂಮಿಗೆ ಸಮಾನಾಂತರವಾಗಿ ಪೈಪೋಟಿ ಕೊಡುತ್ತಿರುವುದು ಸಂತೋಷದ ವಿಚಾರ. ತುಳುವಿನಲ್ಲಿಯೂ ಅನೇಕ ಲೇಖಕರು ಪ್ರಯೋಗ ನಾಟಕಗಳನ್ನು ರಚಿಸಿ ತುಳುಕೂಟದ ನಾಟಕ ಸ್ಪರ್ಧೆಯಲ್ಲಿ ಭಾಗವಹಿಸಿ ನಾಟಕ ಪ್ರದರ್ಶನ ಕೊಡುತ್ತಿರುವುದು ತುಳು ರಂಗಭೂಮಿಗೆ ವಿಶಿಷ್ಟ ಕೊಡುಗೆ ಎಂದು ಹೇಳಬಹುದು. ಕನ್ನಡ ರಂಗಭೂಮಿಯ ಹಿರಿಯ ನಿರ್ದೇಶಕರುಗಳಾದ ನೀನಾಸಂ ಕಲಾವಿದರುಗಳಾದ ಜಯರಾಂ ನೀಲಾವರ, ಶ್ರೀ ಜೀವನ್ ರಾಂ ಸುಳ್ಯ, ಬಾಸುಮ ಕೊಡಗು, ಸೀನ ನಾಡೋಳಿ, ಇಂತಹ ಅನೇಕ ನಿರ್ದೇಶಕರು ತುಳು ನಾಟಕಗಳಲ್ಲಿ ಕೆಲಸ ಮಾಡಿ, ಮಾರ್ಗದರ್ಶಕರಾಗಿ ತುಳು ರಂಗಭೂಮಿಯ ಯಶಸ್ಸಿಗೆ ಕಾರಣಕರ್ತ ರಾಗಿದ್ದಾರೆ. ಇವರನ್ನು ಸಂಘಟಿಸಿದ ಮಾಜಿ ನಾಟಕ ಸಂಚಾಲಕರಾದ ಉದ್ಯಾವರ ನಾಗೇಶ್, ಡಾ। ಭಾಸ್ಕರಾನಂದ ಕುಮಾರ್, ಗಂಗಾಧರ ಕಿದಿಯೂರು, ಸಂತೋಷ್

ಶೆಟ್ಟಿ ಹಿರಿಯಡಕ, ಪ್ರಭಾಕರ ಭಂಡಾರಿ, ಜಯಕರ್ ಶೆಟ್ಟಿ ಇಂದ್ರಾಳಿ, ಚೈತನ್ಯ ಇವರ ಕೆಲಸ ಅಭಿನಂದನೀಯ.

ಅನೇಕ ಲೇಖಕರು ನನ್ನಂತೆ ಸಾಮಾಜಿಕ ನಾಟಕಗಳಲ್ಲಿ ಹೊಸತನದ ನಾಟಕ ರಚನೆಗೆ ಮುಂದಾಗಿದ್ದಾರಲ್ಲದೆ ರಂಗ ಪ್ರಯೋಗಗಳನ್ನು ಮಾಡುತ್ತಿದ್ದಾರೆ. ಇದು ರಂಗಭೂಮಿಯ ಬೆಳವಣಿಗೆಯೂ ಹೌದು. ಕನ್ನಡ ರಂಗಭೂಮಿಯೊಂದಿಗೆ ತುಳು ರಂಗಭೂಮಿಯು ಯಾವುದೇ ಕಡಿಮೆ ಇಲ್ಲದಂತೆ ಬೆಳೆಯುತ್ತಿರುವುದು ತುಳು ರಂಗಭೂಮಿಯನ್ನು ಕೀಳು ಮಟ್ಟದಲ್ಲಿ ನೋಡುವ ನೋಟ ಈಗ ಬದಲಾಗಿದೆ. ತುಳುಕೂಟದ ಕೆಮ್ತೂರು ನಾಟಕ ಸ್ಪರ್ಧೆಯಿಂದ ನೂರಕ್ಕಿಂತಲೂ ಹೆಚ್ಚಿನ ನಾಟಕಗಳು ರಾಷ್ಟ್ರಮಟ್ಟದಲ್ಲಿ ಗುರುತಿಸಿಕೊಂಡು ಪ್ರಶಸ್ತಿ ಗಳಿಸಿರುವುದು ತುಳುಕೂಟದ ಕಾರ್ಯಕ್ಕೆ ಹಾಗೂ ತುಳು ರಂಗಭೂಮಿಗೆ ಹೆಮ್ಮೆಯ ವಿಚಾರ.

ರಂಗಭೂಮಿ ಉಡುಪಿ, ಸಂಗಮ ಕಲಾವಿದರು ಮಣಿಪಾಲ, ನಮ್ಮ ತುಳುವೆರ್ ಮುದ್ರಾಡಿ, ಸುಮನಸ ಕೊಡವೂರು, ಅಮೋಘ ಸಂಸ್ಥೆ ಉಡುಪಿ, ನವಸುಮ ರಂಗಮಂಚ, ವನಸುಮ ವೇದಿಕೆ ಕಟಪಾಡಿ, ರಂಜನ ಕಲಾವಿದರು ಉಡುಪಿ, ಕರಾವಳಿ ಕಲಾವಿದರು ಉಡುಪಿ, ರಂಗತರಂಗ ಕಲಾವಿದರು ಕಾಪು ಇಂತಹ ಅನೇಕ ಸಂಸ್ಥೆಗಳು ಕನ್ನಡದ ನವ್ಯ ನಾಟಕಗಳ ಜೊತೆಗೆ ತುಳುವಿನಲ್ಲೂ ನವ್ಯ ನಾಟಕಗಳನ್ನು ಸಿದ್ಧಪಡಿಸಿ ಪ್ರದರ್ಶನ ನೀಡುತ್ತಿವೆ. ಬೇರೆ ಬೇರೆ ಭಾಷೆಗಳಿಂದ ತುಳುವಿಗೆ ತರ್ಜುಮೆಗೊಂಡ ನಾಟಕಗಳು ತುಳುವಿನಲ್ಲಿ ಪ್ರದರ್ಶನಗೊಂಡು ಹೊಸತನವನ್ನು ತಂದುಕೊಟ್ಟಿದೆ.

ನಾಟಕರಂಗ ಬೆಳೆಯಬೇಕಾದರೆ ಕೇವಲ ಮನೋರಂಜನೆ ಹಾಸ್ಯ ಅಲ್ಲ. ಅದು ಸಮಾಜಕ್ಕೆ ಶಿಕ್ಷಣ ನೀಡಬೇಕು. ಚಿಂತನೆಯನ್ನು ಪ್ರೇರೇಪಿಸಬೇಕು ಎನ್ನುವಂತಹ ಕಾಳಜಿ ಬೇಕು ಎಂಬ ಪ್ರಜ್ಞೆಯೊಂದಿಗೆ ಹಲವಾರು ಹವ್ಯಾಸಿ ತಂಡಗಳ ಉಗಮವಾಯಿತು. ಕ್ರಮೇಣ ನಿರ್ದೇಶಕರು, ರಂಗತಜ್ಞರು, ತಂತ್ರಜ್ಞರು, ಪೋಷಕರು ಹವ್ಯಾಸಿ ರಂಗಭೂಮಿಯ ಬೆಳವಣಿಗೆಗೆ ಶ್ರಮಿಸಲು ಬಂದರು. ತುಳುವಿನ ಸಂಸ್ಕೃತಿಯನ್ನು ಆರಾಧನರೀತಿಯನ್ನು ವಸ್ತುವಿನ್ಯಾಸಗಳಲ್ಲಿ ಬಳಸಿಕೊಳ್ಳುತ್ತಾ ತುಳು ನಾಟಕಗಳು ಇತ್ತೀಚಿನ ದಿನಗಳಲ್ಲಿ ಹೊಸ ಪ್ರಯೋಗಗಳಿಗೆ ತೆರೆದುಕೊಂಡಿದೆ.

ಉಡುಪಿಯ ರಂಗಭೂಮಿಯ 'ಒಯಿಲ್‌ಗ್ ತಿಕ್ಕಿನಕುಲು', ರಂಗತರಂಗ, ಕಾಪು ಇವರ 'ಬೊಜ್ಜ', ನಮ್ಮ ತುಳುವೆರ್ ಸಂಘಟನೆಯ 'ಪಿಲಿ ಪತ್ತಿ ಗಡಸ್', 'ದರ್ಮೆತ್ತಿ ಮಾಯೆ', 'ಕತ್ತಲೆ ಸಾದಿ', ವನಸುಮ ವೇದಿಕೆಯ 'ದಗಲ್ಬಾಜಿಲು' ಸಂಗಮ ಕಲಾವಿದೆರ್ ಇವರ 'ಚಂದ್ರಪ್ಪನ ಚಟ್ಟದ ಯಾತ್ರೆ', 'ನಾಣಜ್ಜೆರ್ ಸುದೆ ತಿರ್ಗಾಯೆರ್', 'ಅಜನೆ', ಕರಾವಳಿ ಕಲಾವಿದರ 'ಬಗ್ಗನ ಬಾಗ್ಯೊ', ರಂಗಚಾವಡಿಯ 'ಈ ಪೊರ್ಲುಜ ತೂವೊಡ್ಚಿ', ರಂಗಭೂಮಿಯ 'ಐಸಿಯು', ಹೀಗೆ ತುಳು ರಂಗಭೂಮಿಯಲ್ಲಿ ಆಧುನಿಕ ಪ್ರಜ್ಞೆಯ ಪ್ರಯೋಗಗಳು ನಿರಂತರ ನಡೆಯುತ್ತಿರುವುದು ಉಡುಪಿ ಜಿಲ್ಲೆಯ ರಂಗಶ್ರೀಮಂತಿಕೆಗೆ ಮತ್ತಷ್ಟು ಮೆರುಗು ಬಂದಿದೆ.

* * *

# ಸಮೂಹ ಉಡುಪಿ

–ಉದ್ಯಾವರ ಮಾದವ ಆಚಾರ್ಯ

ಸಮೂಹ ಉಡುಪಿ ಒಂದು ವಿಶಷ್ಟ ಬಗೆಯ ರಂಗಚಟುವಟಿಕೆಗಳ ವ್ಯವಸ್ಥೆ ಎನ್ನಬಹುದೇನೋ! ಕಾರಣ ಅದೊಂದು ಸಾಂಪ್ರದಾಯಿಕ ಸಂಘಟನೆಯಾಗಿ ರೂಪುಗೊಂಡಿಲ್ಲ. ಹೊಸ ರಂಗ ಸಾಧ್ಯತೆಗಳ ಶೋಧನೆಯ ಒಂದು ಸ್ಫೂರ್ತಿಯ ಕೇಂದ್ರವಾಗಿ ರೂಪುಗೊಂಡಿದೆ. ಉಡುಪಿಯ ರಂಗ ಸಾಂಸ್ಕೃತಿಕ ಹಿನ್ನಲೆಯ ಒಂದು ವಿಶಿಷ್ಟ ಬೆಳವಣಿಗೆಯಾಗಿ 'ಸಮೂಹದ ಸುಮಾರು 80 ರಂಗಪ್ರಯೋಗಗಳನ್ನು ಅಧ್ಯಯನಕ್ಕೊಳಪಡಿಸಿದರೆ ಈ ಮಾತಿನ ಅರ್ಥ ರಂಗಾಸಕ್ತರಿಗೆ ಮನವರಿಕೆ ಯಾಗಬಹುದು. 'ಸಮೂಹ' ನಡೆಸಿದ ಒಂದೆರಡಾದರೂ ರಂಗ ಪ್ರಯೋಗಗಳನ್ನು ಕಂಡಾಗ ಮಾತ್ರ ಅದರ ಹುಟ್ಟು ಬೆಳವಣಿಗೆ, ಅಸ್ತಿತ್ವದ ಪರಿ ಅಧ್ಯಯನಾಸಕ್ತರಿಗೆ ಅರ್ಥವಾಗಬಹುದು.

ಹೆಚ್ಚು ಕಡಿಮೆ 40 ವರ್ಷಗಳ ಕಾಲ ವಿಸ್ತಾರದಲ್ಲಿ 'ಸಮೂಹ'ಹುಟ್ಟಿ ವಿಕಸಗೊಂಡಿದೆ. 70–80ರ ದಶಕದಲ್ಲಿ ಸಾಂಪ್ರದಾಯಿಕ ಯಕ್ಷಗಾನ ರಂಗಪ್ರಯೋಗಕ್ಕೆ ಹೊಸ ಎತ್ತರವನ್ನು ನೀಡುವ ಪ್ರಯತ್ನವಾಗಿ ಸಮೂಹ ರೂಪುಗೊಂಡಿತ್ತು. ಬ್ರಹ್ಮಕಪಾಲ , ನಳ ದಮಯಂತಿ, ಇತ್ಯಾದಿ ಸಾಂಪ್ರದಾಯಿಕ ಯಕ್ಷಗಾನ ಪ್ರಸಂಗಗಳನ್ನೇ ಆಧುನಿಕ ರಂಗವ್ಯಾಖ್ಯಾನದ ನೆಲೆಯಲ್ಲಿ ಹೊಸ ರೂಪ ಕೊಡಲು ಪ್ರಯತ್ನಿಸಿದರು. ಅನೇಕ ಶಿಷ್ಟ ಕಾವ್ಯದ ಕೆಲವು ಭಾಗಗಳ ರಂಗ ಸಾಧ್ಯತೆಗಳನ್ನೂ ಸಮೂಹ ಅಳವಡಿಸಿಕೊಂಡದ್ದಿದೆ. ಉದಾಹರಣೆ: ಕಡೆಂಗೋಡ್ಲು ಶಂಕರ ಭಟ್ಟರ 'ಮಾದ್ರಿಯ ಚಿತೆ' ಹೊನ್ನಿಯ ಮದುವೆ, ಮುಳಿಯ ತಿಮ್ಮಪ್ಪಯ್ಯ ಅವರ 'ನವನೀತ ರಾಮಾಯಣದ ಕೆಲವು ಭಾಗಗಳು, ಪು.ತಿ.ನ ಅವರ 'ಶ್ರೀಹರಿ ಚರಿತ' ಹೀಗೆ ಹತ್ತು ಹಲವು ..

*ಒಟ್ಟಾರೆಯಾಗಿ 'ಸಮೂಹ' ಪ್ರಯೋಗಿಸಿದ ಸುಮಾರು ಎಂಭತ್ತು ರಂಗಪ್ರಯತ್ನಗಳನ್ನು ಈ ಕೆಳಗಿನಂತೆ ಸೈದ್ಧಾಂತಿಕವಾಗಿ ವಿಭಜಿಸಬಹುದು.*

* ಯಕ್ಷಗಾನದ ಸಾಂಪ್ರದಾಯಿಕ ಪ್ರಸಂಗವನ್ನೇ ಆಧಾರವಾಗಿಟ್ಟುಕೊಂಡು ಆಧುನಿಕ ರಂಗಸ್ಪರ್ಷ ನೀಡಿದ ಪ್ರಯೋಗಗಳು–ಬ್ರಹ್ಮಕಪಾಲ, ನಳದಮಯಂತಿ.
* ಭಿನ್ನ ಸಾಹಿತ್ಯ ಕೃತಿಗಳಲ್ಲಿ ಹುದುಗಿರುವ ರಂಗ ಸಾಧ್ಯತೆಗಳ ಅಳವಡಿಕೆ– ಉದಾ:ಸೇಡಿಯಾಪು ಕೃಷ್ಣಭಟ್ಟರ ಶಬರಿ, ಶ್ವಮೇಧ, ಕುವೆಂಪು ರಾಮಾಯಣ ದರ್ಶನಂ, ವೀರಪ್ಪ ಮೊಯಿಲಿ ಅವರ ಶ್ರೀ ರಾಮಾಯಣ ಮಹಾನ್ವೇಷಣ, ಹರಿಹರನ ರಗಳೆ ಆಧಾರಿತ ಶಿವಭಕ್ತ ನೀಲಕಂಠ, ಕನಕದಾಸರ ಮೋಹನ ತರಂಗಿಣಿ ಕಾವ್ಯವನ್ನು ಆಧರಿಸಿದ 'ರತಿ ನೃತ್ಯ ವಿಲಾಸ, ಚದುರ ಚಂದ್ರಮರ ಗೊಮ್ಮಟೇಶ್ವರ ಚರಿತ್ರೆ.
* ಹೆಚ್ಚಾಗಿ ಪ್ರಯೋಗಗಳಲ್ಲಿ ಕಂಡುಬಾರದ ರಂಗಕೃತಿಗಳ ರಂಗಪ್ರಯತ್ನ .ಉದಾ: ಬಿ.ಎಂ.ಶ್ರೀ ಅವರ ಆಶ್ವತ್ಥಾಮನ್, ಗೋವಿಂದ ಪೈಗಳ ಹೆಬ್ಬೆರಳು, ಪು.ತಿ.ನ. ಅವರ ಸತ್ಯಾಯನ ಹರಿಶ್ಚಂದ್ರ, ಠಾಗೋರರ ಚಿತ್ರಾಂಗದೆ(ಅನು:

ಎನ್.ಎಸ್.ಲಕ್ಷ್ಮೀನಾರಾಯಣ ಭಟ್), ಕಡೆಂಗೋಡ್ಲು ಶಂಕರ ಭಟ್ಟರ ಹಿಡಿಂಬೆ, ಮಹಾಯೋಗಿ.

* ಗೀತರೂಪಕಗಳ ನೃತ್ಯ, ನಾಟ್ಯಾಭಿವ್ಯಕ್ತಿ .ಉದಾ: ಹಿರಣ್ಯಾಭಿಸರಣ, ಅಹಲ್ಯೆ, ಕುಚೇಲ ಕೃಷ್ಣ, ಶಿವರಾಮ ಕಾರಂತರ ಮುಕ್ತದ್ವಾರ, ಋತುಗೀತೆ ಇತ್ಯಾದಿ.
* ಕೆಲವು ಸ್ವತಂತ್ರ ಕೃತಿಗಳ ರಚನೆ (ಉದ್ಯಾವರ ಮಾಧವ ಆಚಾರ್ಯ) ಮತ್ತು ರಂಗಾಭಿವ್ಯಕ್ತಿ. ಉದಾ: ಪಾಂಚಾಲಿ, ಭೀಷ್ಮ ಸತ್ಯವ್ರತನಾದದ್ದು, ವಲ್ಮೀಕ ನೀನಾದ, ಗಾಂಧಾರಿ, ಸೀತೆಯ ಸ್ವಗತ, ನೃತ್ಯವ್ಯಾಸ, ಅಂಬೆ, ಗಂಗಾಲಹರಿ, ಉಪನಿಷದುದ್ಯಾನಂ, ಊರ್ವಶಿ, ಕರ್ಣರಸಾಯನಂ ಎಂತು ನೃತ್ಯರಸಾಯನಂ, ಹಂಸನಾದ ಜ್ವಾಲೆ, ದೇವಯಾನಿಯ ಸ್ವಗತ, ಕುವರ ಭಸ್ಮಾಸುರ, ಸ್ತ್ರೀಶಕ್ತಿ ಇತ್ಯಾದಿ ಒಟ್ಟು 30 ರಂಗರೂಪಕ ಸಾಹಿತ್ಯಗಳ ರಚನೆ.
* ಆಧ್ಯಾತ್ಮದ ನೆಲೆಯ ಕೆವು ರಂಗ ಪ್ರಯೋಗಗಳು. ಉದಾ: ಆಚಾರ್ಯ ಮಧ್ವರ ಬಗೆಗೆ ಆನಂದ ಮುಕುಂದ, ದಾಸರ ಕೀರ್ತನೆಯ ಸಂಯೋಜನೆಯಲ್ಲಿ ಹರಿಕುಣಿದ, ಬಿಲ್ಲ ಹಬ್ಬ, ಭಗವದ್ಗೀತಾ ನೃತ್ಯ ವೈಭವಂ, ಅವತಾರ ವೈಭವ ಆಚಾರ್ಯ ಶಂಕರ ಸೌಂದರ್ಯ ಲಹರಿ, ರಾಘವೇಂದ್ರ ತೀರ್ಥರ ವೃಂದಾವನ, ಯತಿವರೇಣ್ಯ ವಾದಿರಾಜರ ಶ್ರೀ ರುಗ್ಮೀಣೀಶ ವಿಜಯ.

ಹೀಗೆ ಹೆಚ್ಚು ಕಡಿಮೆ 80 ಭಿನ್ನ ಪ್ರಯೋಗಗಳ ವಿಸ್ತಾರದಲ್ಲಿ ವಿಕಾಸಗೊಂಡಿರುವ ಸಮೂಹ ಸಂದರ್ಭಕ್ಕೆ ಒದಗಿ ಬಂದಂತೆ ನೂರಾರು ಹವ್ಯಾಸಿ ರಂಗ ನಿರತರನ್ನು ಕಲಾವಿದರಾಗಿ ಒಳಗೊಂಡು ಪ್ರಯೋಗ ನಡೆಸಿದ್ದರಿಂದ ನಿರ್ದಿಷ್ಟವಾಗಿ ಸಮೂಹ ಕಲಾವಿದರ ಪಟ್ಟಿ ಕೊಡುವುದು ಅಸಾಧ್ಯ. ಒಂದು ರಂಗ ಸಾಧ್ಯತೆಯ ಪ್ರಯತ್ನ ಕೈಗೊಂಡಾಗ ಅದಕ್ಕೆ ಅರ್ಹರಾದ ಭಿನ್ನ ಕಲಾವಿದರನ್ನು ಒಳಗೊಂಡೆ ಸಮೂಹ ಸಾಗಿ ಬಂದಿದೆ. ಕೆಲವೊಮ್ಮೆ ವೃತ್ತಿ ಕಲಾವಿದರನ್ನು ಆಹ್ವಾನಿಸಿ ರಂಗಪ್ರಯೋಗ ನಡೆಸಿದ್ದು ಇದೆ. ಉದಾ: ಯಕ್ಷಗಾನದ ಮೇರು ಕಲಾವಿದ /ಶ್ರೀ ಗೋವಿಂದ ಭಟ್, ಶ್ರೀ ಕೊಳ್ಯೂರು ರಾಮಚಂದ್ರ ರಾವ್, ಶ್ರೀ ಅಂಬಾತನಯ ಮುದ್ರಾಡಿ, ಶ್ರೀ ವಾಸುದೇವ ಸಾಮಗ ಇವರನ್ನೆಲ್ಲ ಒಳಗೊಂಡ ದಾಸರ ಕೀರ್ತನೆಗಳನ್ನಾಧರಿಸಿದ ದಾಸನಾಗುವ ಪ್ರಕ್ರಿಯೆಯನ್ನು ಬಿಂಬಿಸುವ ಹರಿದಾಸ ವಿಜಯ ರಂಗಪ್ರಯತ್ನ.

ರಾಮಚಂದ್ರ ಪಾಂಗಾಣ್ಣಾಯ, ಮಾಧವ ಆಚಾರ್ಯ, ಡಾ|ಮಾಧವಿ ಭಂಡಾರಿ, ಮೀನಾಲಕ್ಷಣಿ, ಅಡ್ಯಂತ್ಯಾಯ, ಡಾ| ಅನ್ನಪೂರ್ಣ ಆಚಾರ್ಯ ಸಹೋದರಿಯರು, ಲಕ್ಷ್ಮೀ ಗುರುರಾಜ, ಡಾ|ರಾಜೇಶ್ವರಿ, ಮುರಳಿ ಕಡೆಕಾರ್, ಡಾ|ರಾಜೇಂದ್ರ ಕೆದ್ಲಾಯ, ಅಜಿತ್ ಕುಮಾರ್ ಅಂಬಲಪಾಡಿ, ಡಾ|ಗಣಪತಿ ಭಟ್, ವಿಶ್ವನಾಥ, ಕೆ.ಜೆ.ಗಣೇಶ್ ಸಹೊದರರು, ಪ್ರವೀಣ್‌ಚಂದ್ರ ಕುದ್ಪಾಡಿ, ಸತೀಶ್ ಉಪಾಧ್ಯ, ರಾಮಕೃಷ್ಣ ಕೊಡಂಚ, ಬಾಲಚಂದ್ರ ಭಾಗವತ್, ಶರ್ಮಿಳಾ ಕೃಷ್ಣಮೂರ್ತಿ, ಜಯಕರ ಬೈಲೂರು, ನಾರಾಯಣ ದಾಸ್, ಮೋಹನ್, ವೀಣಾ ಉಪಾಧ್ಯ, ಪವನ ರಾಘವೇಂದ್ರ, ವಿನುತಾ ಆಚಾರ್ಯ, ಡಾ| ವಸುಮತಿ ಭಟ್, ಸಂತೋಷ್ ಶೆಟ್ಟಿ, ಅರ್ಚನ ಪ್ರಸಾದ್, ಸ್ವಾತಿ ಗುರುನಂದನ್, ಶ್ರುತಿ ಸಿದ್ಧಾರ್ಥ, ಅಖಿಲಾ ದಿಲೀಪ್, ಭವಾನಿಶಂಕರ, ಮೊದಲಾದ ಅನೇಕ ಹವ್ಯಾಸಿ

ಮತ್ತು ವೃತ್ತಿ ಕಲಾವಿದರು ಸಮೂಹ ರಂಗಪ್ರಯೋಗಗಳಲ್ಲಿ ಪಾಲ್ಗೊಂಡಿದ್ದಿದೆ.

ಇಂದು ಉಡುಪಿಯೇ ಕೇಂದ್ರವಾಗಿ ರಂಗಪ್ರಯೋಗಗಳಲ್ಲಿ ನಿರತವಾಗಿರುವ ರಂಗಭೂಮಿ, ರಥಬೀದಿ ಗೆಳೆಯರು, ಯಕ್ಷಗಾನ ಕಲಾರಂಗ, ಅಂಬಲಪಾಡಿ ಮತ್ತು ಬೈಲೂರು ಯಕ್ಷಗಾನ ಸಂಘಗಳು ಇತ್ಯಾದಿ ಅನೇಕ ಸಂಘಟನೆಗಳ ಕಲಾವಿದರ ಪ್ರತಿಭೆ ಮತ್ತು ಪರಿಣತಿಯನ್ನು ಆಗಿಂದಾಗ್ಗೆ ಬಳಸಿಕೊಂಡೇ ಸಮೂಹ ತನ್ನ ರಂಗ ಸಾಧ್ಯತೆಯ ಹಾದಿಯಲ್ಲಿ ನಡೆದು ಬಂದಿದೆ. ಸಂಗೀತ ವಿಶಾರದ ಉಡುಪಿ ವಾಸುದೇವ ಭಟ್, ನೃತ್ಯ ವಿದುಷಿ ಪ್ರತಿಭಾ.ಎಂ.ಸಾಮಗ, ವಿದ್ವಾನ್ ಮಧೂರು ಪಿ.ಬಾಲಸುಬ್ರಮಣ್ಯ, ವಿದುಷಿ ಭ್ರಾಮರಿ ಶಿವಪ್ರಕಾಶ್, ಮುಂತಾದ ಪ್ರತಿಭೆಗಳ ಸಂಗಮದಿಂದ ಸಮೂಹ ತನ್ನ ಅಸ್ತಿತ್ವವನ್ನು ಸಾರ್ಥಕಗೊಳಿಸಿಕೊಂಡಿದೆ. ಅಪೂರ್ವ ಸಂಸ್ಕೃತ ನಾಟಕಗಳ ಕನ್ನಡ ಅನುವಾದವನ್ನು ಆಧರಿಸಿ ನೃತ್ಯ –ನಾಟಕಗಳ ಪ್ರಯತ್ನ ನಡೆದಿದೆ. ಉದಾ: ಕಾಳಿದಾಸನ ಅಭಿಜ್ಞಾನ ಶಾಕುಂತಲಂ (ಕನ್ನಡ–ನೆನಪಾದಳು ಶಕುಂತಲೆ,) ಭವಭೂತಿಯ ಉತ್ತರ ರಾಮಚರಿತಂ, ಅನು:ಬನ್ನಂಜೆ ಗೋವಿಂದಾಚಾರ್ಯ, ಇಲ್ಲಿಯೆ ಹೇಳಬೇಕು–ಬೇಂದ್ರೆ ಮತಿನ, ಕುವೆಂಪು ಮೊದಲಾದ ಪ್ರತಿಭಾನ್ವಿತ ಕವಿಗಳ ಗೀತ ತುಣುಕುಗಳನ್ನು ಜೋಡಿಸಿ ಭೃಂಗದ ಬೆನ್ನೇರಿ ಬಂತು ಎಂಬ ರೂಪಕವನ್ನು ಸಮೂಹ ಆಯೋಜಿಸಿದ್ದಿದೆ.


ಹೀಗೆ 1980ರ ಸುಮಾರಿಗೆ ಅರುಂಧತಿ ಎಂಬ ಜಾನಪದ ವಸ್ತುವಿನ ರಂಗಾಭಿವ್ಯಕ್ತಿಯೊಂದಿಗೆ ಪ್ರಾರಂಭವಾದ ಸಮೂಹ ವರ್ತಮಾನದಲ್ಲಿ ಕೋದಂಡದ ಕೊನೆ (ರಚನೆ :ಉದ್ಯಾವರ ಮಾಧವ ಆಚಾರ್ಯ) ಎಂಬ ಸ್ವತಂತ್ರ ರಂಗಕೃತಿಯ ಪ್ರಯೋಗ (2019)ದ ಮೂಲಕ ತನ್ನ ಅಸ್ತಿತ್ವವನ್ನು ಹಿಗ್ಗಿಸುತ್ತಾ ಬರುತ್ತಿದೆ. ಇದು ಹೆಗ್ಗಳಿಕೆಗಾಗಿ ಅಲ್ಲ–ದಾಖಲಿಸಬಹುದಾದ ವಿಚಾರ. ಸಮೂಹದ ಎಂಭತ್ತು ಪ್ರಯೋಗಗಳಲ್ಲಿ ಸುಮಾರು 90% ಪ್ರಯೋಗಗಳು ಬೇರೆ ಯಾರೂ ಪ್ರಯತ್ನಿಸದ ರಂಗಕೃತಿಗಳ ಸ್ವತಂತ್ರ ಭಿನ್ನ ರಂಗನಡೆಯ ಆವಿಷ್ಕಾರಗಳು. ಬಿ.ವಿ.ಕಾರಂತರ ಎಂ.ಜಿಎಂ.ಕಾಲೇಜಿನ ಶಿಬಿರ (70ರ ದಶಕ)ದ ಪೂರ್ವದಲ್ಲಿ ರೂಪುಗೊಂಡಿದ್ದ ರಂಗಬೇರುಗಳನ್ನು ಅಧ್ಯಯನಕೊಳಪಡಿಸಬೇಕಾದ ಅಗತ್ಯವಿದೆ.

* ಯಕ್ಷಗಾನವೇ ಮುಖ್ಯವಾಗಿದ್ದರೂ ಅಷ್ಟ ಮಠಗಳ ಸರಹದ್ದಿನಲ್ಲಿ ಪೌರಾಣಿಕ ನಾಟಕಗಳನ್ನು ಅಭಿನಯಿಸುತ್ತಿದ್ದ ದಾಖಲೆಗಳು ಸಿಗುತ್ತವೆ.
* ಅದೇ ಸುಮಾರಿಗೆ ಕಂಪೆನಿ ನಾಟಕಗಳ ಪ್ರಭಾವವು ಉಡುಪಿಯ ರಂಗ ಸಹೃದಯರನ್ನು ಆಕರ್ಷಿಸುತ್ತಾ ಬಂದಿದೆ.
* ಬಿ.ಆರ್ ನಾಗೇಶ್‌ರ ಎದ್ದುಬಿದ್ದ ತೆರೆಗಳು ಎಂಬ ಅಧ್ಯಯನದಲ್ಲಿ ಅಪೂರ್ವ ರಂಗಮಾಹಿತಿ ಲಭ್ಯವಿದೆ.
* ಉಡುಪಿ ಕರ್ನಾಟಕ ಸಂಘ ಮತ್ತು ಕಲಾವೃಂದ ತನ್ನ ನಾಡಹಬ್ಬ ಮೂಲಕ ರಂಗಚಟುವಟಿಕೆಗಳನ್ನು ನಡೆಸಿದ್ದು ತಿಳಿದು ಬರುತ್ತದೆ.
* ಕ್ರಮೇಣ ಈ ಎಲ್ಲಾ ಚಟುವಟಿಕೆಗಳು ಉಡುಪಿ ಮತ್ತು ಆಸುಪಾಸಿನ ಶೈಕ್ಷಣಿಕ ಸಂಸ್ಥೆಗಳ ನೆರಳಿನಲ್ಲಿ ವಿಸ್ತಾರಗೊಂಡು ಇಂದು ಕ್ರಿಯಾಶೀಲವಾಗಿರುವ ರಂಗ ಸಂಸ್ಥೆಗಳ ಮೂಲಕ ನಾಡಿನಲ್ಲಿಯೇ ಅಪೂರ್ವವೆನ್ನಿಸುವಂಥ ಎತ್ತರವನ್ನು ಮುಟ್ಟಿದೆ.


ಹೀಗೆ ಕಾರಂತರ ಪ್ರವೇಶದ ಪೂರ್ವಯುಗವನ್ನು ಅಧ್ಯಯನಕ್ಕೊಳಪಡಿಸಿ ದಾಖಲೆಗೊಳಪಡಿಸಬೇಕೆಂಬುದಷ್ಟೆ ಈ ಟಿಪ್ಪಣಿಯ ಉದ್ದೇಶ. ಡಾ। ಶಿವರಾಮ ಕಾರಂತರ ಭಿನ್ನ ರಂಗಪ್ರಯೋಗಗಳೂ ಈ ಕಾಲಘಟ್ಟದಲ್ಲಿಯೇ ರೂಪು ಪಡೆದುದ್ದನ್ನು ನಾವು ಖಂಡಿತವಾಗಿಯೂ ಮರೆಯಬಾರದು. ಬಿ.ವಿ.ಕಾರಂತರ ಶಿಬಿರದ ಮೊದಲು ಶಿವರಾಮ ಕಾರಂತರ ರಂಗಚಿಂತನೆಗಳು ಮತ್ತು ರಂಗಚಟುವಟಿಕೆಗಳು ಅನೇಕ ರಂಗೋತ್ಸಾಹಿಗಳನ್ನು ಹುರಿದುಂಬಿಸಿದೆ ಎಂಬುದನ್ನು ನಾವು ಮರೆಯಬಾರದು. ಇದನ್ನು ವಾದಿರಾಜರ ನಂತರದ ಯುಗವೆಂದು ಕರೆಯಬಹುದೋ ಏನೋ! ಕಾರಣ ವಾದಿರಾಜರು ತನ್ನ ಅನೇಕ ಕೃತಿಗಳಲ್ಲಿ ಅವರ ಕಾಲಕ್ಕೆ ತಕ್ಕಂತೆ ರಂಗನಡೆಯನ್ನು ಆರಾಧನೆಗೆ ಬಳಸಿಕೊಂಡದ್ದು ತಿಳಿದು ಬರುತ್ತದೆ. ಭ್ರಮರಗೀತೆ ಎಂಬ ತಮ್ಮ ಕೃತಿಯಲ್ಲಿ 'ಗೋವಿಂದನ ಸಮ್ಮುಖ ನಾಟ್ಯವಾಡಿಸುವೆ ಪಾಡುತ್ತಾ ನಲಿಯುತ ಲಲನೆಯರು ಬಂದರು..' ಎಂಬಿತ್ಯಾದಿ ಸಾಲುಗಳು ವಾದಿರಾಜರ ಕಾವ್ಯದ ಭಾಗವಾಗಿರುವುದರಿಂದ ಅಂಥ ರಂಗ ಹೆಜ್ಜೆಗಳನ್ನು ನಾವು ಊಹಿಸಬಹುದು.

ಒಟ್ಟಿನಲ್ಲಿ ಶಿವಳ್ಳಿ ಕೇಂದ್ರವಾಗಿ ಮಠೀಯ ವರ್ತುಲದ ರಂಗಚಟುವಟಿಕೆಯಿಂದ ಹಿಡಿದು 70ರ ದಶಕದಲ್ಲಿ ನಡೆದ ಕಾರಂತರ ಶಿಬಿರದ ತನಕ ರಂಗದ ಉಸಿರು ಹಬ್ಬಿದನ್ನು ನಾವು ದಾಖಲಿಸಬಹುದು.

****



ರಾಜಾ ಅರ್ಥಾತ್ ಗುಲಾಮ ಅಸಂಗತ ನಾಟಕವೊಂದರ ದೃಶ್ಯ



ಸುಮನಸಾ ಕೊಡವೂರು ಸಂಸ್ಥೆಯ 'ಚಿನ್ನದ ಬಂಡಿ' ನಾಟಕದ ದೃಶ್ಯ

## ರಂಗಪ್ರೌಢಿಮೆ ಉಳಿಸಿಕೊಂಡ ಲಾವಣ್ಯ

ಸುಮಾರು 20 ವರ್ಷಗಳ ಹಿಂದೆ ಇರಬಹುದು, ಲಾವಣ್ಯ ಬೈಂದೂರು ಆಯೋಜಿಸಿದ ನಾಟಕ ಸ್ಪರ್ಧೆಯೊಂದರ ಬಗ್ಗೆ ಮಾಹಿತಿ ಸಿಕ್ಕಿದಾಗ ನಮ್ಮ ತಂಡವೂ ಭಾಗವಹಿಸಿತ್ತು. ಮೊದಲ ಭಾರಿ ಬೈಂದೂರಿನ ಸೇನೇಶ್ವರ ದೇವಳದ ವಠಾರಕ್ಕೆ ಬಂದಾಗ ಇಲ್ಲೂ ನಾಟಕ ನಡೀತಿದೆಯಾ ಎಂಬ ಪ್ರಶ್ನೆ ಸಹಜವಾಗಿಯೇ ಬಂದಿತ್ತು. ಪುಟ್ಟದೊಂದು ಸ್ಟೇಜ್, ಸುತ್ತಲೂ ರಸ್ತೆ, ಅಂಗಡಿ ಮುಂಗಟ್ಟು ರಂಗಚಟುವಟಿಕೆಗಳಿಗೆ ಇದೊಂದು ನಾಲಾಯಕ್ ಸ್ಥಳವೇನೋ ಎಂಬಂತೆ ಮೊದಲ ನೋಟಕ್ಕೆ ಕಂಡದ್ದಂತೂ ಸತ್ಯ. ಆದರೆ ಸಂಜೆಯಾಗುತ್ತಲೇ ಅಚ್ಚರಿ ಎಂಬಂತೆ ಇಡೀ ವಾತಾವರಣದಲ್ಲಿ ರಂಗವಾತಾವರಣ ಮೈತಳೆದದ್ದು ನಮ್ಮ ಕಲ್ಪನೆಗಳನ್ನೆಲ್ಲಾ ತಲೆಕೆಳಗು ಮಾಡಿತ್ತು. ಸಭಾ ಕಾರ್ಯಕ್ರಮ ಮುಗಿಯುತ್ತಲೇ ನಾಟಕ ನೋಡಲು ಕಾತರರಾದ ನೂರಾರು ಮನಸುಗಳು ಸ್ಪಾಟ್ ಲೈಟ್ ಬೆಳಕಿನ ಕಡೆಗೆ ಮುಖ ಮಾಡಿ ಕೂತಿದ್ದ ದೃಶ್ಯ ಸೋಜಿಗ ಮೂಡಿಸಿತ್ತು. ಅಂದು ನಮ್ಮ ನಾಟಕವೂ ಪ್ರದರ್ಶನವಾಯಿತು. ಆ ಸ್ಪರ್ಧೆಯಲ್ಲಿ ಒಂದೆರಡು ಬಹುಮಾನವೂ ಬಂದಿತ್ತು. ಲಾವಣ್ಯದ ಆಕರ್ಷಣೆ ಎಷ್ಟಿತ್ತೆಂದರೆ ಎರಡು ಬಹುಮಾನ ಸ್ವೀಕರಿಸಲು ಸುಳ್ಯದಿಂದ ಬೈಕಿನಲ್ಲಿ ಬೈಂದೂರಿಗೆ ಬಂದು ರಾತ್ರಿ ವಾಪಾಸಾಗಿದ್ದೆವು. ನನಗೆ ಲಾವಣ್ಯ ಪರಿಚಯವಾದ ಬಗೆ ಹೀಗೆ.

ಆಮೇಲೆ ಲಾವಣ್ಯ ನನಗೆ ಬಹಳ ಆಪ್ತವಾದ ರಂಗತಂಡಗಳಲ್ಲೊಂದಾಗಿತ್ತು. ಬಹುಶ: ನಿರಂತರ 15 ವರ್ಷಗಳ ಕಾಲ ಒಂದಲ್ಲ ಒಂದು ಕಾರಣಕ್ಕೆ ವರ್ಷಕ್ಕೆ ಒಮ್ಮೆಯಾದರೂ ಲಾವಣ್ಯದ ಆತಿಥ್ಯ ಉಂಡವನು ನಾನು. ಲಾವಣ್ಯದ ಬಗ್ಗೆ ಹೇಳುವಾಗ ಬಹಳ ಮುಖ್ಯ ಅಂತ ನನಗನ್ನಿಸುವುದು ರಂಗಶಿಸ್ತು. ಸ್ಥಾಪಕ ಸದಸ್ಯರಿಂದ ಹಿಡಿದು ಹೊಸ ಸದಸ್ಯರವರೆಗೂ ವರ್ತನೆಯಲ್ಲಿ ನಾವು ಗಮನಿಸಬಹುದಾದ ಧನಾತ್ಮಕ ಅಂಶಗಳು ಅವರ ರಂಗಶಿಸ್ತು ಮತ್ತು ರಂಗಪ್ರೌಢಿಮೆಯನ್ನು ಸಾರುತ್ತಿದೆ. ಬಹುಶ: ರಂಗಕರ್ಮಿಗಳಿಂದ ಸಮಾಜ ಬಯಸುವ ಬಹುಮುಖ್ಯ ಅಂಶಗಳಲ್ಲಿ ಇದೂ ಒಂದು ಅಂತ ನಾನು ಭಾವಿಸುತ್ತೇನೆ. ರಂಗಶಿಕ್ಷಣ ಅಂದರೆ ಮನುಷ್ಯನ ಸರ್ವತೋಮುಖ ಅಭಿವೃದ್ಧಿಗೆ ಪೂರಕ ಶಿಕ್ಷಣ ಅಂತ ನಾವು ಹೇಳುತ್ತಾ ಇರುವಾಗ ಅದನ್ನು ಪ್ರಾಕ್ಟಿಕಲ್ ಆಗಿ ಮಾಡಿ ತೋರಿಸುವ ಲಾವಣ್ಯದ ಗುಣ ಇದೆಯಲ್ಲಾ ಅದು ರಂಗಕರ್ಮಿಗಳು ಪಾಲಿಸಲು ಅರ್ಹವಾದದ್ದು. ಲಾವಣ್ಯದ ಬೆಳವಣಿಗೆಯನ್ನು ಗಮನಿಸಿದಾಗಲೂ ಒಂದು ವಿಶಿಷ್ಟತೆ ಇದೆ. ನೆಲಮಟ್ಟದಿಂದ ನಾಲ್ಕನೇ ಮಹಡಿಯವರೆಗೆ ಕಟ್ಟಡವನ್ನಷ್ಟೇ ಬೆಳೆಸಿಲ್ಲ ಇವರು. ಸಾವಿರಾರು ಜನರ ಭಾವನೆಗಳ ನಡುವೆ ಸೇತುವೆಯನ್ನೂ ಕಟ್ಟಿದ್ದಾರೆ. ಯಾವುದನ್ನೂ ಧಾಂ.. ಧೂಂ.. ಅಂತ ಪ್ರಚಾರ ಮಾಡದೆ, ಮೌನವಾಗಿ ಜೇನುಗೂಡು ಕಟ್ಟಿದ್ದಾರೆ. ಲಾವಣ್ಯದ ರಂಗಸಾಧನೆಗಳ ಬಗ್ಗೆ ನಾನು ಉಲ್ಲೇಖಿಸಬೇಕಾದ ಅಗತ್ಯ ಇಲ್ಲ. ಅದು ಜನಜನಿತ. ನನಗೆ ಬಹಳ ಮುಖ್ಯ ಅನ್ನಿಸಿದ್ದು ಲಾವಣ್ಯದ ರಂಗಪ್ರೌಢಿಮೆ. ಇನ್ನು ನಿರಂತರ ಲಾವಣ್ಯ ಲಾವಣ್ಯವತಿಯಾಗಿ ಬೆಳೆಯಲಿ, ಮುಪ್ಪಿನ ಸುಕ್ಕು ಆವರಿಸದಿರಲಿ, ತಂಡದ ಆಶಯಗೀತೆಯಂತೆ ಲಾವಣ್ಯ ಬೆಳಗಲಿ.... ಬೆಳಕಾಗಲಿ..

*– ರಾಜಾರಾಂ ದೇಂಗೋಡಿ*

## ನವಸುಮ ರಂಗಮಂಚ (ರಿ.) ಕೊಡವೂರು

ಸುಮಾರು 5 ವರ್ಷಗಳಿಂದ ಗ್ರಾಮೀಣ ರಂಗಚಟುವಟಿಕೆಗಳಿಗಾಗಿ ಕೊಡವೂರಿನ ಗ್ರಾಮೀಣ ಭಾಗದಲ್ಲಿ ಸ್ಥಾಪನೆಗೊಂಡು ರಂಗಚಟುವಟಿಕೆಗಳಲ್ಲಿ ನಿರತವಾಗಿದೆ. ಮಕ್ಕಳ ನಾಟಕ ಹಾಗೂ ಪ್ರಯೋಗ ರಂಗಭೂಮಿಯ ಹಲವಾರು ನಾಟಕಗಳು ತಂಡದಿಂದ ಸಿದ್ಧಗೊಂಡು ಪ್ರದರ್ಶನಗೊಂಡಿವೆ. ಬಾಸುಮ ಕೊಡಗು, ವಸಂತ ಬನ್ನಾಡಿ, ಬಾಲಕೃಷ್ಣ ಕೊಡವೂರು ಮೊದಲಾದ ಹಲವು ಪ್ರಸಿದ್ಧ ನಿರ್ದೇಶಕರುಗಳು ಈ ತಂಡಕ್ಕೆ ನಾಟಕವನ್ನು ನಿರ್ದೇಶಿಸಿದ್ದಾರೆ. ತಂಡದ ನಾಟಕಗಳು ರಾಷ್ಟ್ರದಾದ್ಯಂತ ಪ್ರದರ್ಶನಗಳನ್ನು ಕಂಡಿವೆ. ನಾಟಕ ರಚನೆ, ಕಮ್ಮಟ, ರಂಗ ಗೀತೆಗಾಯನ ಕಮ್ಮಟ ಹಾಗೂ ನಿರಂತರವಾಗಿ ಪ್ರತೀವರ್ಷ ಗ್ರಾಮೀಣ ರಂಗೋತ್ಸವವನ್ನು ಆಯೋಜಿಸುತ್ತಿದೆ. ತಂಡದ ಹಲವಾರು ನಾಟಕಗಳು ರಾಷ್ಟ್ರ, ರಾಜ್ಯಮಟ್ಟದಲ್ಲಿ ಪ್ರಶಸ್ತಿಗೆ ಭಾಜನವಾಗಿದೆ. ಸುಮಾರು 35 ಮಂದಿ ಸದಸ್ಯರ ಯುವ ರಂಗನಟರು ತಂಡದ ಯಶಸ್ಸಿಗೆ ನಿರಂತರವಾಗಿ ವರ್ಷಪೂರ್ತಿ ರಂಗಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದು, ಉಡುಪಿಯ ಒಂದು ಶಿಸ್ತುಬದ್ಧ ರಂಗತಂಡವಾಗಿ ರಂಗಕರ್ಮಿಗಳಿಂದ ಮನ್ನಣೆ ಪಡೆದಿದೆ.

---

## ರಂಗಸುರಭಿ–ಬೈಂದೂರು

ಬೈಂದೂರಿನ ಪರಿಸರದಲ್ಲಿ ರಂಗಭೂಮಿಗೆ ಹೊಸದೊಂದು ಆಯಾಮ ನೀಡಿದ ರಂಗಾಸಕ್ತರ ಹೆಮ್ಮೆಯ ಸಂಸ್ಥೆ "ಸುರಭಿ" ಸಾಮಾಜಿಕ ಕಳಕಳಿಯೊಂದಿಗೆ 2000 ನೇ ಇಸವಿಯಲ್ಲಿ ರೂಪುಗೊಂಡಿರುವ ಯಸ್ಕೋರ್ಡ್ ಟ್ರಸ್ಟ್(ರಿ) ಬೈಂದೂರು ಇವರ ಪ್ರಾಯೋಜಕತ್ವದಲ್ಲಿ ಹುಟ್ಟಿಕೊಂಡ ಸುರಭಿ (ರಿ) ಬೈಂದೂರು. ಬೇರೆ ಬೇರೆ ಆಯಾಮಗಳಲ್ಲಿ ಕೆಲಸ ಮಾಡುತ್ತಾ ಬಂದಿದ್ದು ಉತ್ತಮ ಸಾಮಾಜಿಕ ಕಳಕಳಿ, ಸಾಂಸ್ಕೃತಿಕ ಪ್ರಜ್ಞೆ ಹೊಂದಿರುವ ಕಲಾಭಿಮಾನಿಗಳ ಪ್ರೋತ್ಸಾಹದಿಂದ 18 ವರ್ಷಗಳ ತನಕ ಬೆಳೆದು ಬಂದಿದ್ದೇವೆ. ಕಳೆದ 2 ವರ್ಷಗಳಿಂದ ಈ ಎಲ್ಲಾ ಚಟುವಟಿಕೆಗಳ ನಡುವೆ ನಮಗೆ ಅರಿವಿಲ್ಲದೆ ಹುಟ್ಟಿಕೊಂಡ ಕಲಾತಂಡ "ರಂಗಸುರಭಿ" ರಂಗಾಸಕ್ತರಿಗೆ, ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಹಾಗೂ ಆಸಕ್ತ ಮಕ್ಕಳಿಗೆ ರಂಗ ಶಿಕ್ಷಣ ಮತ್ತು ರಂಗ ಕಮ್ಮಟ ಏರ್ಪಡಿಸಿ ವೈಚಾರಿಕ ಹಾಗೂ ಕಲಾತ್ಮಕ ನಾಟಕಗಳನ್ನು ನಿರ್ಮಾಣ ಮಾಡುವುರೊಂದಿಗೆ, ಉತ್ತಮ ರಂಗ ಕಲಾವಿದರಿಗೆ ಪ್ರೋತ್ಸಾಹ ಹಾಗೂ ಉತ್ತಮ ರಂಗ ಪ್ರದರ್ಶನ ಮಾಡಿಸಿದ್ದೇವೆ. ಕಾವ್ಯರಂಗ, ಕಥಾಸಂಗಮ, ಧರಣಿಮಂಡಲ, ನಮ್ಮನಿಮ್ಮಗೊಳಗೊಬ್ಬ, ಪಿಸುಣಾರಿ ಪ್ರೇಮಪ್ರಕರಣ (ಹಾಸ್ಯ ನಾಟಕ) ಮೊದಲಾದ ಮೌಲ್ಯಾಧರಿತ ರಂಗ ಪ್ರಯೋಗ ಜನಮೆಚ್ಚುಗೆ ಗಳಿಸಿದೆ.

ರಾಜ್ಯ ಮಟ್ಟದ ಶ್ರೇಷ್ಠ ರಂಗಕರ್ಮಿಗಳ ರಂಗ ಪ್ರಯೋಗ ನಡೆಸಿದ್ದೇವೆ. ರಂಗಭೂಮಿ ವ್ಯಕ್ತಿಯನ್ನು ಮನುಷ್ಯನನ್ನಾಗಿ ಪರಿವರ್ತಿಸಿ, ಹೊಸ ಹೊಸ ಸ್ನೇಹಿತರನ್ನು ಬೆಳೆಸುತ್ತಿದೆ. ಬೇರೆ ಬೇರೆ ಕಲಾತಂಡಗಳ ಸ್ನೇಹ ಸಂಪಾದನೆ, ವಿಚಾರ ವಿನಿಮಯ ಸಂಸ್ಥೆಯ ಕಾಯಂ ಪ್ರೇಕ್ಷರಿಗೆ ಹೊಸ ಅಭಿರುಚಿಯ ಶ್ರೇಷ್ಠ ರಂಗ ಪ್ರಯೋಗ, 7 ದಿನದ ನಾಟಕೋತ್ಸವ ನೀಡುವುದರ ಮೂಲಕ ಕಳೆದ ಮೂರು ವರ್ಷಗಳಿಂದ

ರಾಜ್ಯಮಟ್ಟದಲ್ಲಿ ನಾಡಿನ ಅತ್ಯುತ್ತಮ ಕಲಾವಿದರ ಬಾಂಧವ್ಯ ಹೆಚ್ಚಿಸಿಕೊಂಡಿದ್ದೆವೆ. ಪ್ರಸ್ತುತ ನಮ್ಮ ತಂಡವು ಅಂತರಾಷ್ಟ್ರೀಯ ಖ್ಯಾತಿಯ ಹಂಪಿ ಸಾಂಸ್ಕೃತಿಕೋತ್ಸವ ಹಾಗೂ ಖ್ಯಾತ ಆಳ್ವಾಸ್ ನುಡಿಸಿರಿ ಉತ್ಸವ ಮತ್ತು ಕನ್ನಡ ಸಾಹಿತ್ಯ ಪರಿಷತ್ ಸಾಂಸ್ಕೃತಿಕೋತ್ಸವದಲ್ಲಿ ರಂಗ ಪ್ರಯೋಗವನ್ನು ಪ್ರದರ್ಶಿಸಿ ಅಪಾರ ಜನಮೆಚ್ಚುಗೆ ಪಡೆದಿರುತ್ತೇವೆ. ಡಾ. ಶ್ರೀ ಪಾದ ಭಟ್ ಶಿರಸಿ, ಶ್ರೀ ಗಣೇಶ್ ಎಂ., ಯತೀಶ್ ಕೊಳ್ಳೆಗಾಲ, ಯೋಗೀಶ್ ಬಂಕೇಶ್ವರ ಇವರ ನಿರ್ದೇಶನದಲ್ಲಿ ಹಲವಾರು ರಂಗಪ್ರಯೋಗಗಳನ್ನು ಸಿದ್ಧಪಡಿಸಿದ್ದೇವೆ. ಅಲ್ಲದೆ ಇತ್ತೀಚಿನ ದಿನದಲ್ಲಿ ನಿರಂತರ ನಾಟಕದ ಓದು ಕಾರ್ಯಕ್ರಮವನ್ನು ನಡೆಸುವುದರ ಮೂಲಕ ಸಾಹಿತ್ಯದ ಅಭಿರುಚಿ ಬೆಳೆಸುತ್ತಿದೆ.

---

## ವಿಟ್ಲ ಜೋಶಿ ಪ್ರತಿಷ್ಠಾನ(ರಿ) ಪರ್ಕಳ

ರಸಿಕ ರತ್ನ ವಿಟ್ಲ ಗೋಪಾಲಕೃಷ್ಣ ಜೋಶಿಯವರ ಸ್ಮರಣಾರ್ಥ 2008ರಲ್ಲಿ ಕಾರ್ಯ ಆರಂಭಿಸಿದ್ದು ಅನಂತರ ಪ್ರತಿ ವರ್ಷ ಯಕ್ಷಗಾನ ಕ್ಷೇತ್ರದಲ್ಲಿ ಕಲಾವಿದರನ್ನು ಗುರುತಿಸಿ ಜೋಶಿ ಪ್ರಶಸ್ತಿ ನೀಡಲಾಗುತ್ತಿದೆ. ಜೋಶಿಯವರ ಜನ್ಮಶತಾಬ್ಧಿ ವರುಷದಲ್ಲಿ ಅವರ ಬದುಕಿನ ಬಗ್ಗೆ ಪುಸ್ತಕ ಬಿಡುಗಡೆಗೊಳಿಸಿ 12 ಜನ ಯಕ್ಷಗಾನ ಕಲಾವಿದರನ್ನು ಗೌರವಿಸಿದೆ. ಪ್ರತಿವರ್ಷಯಕ್ಷಗಾನ ಬಯಲಾಟ, ತಾಳಮದ್ದಳೆ, ಗೃಹಸಂಗೀತ, ವೀಣಾವಾದನ, ನಾಟಕ, ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಸಹಾಯವಾಗುವ ಹಲವಾರು ಕಾರ್ಯಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಡಾ.ಹರೀಶ್ ಜೋಶಿಯವರ ನೇತೃತ್ವದಲ್ಲಿ ಏಕವ್ಯಕ್ತಿ ಪ್ರದರ್ಶನವನ್ನು ಪ್ರದರ್ಶಿಸಿದ್ದಾರೆ.

---

## ಕರಾವಳಿ ಕಲಾವಿದರ್ (ರಿ) ಮಲ್ಪೆ ಉಡುಪಿ.

ಸುಮಾರು 25 ವರ್ಷಗಳಿಂದ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಕ್ಷೇತ್ರದಲ್ಲಿ ತನ್ನನ್ನು ತಾನು ತೊಡಗಿಸಿಕೊಂಡಿದೆ. ಈ ಸಂಸ್ಥೆ ಆಧುನಿಕ ನಾಟಕಗಳನ್ನು ಆಡುತ್ತಾ ತುಳುಕೂಟ ಉಡುಪಿ ನಾಟಕ ಸ್ಪರ್ಧೆಯಲ್ಲಿ ನಿರಂತರವಾಗಿ 12 ವರ್ಷಗಳಿಂದ ಭಾಗವಹಿಸುತ್ತಾ ಹಲವಾರು ಪ್ರಶಸ್ತಿಗಳನ್ನು ಪಡೆದಿರುತ್ತದೆ. ನೀನಾಸಂ ತರಬೇತುದಾರರಾದ ಜಯರಾಮ್ ನೀಲಾವರ ಇವರ ನಿರ್ದೇಶನದಲ್ಲಿ ತ್ರಿಶಂಕು, ದಿ. ಇನ್ಸ್ಪೆಕ್ಟರ್ ಜನರಲ್, ಮಾಯೊದ ಮುರ್ಗ, ಕೋರ್ಟ್ ಮಾರ್ಷಲ್, ಏಕಲವ್ಯ, ಕಾರ್ಣಿಕದ ಬಾಲೆಲು, ಕಾಂತಬಾರೆ ಬೂದಬಾರೆ ನಾಟಕಗಳನ್ನು ಪ್ರದರ್ಶಿಸಿದೆ. ಇನ್ನೊರ್ವ ನೀನಾಸಂ ತರಬೇತುದಾರರಾದ ಗಣೇಶ್ ಇವರ ನಿರ್ದೇಶನದ ಪಂಚವಟಿ ಎಂಬ ನಾಟಕವನ್ನು ಕನ್ನಡ ಹಾಗೂ ತುಳುವಿನಲ್ಲೂ ಪ್ರದರ್ಶನ ನೀಡಿರುತ್ತಾರೆ. ಬಗ್ಗೊನ ಭಾಗ್ಯ, ಮಂತ್ರದೇವತೆ ಮುಂತಾದ ನಾಟಕಗಳನ್ನು ಬೇರೆ ಬೇರೆ ನಿರ್ದೇಶಕರಿಂದ ಮಾಡಿಸಿರುವುದರೊಂದಿಗೆ ಕೇವಲ ಆಧುನಿಕ ರಂಗ ಪ್ರಯತ್ನಗಳಲ್ಲದೆ ಸಾಮಾಜಿಕ ಹಾಸ್ಯಮಯ ನಾಟಕಗಳನ್ನು ಪ್ರದರ್ಶಿಸಿ ಹಲವು ಪ್ರಶಸ್ತಿಗಳನ್ನು ಪಡೆದುಕೊಂಡಿದೆ. ನಿರಂತರ ರಂಗ ಶಿಬಿರಗಳನ್ನು ಆಯೋಜಿಸುತ್ತಾ ಬಂದಿದೆ.

## ಭಾವನಾ ಫೌಂಡೇಶನ್(ರಿ.) ಹಾವಂಜೆ

(ಭಾವನಾ ಕಲಾವಿದರು, ಭಾವನಾ ಕಲಾಶಾಲೆ, ಭಾವನಾ ಯಕ್ಷ ಬಳಗ)

ಸಂಸ್ಥೆಯ ಹುಟ್ಟು : ಭಾವನಾ ಕಲಾಶಾಲೆ ಎಂಬ ಹೆಸರಿಂದ 2002ರಲ್ಲಿ, ನೋಂದಾಯಿಸಿದ ಭಾವನಾ ಫೌಂಡೇಶನ್ ಸಂಸ್ಥೆ 2015ರಲ್ಲಿ ಹುಟ್ಟು, ವರ್ಷಂಪ್ರತಿ ವಿವಿಧ ಕಲಾವಲಯಗಳಲ್ಲಿನ ಸಾಧಕ ಕಲಾವಿದರನ್ನು ಗುರುತಿಸಿ "ಕಲಾ ಸಿಂಧು" ಪುರಸ್ಕಾರ ಮತ್ತು ರಜತ ಪದಕ ಹಾಗೂ ಗೌರವ ಧನವನ್ನು ನೀಡಿ ಸನ್ಮಾನ. ವಿವಿಧ ಕ್ಷೇತ್ರಗಳಲ್ಲಿನ ಸಾಧಕರನ್ನು ಗುರುತಿಸಿ "ಭಾವನಾ ಪುರಸ್ಕಾರ" ಎಂಬ ಪ್ರಶಸ್ತಿಯನ್ನು ಪತೀ ವರ್ಷ ನೀಡಲಾಗುತ್ತದೆ. ಗ್ರಾಮೀಣ ಭಾಗದ ಮಕ್ಕಳಿಗಾಗಿ ಪ್ರತೀ ವರ್ಷ "ಬಾಲ–ಲೀಲಾ" ಚಿಣ್ಣರ ಬೇಸಗೆ ಶಿಬಿರದ ಆಯೋಜನೆ. ಪ್ರತೀವರ್ಷ ಉಚಿತ ವೈದಕೀಯ ಶಿಬಿರದ ಆಯೋಜನೆ ಮತ್ತು ಊರಿನ ಧಾರ್ಮಿಕ ಕೇಂದ್ರಗಳಲ್ಲಿ ಶ್ರಮದಾನ, ಸ್ವಯಂಸೇವಕರಾಗಿ ಸಂಘದ ಸದಸ್ಯರಿಂದ ಭಾಗವಹಿಸುವಿಕೆ. ಸುಮಾರು 150ರಷ್ಟು ಮಕ್ಕಳಿರುವ ಭಾವನಾ ಕಲಾಶಾಲೆಯಲ್ಲಿ ಚಿತ್ರಕಲೆ, ಸಂಗೀತ, ಕೊಳಲು, ಭರತನಾಟ್ಯ, ನಾಟಕ ಮತ್ತು ಯಕ್ಷಗಾನ ತರಬೇತಿ ಮತ್ತು ಪ್ರದರ್ಶನ. "ನಿಮ್ಮ ಮನೆ ಭಾವನದ ಗಿಡ" ಎನ್ನುವ ಸ್ಲೋಗನ್‌ನಲ್ಲಿ ಹಸಿರು ಕ್ರಾಂತಿಯನ್ನು ನಡೆಸುತ್ತಾ ವನಮಹೋತ್ಸವದ ಆಚರಣೆ ಮತ್ತು ಕಾರ್ಯಕ್ರಮಗಳಲ್ಲಿ ಗಿಡಗಳನ್ನು ಕೊಡುವುದು ಮತ್ತು ನೆಟ್ಟು ಪೋಷಿಸುವುದು. ಭಾವನಾ ಕಲಾವಿದರ ನಾಟಕ ತಂಡದ ಮುಖೇನ ಹಲವಾರು ಕಡೆಗಳಲ್ಲಿ ನಾಟಕಗಳ ಪ್ರದರ್ಶನ, ಭಾವನಾ ಫೌಂಡೇಶನ್ ಮತ್ತು ಕೆಲವು ಸಂಸ್ಥೆಗಳ ಸಹಭಾಗಿತ್ವದಲ್ಲಿ ಚಿತ್ರಕಲಾ ಪ್ರದರ್ಶನ, ಕಮ್ಮಟಗಳು, ಶಿಬಿರಗಳು ಇತ್ಯಾದಿಗಳ ಆಯೋಜನೆ. ರಾಜ್ಯಮಟ್ಟದ ಕಿರುಚಿತ್ರ ಸ್ಪರ್ಧೆಯ ಆಯೋಜನೆ. ಇಷ್ಟಲ್ಲದೇ ವೃದ್ಧಾಶ್ರಮಕ್ಕೆ ದೇಣಿಗೆ ನಿಧಿ, ಊರ ಮಕ್ಕಳಿಗೆ ವಿದ್ಯಾರ್ಥಿ ವೇತನ, ಉನ್ನತ ವ್ಯಾಸಂಗಕ್ಕಾಗಿ ಮಕ್ಕಳಿಗೆ ಸಹಾಯಧನ ಇತ್ಯಾದಿ ಸಮಾಜಮುಖಿ ಕಾರ್ಯಗಳಲ್ಲಿ ಫೌಂಡೇಶನ್ ತೊಡಗಿಸಿಕೊಂಡಿದೆ.

---

## ವನಸುಮ ವೇದಿಕೆ (ರಿ) ಕಟಪಾಡಿ

ಸುಮಾರು 5 ವರ್ಷಗಳಿಂದ ಗ್ರಾಮೀಣ ರಂಗಚಟುವಟಿಕೆಗಳಿಗಾಗಿ ಕಟಪಾಡಿಯ ಗ್ರಾಮೀಣ ಭಾಗದಲ್ಲಿ ಸ್ಥಾಪನೆಗೊಂಡು ರಂಗಚಟುವಟಿಕೆಗಳಲ್ಲಿ ನಿರತವಾಗಿದೆ. ಮಕ್ಕಳ ನಾಟಕ ಹಾಗೂ ಪ್ರಯೋಗ ರಂಗಭೂಮಿಯ ಹಲವಾರು ನಾಟಕಗಳು ತಂಡದಿಂದ ಸಿದ್ಧಗೊಂಡು ಪ್ರದರ್ಶನಗೊಂಡಿವೆ. ಬಾಸುಮ ಕೊಡಗು, ಗುರುರಾಜ ಮಾರ್ಪಳ್ಳಿ, ಗಂಗಾಧರ ಸ್ವಾಮಿ ಮೊದಲಾದ ಹಲವು ಪ್ರಸಿದ್ಧ ನಿರ್ದೇಶಕರುಗಳು ಈ ತಂಡಕ್ಕೆ ನಾಟಕವನ್ನು ನಿರ್ದೇಶಿಸಿದ್ದಾರೆ. ತಂಡದ ನಾಟಕಗಳು ರಾಷ್ಟ್ರದಾದ್ಯಂತ ಪ್ರದರ್ಶನಗಳನ್ನು ಕಂಡಿವೆ. ನಾಟಕ ರಚನೆ, ಕಮ್ಮಟ, ರಂಗ ಗೀತೆಗಾಯನ ಕಮ್ಮಟ ಹಾಗೂ ನಿರಂತರವಾಗಿ ಪ್ರತೀವರ್ಷ ರಂಗೋತ್ಸವವನ್ನು ಆಯೋಜಿಸುತ್ತಿದೆ. ತಂಡದ ಹಲವಾರು ನಾಟಕಗಳು ರಾಷ್ಟ್ರ, ರಾಜ್ಯಮಟ್ಟದಲ್ಲಿ ಪ್ರಶಸ್ತಿಗೆ ಭಾಜನವಾಗಿದೆ. ಸುಮಾರು 30 ಮಂದಿ ಸದಸ್ಯರ ಯುವ ರಂಗನಟರು ತಂಡದ ಯಶಸ್ಸಿಗೆ ನಿರಂತರವಾಗಿ ವರ್ಷಪೂರ್ತಿ ರಂಗಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ.

# ಮಿತ್ರಮಂಡಳಿ ಕೋಟ

1965ರಲ್ಲಿ ಸ್ಥಾಪನೆಗೊಂಡ ಮಿತ್ರ ಮಂಡಳಿಕೂಟ ಇದು ಆರಂಭದಲ್ಲಿ ವಾರ್ಷಿಕ ಮೂರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡುವ ತಂಡವಾಗಿತ್ತು. ಐತಿಹಾಸಿಕ ಪೌರಾಣಿಕ ನಾಟಕಗಳನ್ನಷ್ಟೇ ಆಡುತ್ತಿದ್ದ ತಂಡವು 1990ರ ಬಳಿಕ ಸಾಮಾಜಿಕ ನಾಟಕಗಳ ಕಡೆ ಹೊರಳಿತ್ತು. 1988ರಲ್ಲಿ ಜೋಗದಲ್ಲಿ ನಡೆದ ರಾಜ್ಯಮಟ್ಟದ ನಾಟಕ ಸ್ಪರ್ಧೆಯಲ್ಲಿ ಸಂಘಕ್ಕೆ ಹೆಸರು ತಂದುಕೊಟ್ಟ ಎಚ್ಚಮನಾಯಕ ನಾಟಕಕ್ಕೆ ಪ್ರಥಮ ಬಹುಮಾನ ಲಭಿಸಿತು. ಮೂರು ವರ್ಷ ಟಿಪ್ಪುಸುಲ್ತಾನ ಅಲ್ಲದೆ ವೀರಪುರೂರವ, ಕಲಿಕಂಠೀರವ ನಾಟಕಗಳನ್ನು ಅನೇಕ ಸಹಾಯರ್ಥವಾಗಿ ಪ್ರದರ್ಶನವಾಗಿ ಪ್ರದರ್ಶಿಸಲಾಗಿತ್ತು. ಸಾಮಾಜಿಕ ನಾಟಕಗಳಾದ ಪಂಚಭೂತ, ಅಳಿಯದೇವರು, 36ಅಲ್ಲ63, ಆರಲ್ಲ ಒಂಭತ್ತು, ಪಿಕ್ ಪಾಕೆಟ್, ಆಷಾಢಭೂತಿಗಳಂತ ನಗೆ ನಾಟಕಗಳು ತಂಡಕ್ಕೆ ಕೀರ್ತಿತಂದಿದೆ. 5 ವರ್ಷ(1990–94) ರಾಜ್ಯಮಟ್ಟದ ನಾಟಕ ಸ್ಪರ್ಧೆಗಳನ್ನು ಆಯೋಜಿಸಿದೆ. ಹತ್ತು ವರ್ಷಗಳ ಕಾಲ ಕಾರ್ಕಳ ಶ್ರೀನಿವಾಸ ಉಡುಪ ಸಂಸ್ಮರಣೆಯಾಗಿ ನಾಟಕೋತ್ಸವವನ್ನು ಆಚರಿಸಿದೆ. ನಾಟಕವನ್ನಾಡುವ ತಂಡ ಇದಾದರೂ ಸಾಹಿತ್ಯ ಕೇತ್ರದಲ್ಲೂ ಉಡುಪಿ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನ, ರಾಜ್ಯ ಮಟ್ಟದ ಜನಪದ ಉತ್ಸವ, ಕಾರಂತ ಶತಮಾನೋತ್ಸವ 1997ರಿಂದ ಮಂಗಳೂರು ವಿ.ವಿ.ಮಟ್ಟದ ಕಾಲೇಜು ವಿದ್ಯಾರ್ಥಿ ಗಳಿಗಾಗಿ ವಿದ್ಯಾರ್ಥಿ ಸಮ್ಮೇಳನ ನಿರಂತರವಾಗಿ ನಡೆಸುತ್ತಾ ಬಂದಿದೆ.

2015ರಲ್ಲಿ ಸಂಸ್ಥೆಯ ಸುವರ್ಣಮಹೋತ್ಸವ ಆಚರಣೆ, ತಿಂಗಳಿಗೊಮ್ಮೆ ವೈವಿಧ್ಯಮಯ ಕಾರ್ಯಕ್ರಮಗಳೊಂದಿಗೆ ಸಕ್ರಿಯವಾಗಿರುವ ಸಂಸ್ಥೆ. ಸಂಸ್ಥೆಯ ವಿಶೇಷವೆಂದರೆ ಯಾವುದೇ ಸದಸ್ಯತನದ ಶುಲ್ಕವಿಲ್ಲದೆ ಆಸಕ್ತರನ್ನು ಒಟ್ಟುಗೂಡಿಸಿ ಕಾರ್ಯಕ್ರಮಗಳನ್ನು ಸಂಯೋಜಿಸುವುದು. ಕಲ್ಮಾಡಿ ಕೃಷ್ಣಮೂರ್ತಿ ಐತಾಳ, ಎಚ್.ಶ್ರೀಧರ ಹಂದೆ, ಶ್ರೀ ಚಿತ್ರಪಾಡಿ, ಉಪೇಂದ್ರ ಸೋಮಯಾಜಿಯವರು ಅಧ್ಯಕ್ಷರುಗಳಾಗಿ ಮುನ್ನಡೆಯುತ್ತಿರುವ ಸಂಸ್ಥೆ ಇದು. ಶ್ರೀ ಹರಿಶ್ಚಂದ್ರ ಹೆಬ್ಬಾರ್, ಗುರುವ ಕಾಂಚನ, ಕೆ.ಕೃಷ್ಣಮೂರ್ತಿ ಐತಾಳ, ಎಚ್.ಶ್ರೀಧರಹಂದೆ, ವಿ.ರಂಗಪಯ್ಯ ಹೊಳ್ಳ, ರಾಮಚಂದ್ರ ಐತಾಳ, ರಾಮದೇವ ಐತಾಳ, ಪಾರಂಪಳ್ಳಿ ನರಸಿಂಹ ಐತಾಳ, ಮುಳಿಯ ನರಸಿಂಹ ಮಧ್ಯಸ್ಥ, ಗಿಳಿಯಾರು ಶ್ರೀನಿವಾಸಅಡಿಗ, ಸುಜಯೀಂದ್ರ ಹಂದೆ, ಚಿತ್ರಪಾಡಿ ಉಪೇಂದ್ರ ಸೋಮಯಾಜಿ, ಎಚ್.ಹರಿಕೃಷ್ಣ ಹಂದೆ ಮೊದಲಾದ ಕಲಾವಿದರಿದ್ದು, ಕೋಟದ ಡಾ। ಕಾರಂತ ಥೀಂಪಾರ್ಕ್‌ನಲ್ಲಿ ಗ್ಯಾಲರಿ ಉಳ್ಳ ಸುಮಾರು 300ಜನ ಕುಳಿತುಕೊಳ್ಳುವಂತಹ ಪ್ರೇಕ್ಷಾಂಗಣ, ಬಣ್ಣದ ಕೋಣೆ, ಜನರೇಟರ್ ಸೌಲಭ್ಯ ಇರುವ ರಂಗಮಂದಿರವಿದೆ. ಕಾರ್ಕಡ ರಾಮಚಂದ್ರ ಉಡುಪ, ಕಾರ್ಕಡ ಶ್ರೀನಿವಾಸ ಉಡುಪ, ಮಣೂರು ನರಸಿಂಹ ಮಧ್ಯಸ್ಥ, ರಾಮದೇವ ಐತಾಳ, ಪಾರಂಪಳ್ಳಿ ನರಸಿಂಹ ಐತಾಳ, ಗುಂಡ್ಮಿ ನಾಗೇಶ ಮಯ್ಯ, ಗೋಪಾಲ ಆಚಾರ್ ಸಾಸ್ತಾನ, ಶ್ರೀನಿವಾಸ ಅಡಿಗ, ಚಿತ್ರಪಾಡಿ ಉಪೇಂದ್ರ ಸೋಮಯಾಜಿ ಹೀಗೆ ಹಲವಾರು ನಾಟಕರಚನಾಕಾರರಿದ್ದು ಹಲವಾರು ನಾಟಕಗಳು ಪ್ರಕಟಗೊಂಡಿರುವುದಲ್ಲದೆ ಸಂಸ್ಥೆಯಿಂದಲೂ ಪ್ರದರ್ಶನಗೊಂಡಿವೆ.

## ಸುಮನಸಾ ಕೊಡವೂರು

2001ರಲ್ಲಿ ಕೊಡವೂರು ಪರಿಸರದ ಮನೆಯೊಂದಕ್ಕೆ ಬೆಂಕಿ ತಗುಲಿ ನಷ್ಟ ಉಂಟಾದಾಗ ಅವರ ಸಹಾಯಕ್ಕೆ ನಿಂತ ಸಮಾನ ಮನಸ್ಕರ ತಂಡವೇ "ಸುಮನಸಾ ಕೊಡವೂರು".

ಸಂಸ್ಥೆಯು ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಶೈಕ್ಷಣಿಕವಾಗಿ ಹತ್ತು ಹಲವಾರು ಸೇವೆಯನ್ನು ಮಾಡುತ್ತಾ, ನಾಟಕ ರಂಗದಲ್ಲಿ ಬಹಳಷ್ಟು ಹೆಸರುವಾಸಿಯಾಗಿದೆ. ವರುಷವೊಂದಕ್ಕೆ ಮೂರು ನಾಟಕಗಳನ್ನು ಕಟ್ಟುವ ಕೆಲಸ ನಿರಂತರವಾಗಿ ನಡೆಯುತ್ತಾ ಸದಾ ಹೊಸ ಪ್ರತಿಭೆಗಳಿಗೆ ಅವಕಾಶ ನೀಡುತ್ತಾ ಬಂದಿದೆ. ನಾಡಿನ ಶ್ರೇಷ್ಠ ನಿರ್ದೇಶಕರಾದ ಬಾಸುಮ ಕೊಡಗು, ಜಯರಾಂ ನೀಲಾವರ, ಗುರುರಾಜ್ ಮಾರ್ಪಳ್ಳಿ, ಚೇತನ್ ನೀನಾಸಂ, ಗಣೇಶ್ ರಾವ್ ಎಲ್ಲೂರು, ವಿದ್ದು ಉಚ್ಚಿಲ್, ಕೃಷ್ಣಮೂರ್ತಿ ಕವತ್ತಾರು ಇವರೆಲ್ಲರ ಸೇವೆ ಪಡೆದುಕೊಂಡಿದೆ. ಸಂಸ್ಥೆಯು ಕನ್ನಡ ನಾಟಕಗಳಾದ ತಲೆದಂಡ, ಒಂದು ಬೊಗಸೆ ನೀರು, ಕೋಟಿ ಚೆನ್ನಯ್ಯ, ರಾವಿ ನದಿಯ ದಂಡೆಯಲ್ಲಿ, ಮಹಾಕಾಲ, ಸಂಸಾರ್ ಅಪಾರ್ಟ್‌ಮೆಂಟ್, ದಾರಾಶಿಕೋ, ಭೀಷ್ಮನ ಕೊನೆಯ ದಿನಗಳು, ಮುದ್ರಾ ರಾಕ್ಷಸ, ಅವ್ವ, ರಥಯಾತ್ರೆ ಮುಂತಾದ ನಾಟಕಗಳನ್ನು ಪ್ರಸ್ತುತ ಪಡಿಸಿದೆ. ಹಾಗೂ ಸಂಸ್ಥೆಯು ತುಳು ನಾಟಕಗಳಾದ ಬಂಗಾರ್ದ ಬಂಡಿ, ಕಡಲ ಬರಿತ ಕತ್ತಲೆ, ದಾರಾಶಿಕೋ, ಕೋಟಿ ಚೆನ್ನಯ್ಯ, ಅಜಲ್, ಹಂಗ್‌ದ ಉರ್ಲು, ಗಡುದಾಂತಿ ಉಡಲ್ ಮುಂತಾದ ನಾಟಕಗಳನ್ನು ಪ್ರಸ್ತುತ ಪಡಿಸಿದೆ. ಹಾಗೂ ದೇವೆರ್ ಮುನಿಂಡ, ಕಾಸ್ದಂಚಿ ತೂವೊಡ್ಚಿ, ಎಂಚಲ ಬದುಕೊಲಿ, ಪುರ್ಸೋತ್ತಿಜ್ಜಿ, ಮಸಾಲದೋಸೆ, ದಾಮುನ ದೊಂಬರಾಟ, ತುಂಗ ಭದ್ರ, ಕನಕನ ಕನ ಮುಂತಾದ ಸಾಮಾಜಿಕ ನಾಟಕಗಳನ್ನು ತಯಾರು ಮಾಡಿ ಹಲವಾರು ಪ್ರದರ್ಶನಗಳನ್ನು ನೀಡಿದೆ.

ರಾಜ್ಯ ಮಟ್ಟದ ಕನ್ನಡ ನಾಟಕ ಸ್ಪರ್ಧೆಯಲ್ಲಿ ಎರಡು ಬಾರಿ ಪ್ರಥಮ, ಎರಡು ಬಾರಿ ದ್ವಿತೀಯ ಬಹುಮಾನಗಳನ್ನು ಪಡೆದುಕೊಂಡಿದೆ. ಹಾಗೂ ಹತ್ತು ಹಲವಾರು ವೈಯಕ್ತಿಕ ಬಹುಮಾನಗಳನ್ನು ಪಡೆದುಕೊಂಡಿದೆ. 2010ರಿಂದ ದಶಮಾನೋತ್ಸವದ ನೆನಪಿನಲ್ಲಿ ಆರಂಭಗೊಂಡ ರಂಗಹಬ್ಬವನ್ನು ವರುಷ ವರುಷವು ಆಚರಿಸುತ್ತಾ ದೇಶದ ನಾನಾ ಭಾಗದಿಂದ ರಂಗ ತಂಡಗಳನ್ನು ಆಹ್ವಾನಿಸಿ ಒಂದು ವಾರಗಳ ಕಾಲ ಉಡುಪಿಯ ಜನತೆಗೆ ರಸದೌತಣವನ್ನು ಉಚಿತವಾಗಿ ಉಣಬಡಿಸುತ್ತಾ ಕಲಾಪೋಷಣೆಯನ್ನು ಮಾಡುತ್ತಿದ್ದೇವೆ. ಗ್ರಾಮೀಣ ಕ್ರೀಡೆ ಉಳಿಯಬೇಕೆನ್ನುವ ನಿಟ್ಟಿನಲ್ಲಿ ಪ್ರತಿ ವರ್ಷವೂ ಗ್ರಾಮೀಣ ಕ್ರೀಡೆ ಆಯೋಜಿಸುತ್ತಿದ್ದೇವೆ. ಪ್ರತೀ ವರ್ಷವೂ ಶಾಲಾ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಪರಿಕರಗಳನ್ನು ನೀಡುತ್ತಿದ್ದೇವೆ. ಪ್ರತೀ ವರ್ಷ ವೈದ್ಯಕೀಯ ಶಿಬಿರ, ರಕ್ತದಾನ ಶಿಬಿರ, ದಂತ ವೈದ್ಯಕೀಯ ಶಿಬಿರವನ್ನು ಸುತ್ತಮುತ್ತಲಿನ ಜನರಿಗಾಗಿ ಉಚಿತವಾಗಿ ನಡೆಸುತ್ತಿದ್ದೇವೆ. ಮಾನಸಿಕ ವಿಕಲಚೇತನರ ಶಾಲೆಗೆ ಹಾಗೂ ವಿವಿಧ ವಿದ್ಯಾ ಸಂಸ್ಥೆಗಳಿಗೆ ರಂಗ ತರಬೇತಿಯನ್ನು ನೀಡುತ್ತಾ ಬಂದಿದೆ. ಕ್ಷೇತ್ರದ ದೇವರಾದ ಶಂಕರನಾರಾಯಣ ದೇವರ ಅನುಗ್ರಹದಿಂದ 2012ರಲ್ಲಿ ಜಿಲ್ಲಾಡಳಿತ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದೆ. ನಮ್ಮ ಸಂಸ್ಥೆಯ ಅಧ್ಯಕ್ಷರಾದ ಪ್ರಕಾಶ್ ಜಿ. ಕೊಡವೂರು ಇವರಿಗೆ 2017

ರಲ್ಲಿ ಸಿ.ಜಿ.ಕೆ. ಪ್ರಶಸ್ತಿ ಲಭಿಸಿದೆ. ಸಂಸ್ಥೆಯು ರಾಷ್ಟ್ರದ ರಾಜಧಾನಿಯಾದ ದೆಹಲಿಯಲ್ಲಿ ಸಂಸ್ಥೆಯ "ಕೋಟಿ-ಚೆನ್ನಯ್ಯ" ನಾಟಕವನ್ನು ಪ್ರದರ್ಶಿಸಿ ಕಲಾ ಪ್ರೇಕ್ಷಕರಿಂದ ಮೆಚ್ಚುಗೆಯನ್ನು ಪಡೆದಿದೆ. ಸಂಸ್ಥೆಯು ಪ್ರತಿ ವರ್ಷ ಮುಂಬೈನಲ್ಲಿ ನಡೆಯುವ ಕನ್ನಡ ನಾಟಕ ಸ್ಪರ್ಧೆಯಲ್ಲಿ ಭಾಗವಹಿಸುತ್ತಾ, ಹಲವಾರು ಬಹುಮಾನಗಳನ್ನು ಪಡೆದುಕೊಂಡಿದೆ. ಹಾಗೂ ರಾಜ್ಯದ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಎರಡು ಬಾರಿ ಸಂಸ್ಥೆಯ ನಾಟಕಗಳನ್ನು ಪ್ರದರ್ಶಿಸಿ ಪ್ರತಿಷ್ಠಿತ ನಾಟಕಕಾರರಿಂದ ಪ್ರಶಂಸೆ ಪಡೆದುಕೊಂಡಿದೆ. ಪ್ರಸ್ತುತ ಪ್ರಕಾಶ್ ಜಿ. ಕೊಡವೂರು ಇವರ ಅಧ್ಯಕ್ಷತೆಯಲ್ಲಿ ಸಂಸ್ಥೆಯು ಯಶಸ್ವಿಯಾಗಿ ಮುಂದುವರಿಯುತ್ತಿದೆ.

## ಉಡುಪಿಯ ನೇಪಥ್ಯ ಸೇವಾ ಸಂಸ್ಥೆಗಳು




**ಸೋಮನಾಥ್ ಚಿಟ್ಪಾಡಿ ನೇತೃತ್ವದ "ಪ್ರೇಮಾ ಆರ್ಟ್ಸ್":**

50 ವರ್ಷಗಳ ಇತಿಹಾಸವುಳ್ಳ ಈ ಸಂಸ್ಥೆ ಕರಾವಳಿಯ ಉದ್ದಗಲಗಳಲ್ಲಿ ನಡೆಯುತ್ತಿದ್ದ ಎಲ್ಲಾ ಶಾಲಾ ಕಾಲೇಜುಗಳ ವಾರ್ಷಿಕೋತ್ಸವಗಳ ನಾಟಕಗಳಿಗೆ ಪ್ರಸಾದನ ಹಾಗೂ ವಸ್ತ್ರಾಲಂಕಾರ ನಿರ್ವಹಿಸುತ್ತಿದ್ದರು. ಕ್ರಮೇಣ 70ರ ದಶಕದಲ್ಲಿ ರಂಗಚಟುವಟಿಕೆಗಳಲ್ಲಾದ ಬೆಳವಣಿಗೆಯ ಜೊತೆ ಇವರೂ ಬದಲಾದರು. ಪ್ರಯೋಗ ರಂಗಭೂಮಿಯ ನಾಟಕಗಳ ಪ್ರಸಾಧನ ಮತ್ತು ವಸ್ತ್ರವಿನ್ಯಾಸಗಳಿಗೆ ತೊಡಗಿದರು. ಮುಂದೆ ಉಡುಪಿಯ ಬಹುತೇಕ ರಂಗಸಂಸ್ಥೆಗಳ ನಾಟಕಗಳಿಗೂ ಪ್ರೇಮಾ ಆರ್ಟ್ಸ್ ಪ್ರಸಾಧನವೇ ಫಿಕ್ಸ್ ಆಗಿತ್ತು. ಇಂದಿಗೂ ರಂಗಭೂಮಿ ಉಡುಪಿ ಸಂಸ್ಥೆಯು ಸದಸ್ಯರಾಗಿದ್ದುಕೊಂಡು ಹೊಸತನದೊಂದಿಗೆ ನೇಪಥ್ಯ ಸೇವೆ ಮಾಡುತ್ತಿದ್ದಾರೆ.


**ಬುಡಾನ್ ಸಾಹೇಬ್ ಬಾಷಾ ಸಾಹೇಬ್ ಸಹೋದರರು:** ಬಾರ್ಕೂರಿನಲ್ಲಿ 70ರ ದಶಕದಲ್ಲಿ ಆರಂಭಗೊಂಡ ಬುಡಾನ್ ಸಾಹೇಬರ ವಸ್ತ್ರಾಲಂಕಾರ ಮಳಿಗೆ ಅಲ್ಪ ಸಮಯದಲ್ಲೇ ಬಹು ಬೇಡಿಕೆಯ ಸಂಸ್ಥೆಯಾಯಿತು. ಮುಂದೆ ಉಡುಪಿಯಲ್ಲೂ ಮಳಿಗೆ ಆರಂಭಿಸಿ ಪ್ರಸಾಧನ ಮತ್ತು ವಸ್ತ್ರವಿನ್ಯಾಸ ಸೇವೆಯಲ್ಲಿ ಇಂದು 'ಭಾಷಾ ಆರ್ಟ್ಸ್, ಹೆಸರಿನಲ್ಲಿ ಮುಂಚೂಣಿಯ ಸಂಸ್ಥೆಯಾಗಿ ಬೆಳೆದಿದೆ.

**ವಿಜಯಕುಮಾರ್ ನೇತೃತ್ವದ ಸರಸ್ವತಿ ಆರ್ಟ್ಸ್:** ಕಲ್ಯಾಣಪುರದಲ್ಲಿ 80ರ ದಶಕದಲ್ಲಿ ಆರಂಭವಾದ ಈ ಸಂಸ್ಥೆ ಪ್ರಸಾಧನ, ವಸ್ತ್ರಾಲಂಕಾರ ಜೊತೆಗೆ ಬೆಳಕು, ರಂಗಸಜ್ಜಿಕೆ, ಶಾಮಿಯಾನ ಹೀಗೆ ವಿವಿದ ಸೇವೆಗಳನ್ನು ನಿರ್ವಹಿಸುತ್ತಾ ಜನಪ್ರಿಯರಾದವರು. ಇವರ ಗರಡಿಯಲ್ಲಿ ಪಳಗಿದ ಹಲವು ಪ್ರಸಾಧನ ಕಲಾವಿದರು ವೃತ್ತಿನಿರತರಾಗಿದ್ದಾರೆ.

# ಉಡುಪಿ ಜಿಲ್ಲಾ ರಂಗ ಕಲಾವಿದರು



## ಪಿ. ವಾಸುದೇವ ರಾವ್



ಎಂ.ಎ, ಬಿ.ಎಸ್ಸಿ, ಬಿ.ಎಡ್. ಪದವೀಧರರಾಗಿರುವ ಇವರು ಪದವಿ ಪೂರ್ವ ಕಾಲೇಜು ಪ್ರಾಂಶುಪಾಲರಾಗಿದ್ದು ನಿವೃತ್ತರಾದವರು. ಯುವಕ ಮಂಡಲದಲ್ಲಿ ನಾಟಕಾಭಿನಯಕ್ಕೆ ಕಾಲಿಟ್ಟ ಇವರು, ಉದ್ಯೋಗಿಯಾದ ಮೇಲೆ ಕಾಲೇಜು ವಿದ್ಯಾರ್ಥಿಗಳಿಗಾಗಿ, ಮಹಿಳಾ ಕಾಲೇಜು ಅಭಿಮಾನಿಗಳ ಸಂಘಕ್ಕಾಗಿ 'ಪಂಗನಾಮ', 'ಎಚ್ಚಮನಾಯಕ', 'ಪುತ್ಥಳಿ', 'ಹೆಜ್ಜೆಗಳು', 'ಅಣ್ಣತಮ್ಮ', 'ಲಕ್ಷ್ಮಣರೇಖೆ', 'ಬಿಡುಗಡೆ', 'ಕಲ್ಲನಾಗನ ಕಂಡರೆ' –ಇತ್ಯಾದಿ ನಾಟಕಗಳನ್ನು ನಿರ್ದೇಶಿಸಿದರು. "ರಂಗಭೂಮಿ(ರಿ) ಉಡುಪಿ" ಹವ್ಯಾಸಿ ನಾಟಕ ಸಂಸ್ಥೆಯಲ್ಲಿ 30 ವರ್ಷಗಳಿಂದ ಕೋಶಾಧಿಕಾರಿ, ಪ್ರಧಾನ ಕಾರ್ಯದರ್ಶಿ, ಉಪಾಧ್ಯಕ್ಷ ಇತ್ಯಾದಿ ಹುದ್ದೆಗಳ ನಿರ್ವಹಣೆ ಮತ್ತು ಸಂಸ್ಥೆಯ ಸ್ವಂತ ಕಛೇರಿ ನಿರ್ಮಾಣಕ್ಕೆ ಉಚಿತ ನಿವೇಶನ ಕೊಡುಗೆ ನೀಡಿದ್ದಾರೆ.

ಸಾಹಿತಿಯಾಗಿ ಇವರ 60ಕ್ಕೂ ಹೆಚ್ಚು ಕಥೆ, ಕವನ, ವ್ಯಕ್ತಿಚಿತ್ರಣ, ಲೇಖನ, ಪ್ರವಾಸಕಥನಗಳು ಪ್ರಕಟವಾಗಿವೆ. 'ಶ್ರೀಪ್ರಿಯ ಅನುರೂಪ ಸಹೋದರಿಯರು' ತಂಡ ಸಂಘಟಿಸಿ 100ಕ್ಕೂ ಹೆಚ್ಚು ಸಂಘಸಂಸ್ಥೆಗಳಲ್ಲಿ 'ಸಂಗೀತ ನೃತ್ಯ ವೈವಿಧ್ಯ' ಕಾರ್ಯಕ್ರಮಗಳ ಪ್ರದರ್ಶನ ಏರ್ಪಡಿಸಿರುತ್ತಾರೆ.

ಲಯನ್ಸ್ ಕ್ಲಬ್ ಮತ್ತು ಸಿ.ಎಸ್.ಐ. ಬಿಷಪ್‌ರಿಂದ ಉತ್ತಮ ಶಿಕ್ಷಕ ಪ್ರಶಸ್ತಿ. ಶಿಕ್ಷಣಕ್ಕೆ ನೀಡಿದ ಕೊಡುಗೆಗಾಗಿ 2007ರಲ್ಲಿ ಇಂಟರ್‌ನ್ಯಾಷನಲ್ ಇಂಟೆಗ್ರಿಟಿ, ಪೀಸ್ ಎಂಡ್ ಫ್ರೆಂಡ್‌ಷಿಪ್ ಸೊಸೈಟಿಯಿಂದ "ರಾಜೀವ್‌ಗಾಂಧಿ ಎಕ್ಸಲೆನ್ಸ್ ಅವಾರ್ಡ್" ಪಡೆದಿರುತ್ತಾರೆ.

***ಮೊ: 9880593079***

---

## ಡಾ. ಪಾರ್ವತಿ ಜಿ. ಐತಾಳ್



ಭಂಡಾರ್‌ಕಾರ್ಸ್ ಕಾಲೇಜಿನಲ್ಲಿ ಇಂಗ್ಲಿಷ್ ವಿಭಾಗದ ಮುಖ್ಯಸ್ಥೆಯಾಗಿದ್ದುಕ್ಕೊಂಡೇ, ಜಿಲ್ಲೆಯಲ್ಲಿ ಪ್ರದರ್ಶನಗೊಂಡ ನೂರಾರು ನಾಟಕಗಳ ವಿಮರ್ಶೆಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಿದವರು. ಮಾತ್ರವಲ್ಲದೆ 'ನಾಟಕ ನೋಡು ಬಾ ಪ್ರೇಕ್ಷಕ' ಎಂಬ ನಾಟಕ ವಿಮರ್ಶಾ ಸಂಕಲನವನ್ನು ಪ್ರಕಟಿಸಿರುತ್ತಾರೆ.

ಗುರುದಕ್ಷಿಣೆ (ಮಕ್ಕಳ ನಾಟಕ– ರೂಪಾಂತರಿತ), ಪ್ರಿನ್ಸಿಪಲ್ ಪರಶುರಾಮ್ (ಹಿಂದಿಯಿಂದ ಅನುವಾದ), ಇದು ಯೂನಿವರ್ಸಿಟಿ (ಇಂಗ್ಲಿಷಿಂದ ಅನುವಾದ), ರೈಲುಭೂತ ಮತ್ತು ಇತರ ನಾಟಕಗಳು (5 ಅನುವಾದಿತ ನಾಟಕಗಳು), ಬಿನ್ನೆ ( ತುಳುನಾಟಕ), ತಂತ್ರಗಾರ್ತಿ( ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ವಿಜೇತ ಮಕ್ಕಳ ನಾಟಕ), ಗಂಟೆ ಒಂದಾಯ್ತು (ಮರಾಠಿಯಿಂದ ಅನುವಾದಿತ),

ಭೀಮಪರ್ವ (ಮಲಯಾಳದಿಂದ ಅನುವಾದಿತ)- ಇವರ ಕೃತಿಗಳು. ಆಕಾಶವಾಣಿಗೋಸ್ಕರ ಹಲವಾರು ನಿಲಯನಾಟಕಗಳು ಮತ್ತು ರಾಷ್ಟ್ರೀಯ ನಾಟಕಗಳ ಅನುವಾದಮಾಡಿರುತ್ತಾರೆ. 'ಕಿಸಾಗೌತಮಿ' ಗೀತಾನಾಟಕವನ್ನು ನಿರ್ದೇಶನ ಮಾಡಿರುತ್ತಾರೆ.

---

## ಭಾಗ್ಯಲಕ್ಷ್ಮಿ ಉಪ್ಪೂರು



ಬಿ.ಎ. ಪದವೀಧರೆಯಾದ ಇವರು ಸಂಗೀತ, ನೃತ್ಯ, ಭರತನಾಟ್ಯ, ಅಭಿನಯಗಳಲ್ಲಿ ತೊಡಗಿಸಿಕೊಂಡವರು.

ಉಡುಪಿ ವಿವಿಧ ತಂಡಗಳಲ್ಲಿ ಸುಮಾರು 24 ಕನ್ನಡ ನಾಟಕಗಳಲ್ಲಿ 35 ತುಳು ನಾಟಕಗಳಲ್ಲಿ ಅಭಿನಯ, 50ಕ್ಕೂ ಹೆಚ್ಚು ನಾಟಕಗಳಿಗೆ ಹಿನ್ನಲೆ ಸಂಗೀತ. ಆಟಿಕೆಗೊಂಬೆ, ಕೆರೆಗೆ ಹಾರ, ಪಶ್ಚಾತ್ತಾಪ, ಸಂರಕ್ಷಣೆ, ಭಸ್ಮಾಸುರ ಮೋಹಿನಿ, ಒಗ್ಗಟ್ಟಿನಲ್ಲಿ ಬಲವಿದೆ ಮುಂತಾದ 16 ನಾಟಕಗಳ ನಿರ್ದೇಶನ.

ಪ್ರಶಸ್ತಿಗಳು: 4 ಬಾರಿ ಶ್ರೇಷ್ಠ ನಟಿ ಪ್ರಶಸ್ತಿ, ಗಡಿನಾಡ ಧ್ವನಿ ರಾಜ್ಯಪ್ರಶಸ್ತಿ, ಜಗದ್ಗುರು ಬಸವೇಶ್ವರ ಕಾಯಕಶ್ರೀ ಪ್ರಶಸ್ತಿ, ಅರ್. ಎಂ. ವಿಶ್ವೇಶ್ವರಯ್ಯ ರತ್ನ ಪ್ರಶಸ್ತಿ, ಸಿರಿಗನ್ನಡ ಪ್ರಶಸ್ತಿ, ಬಸವಜ್ಯೋತಿ ರಾಜ್ಯಪ್ರಶಸ್ತಿ, ಅಭಿನಯ ಪ್ರಶಸ್ತಿ, ಶ್ರೀ ದುರ್ಗಾದಿಶಕ್ತಿ ಅನುಗ್ರಹ ಪ್ರಶಸ್ತಿ, ಸಂಗೀತ, ನೃತ್ಯ, ರಂಗಭೂಮಿ ಸಾಧನೆಗಾಗಿ "ಸಕಲ ಕಲಾ ಕುಸುಮ" ಬಿರುದಿಗೆ ಪಾತ್ರರಾಗಿದ್ದಾರೆ.

---

## ಬಿ. ಕೃಷ್ಣ ಕಾರಂತ



ಖ್ಯಾತ ರಂಗನಿರ್ದೇಶಕ ಬಿ.ವಿ.ಕಾರಂತರ ಸಹೋದರ. 1979ರಿಂದ ರಾಷ್ಟಕವಿ ಗೋವಿಂದ ಪೈಸಂಶೋಧನಾ ಕೇಂದ್ರದಲ್ಲಿ ವ್ಯವಸ್ಥಾಪಕರಾಗಿದ್ದರು. 2005ರಲ್ಲಿ ನಿವೃತ್ತರಾದರು.

ನಾಟಕ ಮತ್ತು ಸಂಗೀತ ಆಸಕ್ತಿ ಇರುವ ಇವರು 1977ರಿಂದ ರಂಗಭೂಮಿ(ರಿ) ಉಡುಪಿಯ ಅಜೀವ ಸದಸ್ಯನಾಗಿದ್ದು ಹಲವಾರು ನಾಟಕಗಳಲ್ಲಿ ಅಭಿನಯಿಸಿ, ಕೆಲವು ನಾಟಕಗಳಲ್ಲಿ ಸಂಗೀತ ನಿರ್ದೇಶಕ ರಾಘವೇಂದ್ರ ಭಟ್ ನಿರ್ದೇಶನದಲ್ಲಿ ಹಿನ್ನಲೆ ಗಾಯಕನಾಗಿ ದುಡಿದ ಅನುಭವಿ.

ಕೊಡವೂರಿನ ಶಂಕರನಾರಾಯಣ ನಾಟಕ ಮಂಡಳಿ, ಕಲಾಜಗತ್ತು ಮುಂಬಯಿ ಇವರ ಕೆಲವು ನಾಟಕಗಳನ್ನು ಹಿನ್ನಲೆ ಹಾಡುಗಾರನಾಗಿ ಹಾಡಿದ ಅನುಭವ. 2013ನೇ ಸಾಲಿನ ಉಡುಪಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿಗೆ ಬಾಜನರಾದ ಇವರನ್ನು ಹಲವಾರು ಸಂಘ ಸಂಸ್ಥೆಗಳಿಂದ ಪ್ರಶಸ್ತಿ ಹಾಗೂ ಸನ್ಮಾನ ಪಡೆದಿರುತ್ತಾರೆ.

## ಹೆಚ್. ಗೋವಿಂದ ಉರಾಳ




ಪದವಿ ಪೂರ್ವಪೂರೈಸಿದ ಇವರು ಕಸುಬನ್ನಾಗಿ ಆರಿಸಿಕೊಂಡದ್ದು ಬೇಸಾಯ, ಭಾಗವತಿಕೆ, ಪ್ರಸಾಧನ, ಯಕ್ಷಗಾನ ತರಬೇತಿ, ನಿರ್ದೇಶನಗಳಲ್ಲಿ ನಿರತರಾದವರು.

1986ರಿಂದ ಗಜಾನನ ಯಕ್ಷಗಾನ ಉರಾಳ ಬಳಗದಲ್ಲಿ ಪ್ರಸಾಧನ ಪ್ರಾರಂಭಿಸಿ, 1998ರಿಂದ ನಾಟಕಗಳಿಗೂ ಪ್ರಸಾಧನ ಕಲಾವಿದನಾಗಿ ಸೇವೆ. ಕರಾವಳಿಯ ಬಹುತೇಕ ಶಾಲೆಗಳಲ್ಲಿ ಯಕ್ಷಗಾನ ನಾಟಕಗಳನ್ನು ಆಡಿಸುತ್ತಾ, ಕಲಿಸುತ್ತಾ ಬಂದಿರುವ ಇವರಿಗೆ, 15ಕ್ಕೂ ಹೆಚ್ಚು ಸಂಘ ಸಂಸ್ಥೆಗಳಿಂದ ವಿವಿಧ ಸನ್ಮಾನ, ಗೌರವ, ಪುರಸ್ಕಾರಗಳು ಲಭಿಸಿವೆ. ಕರಾವಳಿ ಯಕ್ಷಗಾನ ಸಮ್ಮೇಳನ ಮಂಗಳೂರು, ವಿಶ್ವ ವಿದ್ಯಾನಿಲಯ ಯಕ್ಷರಂಗಕಲಾರಂಜನಿ(ರಿ) ಬೆಂಗಳೂರು, ಸಪ್ತೋತ್ಸವ, ಕೇರಳ ಸಂಗೀತ ನಾಟಕ ಅಕಾಡೆಮಿ ಚಿಲ್ಡ್ರನ್ ನ್ಯಾಷನಲ್ ಥೀಯೇಟರ್ ಪೆಸ್ಟಿವಲ್ ಹೀಗೆ ಹಲವಾರು ಸಮ್ಮೇಳನಗಳಲ್ಲಿ ಸಂಪನ್ಮೂಲವ್ಯಕ್ತಿಯಾಗಿ ಭಾಗವಹಿಸಿರುತ್ತಾರೆ.

---


## ಎಂ.ಎಸ್.ಭಟ್



1980ರಿಂದ ನೂರಾರು ನಾಟಕಗಳಲ್ಲಿ ನಟಿಸಿರುವ ಇವರು ಸಿನಿಮಾ ಧಾರವಾಹಿ, ಯಕ್ಷಗಾನಗಳಲ್ಲೂ ಅಭಿಯಿಸಿದ ಹಿರಿಯ ಕಲಾವಿದರು. ಶ್ರೀ ಶಂಕರನಾರಾಯಣ ನಾಟಕ ಮಂಡಳಿ ಕೊಡವೂರು, ಯುವಕ ಮಂಡಲ ಕೊಡವೂರು, ರಂಗಭೂಮಿ(ರಿ) ಉಡುಪಿ, ಸಮೂಹ ಉಡುಪಿ, ಉದ್ಯಾವರ ಫ್ರೆಂಡ್ಸ್ ಕ್ಲಬ್, ತೊನ್ಸೆ ಟ್ಯೂನ್ಸ್ ಕೆಮ್ಮಣ್ಣು, ಸುಮನಸಾ ಸಾಂಸ್ಕೃತಿಕ ಸಂಘಟನೆ ಕೊಡವೂರು, ಸನ್ನಿಧಿ ಕಲಾವಿದರು ಪುತ್ತೂರು, ಮಂಗಳೂರು ಆಕಾಶವಾಣಿ, ಅಮೋಘ ಸಂಸ್ಥೆ ಉಡುಪಿ ಹೀಗೆ ಹತ್ತು ಹಲವು ಸುಮಾರು 36 ವರ್ಷಗಳಿಂದ ನಾಟಕಗಳಲ್ಲಿ ಅಭಿನಯಿಸಿದ ಅನುಭವಿ. ನಿರ್ದೇಕರುಗಳಾದ ದಿ|ವೆಂಕಟಾಚಲ ಭಟ್, ಕೆ.ಬಿ. ರಾಮ್, ದಿ|ಆನಂದ ಗಾಣಿಗ, ಶ್ರೀ ರಾಮದಾಸ್, ದಿ|ಉದ್ಯಾವರ ನಾರಾಯಣ ಗಾಣಿಗ, ಉದ್ಯಾವರ ನಾಗೇಶ್, ಉದ್ಯಾವರ ಮಾಧವ ಆಚಾರ್ಯ, ಬಾಸುಮ ಕೊಡಗು, ಆರ್.ಎಲ್. ಭಟ್, ಬಾಲಕೃಷ್ಣ ಕೊಡವೂರು, ವಿನಾಯಕ ಹೊನ್ನಾವರ, ಪ್ರವೀಣಚಂದ್ರ, ಭಾಸ್ಕರ, ಚೇತನ್ ತುಮಕೂರು, ಜಯರಾಂ ನೀಲಾವರ, ಕಾಂಚನ್ ಈಶ್ವರ ಶೆಟ್ಟಿ ಇವರುಗಳ ನಿರ್ದೇಶನದಲ್ಲಿ ರಾಜ್ಯ, ರಾಷ್ಟ್ರ ಹಾಗೂ ವಿದೇಶದಲ್ಲೂ ನಾಟಕ ಪ್ರದರ್ಶನ ನೀಡಿರುತ್ತಾರೆ.

ಯಕ್ಷಗಾನದ ಗುರುಗಾದ ಬನ್ನಂಜೆ ಸಂಜೀವ ಸುವರ್ಣ, ಯು .ದುಗ್ಗಪ್ಪ, ಜಯಂತಕುಮಾರ್ ಇವರ ನಿರ್ದೇಶನದಲ್ಲಿ ಹಲವಾರು ಯಕ್ಷಗಾನ ಪ್ರಸಂಗಗಳಲ್ಲೂ ಪಾತ್ರ ನಿರ್ವಹಿದ ಇವರು ಪ್ರಸ್ತುತ ಸುಮನಸಾ ಸಾಂಸ್ಕೃತಿಕ ಸಂಘಟನೆ ಕೊಡವೂರು ಇಲ್ಲಿಯ ಗೌರವಾಧ್ಯಕ್ಷರು.

## ಬಿ. ಮೋಹನ್ ಕಾರಂತ್



ವೃತ್ತಿಯಲ್ಲಿ ಹೋಟೇಲ್ ಉದ್ಯಮಿಯಾದ ಇವರು ನಟ ನಿರ್ದೇಶಕ ಸಂಘಟಕ. ಬಾಲಕಲಾವಿದನಾಗಿ ಗೆಳೆಯರ ಬಳಗದಲ್ಲಿ ಪುಟ್ಟ ಹುಡುಗಿಯ ಪಾತ್ರ ಮಾಡುವ ಮೂಲಕ ರಂಗಭೂಮಿಗೆ ಪ್ರವೇಶ. ಪ್ರಾಥಮಿಕ ಶಾಲಾ ವಾರ್ಷಿಕೋತ್ಸವದಲ್ಲಿ ಯಜ್ಞಪಶು ನಾಟಕದಲ್ಲಿ ಮುಖ್ಯ ಸ್ತ್ರೀ ಪಾತ್ರ ನಿರ್ವಹಣೆ.

ಪ್ರೌಢಶಾಲೆ, ಕಾಲೇಜು ನಾಟಕಗಳಲ್ಲಿ ಅಭಿನಯಿದ ಇವರು 4 ದಶಕಗಳಿಂದ ಲಾವಣ್ಯದ ಸದಸ್ಯರಾಗಿ, ಉದ್ಭವ, ನಾಯಿಕತೆ, ದೃಷ್ಟಿ, ಕತ್ತಲೆ ದಾರಿದೂರ, ಬೇಲಿ ಮತ್ತು ಹೊಲ, ಪುಟ್ಟಕ್ಕನ ಮೆಡಿಕಲ್ ಕಾಲೇಜು, ಪರಿಹಾರ ಮುಂತಾದ ನಾಟಕಗಳಲ್ಲಿ ಅಭಿನಯಿಸಿದ ಅನುಭವಿ. ಕುಂದಾಪುರದ ರಂಗ ಅಧ್ಯಯನ ಕೇಂದ್ರದಲ್ಲಿ ಸಂಕ್ರಾಂತಿ, ತಲೆದಂಡ, ಮ್ಯಾಕ್‌ಬೆತ್, ಜನಶತ್ರು ಇವರು ನಟಿಸಿದ ಪ್ರಮುಖ ನಾಟಕಗಳು. ರಾಜ್ಯಮಟ್ಟದ ನಾಟಕ ಸ್ಪರ್ಧೆಯಲ್ಲಿ ದೃಷ್ಟಿ ನಾಟಕದ ಅಂಧ್ರಕ ಪಾತ್ರಕ್ಕೆ ವಿಶೇಷ ಮೆಚ್ಚುಗೆ ದೊರೆತಿದೆ. ಹೂವುಗಳು ಅರಳಲಿ ನಾಟಕವನ್ನು ನಿರ್ದೇಶಿಸಿರುವ ಇವರು ಉತ್ತಮ ಸಂಘಟಕರಾಗಿ ಬೈಂದೂರಿನ ಪ್ರಮುಖ ಸಂಸ್ಥೆ ಸಾರ್ವಜನಿಕ ಶಾರದೋತ್ಸವ ಸಮಿತಿಯಲ್ಲಿ 20 ವರ್ಷಗಳ ಕಾಲ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ. ಇವರ ರಂಗಸಾಧನೆಯನ್ನು ಗುರುತಿಸಿ ಜೇಸಿಸ್, ಲಾವಣ್ಯ(ರಿ)ಬೈಂದೂರು ಗುರುತಿಸಿ ಸನ್ಮಾನಿಸಿದೆ.

**ಮೊ:9964379774**

---

## ಇಂದಿರಾ ಹಾಲಂಬಿ




ನಾಟಕಕಾರರಾದ ಇವರು, ಬಾಲ್ಯದಿಂದಲೂ ಕತೆ, ಕವನ, ನಾಟಕ, ಸಾಹಿತ್ಯದಲ್ಲಿ ಹೆಚ್ಚಿನ ಆಸಕ್ತಿ ಹೊಂದಿದವರು. ವೃತ್ತಿಯಲ್ಲಿ ಶಿಕ್ಷಕಿಯಾಗಿ ಸರಕಾರಿ ಶಾಲೆಯಲ್ಲಿ ಕೆಲಸ ಮಾಡುವಾಗ ಮಕ್ಕಳಿಗೆ ಅವಶ್ಯಕ ಮತ್ತು ಉಪಯುಕ್ತವಾದ ವೈವಿಧ್ಯಪೂರ್ಣ ಸಾಹಿತ್ಯ ರಚನೆ, ನಾಟಕಗಳ ರಚನೆ, ಹಾಡುಗಳ ತರಬೇತಿ, ನಿರ್ದೇಶನದ ಜೊತೆ ಜೊತೆಗೆ 1980ರಲ್ಲಿ ಆತ್ರಾಡಿಯಲ್ಲಿ ಸಂದೀಪ ಸಾಹಿತ್ಯ ಪ್ರಕಾಶನ ಪ್ರಾರಂಭಿಸಿ ನಾಡಿನ ಅನೇಕ ಬರಹಗಾರರ ಕೃತಿಗಳನ್ನು ಪ್ರಕಟಿಸಿರುತ್ತಾರೆ. ಇದುವರೆಗೆ ಸುಮಾರು 115 ಕ್ರತಿಗಳು ಪ್ರಕಟಗೊಂಡಿದ್ದು ಹಲವಾರು ಬಹುಮಾನಿತ ಕೃತಿಗಳಾಗಿವೆ. 60 ಸ್ವಂತ ಕೃತಿಗಳನ್ನು ಬರೆದಿರುವ ಇವರ ಸಾಧನೆಗೆ ಹಲವಾರು ಪ್ರಶಸ್ತಿ, ಸನ್ಮಾನಗಳಲ್ಲದೆ ಕುಂದಾಪುರ ತಾಲೂಕಿನ 8ನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವ ಲಭಿಸಿದೆ. ಆಕಾಶವಾಣಿ, ಟಿ.ವಿ ಚಾನಲಗಳಲ್ಲಿ ಕತೆ, ಕವನ ಸಂದರ್ಶನ ಪ್ರಸಾರ. ಸಾಹಿತ್ಯ, ಸಾಂಸ್ಕೃತಿಕ ಸಂಘ ಸಂಸ್ಥೆಗಳಲ್ಲಿ ಸಕ್ರಿಯ ಪದಾಧಿಕಾರಿ. *ಪ್ರಕಟಿತ ನಾಟಕಗಳು:* ಶುಭದೃಷ್ಟಿ, ಭಕ್ತಪ್ರಹ್ಲಾದ, ಎಸಳುಗಳು, ಚಂದ್ರಹಾಸ, ರಾಣಿಚೆನ್ನಮ್ಮ, ಭೂಕೈಲಾಸ, ವಿದ್ಯುನ್ಮತಿ ವಿವಾಹ, ಪ್ರತಿಜ್ಞೆ, ಶ್ರೀ ಕೃಷ್ಣದೇವರಾಯ, ಋಣ ಮುಕ್ತರಲ್ಲ,

ದೇವ ಮಾನವ, ದೃಷ್ಟಿ, ಪಂಚಮುಖಿ, ಅವತರಣ, ಬಾಂಧವ್ಯ, ಭಕ್ತ ಪರಾಧೀನ
ಚಿರಂತನ & ವಿನೂತನ– ಸಂಪಾದಿತ–10 ಪೌರಾಣಿಕ ನಾಟಕಗಳು
ಯುದ್ಧ ವಿರಾಮ –4 ಪೌರಾಣಿಕ ನಾಟಕಗಳ ಸಂಗ್ರಹ
**ಮಕ್ಕಳ ನಾಟಕಗಳು** ದೇವರ ದಾರಿ, ತೆರೆಯ ಮರೆವು, ಸಿಂಧೂ ತಿರುಗಿ ಬಂದಳು, ಒಂದಲ್ಲ ಮತ್ತೊಂದು, ಮಿಂಚಿನ ತೋರಣ, ಅವಳಿ ಜವಳಿ ನಾಟಕ.

---

## ಪೆರ್ಡೂರು ಪ್ರಭಾಕರ ಕಲ್ಯಾಣಿ




1960ರಲ್ಲಿ ಜನಿಸಿದ ಇವರು, ಹನ್ನೊಂದನೆ ವಯಸ್ಸಿನಲ್ಲಿ ಪುನರ್ಜನ್ಮ ಕನ್ನಡ ನಾಟಕದಲ್ಲಿ ಲಕ್ಷ್ಮಯ್ಯ ಪಾತ್ರ ನಿರ್ವಹಿಸಿ ಪ್ರಥಮ ಸ್ಥಾನದೊಂದಿಗೆ ರಂಗಭೂಮಿ ಪ್ರವೇಶ. ಕನ್ನಡ ಮತ್ತು ತುಳು ರಂಗಭೂಮಿಯ ಹವ್ಯಾಸಿ ಕಲಾವಿದನಾಗಿ, ನಿರ್ದೇಶಕನಾಗಿ ಸುಮಾರು 350 ನಾಟಕಗಳಲ್ಲಿ ಕೆಲಸ ಮಾಡಿದ ಅನುಭವಿ. ಕರ್ನಾಟಕ ನಾಟಕ ಅಕಾಡೆಮಿ ಬೆಂಗಳೂರು ಇದರ ಉಡುಪಿ ಜಿಲ್ಲಾ ಸಂಚಲನಾ ಸಮಿತಿಯ ಸದಸ್ಯನಾಗಿ, ತುಳು ನಾಟಕ ಕಲಾವಿದರ ಒಕ್ಕೂಟ (ರಿ) ಮಂಗಳೂರು ಇದರ ಉಪಾಧ್ಯಕ್ಷರಾಗಿ ಕಾರ್ಯ ನಿರ್ವಹಣೆ. ಹಲವರು ನಾಟಕ ಸ್ಪರ್ಧೆಗಳಲ್ಲಿ ಉತ್ತಮ ನಟ, ಉತ್ತಮ ನಿರ್ದೇಶಕ, ಉತ್ತಮ ನಾಟಕ ರಚನೆಗೆ ಬಹುಮಾನ. ಇವರು ನಟಿಸಿ ನಿರ್ದೇಶಿಸಿದ ಕೋಣ ಕೋದಂಡ ಕನ್ನಡ ನಾಟಕ ದೂರದರ್ಶನ ಬೆಂಗಳೂರಿಂದ ಪ್ರಸಾರ. ಅಲ್ಲದೇ 2010ರಲ್ಲಿ ದೂರದರ್ಶನ ಚಂದನದ ಬೆಳಗು ಕಾರ್ಯಕ್ರಮದಲ್ಲಿ ರಂಗಭೂಮಿಯ ಬಗ್ಗೆ ಸಂದರ್ಶನ ಪ್ರಸಾರ. ಕಳೆದ 25 ವರ್ಷಗಳಿಂದ ಕೂಡ್ಡಿ ಕಲಾವಿದೆರ್ ಪೆರ್ಡೂರು ಇದರ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿರುವ ಇವರಿಗೆ 2008ರಲ್ಲಿ ಉಡುಪಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಅಲ್ಲದೇ ಹಲವಾರು ಸಂಘ ಸಂಸ್ಥೆಗಳಿಂದ ಪ್ರಶಸ್ತಿ ಪುರಸ್ಕಾರ ಸನ್ಮಾನಗಳು ಲಭಿಸಿವೆ.ಕನ್ನಡ ಮತ್ತು ತುಳು ನಾಟಕಗಳಲ್ಲದೆ ಯಕ್ಷಗಾನಗಳಲ್ಲೂ ಪಾತ್ರ ನಿರ್ವಹಿಸಿರುತ್ತಾರೆ. 2018 ನೇ ಸಾಲಿನ ಕರ್ನಾಟಕ ನಾಟಕ ಅಕಾಡೆಮಿ ವಾರ್ಷಿಕ ಪ್ರಶಸ್ತಿಗೆ ಬಾಜನರಾಗಿದ್ದಾರೆ.

***ದೂರವಾಣಿ : 9945491572***

---

## ರಾಜು.ಬಿ.ತೋನ್ಸೆ



ತನ್ನ 12ನೇ ವಯಸ್ಸಿನಲ್ಲಿ ಶಾಲೆಯ ಮುಖ್ಯೋಪಾಧ್ಯಾಯರಾದ ದಿ|ಗೋಪಾಲಭಟ್ಟರ ನಿರ್ದೇಶನದಲ್ಲಿ ಅಕ್ಷಯ ಪಾತ್ರೆ ಕಿರು ನಾಟಕದ ಮೂಲಕ ರಂಗಭೂಮಿಗೆ ಕಾಲಿಟ್ಟರು.


ಕುಟುಂಬದ ಆರ್ಥಿಕ ಪರಿಸ್ಥಿತಿ ಸರಿ ಇರದೆ ಇದ್ದುದರಿಂದ ವಿದ್ಯಾಭ್ಯಾಸ ನಿಲ್ಲಿಸಿ ಮುಂಬಾಯಿಗೆ ತೆರಳಿದರು. ಅಲ್ಲಿ ರಾತ್ರಿ ಶಾಲೆಯಲ್ಲಿ ಓದುವಾಗಲೇ ಚೆಂಬೂರಿನಲ್ಲಿ ತುಳುನಾಡ ಮಿತ್ರ

ಮಂಡಳಿ ಎಂಬ ಸಂಸ್ಥೆಯನ್ನು ಹುಟ್ಟು ಹಾಕಿ ಅನೇಕ ನಾಟಕಗಳನ್ನು ನಿರ್ದೇಶನ ಮಾಡಿ ತಾನೂ ಅಭಿನಯಿಸಿದರು. ಆ ದಿನಗಳಲ್ಲಿ ಸದಾನಂದ ಸುವರ್ಣ, ಕೆ.ಕೆ. ಸುವರ್ಣ, ವೆಂಕಟರಾವ್ ತಲಗೇರಿ, ಅನಂತ್ ನಾಗ್ ಇವರನ್ನೊಳಗೊಂಡ ಕನ್ನಡ ಕಲಾಕೇಂದ್ರ ಸಂಸ್ಥೆಯಿಂದ ಕನ್ನಡ ನಾಟಕಗಳೇ ವಿಜೃಂಭಿಸುತ್ತಿದ್ದರೂ ತುಳು ನಾಟಕ ಪ್ರೇಮಿಯಾದ ಇವರು ವಾಮನ್ ರಾಜ್, ಸದಾಶಿವ ಸಾಲ್ಯಾನ್, ಎಚ್ಕೆ ಶೆಟ್ಟಿ, ರವಿ ಮಂಜೇಶ್ವರ, ಚಂದ್ರಪ್ರಭ, ಅನುಸೂಯ, ಜೂಲಿಯಟ್ ಪಿರೇರಾ ಮುಂತಾದ ಉತ್ಸಾಹಿ ಕಲಾವಿದರನ್ನು ಸೇರಿಸಿ ಹಲವಾರು ತುಳು ನಾಟಕಗಳನ್ನು ನಿರ್ದೇಶನ ಮಾಡಿದ್ದಲ್ಲದೆ 1971ರಲ್ಲಿ ತಾನೇ ರಚಿಸಿದ ಜಲಜ ಮಗಲೆಗ್ ಜಪಾನ್ದ್ ಕಂಡನಿ 12 ದಿನಗಳ ನಾಟಕ ಪ್ರದರ್ಶನಗಳಲ್ಲಿ ಮೊದಲ ಸ್ಥಾನ ಗಳಿಸಿತು

ಕಾರಾಣಾಂತರಗಳಿಂದ ಸ್ವಂತ ಊರಿಗೆ ಬಂದು 1975ರಲ್ಲಿ ಕೆಮ್ಮಣ್ಣಿನಲ್ಲಿ ಬೊಗ್ಗು ಬೊಂಬಾಯಿಗ್ ಪೋಯೆ ನಾಟಕವನ್ನು ಕಾಪು ಪೊಲಿಪಿನ ಶ್ರೀ ಲಕ್ಷ್ಮೀ ನಾರಾಯಣ ಕಲಾವೃಂದದ ಸದಸ್ಯರ ಸಹಕಾರದಿಂದ ಹುಬ್ಬಳ್ಳಿ, ಬೆಳಗಾಂ, ಬೆಂಗಳೂರಲ್ಲಿ ಪ್ರದರ್ಶನ ನೀಡಿದರು. ಕನ್ನಡ ಚಿತ್ರರಂಗದ ದಿ| ಸದಾಶಿವ ಬಹ್ಮಾವರ, ಡಿಂಗ್ರಿ ನಾಗರಾಜ್, ನೈನಾ ಇವರ ನಿರ್ದೇಶನದ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಹಲವಾರು ಕಿರುಚಿತ್ರಗಳು ಹಾಗೂ ಮಹಾನದಿ, ಕಡಲ ಮಗೆ ಚಿತ್ರಗಳಿಗೆ ಕಥೆ ಸಂಭಾಷಣೆ ಬರೆದಿರುತ್ತಾರೆ.

---

## ಯು. ಶ್ರೀನಿವಾಸ ಪ್ರಭು ಉಪ್ಪುಂದ



ಲಾವಣ್ಯ(ರಿ)ಬೈಂದೂರು ಇದರ ಸಂಸ್ಥಾಪಕ ಅಧ್ಯಕ್ಷರಾಗಿದ್ದ ಇವರು ಪ್ರಸ್ತುತ ಗೌರವಾಧ್ಯಕ್ಷರು. ಸಿಂಡಿಕೇಟ್ ಬ್ಯಾಂಕ್ ಉದ್ಯೋಗಿಯಾಗಿ ಸ್ವಯಂನಿವೃತ್ತರು. ನಟನೆ, ನಿರ್ದೇಶನ, ಸಂಗೀತ ನಿರ್ದೇಶಕ, ಸಂಘಟಕರಾಗಿ ಗುರುತಿಸಿಕೊಂಡವರು. ಬಾಲ್ಯದಲ್ಲಿಯೇ ಹರಿಕಥೆ, ಭಜನೆ, ಯಕ್ಷಗಾನಗಳಲ್ಲಿ ನಟಿಸಿ ಮುಂದೆ ಬ್ಯಾಂಕ್ ಉದ್ಯೋಗಿಯಾಗಿ ಅಯಾ ಊರಿನ ಸಹದ್ಯೋಗಿಗಳನ್ನು, ಸ್ನೇಹಿತರನ್ನು ಸೇರಿಸಿಕೊಂಡು ಕನ್ನಡ, ಕೊಂಕಣಿ ನಾಟಕಗಳನ್ನು ಮಾಡುತ್ತಾ ಬಂದವರು. ಸಂಗೀತ ಶಾಲೆಯಲ್ಲಿ ಸಂಗೀತದ ಜೊತೆ ಸಂಗೀತ ವಾದ್ಯಗಳ ಕಲಿಕೆ. ಲಾವಣ್ಯದ ಸ್ಥಾಪಕಾಧ್ಯಕ್ಷರಾಗಿ 40 ವರ್ಷಗಳಿಂದ ಸಕ್ರಿಯವಾಗಿ ಮುನ್ನಡೆಸುತ್ತಾ ಮೀನಿನ ಹೆಜ್ಜೆ, ಸಮಯಕ್ಕೊಂದು ಸುಳ್ಳು, ಯಾರು ನನ್ನವರು, ಎಣ್ಣುದೊಂದು ಆಪದೊಂದು, ತ್ಯಾಗಿ, ಕಂಬನಿ ಹೀಗೆ 30ಕ್ಕೂ ಹೆಚ್ಚು ನಾಟಕಗಳಲ್ಲಿ ಅಭಿನಯ. ರೊಟ್ಟಿ ಋಣ, ನಾವಿಲ್ಲದಾಗ, ಸತ್ಯ ಹರಿಶ್ಚಂದ್ರ, ಕಲೆಯ ಕೊಲೆ, ಮುಳ್ಳಿನ ಹಾಸಿಗೆ, ಊರುಗೋಲು, ರತ್ನ ಮಾಂಗಲ್ಯ ಹೀಗೆ 250ಕ್ಕೂ ನಾಟಕಗಳ ನಿರ್ದೇಶನ. ಲಾವಣ್ಯದಲ್ಲಿ ಮಕ್ಕಳರಂಗಭೂಮಿಗೆ ಒತ್ತು ಕೊಡುತ್ತ ಕಳೆದ 25 ವರ್ಷಗಳಿಂದ ಏಕಲವ್ಯ, ಡಾಣಾಡಂಗುರ, ಶಿವಭೂತಿ, ನನ್ನ ಗೋಪಾಲ, ಗೋವಿನ ಹಾಡು ಮುಂತಾದ ಮಕ್ಕಳ ನಾಟಕಗಳು, ನಾಯಿಕತೆ, ದೃಷ್ಟಿ, ಉದ್ಭವ, ಚೋರ ಚರಣದಾಸ ಹೀಗೆ 500ಕ್ಕೂ ಹೆಚ್ಚು ನಾಟಕಗಳಿಗೆ ಸಂಗೀತ ಸಂಯೋಜನೆ ಮಾಡಿರುತ್ತಾರೆ.

ರಾಜ್ಯಮಟ್ಟದ ನಾಟಕ ಸ್ಪರ್ಧೆಗಳಲ್ಲಿ 3 ಬಾರಿ ಶ್ರೇಷ್ಠ ನಿರ್ದೇಶಕ ಸಂಗೀತಕ್ಕೆ 18 ಪಾರಿತೋಷಕಗಳನ್ನು ಪಡೆದಿರುತ್ತಾರೆ. 2013ನೇ ಸಾಲಿನ ಉಡುಪಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, ಅಲ್ಲದೇ ಹಲವಾರು ಸಂಸ್ಥೆಗಳಿಂದ, ವಿದ್ಯಾಲಯಗಳಿಂದ ಸನ್ಮಾನ, ಡಾ||ಶಿವರಾಮ ಕಾರಂತ ಸದ್ಭಾವನ ಪ್ರಶಸ್ತಿಗಳು ಲಭಿಸಿವೆ.

---

## ಬಿ. ಮಾಧವರಾವ್




70–90ರ ದಶಕದಲ್ಲಿ ರಂಗಭೂಮಿಯಲ್ಲಿ ಸಕ್ರಿಯರಾಗಿದ್ದ ಇವರು ಈಗ ನಾಟಕದ ಪ್ರೇಕ್ಷಕ. ಆರಂಭಿಕ ಪರದೆ ನಾಟಕಗಳಲ್ಲಿ ಪ್ರಧಾನ ನಟನಾಗಿ, ಪೋಷಕ ನಟನಾಗಿ, ನಿರ್ದೇಶಕನಾಗಿ, ಸುತ್ತಮುತ್ತಲಿನ ಹಳ್ಳಿಗಳ ಆಸಕ್ತರಿಗೆ, ಯುವಕಮಂಡಲದ ಸದಸ್ಯರಿಗೆ, ಶಾಲಾ ಕಾಲೇಜುಗಳಿಗೆ ಪ್ರೋತ್ಸಾಹ ನೀಡುತ್ತಾ ಬಂದಿದ್ದಾರೆ. ರಥಬೀದಿ ಗೆಳೆಯರು ಬೈಂದೂರು, ಗೆಳೆಯರ ಬಳಗ ಬೈಂದೂರು, ಯುವಕ ಮಂಡಲ ಗಂಗೊಳ್ಳಿ, ಜೋಗ ಕಾರಡಿಗಿ, ಹೊಸನಗರ ಬಾರಕೂರು, ಕುಂದಾಪುರ ಕೊಲ್ಲೂರು ತಂಡಗಳಲ್ಲಿ ಪ್ರದರ್ಶನಗೊಂಡ ವ್ಯಾದಿಗೆ ತಕ್ಕ ವೈದ್ಯ, ಸಾಕು ಮಗಳು, ಪುತ್ಥಳಿ, ಆನಂದ ನಿವಾಸ, ಸುಖ ನಿವಾಸ, ವಿವೇಕಾನಂದ ಕಂಡ ಸತ್ಯ ಹರಿಶ್ಚಂದ್ರ, ದಮಯಂತಿ, ರೊಟ್ಟಿ ಋಣ, ಸಮಯಕ್ಕೊಂದು ಸುಳ್ಳು ಮುಂತಾದ ನಾಟಕಗಳಲ್ಲಿ ಅಭಿನಯಿಸಿರುತ್ತಾರೆ. ಹಲವಾರು ನಾಟಕಗಳಿಗೆ ತಬಲ ವಾದಕರಾಗಿ, ಗಾಯಕರಾಗಿ, ಪ್ರಸಾಧನ ಕಲಾವಿದರಾಗಿ ಕೆಲಸ ಮಾಡಿದ ಅನುಭವಿ. ಮಿತ್ರ ಮಂಡಳಿ ಪಡುವರಿಯ ತಂಡಕ್ಕೆ ರಕ್ತರಾತ್ರಿ, ಹೂವು ಮುಳ್ಳು, ದಮಯಂತಿ, ಸಾಹುಕಾರ ರಂಗಣ್ಣ, ಶ್ರೀರಾಮ ಅವತಾರ ಮುಂತಾದ ನಾಟಕಗಳ ನಿರ್ದೇಶನ. ಭೀಷ್ಮ ವಿಜಯ, ಭಸ್ಮಾಸುರ ಮೋಹಿನಿ, ಬೇಡರ ಕಣ್ಣಪ್ಪ, ಶ್ರೀಕೃಷ್ಣ ಗಾರುಡಿ, ವೀರ ಮಣಿ ಕಾಳಗ, ದ್ರೌಪದಿ ಪ್ರತಾಪ ರುಕ್ಮಿಣಿ ಸ್ವಯಂವರ ಮೊದಲಾದ ಯಕ್ಷಗಾನಗಳಲ್ಲಿ ಅಭಿನಯ. ಲಾವಣ್ಯ(ರಿ)ಬೈಂದೂರು, ಸುರಭಿ(ರಿ)ಬೈಂದೂರು, ಅಂಬೇಡ್ಕರ್ ಯುವಕ ಸಂಘ ಬೈಂದೂರು, ರೋಟರಿ ಕ್ಲಬ್ ಬೈಂದೂರು, ಭಾರತೀಯ ಯುನೆಸ್ಕೋ ಕ್ಲಬ್ ಬೈಂದೂರು, ಕರ್ನಾಟಕ ನಾಟಕ ಅಕಾಡೆಮಿ ಜಿಲ್ಲಾ ನಾಟಕೋತ್ಸವಗಳಲ್ಲಿ ಇವರ ಸಾಧನೆಗೆ ಸನ್ಮಾನ ಸಂದಿದೆ.

***ಮೊ: 8762369092***

---

## ಎಂ.ನಂದಕುಮಾರ್



ವೃತ್ತಿಯಲ್ಲಿ ರಾಷ್ಟ್ರೀಕೃತ ಬ್ಯಾಂಕಿನ ನಿವೃತ್ತ ಅಧಿಕಾರಿ. ಪ್ರಾಥಮಿಕ ಶಾಲಾ ವಿದ್ಯಾರ್ಥಿಯಾಗಿದ್ದಾಗಲೇ ಶಾಲಾ ವಾರ್ಷಿಕೋತ್ಸವಗಳಲ್ಲಿ ಕನ್ನಡ ಮತ್ತು ತುಳು ನಾಟಕಗಳಲ್ಲಿ ಛದ್ಮವೇಷಗಳಲ್ಲಿ ಪ್ರಥಮ ಬಹುಮಾನಗಳನ್ನು ತನ್ನದಾಗಿಸಿಕೊಂಡ ರಂಗಕಲಾವಿದ. ರಂಗಭೂಮಿ(ರಿ)ಉಡುಪಿ ತಂಡದಲ್ಲಿ ಖ್ಯಾತ ನಿರ್ದೇಶಕರುಗಳಾದ

ಪ್ರಸನ್ನ, ಶ್ರೀನಿವಾಸ ಮೂರ್ತಿ, ಜೀವನ್ ರಾಂ ಸುಳ್ಯ, ಬಾಸುಮ ಕೊಡಗು, ಎಸ್ ಆರ್. ಬಲ್ಲಾಳ್, ಪ್ರದೀಪ್‌ಚಂದ್ರ ಕುತ್ಪಾಡಿ, ರವಿರಾಜ್ ಎಚ್.ಪಿ. ಇವರುಗಳ ನಿರ್ದೇಶನದಲ್ಲಿ ರಾಜ್ಯಾದ್ಯಂತ ಹಾಗೂ ಹೊರ ರಾಜ್ಯಗಳಲ್ಲೂ ಸುಮಾರು 25ಕ್ಕೂ ಹೆಚ್ಚು ನಾಟಕಗಳಲ್ಲಿ ಅಭಿನಯಿಸಿ ಪ್ರದರ್ಶನ ನೀಡಿದ ಅನುಭವಿ. ರಂಗಭೂಮಿ (ರಿ) ಉಡುಪಿಯ ಪ್ರಮುಖ ನಾಟಕಗಳಾದ ಹೇಮಂತ್, ಬಾಸಭಾರತ, ವಾರ್ಡ್‌ನಂಬರ್ 6, ನಾಗಮಂಗಲ, ರಾವಿ ನದಿಯ ದಂಡೆಯ ಮೇಲೆ, ದಂಗೆಯ ಮುಂಚಿನ ದಿನಗಳು, ಮುಂತಾದ ನಾಟಕಗಳಲ್ಲಿ ನಟನಾಗಿ ಅಭಿನಯಿಸಿದ್ದಲ್ಲದೆ ರಂಗಭೂಮಿ(ರಿ) ಸಂಸ್ಥೆಯಲ್ಲಿ ಸುಮಾರು 30 ವರ್ಷಗಳಿಂದ ಸದಸ್ಯನಾಗಿ, 2ಬಾರಿ ಜೊತೆ ಕಾರ್ಯದರ್ಶಿಯಾಗಿ ಹಾಲಿ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದವರು. ಕನ್ನಡ ತುಳು ಸಿನಿಮಾಗಳಲ್ಲಿ ಹಾಗೂ ಕಿರುತೆರೆ ಧಾರವಾಹಿಗಳಲ್ಲಿ ಕಲಾವಿದನಾಗಿ ನಟಿಸಿದ ಅನುಭವ.

---

## ಪ್ರಸನ್ನ ರಾವ್



ಶಾಲಾ ವಿದ್ಯಾರ್ಥಿಯಾಗಿದ್ದಾಗಲೇ ಮುಖಕ್ಕೆ ಬಣ್ಣ ಹಚ್ಚಿ ನಾಟಕರಂಗ ಪ್ರವೇಶ ಮಾಡಿದವರು. 20 ವರ್ಷಗಳಿಂದ ಹವ್ಯಾಸಿ ರಂಗಭೂಮಿಯ ಕಲಾವಿದನಾಗಿ 150ಕ್ಕೂ ಹೆಚ್ಚು ನಾಟಕಗಳಲ್ಲಿ ಅಭಿನಯಿಸಿದ ಅನುಭವ. ಕೊಡ್ದಿ ಕಲಾವಿದೆರ್ ತಂಡ ಕಲಾವಿದನಾಗಿ ಹಲವಾರು ನಾಟಕ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನ ಪಡೆದಿರುತ್ತಾರೆ.

ರಂಗ ನಿರ್ದೇಶಕರಾದ ಬಾಸುಮ ಕೊಡಗು, ರಮೇಶ್ ಬೇಗಾರ್, ಪ್ರಭಾಕರ ಕಲ್ಯಾಣಿ ಇವರ ನಿರ್ದೇಶನದ ಹಲವಾರು ನಾಟಕಗಳಲ್ಲಿ ನಟನಾಗಿ ಅನುಭವ. ದೂರದರ್ಶನದಲ್ಲಿ ಪ್ರಸಾರವಾದ ಕೋಣಿ ಕೋದಂಡ ನಾಟಕವಲ್ಲದೆ ಬೇಲಿ ಮತ್ತು ಹೊಲ, ಆಹುತಿ, ಗುಡುಗು ಹೇಳಿದ್ದೇನು, ಅಲ್ಲದೇ ತುಳು ನಾಟಕಗಳಾದ ಎರುಮ್ಮೆಂದೆ, ಬಯ್ಯಮಲ್ಲಿಗೆ, ಆಲ್ ಎನ್ನಾಲ್, ಕಾಲ ಕೂಡ್ದ್ ಬನ್ನಗ, ದೇವದಾಸ್, ಕಡಲ್ಗ್ ಸೇರಂದಿ ಸುಧೆ, ಒರ ಮುಲ್ತು ಪೋ, ಮುಂತಾದ ನಾಟಕಗಳಲ್ಲಿ ಅಭಿನಯ.

***ದೂರವಾಣಿ :9880104857.***


---

## ಪುಷ್ಪಲತಾ



ಉಡುಪಿಯ ಕೊಳಲಗಿರಿಯಲ್ಲಿ ಜನಿಸಿದ ಇವರು, 'ನವಸುಮ ರಂಗಮಂಚ (ರಿ.) ಕೊಡವೂರು' ಇದರ ಕಲಾವಿದೆಯಾಗಿ ಸುಮಾರು 15 ವರ್ಷಗಳಿಂದ ರಂಗಚಟುವಟಿಕೆಗಳಲ್ಲಿ ನಿರತರಾಗಿದ್ದಾರೆ. ರಾಷ್ಟ್ರದಾದ್ಯಂತ ರಂಗಪ್ರದರ್ಶನ ನೀಡಿರುವ ಇವರು, ನಟನೆಗಾಗಿ ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಬಹುಮಾನಗಳನ್ನು ಗಳಿಸಿರುತ್ತಾರೆ.

## ಮೇಟಿ ಮುದಿಯಪ್ಪ




ನಿವೃತ್ತ ಪ್ರಾಂಶುಪಾಲರಾದ ಇವರು ರಂಗಭೂಮಿ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ಗುರುತಿಸಿಕೊಂಡವರು. ಕಳೆದ ಮೂವತ್ತು ವರ್ಷಗಳಿಂದ ರಂಗಭೂಮಿ(ರಿ)ಉಡುಪಿ ಸಂಸ್ಥೆಯ ಆಡಳಿತ ಮಂಡಳಿಯ ಜತೆ ಕಾರ್ಯದರ್ಶಿಯಾಗಿ, ಸ್ಪರ್ಧಾ ಸಮಿತಿಯ ಜತೆ ಕಾರ್ಯದರ್ಶಿಯಾಗಿ, ಕಾರ್ಯಕಾರಿ ಸಮಿತಿಯ ಸದಸ್ಯನಾಗಿ, ಸಂಸ್ಥೆಯಲ್ಲಿ ತಯಾರಾದ ಹಲವಾರು ನಾಟಕಗಳಲ್ಲಿ ಅಭಿನಯಿಸಿದವರು. ನಾಗಮಂಡಲ, ಗಾಂಧಿನಗರ, ಚಮ್ಮಾರನ ಚಾಲಾಕಿ ಹೆಂಡತಿ, ಹೇಮಂತ, ಪರಿಹಾರ, ಮುಂತಾದ ನಾಟಕಗಳಲ್ಲಿ ಅಭಿನಯಿಸಿದ್ದಲ್ಲದೆ, ಓ ನನ್ನ ಬೆಳಕೆ, ಅಂಕುಶ ಧಾರಾವಾಹಿಗಳಲ್ಲಿ, ಹಮ್ ತುಮ್ ಸೆ ಮರ್ತೆ ಹೊಂ, ಜನ್ಮದಾತ, ನೂರೊಂದು ಬಾಗಿಲು ಮುಂತಾದ ಸಿನಿಮಾಗಳಲ್ಲೂ ನಟಿಸಿರುತ್ತಾರೆ.

ಕಡಲಾಳದ ಮುತ್ತು, ಉದ್ಘೋಷ ಕವನ ಸಂಕಲನ, ಮಾನವೀಯತೆಯ ಸುತ್ತ ಮುತ್ತ–ವೈಚಾರಿಕ ಲೇಖನಗಳು, ಕಾಡತಾವ ನೆನಪು ಕಥಾಸಂಕಲನಗಳನ್ನು ಬರೆದು ಪ್ರಟಿಸಿರುವ ಇವರು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿಯೂ ಸೇವೆ ಸಲ್ಲಿಸಿದವರು. 2004–2005 ನೇ ಸಾಲಿನ ಪ್ರಥಮ ಮತ್ತು ಪಿ.ಯು.ಸಿ. ಕನ್ನಡ ಪಠ್ಯಪುಸ್ತಕಗಳ ಪರಿಷ್ಕರಣಾ ಸಮಿತಿಯ ಸದಸ್ಯರಾಗಿ 2013–14ರ ಪ್ರಥಮ ಪಿ.ಯು.ಸಿ ಕನ್ನಡ ಐಚ್ಛಿಕ ಪಠ್ಯ ಪುಸ್ತಕ ಪರಿಷ್ಕರಣ ಸಮಿತಿ ಸದಸ್ಯನಾಗಿ ಸೇವೆ.

***ಮೊ:9448624331***

---

## ಪೆರ್ಡೂರು ರತ್ನಾಕರ ಕಲ್ಯಾಣಿ



1958ರಲ್ಲಿ ಜನಿಸಿದ ಇವರು ಕಳೆದ 40 ವರ್ಷಗಳಿಂದ ಸುಮಾರು 200ಕ್ಕೂ ಹೆಚ್ಚು ನಾಟಕಗಳಲ್ಲಿ ಅಭಿನಯಿಸಿರುತ್ತಾರೆ. 15ಕ್ಕೂ ಹೆಚ್ಚು ಆಕಾಶವಾಣಿ ನಾಟಕಗಳಲ್ಲಿ ಭಾಗವಹಿಸಿರುವ ಇವರು ಯಕ್ಷಗಾನ ಕಲಾವಿದರೂ ಹೌದು. ಟಿ.ಎಸ್.ನಾಗಾಭರಣ ನಿರ್ದೇಶನದ ಜನುಮದಾತ ಚಲನಚಿತ್ರವಲ್ಲದೆ ವೀರಪ್ಪ ಮೊಯಿಲಿಯವರ ಕೊಟ್ಟ ಟೆಲಿ ಫಿಲ್ಮ್, ಓ ನನ್ನ ಬೆಳಕೆ ಧಾರಾವಾಹಿಗಳಲ್ಲಿ ನಟಿಸಿರುತ್ತಾರೆ.


2014ನೇ ಸಾಲಿನ ಕರ್ನಾಟಕ ರಾಜ್ಯೋತ್ಸವ ಉಡುಪಿ ಜಿಲ್ಲಾ ಪ್ರಶಸ್ತಿ ಪುರಸ್ಕೃತರಾದ ಇವರು ಶಾಲಾ ದಿನಗಳಲ್ಲಿ ಭಾವ ಮೈದುನ ನಾಟಕದಲ್ಲಿ ನಟಿಸಿ ಪ್ರಥಮ ಪ್ರಶಸ್ತಿ ಪಡೆದುಕೊಂಡವರು. ಸುರಭಿ ತಂಡದ ಸದಸ್ಯನಾಗಿದ್ದುಕೊಂಡು 7 ಬಾರಿ ಜಿಲ್ಲಾ ಮಟ್ಟದ ವಿವಿಧ ಸ್ಥಳಗಳಲ್ಲಿ ನಡೆದ ತುಳು ನಾಟಕ ಸ್ಪರ್ಧೆಗಳಲ್ಲಿ, ರಾಜ್ಯ ಮಟ್ಟದ ನಾಟಕ ಸ್ಪರ್ಧೆಯಲ್ಲಿ ಬಹುಮಾನ ಪಡೆದಿರುತ್ತಾರೆ. ಕಳೆದ 25 ವರ್ಷಗಳಿಂದ ಉಡುಪಿಯ ಸಾಂಸ್ಕೃತಿಕ ಕಾರ್ಯಕ್ರಮಗಳ ಸಂಘಟಕರಾಗಿರುವ ಇವರಿಗೆ ನಾಲ್ವರು ಮಠಾಧಿಪತಿಗಳ ಸಮ್ಮುಖದಲ್ಲಿ ಗೀತಾಯೋಗಾನುಗ್ರಹ ಪ್ರಶಸ್ತಿ ದೊರೆತಿದೆ.

ಸುಧಾಕರ ಆಚಾರ್ಯರವರ 26ನೇ ವರ್ಷದ ಯಕ್ಷ ಕಲಾರಾಧನೆಯ ಸ್ವಾತಂತ್ರೋತ್ಸವ ತಾಳ ಮದ್ದಳೆ ಸಂದರ್ಭದಲ್ಲಿ ಸನ್ಮಾನ, ಹಾವಂಜೆ ಭಾವನಾ ಫೌಂಡೇಶನ್‌ರವರಿಂದ ಕಲಾಸಿಂಧು 2015 ಪ್ರಶಸ್ತಿ., ಪರ್ಯಾಯ ಶ್ರೀ ಕಾಣಿಯೂರು ಮಾಠಾಧೀಶರಾಧ ಶ್ರೀ ಶ್ರೀ ವಿದ್ಯಾವಲ್ಲಭ ಶ್ರೀಪಾದರಿಂದ ಶ್ರೀಕೃಷ್ಣನೃಸಿಂಹಾಗ್ರಹ ಪ್ರಶಸ್ತಿ–2016, ಸನ್ನಿಧಿ ಕಲಾವಿದರು ಕಡೆಕಾರ್ ಇವರಿಂದ ದಶಮಾನೋತ್ಸವ ಸಂದರ್ಭದಲ್ಲಿ ಸನ್ಮಾನಗಳಲ್ಲದೆ ಹತ್ತು ಹಲವು ಸಂಸ್ಥೆಗಳು ಸನ್ಮಾನಿಸಿ ಗೌರವಿಸಿದೆ.

***ಮೊ: 9686114077***

---


## ಕೆ. ರಾಜಗೋಪಾಲ ಶೇಟ್:



ಉಡುಪಿ ತಾಲೂಕಿನ ದೊಡ್ಡಣಗುಡ್ಡೆಯಲ್ಲಿ ಜನನ. ಸುಮಾರು 37 ವರ್ಷಗಳಿಂದ ರಂಗ ಚಟುವಟುಕೆಗಳಲ್ಲಿ ನಿರತರಾಗಿದ್ದಾರೆ. ನಾಟಕ, ಸಂಗೀತ, ಕಿರುತೆರೆ, ಆಕಾಶವಾಣಿ, ಸಿನೆಮಾ, ಟೆಲಿಫಿಲ್ಮ್ ಕಲಾವಿದನಾಗಿ 36 ವರ್ಷಗಳ ಸೇವೆ. ಅಭಿನಯಿಸಿದ ಭಾಷೆ ಕನ್ನಡ, ತುಳು, ಕೊಂಕಣಿ, ಹಿಂದಿ. ಎರಡು ಸಲ ಬೆಹರಿನ್‌ನಲ್ಲಿ ನಾಟಕ ಪ್ರದರ್ಶನ ನೀಡಿರುತ್ತಾರೆ. ಸುಮಾರು 14 ಬಾರಿ ರಾಜ್ಯ ಮಟ್ಟದಲ್ಲಿ ಉತ್ತಮ ನಟ ಬಹುಮಾನ ಹಾಗೂ ಎಂಟು ನಾಟಕಗಳಲ್ಲಿ ರಾಷ್ಟ್ರ ಮಟ್ಟದಲ್ಲಿ ಉತ್ತಮ ನಟ ಪ್ರಶಸ್ತಿ ಪಡೆದಿರುತ್ತಾರೆ. ಹಲವು ಪ್ರಖ್ಯಾತ ನಿರ್ದೇಶಕರಿಂದ ತರಬೇತಿ. ಹನ್ನೆರಡು ಸಂಘಸಂಸ್ಥೆಗಳ ಅಡಿಯಲ್ಲಿ ನಾಟಕಗಳಲ್ಲಿ ಭಾಗವಹಿಸುವಿಕೆ. ಪ್ರಸ್ತುತ ನವಸುಮ ರಂಗಮಂಚ (ರಿ.) ಕೊಡವೂರು ಇದರಲ್ಲಿ ಗುರುತಿಸಿಕೊಂಡಿದ್ದಾರೆ. ಸುಮಾರು 10 ಬಾರಿಗಿಂತಲೂ ಹೆಚ್ಚು ಸನ್ಮಾನಿತರಾಗಿರುತ್ತಾರೆ. ಪ್ರತಿಷ್ಠಿತ ಉಡುಪಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಒಲಿದಿದೆ. ನೂರಾರು ನಾಟಕಗಳಲ್ಲಿ ಬೇರೆ ಬೇರೆ ರೀತಿಯ ಪಾತ್ರಗಳಲ್ಲಿ ಅಭಿನಯಿಸಿ, ಜನಮನ್ನಣೆಗಳಿಸಿರುವ ಉಡುಪಿಯ ಹಿರಿಯ ರಂಗನಟ.

---

## ಉದ್ಯಾವರ ನಾಗೇಶ್ ಕುಮಾರ್



34 ವರ್ಷಗಳಿಂದ ಆಧುನಿಕ ರಂಗಭೂಮಿಯಲ್ಲಿ ದುಡಿಯುತ್ತಿದ್ದು ತುಳು ರಂಗಭೂಮಿಗೆ ಆಧುನಿಕ ರಂಗಭೂಮಿಯ ಪರಿಚಯ ಮಾಡಿರುವುದಲ್ಲದೆ ರಂಗಭೂಮಿಯಿಂದ ಶಿಕ್ಷಣದ ಪರಿಕಲ್ಪನೆ ಮೂಲಕ ಮಕ್ಕಳ ರಂಗಭೂಮಿಯಲ್ಲಿ ತೊಡಗುವಿಕೆ. ಮಹಾಚೈತ್ರ, ಉದ್ಭವ, ಅವರೋಹಣ, ಕ್ರಾಂತಿ ಬಂತುಕ್ರಾಂತಿ, ಪೊಲೀಸರಿದ್ದಾರೆ ಎಚ್ಚರಿಕೆ, ರೂಪಾಂತರ, ನಾಟ್ಕ, ಬಾವಿ ಮತ್ತು ನಕ್ಷತ್ರ ಮುಂತಾದ ಕನ್ನಡ ನಾಟಕಗಳು ಹಾಗೂ ಗೋಂದೋಳು, ರಾಯರಾವುತೆ, ಸಂಕ್ರಾಂತಿ, ಬೋಂಟೆ, ಕನಕಾ, ಕಬೇದಿ ನಮ್ಮ ನಡುಟೋರಿ ಬೈರೆ, ಬಲಿ ಮಾರಿ,

ಗುವೆಲ್ ಕಳವಾತ್ಂಡ್, ಸಮ್ಗಾರನ ಸಂಸಾರೊ ಮುಂತಾದ ತುಳು ನಾಟಕಗಳು, ನಕ್ಕಳಾರಾಜಕುಮಾರಿ,ಆಲೀಬಾಬ ಮತ್ತು ನಲವತ್ತುಕಳ್ಳರು, ಪುಷ್ಪರಾಣಿ, ಅಜ್ಜಿಕತೆ, ಥಾಣಾಡಂಗುರ, ನಾಯಿಮರಿ, ಹಕ್ಕಿಹಾಡು, ಕಪ್ಪುಕಾಗೆ ಹಾಡು, ಗೋಪಿ ಮತ್ತುಮಾರ, ಒಡ್ಡನಓಟ, ಝುಂಝುಂ ಆನೆಮತ್ತು ಪುಟ್ಟ, ಪಂಜರ ಶಾಲೆ, ಗೊಂಬೆರಾವಣ, ಚಂದ್ರಮುಖಿ, ಪ್ರೀತಿಯಕಾಳು, ಅಳಿಲು ರಾಮಾಯಣ, ಧರಣಿಮಂಡಲ ಮಧ್ಯದೊಳಗೆ, ಸತ್ರು ಅಂದ್ರೆ ಸಾಯ್ತಾರೆ ಎಂಬ ಮಕ್ಕಳ ನಾಟಕಗಳನ್ನು ನಿರ್ದೇಶಿಸಿರುತ್ತಾರೆ.

ಸಾಕ್ಷರತೆ, ಕೋಮು ಸೌಹಾರ್ದತಾ ಜಾಥಾಗಳಲ್ಲಿ ಹಲವಾರು ಸಮಾಜಮುಖಿ ಬೀದನಾಟಕಗಳನ್ನು ರಚಿಸಿ ನಿರ್ದೇಶಸಿರುತ್ತಾರೆ. ಷೇಕ್ಸ್‌ಪಿಯರ್‌ನ–ಮ್ಯಾಕ್‌ಬೆತ್,ಲಂಕೇಶರ–ಸಂಕ್ರಾಂತಿ, ಗಿರೀಶ್‌ಕಾರ್ನಾಡರ–ಹಯವದನ,ಚಂದ್ರಶೇಖರ ಕಂಬಾರರ–ನಾಯೀಕತೆ,ಸಾಂಬಶಿವ ಪ್ರಹಸನ, ಜಯಂತ ಕಾಯ್ಕಿಣಿಯವರ – ಜತೆಗಿರುವನುಚಂದಿರ, ಜಿ.ಎಸ್.ಶಿವಶಂಕರ್‌ರವರ–ಸುಳಿಯಲ್ಲಿ ಸಿಕ್ಕವರು, ಸಾಫೋಕ್ಲೀಸ್‌ನ ಈಡಿಪಸ್, ಫೆಡ್ರಿಕ್ ಗಾರ್ಸಿಯಾಲೋರ್ಕನ ಶೂಮೇಕರ್ಸ್ ಪ್ರೋಡಿಜಿಯಸ್ ವೈಫ್ ಮುಂತಾದ ನಾಟಕಗಳನ್ನು ತುಳುವಿಗೆ ತರ್ಜುಮೆ ಮಾಡಿದ್ದಾರೆ. ನಟನಾಗಿ ಹಲವಾರು ನಾಟಕಗಳಲ್ಲಿ ಅಭಿನಯಿಸಿದಲ್ಲದೆ, ರಂಗನೇಪಥ್ಯ ಹಾಗೂ ಬೆಳಕಿನ ವಿನ್ಯಾಸದಲ್ಲೂ ತೊಡಗಿಸಿಕೊಂಡಿದ್ದಾರೆ.

2006 ಸಾಲಿನ ಸುವರ್ಣಕರ್ನಾಟಕ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ., 2007 ಸಾಲಿನ ಕರ್ನಾಟಕ ನಾಟಕ ಆಕಾಡೆಮಿಯ ಸುವರ್ಣ ಗೌರವ ಪುರಸ್ಕಾರಗಳೂ ಸೇರಿದಂತೆ ಹಲವಾರು ಬಹುಮಾನಗಳು, ಪುರಸ್ಕಾರಗಳು ಇವರಿಗೆ ಸಂದಿವೆ. ಉತ್ತಮಸಂಘಟಕರೂ ಆಗಿರುವ ಇವರು ಹತ್ತಾರು ಸಂಘಟನೆಗಳಲ್ಲಿ ವಿವಿಧ ಹುದ್ದೆಗಳನ್ನು ನಿರ್ವಹಿಸುತ್ತಿದ್ದಾರೆ. ರಾಜ್ಯ, ರಾಷ್ಟ್ರಮಟ್ಟದ ನಾಟಕಸ್ಪರ್ಧೆಗಳಿಗೆ ತೀರ್ಪುಗಾರರಾಗಿಯೂ ಸೇವೆ ಸಲ್ಲಿಸಿದ್ದಾರೆ.

***ಮೊ:9845559186, 9482821870***

---

## ಬಿ.ಎಸ್. ರಾಂಶೆಟ್ಟಿ ಹಾರಾಡಿ




ವೃತ್ತಿಯಲ್ಲಿ ಶಿಕ್ಷಕ. ರಾಷ್ಟ್ರೀಯ ತ್ರೋಬಾಲ್ ತರಬೇತುದಾರ. ಹವ್ಯಾಸದಲ್ಲಿ ರಂಗಕಲಾವಿದ. ಬೇರೆ ಬೇರೆ ರಂಗಶಿಬಿರಗಳಲ್ಲಿ ಪಾಲ್ಗೊಂಡು ತರಬೇತಿ ಪಡೆದು ರಂಗಭೂಮಿಯಲ್ಲಿ ಸಕ್ರಿಯರಾಗಿದ್ದಾರೆ. ಹಾರಾಡಿಯಂತಹ ಹಳ್ಳಿಯಲ್ಲಿ ಭೂಮಿಕಾ(ರಿ) ಹಾರಾಡಿ ಎನ್ನುವ ರಂಗ ತಂಡ ಕಟ್ಟಿಕೊಂಡು ಯುವ ರಂಗಕಲಾವಿದರನ್ನು ರಂಗಕ್ಕೆ ತಂದಿದ್ದಾರೆ. 25 ವರ್ಷಗಳಿಂದ ರಂಗಚಟುವಟಿಕೆಗಳನ್ನು ನಡೆಸುತ್ತಿರುವ ಇವರು ಹಳ್ಳಿಗಳಲ್ಲಿ ರಂಗಭೂಮಿಯ ಪರಿಚಯಕ್ಕಾಗಿ ಹಲವಾರು ಶಾಲೆಗಳಲ್ಲಿ ಮಕ್ಕಳಿಗಾಗಿ ರಂಗಶಿಬಿರ ನಡೆಸಿ ನಾಟಕ ನಿರ್ದೇಶಿಸಿದ್ದಾರೆ. ಮಕ್ಕಳಿಗಾಗಿ ಅಲಿಬಾಬ ಮತ್ತು ನಲವತ್ತು ಕಳ್ಳರು, ಜಿಪುಣ ಮೈದಾಸ, ಸತ್ರು ಅಂದ್ರೆ ಸಾಯ್ತಾರಾ, ಶಿವಭೂತಿ, ಸೂರ್ಯಬಂದ, ಎತ್ತು

ಕರು ಹಾಕಿದಾಗ, ಕೆರೆಗೆ ಹಾರ, ದಾಂ ಧೂಂ ಸುಂಟರಗಾಳಿ, ಸುಣ್ಣದ ಸುತ್ತು ನಾಟಕಗಳನ್ನು ನಿರ್ದೇಶಿಸಿರುತ್ತಾರೆ. ಮೃಗತೃಷ್ಣೆ, ಕವಡೆಪುರಾಣ, ಹುಲಿಯನೆರಳು, ಸಂಗ್ಯಾ ಬಾಳ್ಯ , ಅಗ್ನಿಲೋಕ, ಅರಗಿನ ಬೆಟ್ಟ, ವೃತ್ತದ ವೃತ್ತಾಂತ, ಕಾತ್ಯಾಯನಿ, ನಮ್ಮ ನಿಮ್ಮಳಗೊಬ್ಬ ನಾಟಕಗಳನ್ನು ದೊಡ್ಡವರಿಗಾಗಿ ನಿರ್ದೇಶಿಸಿದ್ದಾರೆ. ರಾಜ್ಯ ಮತ್ತು ರಾಷ್ಟ್ರಮಟ್ಟದ ನಾಟಕ ಸ್ಪರ್ಧೆಗಳಲ್ಲಿ ಶ್ರೇಷ್ಠ ನಿರ್ದೇಶಕ, ನಟ ಬಹುಮಾನ ಗಳಸಿರುತ್ತಾರೆ. ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, ಸಿ.ಜಿ.ಕೆ ರಂಗ ಪುರಸ್ಕಾರ, ಸ್ವರ್ಣಕಮಲ ಕುವೆಂಪು ಪ್ರಶಸ್ತಿ, ಆದರ್ಶ ಶಿಕ್ಷಕ ಪ್ರಶಸ್ತಿ ಪಡೆದಿದ್ದಾರೆ.

***ಮೊ:9844995019/7975450521***

---

## ಕೆ. ವಸಂತಕುಮಾರ್



1931ರಲ್ಲಿ ಜನಿಸಿದ ಇವರು ಅಪ್ಪನ ನೌಕರಿ ವರ್ಗಾವಣೆಯ ನೆಪದಲ್ಲಿ ಪುತ್ತೂರಿನಲ್ಲಿ ನೆಲೆಸಬೇಕಾಯಿತು. ಇವರ ನಾಟ್ಯ ಸಂವೇದನೆಗೆ ಡಾ. ಶಿವರಾಮ ಕಾರಂತ ಬಾಲವನ ಸಾಹಿತ್ಯ ಕೃಷಿಯೊಂದಿಗೆ ನಾಟ್ಯ ತರಬೇತಿಗೆ ಗುರುಕುಲವಾಗಿತ್ತು. ಕಾರಂತರ ಶಿಷ್ಯರಲ್ಲಿ ಮೆಚ್ಚಿನ ಶಿಷ್ಯರಾಗಿ ಸೂರ್ಪನಖಾ ಗರ್ವಭಂಗ ನೃತ್ಯ ನಾಟಕದಲ್ಲಿ ಕಾರಂತರು ಸೂರ್ಪನಖಿಯಾದರೆ ತಾನು ಸೀತೆಯಾದರು. ಮುಂದಿನ ವಿದ್ಯಾಭ್ಯಾಸ ಮಂಗಳೂರಲ್ಲಿ ಮುಂದುವರಿದಿದ್ದರಿಂದ ಕೇರಳ ಕಲಾ ಮಂಡಳದ ಗೋಪಿನಾಥ್, ತುಂಗಮಣಿಯವರ ಮಾರ್ಗದರ್ಶನ ದೊರೆಯಿತು. ನಂತರ ಮಂಗಳೂರಲ್ಲಿ ರಾಜನ್ ಐಯ್ಯರ್ ನೃತ್ಯ ಶಾಲಾ ಪ್ರಾರಂಭಿಸಿದರು. 1951ರಲ್ಲಿ ಲಲಿತ ಕಲಾ ಕೇಂದ್ರ ಎಂಬ ನೃತ್ಯ ಶಾಲಾ ಪ್ರಾರಂಭಿಸಿ ಉಡುಪಿಯ ಚರಿತ್ರೆಯಲ್ಲೇ ಮೊದಲನೆ ನಾಟ್ಯ ಶಾಲೆಯಾಯಿತು. ಮುಂಬಯಿಯ ಕೆ.ಕೆ. ಶೆಟ್ಟಿಯವರಿಂದ ನೃತ್ಯ ತರಬೇತಿ ಪಡೆದಿದ್ದ ಲಲಿತಳೊದಿಗೆ ವಿವಾಹವಾದರು. ಪೂಜ್ಯ ಪೇಜಾವರ ಶ್ರೀಗಳೆದುರು ಯಮನ ಮೃತ್ಯು ತಾಂಡವ ನೃತ್ಯ ಪ್ರದರ್ಶಿಸಿ ಅವರಿಂದ ನಾಟ್ಯ ಕಲಾ ಸಿಂಧೂರ ಬಿರುದು ಪಡೆದದ್ದು ಮೊದಲ ಪಟ್ಟ. ಕೆಮ್ತೂರು ದೊಡ್ಡಣ್ಣ ಶೆಟ್ಟರ ಮುತ್ತುನ ಮದ್ಮೆ ನಾಟಕದಲ್ಲಿ ಮುತ್ತು ಪಾತ್ರ. ಉಡುಪಿಯ ಸುತ್ತ ಮುತ್ತ 75 ಪ್ರಯೋಗ ಕಂಡು ಇತಿಹಾಸ ನಿರ್ಮಿಸಿತ್ತು. ರಾಯಬಾರಿ ಪತ್ರಿಕೆ ಯೆಸ್.ಎಲ್. ಭಟ್ಟ, ಅಳಸೆ, ಆನಂದ ಗಾಣಿಗರು, ವಲಭಟ್ಟರು, ರಾಘವೇಂದ್ರ ಭಟ್ಟರು ಸೇರಿ ಹುಟ್ಟು ಹಾಕಿದ ರಂಗ ಸಂಸ್ಥೆ ಉಡುಪಿ ರಂಗಭೂಮಿ. ಇವರ ನೃತ್ಯ ಕಾರ್ಯಕ್ರಮ ವೀಕ್ಷಿಸಿದ ಗುಬ್ಬಿವೀರಣ್ಣ, ಬಿ. ಜಯಮ್ಮ, ಗುಬ್ಬಿ ಚೆನ್ನಬಸವೇಶ್ವರ ಆಹ್ವಾನವಿದ್ದುದರಿಂದ ಪತ್ನಿಯೊಂದಿಗೆ ಗುಬ್ಬಿ ಕಂಪೆನಿಯ ಬಳಗಕ್ಕೆ ಸೇರಿಕೊಂಡರು. 1952-53 ಗುಬ್ಬಿ ಕಂಪೆನಿ ಪ್ರತಿಷ್ಠಿತ ಕಲಾಸಾಗರವಾಗಿತ್ತು. ಡಾ. ರಾಜ್‌ಕುಮಾರ್, ಜಿ. ವಿ. ಐಯ್ಯರ್, ನರಸಿಂಹರಾಜು, ಬಾಲಕೃಷ್ಣ, ಗಂಗಾಧರ್, ಜಯಮ್ಮ, ಸ್ವರ್ಣಮ್ಮ, ಮಾಲತಮ್ಮ, ಮೊದಲ ಪ್ರಮುಖ ನಟರ ಪ್ರೀತಿ ಆದರದಿಂದ ಹೊಸ ಹೊಸ ನೃತ್ಯ ಪ್ರಕಾರಕ್ಕೆ ಹೊಸ ಹೊಸ ಅವಕಾಶಗಳೊಂದಿಗೆ ಕೀರ್ತಿಯೂ ಬಂದಿತು. ಸಹಧರ್ಮಿಣಿ ಅನಾರೋಗ್ಯ ನಿಮಿತ್ತ ಗುಬ್ಬಿ ಕಂಪೆನಿ ಬಿಡಬೇಕಾದ

ಸಂಧರ್ಭದಲ್ಲಿ ಆಸರೆಯಾದವರು ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಳಿಯ ಮಾಲಿಕರಾದ ಎಂ. ವಿ. ಸುಬ್ಬಯ್ಯ ನಾಯ್ಡುಯವರು. ಚೆನ್ನಬಸಪ್ಪನವರ ಕಲಾಪ್ರಕಾರ ನಾಟ್ಯ ಸಂಘ ಏಣಿಗಿ ಬಾಳಪ್ಪನವರ ಕಲಾ ವೈಭವ ನಾಟ್ಯ ಸಂಘ, ಗುಡಿಗೇರಿ ಬಸವರಾಜರ ಸಂಗಮೇಶ್ವರ ನಾಟ್ಯ ಸಂಘ, ಮಾಸ್ಟರ್ ಹಿರಣ್ಣಯ್ಯ ಮಿತ್ರ ಮಂಡಳಿಯಲ್ಲಿ ದಂಪತಿಗಳಿಂದ ಕಲಾ ಸೇವೆ. ಚಳ್ಳಿ ಪರದೇಶಿ. ರಾ.ಸಿ., ಎಂ. ಆರ್ ವಿಠಲ್, ಸಿ.ವಿ ರಾಜು, ಶೇಷಗಿರಿರಾವ್, ಗಿರೀಶ್ ಕಾಸರವಳ್ಳಿ ಜೊತೆ ಚಲನಚಿತ್ರಗಳಲ್ಲಿ ಸಹ ನಿರ್ದೇಶಕನಾಗಿ ಕೆಲಸ ಮಾಡಿದ ಅನುಭವಿ.

---

## ಬಿ. ರಾಮ ಟೈಲರ್




ವೃತ್ತಿಯಲ್ಲಿ ದರ್ಜಿ, ಕಟ್ಟಡ ವಿನ್ಯಾಸಕಾರ ಪ್ರವೃತ್ತಿ–ನಾಟಕ ಕ್ಷೇತ್ರ. 1973ರಲ್ಲಿ ರಂಗಭೂಮಿಯಲ್ಲಿ ತೊಡಗಿಸಿಕೊಂಡು ಶಾರದೋತ್ಸವ ನಾಟಕಗಳಲ್ಲಿ ರಂಗಸಜ್ಜಿಕೆ, ಬೆಳಕು, ನೇಪತ್ಯ ವಿಭಾಗಗಳಲ್ಲಿ ಕೆಲಸ ಪ್ರಾರಂಭ. 1976ರಲ್ಲಿ ಗೆಳೆಯರ ಬಳಗದೊಂದಿಗೆ ರಾಜ್ಯಮಟ್ಟದ ನಾಟಕ ಸ್ಪರ್ಧೆಯಲ್ಲಿ ಭಾಗವಹಿಸುವಿಕೆ, ಪ್ರಥಮ ಪ್ರಯತ್ನದಲ್ಲೆ ರಂಗಸಜ್ಜಿಕೆಗೆ ದ್ವಿತಿಯ ಬಹುಮಾನ. 1977ರಿಂದ ಲಾವಣ್ಯ(ರಿ) ಬೈಂದೂರು ಸಂಸ್ಥೆಯ ಸ್ಥಾಪಕ ಸದಸ್ಯನಾಗಿ, ಉಪಾಧಕ್ಷ, ಜೊತೆಕಾರ್ಯದರ್ಶಿ, ಅಧ್ಯಕ್ಷ, ಗೌರವಾಧ್ಯಕ್ಷರಾಗಿ ಸೇವೆ. ಲಾವಣ್ಯದ 75ಕ್ಕೂ ಹೆಚ್ಚು ನಾಟಕಗಳು 1000ಕ್ಕೂ ಹೆಚ್ಚು ಪ್ರದರ್ಶನ ಕಂಡಿದ್ದು, ಎಲ್ಲಾ ನಾಟಕಗಳಿಗೆ ರಂಗಸಜ್ಜಿಕೆ, ಬೆಳಕು, ನೇಪಥ್ಯದಲ್ಲಿ ಕೆಲಸ ಮಾಡಿರುತ್ತಾರೆ. ಲಾವಣ್ಯದ ಕಟ್ಟಡ ನಿರ್ಮಾಣ, ಶಾರದಾವೇದಿಕೆ ನಿರ್ಮಾಣದಲ್ಲಿ ಪ್ರಮುಖ ಪಾತ್ರ. ಲಾವಣ್ಯವಲ್ಲದೆ, ಕ್ರೀಡಾಸಂಸ್ಥೆ, ಶಾರದೋತ್ಸವ, ಶಿಶುಮಂದಿರ ಮುಂತಾದ ಸಂಘಗಳಲ್ಲಿ ಕ್ರೀಯಾಶೀಲ ಸದಸ್ಯ.

ಸತ್ಯ ಹರಿಶ್ಚಂದ್ರ, ಬೇಲಿ ಮತ್ತು ಹೊಲ, ದೃಷ್ಠಿ, ಕತ್ತಲದಾರಿ ದೂರ, ಚೋರಚರಣದಾಸ ಹೀಗೆ ಹಲವಾರು ನಾಟಕಗಳು ಹೆಸರು ತಂದುಕೊಟ್ಟಿದ್ದಲ್ಲದೆ ಕರ್ನಾಟಕ ನಾಟಕ ಅಕಾಡೆಮಿ ಬೈಂದೂರಲ್ಲಿ ಆಯೋಜಿಸಿದ ನಾಟಕೋತ್ಸವದಲ್ಲಿ ರಂಗಗೌರವ ಪಡೆದಿದ್ದಾರೆ.

***ಮೊ:9482040828***

---

## ಗಂಗಾಧರ ಕಿದಿಯೂರ್



1959ರಲ್ಲಿ ಜನನ. ನಾಟಕಕಾರರಾದ ಇವರು ಎಳವೆಯಲ್ಲೆ ನಾಟಕದ ಆಸಕ್ತಿ ಹೊಂದಿದ್ದರು. ಶಾಲಾ ಕಾಲೇಜು ದಿನಗಳಲ್ಲೇ ನಾಟಕಗಳಲ್ಲಿ ಅಭಿನಯಿಸಿ ಭವಿಷ್ಯದ ನಟ ಎಂದು ಗುರುತಿಸಿ ಕೊಂಡವರು. ಆಗಲೇ ಕಿರುನಾಟಕ, ಕತೆ, ಕವನ ಲೇಖನಗಳ ಮೂಲಕ ಸಾಹಿತ್ಯ ಕ್ಷೇತ್ರದಲ್ಲಿ ತೊಡಗಿಸಿಕೊಂಡವರು.

ಓರ್ವ ಪ್ರಬುದ್ಧ ನಟ, ತುಳು ಅಭಿಮಾನಿ ಆಗಿರುವ ಇವರು ಸಾಮಾಜಿಕ ಜಾಗೃತಿ ಮೂಡಿಸುವ ಮತ್ತು ತುಳು ಸಂಸ್ಕೃತಿ–

ಜೀವನ ಶೈಲಿಯ ನಾಟಕಗಳನ್ನು ರಚಿಸಿರುವುದಲ್ಲದೇ ತುಳುಭಾಷೆ, ಸಂಸ್ಕೃತಿ, ಕಲೆಗಾಗಿ ನಿರಂತರ ದುಡಿಯುತ್ತ ಕನ್ನಡ ಸಾಹಿತ್ಯ ಕ್ಷೇತ್ರದಲ್ಲೂ ಪರಿಚಿತರು. ನಾಟಕದ ವಿಷಯದಲ್ಲಿ ಗಂಗಾಧರ ಅವರು ಸವ್ಯಸಾಚಿ. ನಾಟಕ ರಚನೆ, ಗೀತೆ ರಚನೆ, ರಾಗಸಂಯೋಜನೆ, ನಟನೆ, ನಿರ್ದೇಶನ–ಹೀಗೆ ಎಲ್ಲಾ ಕ್ಷೇತ್ರದಲ್ಲೂ ಅನುಭವಿಯಾದ ಇವರಿಗೆ ತಮ್ಮ ಪಿಂಗಾರದ ಬಾಲೆ ಸಿರಿ ನಾಟಕಕ್ಕೆ 2003ನೇ ಸಾಲಿನ ಧರ್ಮಸ್ಥಳ ರತ್ನವರ್ಮ ಹೆಗಡೆ ನಾಟಕ ಪ್ರಶಸ್ತಿ, ಬದುಕೊಂಜಿ ಸರಿಗಮ ನಾಟಕ 1990ರಲ್ಲಿ ಮಂಗಳೂರಿನ ರಾಜಕುಮಾರ್ ಅಭಿಮಾನಿ ಬಳಗದ ಕಲ್ಪನಾ ಪ್ರಶಸ್ತಿ ಲಭಿಸಿದೆ. ವಿಜಯಲಕ್ಷ್ಮಿ ನಾಟಕ ಎರಡನೇ ಮುದ್ರಣ ಕಂಡಿರುವುದಲ್ಲದೇ 100ಕ್ಕೂ ಹೆಚ್ಚು ಪ್ರದರ್ಶನಗೊಂಡಿದೆ. ರೇಡಿಯೋ ಮತ್ತು ದೂರದರ್ಶನದಲ್ಲೂ ಹಲವಾರು ನಾಟಕಗಳು ಪ್ರಸಾರವಾಗಿದೆ.

ತುಳುಕೂಟ ಉಡುಪಿಯ ಕಾರ್ಯದರ್ಶಿ. 1987ರಲ್ಲಿ ಮಧುಶ್ರೀ ಪ್ರಕಾಶನ ಸಂಸ್ಥೆಯನ್ನು ಆರಂಭಿಸಿ ಹಲವಾರು ಕೃತಿಗಳನ್ನು ಹೊರ ತಂದಿದ್ದಾರೆ. ಇದುವರೆಗೆ ಸುಮಾರು 12 ನಾಟಕಗಳನ್ನು ಬರೆದು ಪ್ರಕಟಿಸಿರುತ್ತಾರೆ.

---


## ಬಾಲಕೃಷ್ಣ ಕೊಡವೂರು:



ಉಡುಪಿ ತಾಲೂಕಿನ ಕೊಡವೂರಿನಲ್ಲಿ ಜನನ. ಸುಮಾರು 30 ವರ್ಷಗಳಿಂದ ರಂಗ ಚಟುವಟಿಕೆಗಳಲ್ಲಿ ನಿರತರಾಗಿದ್ದಾರೆ. ರಂಗನಿರ್ದೇಶನ, ರಂಗಕೃತಿ ರಚನೆ, ರಂಗವಿನ್ಯಾಸ, ಬೆಳಕಿನ ವಿನ್ಯಾಸ, ರಂಗಪರಿಕರಗಳ ತಯಾರಿ, ಪ್ರಸಾದನ ಎಲ್ಲಾ ಕ್ಷೇತ್ರಗಳಲ್ಲೂ ಕೆಲಸ ಮಾಡಿದ ಅನುಭವ. ಹಲವಾರು ಹೆಸರಾಂತ ನಿರ್ದೇಶಕರೊಂದಿಗೆ ಸಹಾಯಕರಾಗಿ ದುಡಿದ ಅನುಭವವೂ ಇದೆ. ರಂಗನಟನೆ, ನಿರ್ದೇಶನಕ್ಕಾಗಿ ಹಲವಾರು ರಾಜ್ಯ ಮತ್ತು ರಾಷ್ಟ್ರಮಟ್ಟದ ಸ್ಪರ್ಧೆಗಳಲ್ಲಿ ಬಹುಮಾನವನ್ನು ಗಳಿಸಿರುತ್ತಾರೆ. ಇವರ ನಿರ್ದೇಶನದ ನಾಟಕಗಳು ಕರ್ನಾಟಕದಲ್ಲಲ್ಲದೆ ಮುಂಬೈ, ಗುಜರಾತ್, ಕೋಲ್ಕತ್ತಾ, ಕೇರಳ, ದೆಹಲಿ, ವಿಶಾಖಪಟ್ಟಣ, ಒರಿಸ್ಸಾದಲ್ಲೂ ಪ್ರದರ್ಶನ ಕಂಡಿದೆ. ಮಕ್ಕಳ ರಂಗಭೂಮಿಯಲ್ಲೂ ತೊಡಗಿಸಿಕೊಂಡು ಹಲವಾರು ಮಕ್ಕಳ ನಾಟಕಗಳನ್ನು ನಿರ್ದೇಶಿಸಿರುತ್ತಾರೆ. ಮಂಗಳೂರು ಆಕಾಶವಾಣಿಯ ಕಲಾವಿದರಾಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ. ಕಿರುತೆರೆ, ಸಿನಿಮಾದಲ್ಲೂ ಅಭಿನಯಿಸಿರುತ್ತಾರೆ. ಪ್ರಸ್ತುತ 'ನಮಸುಮ ರಂಗಮಂಚ (ರಿ.) ಕೊಡವೂರು' ತಂಡದ ಅಧ್ಯಕ್ಷರಾಗಿ ರಂಗ ಕಾಯಕದಲ್ಲಿ ಸಕ್ರಿಯರಾಗಿದ್ದಾರೆ. 'ಸುಮನಸಾ ಕೊಡವೂರು' ತಂಡದ ಸ್ಥಾಪಕರಲ್ಲೋರ್ವರಾಗಿ ಉಡುಪಿ ರಂಗಭೂಮಿಯ ಆಜೀವ ಸದಸ್ಯರಾಗಿ, ತುಳುಕೂಟ ಉಡುಪಿಯ ಸದಸ್ಯರಾಗಿರುತ್ತಾರೆ.

*ರಂಗಶಿಕ್ಷಣ ಎನ್ನುವುದು ಕೇವಲ ನಾಟಕ ಮಾಡುವುದಲ್ಲ.*
*ಬದುಕುವ ರೀತಿಯನ್ನು ಅಧ್ಯಯನ ಮಾಡುವುದು.*


## ರಮೇಶ್ ಆಚಾರ್ಯ



48 ವಯಸ್ಸಿನ ಇವರು 20ವರ್ಷಗಳಿಂದ"ಕೂಡ್ಲಿ ಕಲಾವಿದರ್"ಪೆರ್ಡೂರು ತಂಡದ ಸದಸ್ಯನಾಗಿದ್ದು 100ಕ್ಕೂ ಹೆಚ್ಚು ಕನ್ನಡ ಮತ್ತು ತುಳು ನಾಟಕಗಳಲ್ಲಿ ಅಭಿನಯಿಸಿರುತ್ತಾರೆ. ರಾಜ್ಯ ಮಟ್ಟದ ನಾಟಕ ಸ್ಪರ್ಧೆಯಲ್ಲಿ ಉತ್ತಮ ನಿರ್ದೇಶನ,ಉತ್ತಮ ಪೋಷಕ ನಟ ಪ್ರಶಸ್ತಿ ಪಡೆದಿರುತ್ತಾರೆ. ಬೆಂಗಳೂರು ದೂರದರ್ಶನ ಚಂದನದಲ್ಲಿ "ಕೋಣಕೋದಂಡ"ಎಂಬ ಕನ್ನಡ ನಾಟಕದಲ್ಲಿ ಅಭಿನಯ. ಮರದ ಕೆತ್ತನೆಯಲ್ಲಿ ಕಾಂಟ್ರಾಕ್ಟರ್ ಆಗಿರುವ ಇವರು ರಂಗಭೂಮಿಯಲ್ಲಿ ನಿರಂತರವಾಗಿ ಕ್ರಿಯಾಶೀಲರು. *ಮೊ:9449101853*

---

## ಬಿ. ವಿಶ್ವೇಶ್ವರ ಅಡಿಗ.



ನಾಟಕ, ಯಕ್ಷಗಾನ, ಗಮಕ, ಸಂಗೀತ, ನೃತ್ಯ ಸಾಹಿತ್ಯದಲ್ಲಿ ತಮ್ಮನ್ನು ನಿರಂತರವಾಗಿ ತೊಡಗಿಸಿಕೊಂಡವರು. 40 ವರ್ಷಗಳಿಂದ ಗೆಳೆಯರ ಬಳಗ, ಲಾವಣ್ಯ(ರಿ) ಬೈಂದೂರು ಸಂಸ್ಥೆಯ ತ್ಯಾಗಿ, ಸತ್ಯಹರಿಶ್ಚಂದ್ರ, ರಾಘವೇಂದ್ರ ಮಹಾತ್ಮೆ, ಏಕಲವ್ಯ, ಮುಂತಾದ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಶಾಲಾ ಕಾಲೇಜು ವಿದ್ಯಾರ್ಥಿ ಗಳಿಗಾಗಿ ಕುವೆಂಪುರವರ ಬೆರಳ್ಗೆ ಕೊರಳ್, ನನ್ನ ಗೋಪಾಲ, ಮೂಗುತ ಮೂಗೂತಿ ಮುಂತಾದ ನಾಟಕಗಳನ್ನು ನಿರ್ದೇಶಿಸಿ ನಿರ್ದೇಶನದಲ್ಲೂ ಸೈ ಎನಿಸಿಕೊಂಡವರು. ರಾಜ್ಯತ್ಯಾಗ ಕೆರೆಗೆಹಾರ, ಸತಿಶಾಪ ಮುಂತಾದ ಗೀತ ನಾಟಕಗಳನ್ನು ರಚಿಸಿದ್ದಾರೆ. ನಾಟಕ ಯಕ್ಷಗಾನ, ಗಮಕ ಸಾಹಿತ್ಯದಲ್ಲಿ ಕೆಲಸ ಮಾಡಿದ ಇವರನ್ನು ಹಲವಾರು ಸಂಘ ಸಂಸ್ಥೆಗಳು ಸನ್ಮಾನಿಸಿವೆ.

***ಮೊ:9448842710.***


---

## ಅರ್ಜುನ್ ಪೂಜಾರಿ



ಪ್ರಾಥಮಿಕ ಶಾಲೆಯಲ್ಲಿರುವಾಗಲೇ ನಾಟಕಗಳಲ್ಲಿ ಅಭಿನಯಿಸಿ ಬೇಷ್ ಅನಿಸಿಕೊಂಡವರು. ಪ್ರತಿಭಾಕಾರಂಜಿಯ ನಾಟಕ ಸ್ಪರ್ಧೆಗಳಲ್ಲಿ ಬಹುಮಾನಗಳಿಸಿಕೊಂಡವರು. ಕಾಲೇಜು ದಿನಗಳಲ್ಲಿ ನಾಟಕಗಳಲ್ಲಿ ಭಾಗವಹಿಸುತ್ತಾ ರಂಗಭೂಮಿಯ ಆಸಕ್ತಿ ಹೆಚ್ಚಿಸಿಕೊಂಡು ಭೂಮಿಕಾ ಹಾರಾಡಿ ತಂಡಕ್ಕೆ ಸೇರ್ಪಡೆ ಗೊಂಡವರು. ಜಿಪುಣ ಮೈದಾಸ, ಅಗ್ನಿಲೋಕ, ಅರಗಿನ ಬೆಟ್ಟ, ನಮ್ಮ ನಿಮ್ಮೊಳಗೊಬ್ಬ, ವೃತ್ತದ ವೃತ್ತಾಂತ, ಮದುವೆ ಹೆಣ್ಣು, ಮಾರಿಕಾಡು ಮುಂತಾದ ನಾಟಕಗಳಲ್ಲಿ ಅಭಿನಯಿಸಿ ನಾಡಿನಾದ್ಯಂತ ನಾಟಕ ಪ್ರದರ್ಶನ ನೀಡಿದ್ದಾರೆ. ಪ್ರಸ್ತುತ ವಿದೇಶದಲ್ಲಿದ್ದುಕೊಂಡು ಅಲ್ಲಿಯೂ ಕನ್ನಡ ಸಂಘದ ನಾಟಕಗಳಲ್ಲಿ ಭಾಗವಹಿಸಿ ತನ್ನ ರಂಗ ಚಟುವಟಿಕೆಯನ್ನು ಮುಂದುವರಿಸಿಕೊಂಡು ಬಂದಿದ್ದಾರೆ

## ಬಿ.ತಾರಾನಾಥ್ ನಾಯಕ್



8ನೇ ವಯಸ್ಸಿನಲ್ಲೆ ನಾಟಕಗಳಲ್ಲಿ ನಟನೆಗೆ ತೊಡಗಿಸಿ ಕೊಂಡು ಮುಂದೆ ಆಯ್ದುಕೊಂಡ ಕ್ಷೇತ್ರ ನಾಟಕ, ಸಾಹಿತ್ಯ, ಸಂಗೀತ. 1968ರಲ್ಲಿ ಕಲಾಜ್ಯೋತಿ ಹವ್ಯಾಸಿ ನಾಟಕ ತಂಡ, ಹಾಗೂ ಆರ್ಕೆಸ್ಟ್ರಾ ತಂಡವನ್ನು ಪ್ರಾರಂಭಿಸಿ ಕರ್ನಾಟಕ ಸರಕಾರ ವಾರ್ತಾ ಮತ್ತು ಪ್ರಚಾರ ಇಲಾಖೆ ಮೂಲಕ ದ.ಕ.ಜಿಲ್ಲೆಯ ಹಳ್ಳಿಗಳಲ್ಲಿ ವಿಚಾರಾತ್ಮಕ ನಾಟಕಗಳ ಪ್ರದರ್ಶನ ನೀಡಿದವರು. 1971ರಲ್ಲಿ ಡಿ.ಎಸ್.ಕೆಮ್ತೂರು ಇವರ ತುಳುನಾಟಕ ಮಂಡಳಿಯಲ್ಲಿ ನಟನಾಗಿ, ಸಂಗೀತಗಾರನಾಗಿ ಉಡುಪಿ, ದ.ಕ, ಉತ್ತರ ಕರ್ನಾಟಕ, ಮಹಾರಾಷ್ಟ್ರಗಳಲ್ಲಿ ನಾಟಕ ಪ್ರದರ್ಶನ ನೀಡಿದ ಕಲಾವಿದ.

ರಂಗಭೂಮಿ (ರಿ) ಹಂಸಲೇಖರವರ ವಿವೇಕ ರಂಗ, ಜಿ.ಎಸ್.ಪ್ರದಾನ್ ಅವರ ರಂಗವೃಂದ ನಾಟಕ ಸಂಸ್ಥೆಗಳಲ್ಲಿ ನಟನಾಗಿ, ಸಂಗೀತಗಾರನಾಗಿ, ಬೆಳಕಿನ ತಂತ್ರಜ್ಞನಾಗಿ ಕಲಾಸೇವೆ. ಆಕಾಶವಾಣಿ ಕಲಾವಿದರೂ ಆಗಿರುವ ಇವರು ತಂಗಡಿಗಾದ್, ಅಪ್ಪೆನ ಮನಸ್, ಮುಳ್ಳುದ ಬೇಲಿ ಹೀಗೆ ಮೂರು ತುಳು ನಾಟಕ ರಚನೆಯಲ್ಲದೆ ಅಬ್ಬಾ! ತಿ!ಕೀ, ಧ್ಯಾಕ್ತಿ ಬ್ಯಾತಿಲೊ ಧರ್ಮು, ಸ್ಟೊರಿಕ ಎಂಬ ಕೊಂಕಣಿ ನಾಟಕಗಳ ರಚನಾಕಾರರೂ ಹೌದು. ಲಯನ್ಸ್ ಇಂದ್ರಾಳಿ, ಸಂಗೀತ ಸಂಗಮ, ರಂಜನಾ ಕಲಾತಂಡ ಮುಂತಾದ ಸ್ಥಳೀಯ ಸಂಸ್ಥೆಗಳಿಂದ ಹಲವಾರು ಪ್ರಶಸ್ತಿ ಪುರಸ್ಕಾರಗಳು ದೊರೆತಿವೆ. 2004 ಕರ್ನಾಟಕ ಸರಕಾರದ ಕರ್ನಾಟಕ ವೈಭವ ಧ್ವನಿ ಮತ್ತು ಬೆಳಕು ಇದರಲ್ಲಿ 5 ಮುಖ್ಯ ಪಾತ್ರಗಳ ನಿರ್ವಹಣೆ. ಸಾಹಿತ್ಯದಲ್ಲೂ ಹಲವಾರು ಪುರಸ್ಕಾರಗಳನ್ನು ಪಡೆದಿರುವ ಇವರು 800ಕ್ಕೂ ಹೆಚ್ಚು ನಾಟಕಗಳಲ್ಲಿ, ಚಲನಚಿತ್ರಗಳಲ್ಲಿ ನಟನಾಗಿ, ತಂತ್ರಜ್ಞರಾಗಿ ದುಡಿದಿರುತ್ತಾರೆ.

***ದೂರವಾಣಿ–7353254741***


---

## ಕೃಷ್ಣ ಮೂರ್ತಿ ಕಾರಂತ.



ನಟನೆ, ನಿರ್ದೇಶನ, ಸಂಘಟನೆ ಮೂಲಕ ಗುರುತಿಸಿಕೊಂಡ ಇವರು 30ವರ್ಷಗಳಿಂದ ಲಾವಣ್ಯ(ರಿ)ಬೈಂದೂರು ಇದರ ಸಕ್ರಿಯ ಸದಸ್ಯರಾಗಿ, ಕಾರ್ಯದರ್ಶಿಯಾಗಿ, ನಾಟಕೋತ್ಸವ, ನಾಟಕ ಸ್ಪರ್ಧೆಗಳ ಸಂಘಟಕರಾಗಿ ಗುರುತಿಸಿಕೊಂಡವರು. ಲಾವಣ್ಯದ ಲಚ್ಚಿ, ಮಾವ ಮಾವ ಕತೆ ಹೇಳು, ಕರ್ನಾಟಕ ರಮಾರಮಣ, ಸಾಲಿಗ್ರೊಪ ಸಂಕ್ರಣ್ಣ ಹೀಗೆ 50ಕ್ಕೂ ಹೆಚ್ಚು ನಾಟಕಗಳಲ್ಲಿ ನಟಿಸಿ 500ಕ್ಕೂ ಹೆಚ್ಚು ಪ್ರದರ್ಶನ ನೀಡಿರುತ್ತಾರೆ. ಶಾಲಾ, ಕಾಲೇಜುಗಳಿಗೆ, ನಾಳೆಬನ್ನಿ, ವೇಷಾಂತರ ಪ್ರಸಂಗ, ಪನ್ನದಾಸಿ, ಎಚ್ಚಮನಾಯಕ, ಸಾಮ್ರಾಟ್ ಆಶೋಕ, ತ್ಯಾಗಿ ಕಲೆಯ ಕೊಲೆ ಮುಂತಾದ ನಾಟಕಗಳನ್ನು ಶಾಲಾ ಕಾಲೇಜು ಮತ್ತು ಯುವಕ ಮಂಡಲಗಳಿಗೆ ನಿರ್ದೇಶಿರುತ್ತಾರೆ. ***ಮೊ:8762369236***

## ಸತೀಶ್ ಭಂಡಾರಿ



"ಕೂಡ್ಡಿ ಕಲಾವಿದರ್"ಪೆರ್ಡೂರು ತಂಡದ ಸದಸ್ಯನಾಗಿದ್ದು 150ಕ್ಕೂ ಹೆಚ್ಚು ಕನ್ನಡ ಮತ್ತು ತುಳು ನಾಟಕಗಳಲ್ಲಿ ಅಭಿನಯಿಸಿರುತ್ತಾರೆ. ರಾಜ್ಯಮಟ್ಟದ ನಾಟಕ ಸ್ಪರ್ಧೆಯಲ್ಲಿ ಉತ್ತಮ ಬಾಲನಟ, ಉತ್ತಮ ಹಾಸ್ಯ ನಟ ಪ್ರಶಸ್ತಿ ಪಡೆದಿರುತ್ತಾರೆ. ಸ್ವಂತ ಹೇರ್ ಕಟ್ಟಿಂಗ್ ಸೆಲೂನ್ ನಡೆಸುತ್ತಿರುವ ಇವರು ರಂಗಭೂಮಿ ಯಲ್ಲಿ ಸಕ್ರಿಯರು. ***ಮೊ:9845907050***

---

## ಚೇಂಪಿ ದಿನೇಶ್ ಆಚಾರ್ಯ



ಇವರು ತಮ್ಮ 5 ನೇ ವಯಸ್ಸಿನಲ್ಲಿ ಸೀತಾ ಪರಿತ್ಯಾಗ ಎಂಬ ಮಕ್ಕಳ ನಾಟಕದಲ್ಲಿ ನಟಿಸಿ ಎಲ್ಲರ ಪ್ರಶಂಸೆಗೆ ಪಾತ್ರರಾಗಿದ್ದರು. 6ನೇ ವಯಸ್ಸಿನಲ್ಲಿ ವಿವಿಧ ಛದ್ಮವೇಷ ಮತ್ತು ಚಿತ್ರಕಲೆಗಳಲ್ಲಿ ಸಾಕಷ್ಟು ಬಹುಮಾನ ಗಳಿಸಿ ಮುಂದೆ ಕಾಲೇಜಿನಲ್ಲಿ ನಟನೆಯ ಜೊತೆಗೆ ನಿರ್ದೇಶನದ ಜವಾಬ್ದಾರಿಯನ್ನು ನಿಭಾಯಿಸಿದವರು. ಹೈಸ್ಕೂಲ್ ವಿದ್ಯಾರ್ಥಿಯಾಗಿದ್ದಾಗಲೆ ಮಕ್ಕಳ ಮೇಳ ಕೂಟಗಳಲ್ಲಿ 5 ವರ್ಷಗಳ ಕಾಲ ವಿವಿಧ ಪಾತ್ರಧಾರಿಯಾಗಿ, ಇದುವರೆಗೆ 50ಕ್ಕೂ ಹೆಚ್ಚು ಯಕ್ಷಗಾನದಲ್ಲಿ ಕೃಷ್ಣ, ಬಲರಾಮ, ಧರ್ಮರಾಯ, ವೃಷಕೇತು, ಅರ್ಜುನ ಹೀಗೆ ಅನೇಕ ಪಾತ್ರಗಳನ್ನು ನಿರ್ವಹಿಸಿದ ಅನುಭವಿ. ಸವಿನಯ ರಂಗ ಸಾಸ್ತಾನ, ವಾಹನ ಚಾಲಕ ಮತ್ತು ಮಾಲಿಕರ ಸಂಘ, ಸಮಾನ ಮನಸ್ಕರ ತಂಡಗಳಲ್ಲಿ ನಡೆಯುವ ನಾಟಕಗಳಲ್ಲಿ ಅನೇಕ ಪಾತ್ರಗಳ ನಿರ್ವಹಣೆ.

ದೇ.ಜವರೇಗೌಡರ ಏಕಲವ್ಯ ಕತೆಯನ್ನು ಆಧರಿಸಿ ಹೆಬ್ಬೆರಳು ಎಂಬ ಮಕ್ಕಳ ನಾಟಕವನ್ನು ಬರೆದು ಪ್ರಕಟಿಸಿ ಭಟ್ಕಳ ಸಾಹಿತ್ಯ ಸಮ್ಮೇಳನದಲ್ಲಿ ಉತ್ತಮ ಪುಸ್ತಕ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಸರಕಾರದ ಯೋಜನೆಗಳನ್ನು ಬಿಂಬಿಸುವ ನಾಟಕಗಳನ್ನು ಆಗಾಗ ಏರ್ಪಡಿಸಿ ಜನರಿಗೆ ತಿಳುವಳಿಕೆ ನೀಡುತ್ತಾ ಬಂದಿದ್ದಾರೆ.

***ಮೊ:9900476706***

---

## ವಿನೋದ್ ಕಾಂಚನ್:



ಉಡುಪಿ ತಾಲೂಕಿನ ಕೊಡವೂರಿನಲ್ಲಿ ಜನಿಸಿದ ಇವರು ಪ್ರಸ್ತುತ 'ನವಸುಮ ರಂಗಮಂಚ (ರಿ.) ಕೊಡವೂರು' ಇದರ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದು, ಸುಮಾರು 15 ವರ್ಷಗಳಿಂದ ರಂಗ ಕಲಾವಿದನಾಗಿ ರಾಷ್ಟ್ರಾದ್ಯಂತ ಪ್ರದರ್ಶನ ನೀಡಿರುತ್ತಾರೆ. ರಂಗ ಸಂಘಟಕರಾಗಿ ಹಲವಾರು ಕಾರ್ಯಕ್ರಮ ಗಳನ್ನು ಸಂಘಟಿಸಿದ ಅನುಭವಿ. ರಂಗನಟನೆಗಾಗಿ ಹಲವಾರು ಪ್ರಶಸ್ತಿಗಳನ್ನು ಪಡೆದಿರುತ್ತಾರೆ.

## ದಿನೇಶ್ ಅಮೀನ್ ಕದಿಕೆ:



ಉಡುಪಿ ತಾಲೂಕಿನ ಬಡಾನಿಡಿಯೂರು, ಕದಿಕೆಯಲ್ಲಿ ಜನಿಸಿದ ದಿನೇಶ್ ಅಮೀನ್ ಸುಮಾರು 30 ವರ್ಷಗಳಿಂದ ರಂಗಚಟುವಟಿಕೆಗಳಲ್ಲಿ ನಿರತರಾಗಿದ್ದಾರೆ. ರಂಗನಟನಾಗಿ, ಪ್ರಸಾದನ ಕಲಾವಿದನಾಗಿ ರಂಗಪರಿಕರಗಳ ತಯಾರಿಯಲ್ಲಿ ನೈಪುಣ್ಯತೆ ಹೊಂದಿರುತ್ತಾರೆ. ರಂಗನಟರಾಗಿ ರಾಷ್ಟ್ರದಾದ್ಯಂತ ಪ್ರದರ್ಶನ ನೀಡಿರುತ್ತಾರೆ. ನಟನೆ ಮತ್ತು ರಂಗಪ್ರಸಾದನಕ್ಕಾಗಿ ಹಲವಾರು ಪ್ರಶಸ್ತಿಗಳನ್ನು ಗಳಿಸಿದ್ದು, ಯಕ್ಷಗಾನ ಕಲಾವಿದರಾಗಿಯೂ ಹಲವಾರು ಪ್ರದರ್ಶನ ನೀಡಿದ ಅನುಭವ ಇವರದ್ದು. ಪ್ರಸ್ತುತ 'ನವಸುಮ ರಂಗಮಂಚ (ರಿ.) ಕೊಡವೂರು' ಇದರ ಉಪಾಧ್ಯಕ್ಷರಾಗಿ ರಂಗಚಟುವಟಿಕೆಗಳಲ್ಲಿ ನಿರತರಾಗಿದ್ದಾರೆ,.

---

## ಪ್ರದೀಪ್‌ಚಂದ್ರ ಕುದ್ಪಾಡಿ



ತಮ್ಮ ತಂದೆಯವರು ಸ್ಥಾಪಿಸಿದ ತಂಡದ ನಾಟಕಗಳ ರಿಹರ್ಸಲ್ ನೋಡುತ್ತಾ ಬಾಲ್ಯದಲ್ಲಿಯೇ ರಂಗಭೂಮಿ ವಾತಾವರಣದಲ್ಲಿ ಬೆಳೆದವರು. 8ನೇ ವಯಸ್ಸಿನಲ್ಲಿ ರಂಗಭೂಮಿ ತಂಡದ ಸಂಕ್ರಾಂತಿ ನಾಟಕದ ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ರಂಗ ಪ್ರವೇಶ. ಅನಂತರ ತಾಂತ್ರಿಕ ವರ್ಗದಲ್ಲಿ, ನಟನಾಗಿ, ನಿರ್ದೇಶಕನಾಗಿ ಸಕ್ರೀಯರು. ತಂದೆ ಆನಂದಗಾಣಿಗರಲ್ಲದೆ ಹಿರಿಯ ರಂಗನಿರ್ದೇಶಕರುಗಳಾದ ಪ್ರಸನ್ನ, ಬಿ.ಆರ್.ನಾಗೇಶ್, ಚಿದಂಬರರಾವ್ ಜಂಬೆ, ಸುರೇಶ್ ಆನಗಳ್ಳಿ, ಶ್ರೀನಿವಾಸ ಪ್ರಭು, ಮಂಡ್ಯ ರಮೇಶ್, ಪ್ರೊ ರಾಮದಾಸ್, ಉದ್ಯಾವರ ಮಾಧವ ಆಚಾರ್ಯ, ವಸಂತ ಬನ್ನಾಡಿ, ಕೃಷ್ಣಮೂರ್ತಿ ಕವತ್ತಾರ್, ಜೀವರಾಂ ಸುಳ್ಯ, ಬಾಸುಮ ಕೊಡಗು, ಮಾಲತೇಶ ಬಡಿಗೇರ್ ಮುಂತಾದವರಿಂದ ರಂಗತರಬೇತಿ ಮತ್ತು ನಾಟಕಗಳಲ್ಲಿ ಕೆಲಸ ಮಾಡಿದ ಅನುಭವ. ಹಲವಾರು ನಾಟಕಗಳಲ್ಲಿ ಅಭಿನಯಿಸಿರುವ ಇವರು ರಾಜ್ಯದ ವಿವಿಧೆಡೆ ಅಲ್ಲದೆ ಮುಂಬೈ, ಸೂರತ್, ಬರೋಡ, ಅಹಮದಬಾದ್, ದೆಹಲಿ, ಹೈದರಾಬಾದ್, ಚೆನ್ನೈ, ಬೆಹರಿನ್, ದುಬೈ, ಅಬುಧಾಬಿ ಸೇರಿದಂತೆ ಹಲವಾರು ಕಡೆಗಳಲ್ಲಿ 300ಕ್ಕೂ ಹೆಚ್ಚು ರಂಗಪ್ರದರ್ಶನ ನೀಡಿರುತ್ತಾರೆ. ಕತ್ತಲತಾದಿ, ಕಾಲಚಕ್ರ, ಯೂ ಟರ್ನ್, ನಂಗ್ಯಾಕೋ ಡೌಟು, ಪಿಟ್ಗಾಸಿ ಪ್ರೇಮ ಪ್ರಸಂಗ ಹೀಗೆ ಹಲವಾರು ನಾಟಕಗಳಲ್ಲದೆ, ಡಾ.ಟಿ.ಎಂ.ಪೈ ಯವರ ಬದುಕನ್ನಾಧರಿಸಿದ ಸ್ವರಚನೆಯ ನಾಟಕ "ಮಾಧವ ನೀ ಬಾ" ನಾಟಕ ಹಾಗೂ ತುಳು ನಾಟಕಗಳ ನಿರ್ದೇಶನವನ್ನು ಮಾಡಿರುತ್ತಾರೆ.


ಹಲವಾರು ನಾಟಕ ಸ್ಪರ್ಧೆಗಳಲ್ಲಿ ಅತ್ಯುತ್ತಮ ನಟ, ನಿರ್ದೇಶಕ ಪ್ರಶಸ್ತಿ ಪಡೆದ ಇವರು ಶಾಲಾಕಾಲೇಜುಗಳಲ್ಲೂ ರಂರತರಬೇತಿ ನೀಡುವುದರೊಂದಿಗೆ, ಬೇರೆ ಬೇರೆ ಕಡೆ ರಂಗತರಬೇತಿ ಶಿಬಿರಗಳಲ್ಲಿ ಸಂಪನ್ಮೂಲವ್ಯಕ್ತಿಯಾಗಿ ದುಡಿದಿದ್ದಾರೆ. ಮುಕ್ತ ಮುಕ್ತ, ಸರಸ್ವತಿ, ಚಂದ್ರಚಕೋರಿ, ಮೈನಾ, ಚಂದ್ರಮುಖಿ, ಸಾಕ್ಷಿ, ಯಶೋದೆ, ಪುನರ್ವಿವಾಹ,

ಲವಲವಿಕೆ, ನಿಹಾರಿಕ, ಶನಿ ಹೀಗೆ ಸುಮಾರು 25ಕ್ಕೂ ಹೆಚ್ಚು ಧಾರಾವಾಹಿಗಳಲ್ಲದೆ ಕಂಚಿಲ್ದಬಾಲೆ(ರಾಷ್ಟ್ರ ಪ್ರಶಸ್ತಿ ವಿಜೇತ), ಬಂಗಾರದ ಕುರಲ್, ದಂಡ್, ನೇಮದಬೂಳ್ಯ ತುಳು ಸಿನಿಮಾ ಮತ್ತು ದೇವರ ನಾಡಲ್ಲಿ, ವಿದಾಯ, ಮತ್ತೆಸತ್ಯಾಗ್ರಹ, ಮಪ್ತಿ, ರಾಜರಥ, ಮೂಕಜ್ಜಿಯ ಕನಸುಗಳು–ಕನ್ನಡ ಸಿನಿಮಾಗಳಲ್ಲಿ ನಟಿಸಿರುತ್ತಾರೆ. 54 ವರ್ಷಗಳ ರಂಗಭೂಮಿ (ರಿ) ಉಡುಪಿ ಸಂಸ್ಥೆಯಲ್ಲಿ 3 ವರ್ಷಗಳಿಂದ ಪ್ರಧಾನ ಕಾರ್ಯದರ್ಶಿಯಾಗಿ ಹಲವಾರು ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಆಯೋಸಿರುತ್ತಾರೆ.

ನಿಡಂಬೂರು ಯುವಕ ಮಂಡಲ ಕಡೆಕಾರು, ರಾಮಧೂತ್ ವ್ಯಾಯಾಮ ಶಾಲೆ ಕುದ್ವಾಡಿ, ಸೋಮ ಕ್ಷತ್ರಿಯ ಗಾಣಿಗ ಸಮಾಜ ಬಾರ್ಕೂರು ಉಡುಪಿ ತುಳುಕೂಟ, ಯಕ್ಷಗಾನ ಕಲಾರಂಗ ಸಂಸ್ಥೆಗಳ ಸದಸ್ಯರಾದ ಇವರಿಗೆ ದುಬೈ ಕನ್ನಡ ಸಂಘ, ಅಬುಧಾಬಿ ತುಳುಸಂಘ, ಮುಂಬೈ ಕನ್ನಡ ಸಂಘ, ಕರ್ನಾಟಕ ಅಸೋಸಿಯೇಷನ್ ಚೆನ್ನೈ, ಅಹಮದಾಬಾದ್ ಕನ್ನಡ ಸಂಘ ಅಲ್ಲದ ಸ್ಥಳೀಯ ಸಂಘ ಸಂಸ್ಥಗಳಿಂದ ಸನ್ಮಾನ ಗೌರವ ಪಡೆದಿರುತ್ತಾರೆ.

---

## ಹರೀಶ್ ಕಿರಣ ತುಂಗ, ಸಾಸ್ತಾನ



ವೃತ್ತಿಯಲ್ಲಿ ಪತ್ರಕರ್ತ ಪ್ರವೃತ್ತಿಯಲ್ಲಿ ರಂಗಕರ್ಮಿ. ಭೂಮಿಕಾ ಹಾರಾಡಿಯಲ್ಲಿ ಸಕ್ರಿಯ ರಂಗನಟನಾಗಿರುವ ಇವರು ಬಿ.ಎಸ್.ರಾಮ್ ಶೆಟ್ಟಿ ನಿರ್ದೇಶನದ ಅಗ್ನಿಲೋಕ, ಅರಗಿನಬೆಟ್ಟ, ವೃತ್ತದ ವೃತ್ತಾಂತ ನಾಟಕಗಳಲ್ಲಿ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿರುತ್ತಾರೆ. ಇವರು ಕಾಲೇಜು ದಿನಗಳಲ್ಲಿ ರಮೇಶ್ ಆಚಾರ್ಯ ನಿರ್ದೇಶನದ ದೇವರ ಹೆಣ ನಾಟಕ, ಶಾಲಾದಿನಗಳಲ್ಲಿ ಹಲವಾರು ಪ್ರಹಸನಗಳನ್ನು ರಚಿಸಿ ನಿರ್ದೇಶಿಸುತ್ತಿದ್ದ ಇವರ ಪ್ರತಿಭೆಗೆ ನೀರೆರೆದು ಬೆಳೆಸಿದವರು ರಮೇಶ್ ಆಚಾರ್ಯ ಮತ್ತು ಭೂಮಿಕಾ ಹಾರಾಡಿ ತಂಡ. ಕಿರುಚಿತ್ರಗಳಲ್ಲೂ ಸಾಕಷ್ಟು ಕಾರ್ಯನಿರ್ವಹಿಸಿದ ಇವರು ರಾಜ್ಯ ಮಟ್ಟದ ಕಿರುಚಿತ್ರ ಸ್ಪರ್ಧೆಗಳಲ್ಲಿ ಅತ್ಯುತ್ತಮ ಸಂಕಲಕ್ಕೆ ಪ್ರಶಸ್ತಿ ಪಡೆದಿರುತ್ತಾರೆ.

---

## ಸುಜಿತ್ ಶೆಟ್ಟಿ ಕಾಪು



ಇವರು 12ನೇ ವಯಸ್ಸಿನಲ್ಲಿ ಬೆಳವಡಿ ಮಲ್ಲಮ್ಮ ನಾಟಕದಲ್ಲಿ ಬಣ್ಣ ಹಚ್ಚಿ ರಂಗಭೂಮಿಗೆ ಪ್ರವೇಶಿಸಿದವರು. ನಂತರ ಗುರುರಾಜ ಮಾರ್ಪಳ್ಳಿಯವರ ಗುಬ್ಬಿದಗೂಡು ರೇಡಿಯೋ ನಾಟಕದಲ್ಲಿ ಅಭಿನಯಿಸಿ ತಾನೊಬ್ಬ ಕಲಾವಿದ ಅಂತ ಆಗಲೇ ಗುರಿತಿಸಿಕೊಂಡವರು. ಶಿರ್ವದ ಸಂತಮೇರಿ ಕಾಲೇಜಿನಲ್ಲಿ ಪದವಿ ಶಿಕ್ಷಣ ಮುಗಿಸಿ ಮುಂದೆ ರಂಗಭೂಮಿಗಾಗಿಯೇ ತನ್ನನ್ನು ಸಮರ್ಪಿಸಿಕೊಂಡು ಮದಿಮಾಲ್ ಮಂಗಳಾ, ಉಳ್ಳಾಲ ರಾಣಿ ಅಬ್ಬಕ್ಕ, ಕಡೀರ ಮಗೆ, ಅಲೆಗೇಪ ಮದ್ಮೆ, ರಾಂಗ್ ನಂಬರ್, ಅಮಸರಮಲ್ಪಡೆ, ಏರ್

ಎಡೆಡಂತಿನಕುಲು, ತೆಡಿಲ್, ಗುರುಪೂಜೆ, ಅಜ್ಜಿಗೇರ್‌ಲಾ ಇಜ್ಜಿ, ಗುತ್ತುದ ಗುರ್ಕಾರ್, ಗೋಕುಲದ ಜೋಕುಲು, ಕಲ್ಕುಡ ಕಲ್ಲುರ್ಟಿ, ಕರಿಯೆ ಕಟ್ಟಿ ಕರಿಮಣಿ, ಪೊಣ್ಣು ಸಂಸಾರ ಕಣ್ಣು, ಕುಂಞಪ್ಪಣ್ಣೆ ಎಂಚ ಉಲ್ಲೆರ್ ಮುಂತಾದ ತುಳು ನಾಟಕಗಳಲ್ಲಿ ಪ್ರಬುದ್ಧ ಅಭಿನಯ ನೀಡಿ ಕಲಾಸಕ್ತರ ಪ್ರಸಂಶೆಗೆ ಪಾತ್ರರದವರು. ರಂಗಭೂಮಿ(ರಿ)ಉಡುಪಿ ತಂಡದ ಬಾಸಭರತ ನಾಟಕದ ಶಕುನಿ ಪಾತ್ರ ಅವರ ಸೃಜನಶೀಲತೆಗೆ ಉತ್ತಮ ನಿದರ್ಶನ. ಕರ್ನಾಟಕ ಮಹಾರಾಷ್ಟ್ರಗಳಲ್ಲಿ 15ಕ್ಕೂ ಹೆಚ್ಚು ಪ್ರದರ್ಶನ ನೀಡಿದ್ದಲ್ಲದೆ ಈ ನಾಟಕ ರೇಡಿಯೋದಲ್ಲೂ ಪ್ರಸಾರವಾಗಿರುತ್ತದೆ.

2004ರಲ್ಲಿ ಜನ್ಮ ತಳೆದ ಸಮಾಜರತ್ನ ಕಾಪು ಲೀಲಾಧರ ಶೆಟ್ಟಿಯವರ ರಂಗತರಂಗ ತಂಡದ ಪ್ರಧಾನ ನಿರ್ವಾಹಕರಾಗಿ ತಂಡದ ತಿಲಕಶಿರ್ಗ್ಯಯೆ, ಪಿರಬನ್ನಗ, ಆಪಿನಿಬೇತೆನೆ, ಯಾಪಲಾ36ಅತ್63, ಖಂಡಿತಾ ಬುಡ್ದ್ ಪೋಪುಜಿ, ಆ ನಿರೆಲ್, ಆಯೆಸುಬಗೆ, ಇಲ್‌ಬದ್ಕ್, ದುಂಬುಪಿರಎನ್ನ್‌ಲೆ ಮುಂತಾದ ನಾಟಕಗಳಲ್ಲಿ ನಟಿಸಿದ ಇವರು ರಂಗತರಂಗತಂಡದೊಂದಿಗೆ ಮಸ್ಕತ್, ದುಬೈ, ಕುವೈತ್, ಮಹಾರಾಷ್ಟ್ರ, ಬೆಂಗಳೂರುಗಳಲ್ಲಿ ನಾಟಕ ಪ್ರದರ್ಶನ ನೀಡಿ ಹಲವಾರು ಸನ್ಮಾನ ಪುರಸ್ಕಾರಗಳನ್ನು ಪಡೆದಿರುತ್ತಾರೆ. ತುಳು ಮತ್ತು ಕನ್ನಡ ನಾಟಕಗಳ ಪ್ರಸಿದ್ಧ ನಿರ್ದೇಶಕರಾದ ಜಗದೀಶ್ ಶೆಟ್ಟಿ ಕೆಂಚನಕರೆ, ಬಾಸುಮ ಕೊಡಗು, ಜೀವನ್ ರಾಂ ಸುಳ್ಯ, ದಿ.ಆನಂದ ಗಾಣಿಗ, ಶಿವಪ್ರಕಾಶ್‌ಪೂಂಜ, ಇವರೆಲ್ಲರ ವಿದ್ಯಾರ್ಥಿಯಾಗಿ ರಂಗಭೂಮಿಯ ವಿಸ್ತಾರವನ್ನು ಅಭ್ಯಸಿಸುತ್ತಲೇ ಇದ್ದಾರೆ. ಸವಿತಾನಂದಳಿಕೆ ನಾರಾಯಣ ಶೆಟ್ಟಿ ನಿರ್ದೇಶನದ ಬೊಜ್ಜ, ಗುರುರಾಜ ಮಾರ್ಪಳ್ಳಿಯವರ ಬಿಡುಗಡೆ ನಾಟಕದಲ್ಲಿ ಪ್ರಧಾನ ಪಾತ್ರ ನಿರ್ವಹಿಸಿದ ಇವರು ಗಿರೀಶ್ ಕಾಸರವಳ್ಳಿಯವರ ಗುಲಾಬಿ ಟಾಕೀಸು ಕನ್ನಡದ ಕಲಾತ್ಮಕ ಪ್ರಶಸ್ತಿ ವಿಜೇತ ಚಿತ್ರ ಹಾಗೂ ಬಂದೆ ಬರುತ್ತಾವ ಕಾಲ, ಪಂಜರದ ಗಿಳಿ, ಪ್ರೀತಿಯಿಂದ ಮೊದಲಾದ ಧಾರವಾಹಿಗಳಲ್ಲಿ ಅಭಿನಯಿಸಿದ್ದಾರೆ. ರಂಗಭೂಮಿ (ರಿ) ಉಡುಪಿ, ತುಳುಕಲಾವಿದರ ಒಕ್ಕೂಟ ದಕ್ಷಿಣ ಕನ್ನಡ ಜಿಲ್ಲೆ ಸಂಸ್ಥೆಗಳ ಆಜೀವ ಸದಸ್ಯರಾಗಿದ್ದಾರೆ.

## ರೋಹಿತ್ ಕುಮಾರ್ ಮಲ್ಪೆ.




ಚಿಕ್ಕಂದಿನಲ್ಲೆ ಕಲಾಸಕ್ತಿ ಹೊಂದಿದ್ದ ಇವರು ಸಂಗೀತ, ನಾಟಕ, ಗಾಯನ, ಕೀಬೋರ್ಡ್, ವೀಣಾವಾದನ, ಚಿತ್ರಕಲೆ, ಆವೆ ಮಣ್ಣಿನ ಶಿಲ್ಪ, ಸಿಮೆಂಟ್ ಶಿಲ್ಪ ರಚನೆ, ಸೇರಿದಂತೆ ಡಿಜಿಟಲ್ ಪೋಸ್ಟರ್ ಡಿಸೈನಿಂಗ್ ರಚನೆಯಲ್ಲೂ ನಿಷ್ಣಾತರು. ಉಡುಪಿಯ ಖ್ಯಾತ ಸಂಗೀತ ಗುರುಗಳಾದ ಶ್ರೀ ಶ್ರೀಸದಾಸರ ಗರಡಿಯಲ್ಲಿ ಸಂಗೀತ ಮತ್ತು ಹಾರ್ಮೋನಿಯಂ ಅಭ್ಯಾಸ ಮಾಡಿರುತ್ತಾರೆ. ನೂರಕ್ಕೂ ಹೆಚ್ಚು ಕನ್ನಡ ಮತ್ತು ತುಳು ನಾಟಕಗಳಿಗೆ ರಾಗ ಸಂಯೋಜನೆ, ಸಂಗೀತ ನಿರ್ವಹಣೆ ಮಾಡಿ ತುಳು ಕೂಟದ ನಾಟಕ ಸ್ಪರ್ಧೆ, ಕನ್ನಡ ನಾಟಕ ಸ್ಪರ್ಧೆಗಳಲ್ಲಿ ಬಹುಮಾನ ಪಡೆದಿರುತ್ತಾರೆ. ನಾಟಕರಂಗ, ಚಲನಚಿತ್ರರಂಗಗಳಲ್ಲಿ ಯವ ಸಂಗೀತ ನಿರ್ದೇಶಕರಾಗಿ ಗುರುತಿಸಿಕೊಂಡ ಇವರು ಅನೇಕ ರಾಜ್ಯ ಪ್ರಶಸ್ತಿ

ವಿಜೇತ ನಾಟಕಗಳಿಗೆ, ಕಿರುಚಿತ್ರಗಳಿಗೆ ಸಂಗೀತ ನೀಡಿರುತ್ತಾರೆ. ಆಡಿಯೋ ವಿಡಿಯೋ ರೇಕಾಂರ್ಡಿಂಗ್, ಎಡಿಟಿಂಗ್ ತಂತ್ರಜ್ಞಾನವನ್ನು ಕಲಿತು ಅನೇಕ ಕಿರುಚಿತ್ರಗಳಿಗೆ ಸ್ವತ: ರೇಕಾರ್ಡಿಂಗ್ ಮಾಡಿರುತ್ತಾರೆ. ದಿಶಾ ಕಮ್ಯೂನಿಕೇಶನ್ ನಿರ್ಮಾಣದ ಅಕ್ಕು ಕಿರುಚಿತ್ರ ಹಾಗೂ ಸಂಗೀತಕ್ಕೆ ಯುನಿಸೆಫ್ ಪ್ರಸಾರ ಭಾರತಿ ರಾಷ್ಟ್ರೀಯ ಪ್ರಶಸ್ತಿ ಲಭಿಸಿದೆ. ರಾಜ್ಯ ಪ್ರಶಸ್ತಿ ವಿಜೇತ ತುಳು ಚಿತ್ರ ಭಾಗ್ಯ, ರಾಷ್ಟ್ರ ಪ್ರಶಸ್ತಿ ವಿಜೇತ ಅಕ್ಕು, ಹಳ್ಳಿಮನೆ, ಅಣ್ಣು, ಗುಡ್ಡದಮನೆ, ಕರಾವಳಿ ಚಿತ್ರೋತ್ಸವ ಪ್ರಶಸ್ತಿ ವಿಜೇತ ಮಟ್ಟಿಲ್ ಕಿರುಚಿತ್ರಗಳಿಗೆ ಸಂಗೀತ ನೀಡಿರುತ್ತಾರೆ.

---

## ದಯಾನಂದ ಶೆಟ್ಟಿ



49 ವಯಸ್ಸಿನ ದಯಾನಂದ ಅವರು ಕೃಷಿಕರಾಗಿದ್ದು 25ವರ್ಷಗಳಿಂದ"ಕೂಡ್ಲಿ ಕಲಾವಿದರ್"ಪೆರ್ಡೂರು ತಂಡದ ಖಾಯಂ ಸದಸ್ಯನಾಗಿದ್ದು 150ಕ್ಕೂ ಹೆಚ್ಚು ಕನ್ನಡ ಮತ್ತು ತುಳು ನಾಟಕಗಳಲ್ಲಿ ಅಭಿನಯಿಸಿರುತ್ತಾರೆ. ರಾಜ್ಯಮಟ್ಟದ ನಾಟಕ ಸ್ಪರ್ಧೆಯಲ್ಲಿ ಉತ್ತಮ ಪೋಷಕ ನಟ ಪ್ರಶಸ್ತಿ ಪಡೆದಿರುತ್ತಾರೆ. ಬೆಂಗಳೂರು ದೂರದರ್ಶನ ಚಂದನದಲ್ಲಿ "ಕೋಣಕೋದಂಡ" ಎಂಬ ಕನ್ನಡ ನಾಟಕದಲ್ಲಿ ಅಭಿನಯ. ***ಮೊ:9945924426***


---

## ಚೇತನ್ ಬಾಪುತೋಟ



ಶಾಲಾದಿನಗಳಲ್ಲೇ ನಾಟಕ ಮತ್ತು ನೃತ್ಯದ ಆಸಕ್ತಿ ಹೊಂದಿದ್ದ ಇವರು ಎಂ.ಎಸ್. ಭಟ್ ನಿರ್ದೇಶನದ ಯಮಲೋಕ ಹಾಗೂ ದಿವಾಕರ್ ಕಟೀಲ್ ನಿರ್ದೇಶನದ ಚಂದಮಾಮ ಅಲ್ಲದೆ ಆಲ್ ಎನ್ನಾಲ್, ಟಚ್ಚಿಡ್ ಇಪ್ಪುಲೆ ಯಾಪಲ ತುಳುನಾಟಕಗಳಲ್ಲಿ ಅಭಿನಯಿಸಿರುತ್ತಾರೆ. ಮೋಕೆದ ಪೊಣ್ಣು, ಮನಸೇ ತುಳು ಅಲ್ಬಂ ಸಾಂಗ್‌ನಲ್ಲಿ ಅಭಿನಯಿಸಿರುವ ಇವರು ಪ್ರಸ್ತುತ ಸುಮನಸ ಕೊಡವೂರು ತಂಡದ ಕಲಾವಿದರಾಗಿ, ನಿರ್ದೇಶಕರಾದ ಕೃಷ್ಣಮೂರ್ತಿ ಕವತ್ತಾರ್, ಪ್ರವೀಣ್ ಜಿ.ಕೊಡವೂರು, ಯೋಗೀಶ್ ಕೊಳಲಗಿರಿ, ಪ್ರವೀಣ ಚಂದ್ರ ತೋನ್ಸೆ ಇವರ ಗರಡಿಯಲ್ಲಿ ರಂಗಅಭ್ಯಾಸ ಮುಂದುವರಿಸಿದ್ದಾರೆ.

---



## ಪಿ. ಸುಂದರ ಶೆಟ್ಟಿ

ಟೈಲರಿಂಗ್ ಕೆಲಸದಲ್ಲಿ ತೊಡಗಿಸಿಕೊಂಡಿರುವ ಇವರು 25ವರ್ಷಗಳಿಂದ "ಕೂಡ್ಲಿ ಕಲಾವಿದರ್"ಪೆರ್ಡೂರು ತಂಡದ ಸದಸ್ಯನಾಗಿದ್ದು 100ಕ್ಕೂ ಹೆಚ್ಚು ಕನ್ನಡ ಮತ್ತು ತುಳು ನಾಟಕಗಳಲ್ಲಿ ಅಭಿನಯಿಸಿರುತ್ತಾರೆ. ***ಮೊ:9900767031***

## ನಾಗೇಂದ್ರ ಕುಮಾರ್ ಬಂಕೇಶ್ವರ



ಲಾವಣ್ಯ (ರಿ)ಬೈಂದೂರು ಸಂಸ್ಥೆಯು ಮಕ್ಕಳ ರಂಗಭೂಮಿಯ ಮೂಲಕ ರಂಗಪ್ರವೇಶ ಮಾಡಿದ ಇವರು ನಟನಾಗಿ, ನೃತ್ಯ ನಿರ್ದೇಶಕನಾಗಿ, ಸಂಘಟಕನಾಗಿ ಗುರುತಿಸಿ ಕೊಂಡಿದ್ದಾರೆ. 3ವರ್ಷಗಳ ಕಾಲ ಕಾರ್ಯದರ್ಶಿಯಾಗಿ ನಾಟಕೋತ್ಸವ, ನಾಟಕ ಸ್ಪರ್ಧೆಗಳನ್ನು ಸಂಘಟಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಆಲೀಬಾಬಾ ಮತ್ತು 40 ಕಳ್ಳರು, ಏಕಲವ್ಯ, ದೃಷ್ಟಿ, ಮಾವಮಾವ ಕಥೆ ಕೇಳು, ನಾಳೆ ಬನ್ನಿ, ನಾಯಿಕತೆ, ನಾವೆಲ್ಹೋಗಬೇಕು, ಬೇಲಿ ಮತ್ತು ಹೋಲ, ಪರಿಹಾರ, ಕತ್ತಲೆ ದಾರಿದೂರ, ತಂತಿ, ಸಿನಿಮಹಾತ್ಮೆ, ಮುದ್ದಣ್ಣನ ಪ್ರಮೋಷನ್ ಪ್ರಸಂಗ, ಮರಣ ಮೃದಂಗ, ಕರ್ನಾಟಕರಮಾರಮಣ, ಗಾಂಧಿಗೆ ಸಾವಿಲ್ಲ, ದಾರಿ ಯಾವುದಯ್ಯ ಮುಂದೆ, ಕನಸಿನವರು, ಭೂತಾಳ ಪಾಂಡ್ಯ ಮುಂತಾದ ನಾಟಕಗಳಲ್ಲಿ ಅಭಿನಯ. ದಶಾವತಾರ, ಗೋವಿನ ಹಾಡು, ಪುಣ್ಯಕೋಟಿ ಮುಂತಾದ ಮಕ್ಕಳ ನಾಟಕಗಳನ್ನು, ಗೀತ ರೂಪಕಗಳನ್ನು ನಿರ್ದೇಸಿರುತ್ತಾರೆ.

ಇವರ ನಟನೆಗೆ 2 ಬಾರಿ ರಾಜ್ಯ ಮಟ್ಟದ ಬಹುಮಾನ ಬಂದಿರುತ್ತದೆ. ವಿದ್ವಾನ್ ಚಂದ್ರಶೇಖರ ನಾವುಡರ ಶಿಷ್ಯರಾಗಿ ಸುರಭಿ ನೃತ್ಯ ಶಾಲೆಯಲ್ಲಿ ಭರತನಾಟ್ಯ ಕಲಿಕೆ. 15ವರ್ಷಗಳಿಂದ ರಿದಂ ನೃತ್ಯ ಶಾಲೆ ನಡೆಸುತ್ತಾ 800ಕ್ಕೂ ಹೆಚ್ಚು ನೃತ್ಯ ಕಾರ್ಯಕ್ರಮ ನೀಡಿರುತ್ತಾರೆ. ಇವರ ನೃತ್ಯ ಸಂಯೋಜನೆಗೆ ಜಿಲ್ಲಾ ಮತ್ತು ರಾಜ್ಯ ಮಟ್ಟದ ಬಹುಮಾನಗಳು ಬಂದಿರುತ್ತವೆ.

***ಮೊ:9341494959***

---

## ಕೆ.ಜಿ.ಭಟ್




ಪ್ರಾಥಮಿಕ ಶಾಲಾ ವಿದ್ಯಾರ್ಥಿಯಾಗಿದ್ದಾಗಲೇ ರಂಗಭೂಮಿ ಆಸಕ್ತಿ, ಕಾಲೇಜು ಹಂತದಲ್ಲಿ ನಾಟಕಗಳ ಸಂಯೋಜನೆ ಮಾಡುತ್ತಾ ಸಾಮಾಜಿಕ ನಗೆ ನಾಟಕಗಳಲ್ಲಿ ಅಭಿನಯ. ದಸರಾ, ಮಲತಾಯಿ, ಆನಂದ ನಿವಾಸ ಮುಂತಾದ ನಾಟಕಗಳಲ್ಲಿ ಸ್ತ್ರೀಪಾತ್ರಗಳ ನಿರ್ವಹಣೆ. ಲಾವಣ್ಯದ ಏಕಲವ್ಯ, ಚೋರಚರಣದಾಸ, ಕತ್ತಲೆದಾರಿ ದೂರ, ಶ್ರೀರಾಘವೇಂದ್ರ ಮಹಾತ್ಮೆ ನಾಟಕಗಳಲ್ಲಿ ಅಭಿನಯ.

ಇವರು ನಿರ್ದೇಶಿಸಿದ ಹಲವಾರು ನಾಟಕಗಳಿಗೆ ಶಾಲೆಗಳ ಪ್ರತಿಭಾ ಕಾರಂಜಿಗಳಲ್ಲಿ ಅನೇಕ ಪ್ರಶಸ್ತಿ ಲಭಿಸಿವೆ. ಪುಣ್ಯಭಾರತ ನಮ್ಮ ದೇಶ, ಹಾಗೂ 30ಕ್ಕೂ ಹೆಚ್ಚು ಪೌರಾಣಿಕ, ಐತಿಹಾಸಿಕ ನಾಟಕಗಳನ್ನು ನಿರ್ದೇಶಿಸಿರುತ್ತಾರೆ. ನಾಟಕ ಅಕಾಡೆಮಿ ಜಿಲ್ಲಾ ನಾಟಕೋತ್ಸವದಲ್ಲಿ ಸನ್ಮಾನವಲ್ಲದೆ ಹಲವಾರು ಸಂಘ ಸಂಸ್ಥೆಗಳು ಗೌರವಿಸಿ ಸನ್ಮಾನಿಸಿವೆ.

***ಮೊ:9880158255***

## ಕೆ.ಪ್ರಭಾಕರನ್



ಮೂಲತ: ಭದ್ರಾವತಿಯವರಾದ ನಿವೃತ್ತ ಮೆಸ್ಕಾಂ ಅಧಿಕಾರಿ. 40 ವರ್ಷಗಳ ರಂಗಾನುಭವ ಹೊಂದಿದ ಇವರು ಮಿತ್ರ ಮಂಡಳಿ ಜೋಗ್ ಪಾಲ್ಸ್, ರಂಗ ಅಧ್ಯಯನ ಕೇಂದ್ರ ಕುಂದಾಪುರ, ಲಾವಣ್ಯ(ರಿ)ಬೈಂದೂರು, ಸಮುದಾಯ ಕುಂದಾಪುರಗಳಲ್ಲಿ 4 ದಶಕಗಳ ರಂಗಾನುಭವ ಹೊಂದಿದ್ದಾರೆ. ಲಾವಣ್ಯದ ನಿರ್ದೇಶಕರಾಗಿ, ಅಧ್ಯಕ್ಷರಾಗಿ, ಗೌರವಾಧ್ಯಕ್ಷರಾಗಿ ವಿಂಶತಿ, ಬೆಳ್ಳಿಹಬ್ಬಗಳಿಗೆ 30 ವರ್ಷಗಳಿಂದ ಮಾರ್ಗದರ್ಶಕ ರಾಗಿತ್ತಾರೆ. ಮೀನಿನ ಹೆಜ್ಜೆ, ರೊಟ್ಟಿಋಣ, ಸತ್ಯಹರಿಶ್ಚಂದ್ರ , ಟಿಪ್ಪುಸುಲ್ತಾನ್, ಕರ್ನಾಟಕ ರಮಾರಮಣ, ಮಾವಮಾವ ಕತೆ ಕೇಳು, ಟಿಂಗರ ಬುಡ್ಡಣ್ಣ, ನಾವಿಲ್ಲದಾಗ, ದೃಷ್ಠಿ, ಚೋರ ಚರಣದಾಸ, ಪರಿಹಾರ, ಸಾಮ್ರಾಟ್ ಅಶೋಕ, ಲಚ್ಚಿ, ಸರ್ಪಚುಂಬನ ನಾಟಕಗಳಲ್ಲಿ ಅಭಿನಯ.


ಟಿಂಗರಬುಡ್ಡಣ್ಣ, ಮಾವಮಾವ ಕತೆ ಕೇಳು ನಾಟಕಗಳ ನಿರ್ದೇಶನ.

ರಾಜ್ಯಮಟ್ಟದ ನಾಟಕ ಸ್ಪರ್ಧೆಗಳಲ್ಲಿ 3ಬಾರಿ ನಟನೆಗೆ, 2ಬಾರಿ ನಿರ್ದೇಶನಕ್ಕೆ ಬಹುಮಾನ ಲಭಿಸಿದೆ. ರಾಜ್ಯಸಮುದಾಯ ಸಂಘಟನೆಯಲ್ಲಿ ಕ್ರಿಯಾಶೀಲರಾದ ಇವರು ನಿವೃತ್ತಿ ನಂತರ ಅನುವಾದ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದಾರೆ. ಇವರ ರಂಗ ಸೇವೆಗಾಗಿ ಹಲವಾರು ರಂಗ ಸನ್ಮಾನಗಳು ದೊರೆತಿವೆ.

***ಮೊ:9483352850***

---

## ಡಿ.ಮೂರ್ತಿ ಬೈಂದೂರು.



ನಟನೆ, ಸುಗಮ ಸಂಗೀತ, ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ, ತಬಲಾವನ್ನು ಪ್ರವೃತ್ತಿಯಾಗಿಸಿಕೊಂಡಿದ್ದಾರೆ. ಸಂಗೀತ ಗುರುಗಳಾದ ಗಣಪತಿ ಭಟ್ ಹಾಸಣಿಗಿ, ಆರ್.ಪಿ.ಅಸುಂಡಿ, ಶ್ರೀ ನಾಗಭೂಷಣ ಹೆಗಡೆ, ವಿದ್ವಾನ್ ಅನಂತ್ ಹೆಬ್ಬಾರ್‌ರಿಂದ ಸಂಗೀತಭ್ಯಾಸ ಪಡೆದ ಇವರು ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ ಜೂನಿಯರ್ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿರುತ್ತಾರೆ. 6ನೇ ತರಗತಿಯಿಂದಲೇ ನಾಟಕದ ಆಸಕ್ತಿ ಹೊಂದಿದ್ದ ಇವರಿಗೆ ಚಿದಂಬರರಾವ್ ಜಂಬೆ, ಎಸ್.ಕೆ.ಭಟ್, ಸೀತಾರಾಮ ಶೆಟ್ಟಿ ಕೂರಾಡಿ, ಸುರೇಶ ಆನಗಳ್ಳಿ, ವಸಂತ ಬನ್ನಾಡಿ, ಗಣೇಶ ಕಾರಂತ, ರಾಜೇಂದ್ರ ಕಾರಂತವರ ನಿರ್ದೇಶನದ ನಾಟಕಗಳಲ್ಲಿ ಅಭಿನಯಿಸಿದ ಅನುಭವವಿದೆ. ಮೊದಲು ಶ್ರೀ ರಾಜರಾಜೇಶ್ವರಿ ರಂಗವಿಭಾಗ ಮಂಚಿಕೇರಿಯಲ್ಲಿ ಸಕ್ರಿಯರಾಗಿದ್ದ ಇವರು 25 ವರ್ಷಗಳಿಂದ ಲಾವಣ್ಯ(ರಿ)ಬೈಂದೂರಿನಲ್ಲಿ ನಟನಾಗಿ, ಪ್ರಧಾನ ಗಾಯಕನಾಗಿ, ನೇಪತ್ಯ ಹಾಗೂ ಸಂಘಟಕನಾಗಿ ಕೆಲಸ ನಿರ್ವಹಿಸುತ್ತಿದ್ದಾರೆ.

ಸುಮಾರು 50ಕ್ಕೂ ಹೆಚ್ಚು ನಾಟಕಗಳಲ್ಲಿ ಅಭಿನಯ. 500ಕ್ಕೂ ಹೆಚ್ಚು ಪ್ರದರ್ಶನ

ನೀಡಿರುತ್ತಾರೆ. ಗಾಯನ, ರಾಗ ಸಂಯೋಜನೆ ಅಲ್ಲದೆ 50ಕ್ಕೂ ಹೆಚ್ಚು ನಾಟಕಗಳಿಗೆ ರಾಗಸಂಯೋಜನೆ ಹಾಗೂ ಹಿನ್ನೆಲೆ ಸಂಗೀತ ನೀಡಿದ್ದಾರೆ. ರಾಜ್ಯಮಟ್ಟದ ನಾಟಕ ಸ್ಪರ್ಧೆಗಳಲ್ಲಿ ಇವರ ಸಂಯೋಜನೆಗೆ 10ಕ್ಕೂ ಹೆಚ್ಚು ಬಹುಮಾನ ದೊರೆತಿದೆ. 1000ಕ್ಕೂ ಹೆಚ್ಚು ಸಂಗೀತ ಕಾರ್ಯಕ್ರಮ ನೀಡಿರುವ ಇವರನ್ನು ಅಂಬೇಡ್ಕರ್ ಯುವಕ ಸಂಘ ಬೈಂದೂರು, ಮಿತ್ರ ಮಂಡಳಿ ಪಡುವರಿ ಸನ್ಮಾನಿಸಿ ಗೌರವಿಸಿದೆ.

***ಮೊ:9448968949***

---

## ಪಿ.ಎಂ. ಪ್ರಸನ್ನ ಹೆಬ್ಬಾರ್



ಫೋಟೋಗ್ರಾಫರ್ ಆಗಿರುವ 20 ವರ್ಷಗಳಿಂದ"ಕೂಡ್ಲಿ ಕಲಾವಿದರ್" ಪೆರ್ಡೂರು ತಂಡದ ಖಾಯಂ ಸದಸ್ಯನಾಗಿದ್ದು 100ಕ್ಕೂ ಹೆಚ್ಚು ಕನ್ನಡ ಮತ್ತು ತುಳು ನಾಟಕಗಳಲ್ಲಿ ಅಭಿನಯಿಸಿ ರಂಗಭೂಮಿಯಲ್ಲೇ ತೊಡಗಿಸಿಕೊಂಡಿದ್ದಾರೆ.

***ಮೊ:9845821277***

---

## ಬಿ.ಗಣೇಶ ಕಾರಂತ



1977 ರಿಂದ 1998ರವರೆಗೆ ಲಾವಣ್ಯ ಬೈಂದೂರು ಸಂಸ್ಥೆಯ ಸಂಸ್ಥಾಪಕ ಕಾರ್ಯದರ್ಶಿ. 1998ರಿಂದ 2004ವರೆಗೆ ಅಧ್ಯಕ್ಷರಾಗಿ ನಟನೆ ಮತ್ತು ನಿರ್ದೇಶಕರಾಗಿ ಸಕ್ರೀಯರಾಗಿರುತ್ತಾರೆ.

1993ರಲ್ಲಿ ಕಾಲೇಜು ದಿನಗಳಿಂದಲೇ ನಾಟಕ ಕ್ಷೇತ್ರದಲ್ಲಿ ತೊಡಗಿಸಿಕೊಂಡು ರಾಮ ಭಜನಾ ಮಂಡಳಿ, ಗೆಳೆಯರ ಬಳಗ ಅಭಿನಯ, ಬೈಂದೂರು ಸುತ್ತ ಮುತ್ತ ಹತ್ತು ಹಲವು ಶಾಲಾ ಕಾಲೇಜು, ಸಂಘ ಸಂಸ್ಥೆಗಳಗೆ ನಾಟಕಗಳ ನಿರ್ದೇಶನ. ರೊಟ್ಟಿಋಣ, ನಾವಿಲ್ಲದಾಗ, ಮೀನಿನ ಹೆಜ್ಜೆ, ತ್ಯಾಗಿ, ಟೆಂಗರಬುಡ್ಡಣ್ಣ, ಚೋರಚರಣದಾಸ, ಉದ್ಧವ, ಏಕಲವ್ಯ, ಮಾವ ಮಾವ ಕತೆ ಕೇಳು, ಸಮುಯಕ್ಕೊಂದು ಸುಳ್ಳು, ಲಚ್ಚಿ, ಬೇಲಿ ಮತ್ತು ನಾಯಿಕತೆ, ಕತ್ತಲೆ ದಾರಿ ದೂರ, ಗಾಂಧಿಗೆ ಸಾವಿಲ್ಲ ಹೀಗೆ 100ಕ್ಕೂ ಹೆಚ್ಚು ನಾಟಕಗಳಲ್ಲಿ ಅಭಿನಯ ಮತ್ತು ನಿರ್ದೇಶನ.


ಶಿವಭೂತಿ, ಆಲೀಬಾಬ ಮತ್ತು 40ಕಳ್ಳರು, ಅಜ್ಜೀಕತೆ, ನಾಣಿಭಟ್ಟನ ಸ್ವರ್ಗದ ಕನಸು, ಹೂವುಗಳು ಅರಳಲಿ, ಸತ್ಯದ ಕುಣಿತ, ಸತ್ಯವಾನ್ ಸಾವಿತ್ರಿ, ಭಕ್ತಪ್ರಹ್ಲಾದ, ಭಕ್ತ ಧ್ರುವ, ಮಂಥರೆ ಮುಂತಾದ ಮಕ್ಕಳ ನಾಟಕಗಳಲ್ಲದೆ, ಸತ್ಯ ಹರಿಶ್ಚಂದ್ರ, ಶಕುಂತಲಾ, ಸೀತಾ ಪರಿತ್ಯಾಗ, ಚಂದ್ರಹಾಸ, ಟಿಪ್ಪು ಸುಲ್ತಾನ, ಅಳಿಲುರಾಮಾಯಣ, ಸಾಮ್ರಾಟ್ ಅಶೋಕ, ರಾಘವೇಂದ್ರ ಮಹಾತ್ಮೆ, ಬಿಚ್ಚುಗತ್ತಿ, ದಿವ್ಯ ದರ್ಶನ, ವೀರ ಪುರೂರವ ಮುಂತಾದ ಪೌರಾಣಿಕ ಹಾಗೂ ಐತಿಹಾಸಿಕಗಳಲ್ಲೂ ಅಭಿನಯ, ನಿರ್ದೇಶನದ ಅನುಭವ. ಇವರ 4 ದಶಕಗಳ ರಂಗಸಾಧನೆ ಗುರುತಿಸಿ 60ಕ್ಕೂ ಹೆಚ್ಚಿನ ಸಂಘಸಂಸ್ಥೆಗಳು ಪ್ರಶಸ್ತಿ

ಪುರಸ್ಕಾರಗಳೊಂದಿಗೆ ಗೌರವಿಸಿದೆ. 2011ರಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಸುವರ್ಣ ರಂಗಸಾಧಕ ಪ್ರಶಸ್ತಿ ನೀಡಿ ಗೌರವಿಸಿದೆ. ಇವರ ನಿರ್ದೇಶನದ ಹಲವಾರು ನಾಟಕಗಳು ಪ್ರಶಸ್ತಿ ಪಡೆದಿರುವುದಲ್ಲದೆ, ದೂರದರ್ಶನಗಳಲ್ಲೂ ಪ್ರಸಾರವಾಗಿದೆ.

***ಮೊ:8762369238***

---

## ಎ.ಆರ್.ಬಾಲಚಂದ್ರ




ವೃತ್ತಿಯಲ್ಲಿ ಉದ್ಯಮಿಯಾಗಿರುವ ಇವರು ಪ್ರವೃತ್ತಿಯಲ್ಲಿ ನಟ, ಕಲಾಪೋಷಕ. ಲಾವಣ್ಯದ ಸ್ಥಾಪಕ ಸದಸ್ಯ. ಲಾವಣ್ಯದ ರಂಗಮನೆಯಲ್ಲಿ ಪ್ರಮುಖ ಪಾತ್ರವಹಿಸಿರುತ್ತಾರೆ. ಲಾವಣ್ಯದ ಇದುವರೆಗಿನ ನಾಟಕೋತ್ಸವ ನಾಟಕ ಸ್ಪರ್ಧೆಗಳಲ್ಲಿ ಸಮಿತಿಯ ಗೌರವಾಧ್ಯಕ್ಷರಾಗಿ ಸೇವೆ. ದಶಮಾನೋತ್ಸವ, ವಿಂಶತಿ, ತ್ರಿಂಶತಿ, ರಂಗಶ್ರೀ, ಪಂಚರಂಗಿ, ರಂಗತರಂಗ ನಾಟಕಸ್ಪರ್ಧೆ, ನಾಟಕೋತ್ಸವಗಳ ಪ್ರಧಾನ ಪೋಷಕರಾಗಿ ಸಹಕರಿಸಿರುತ್ತಾರೆ.

***ಮೊ:9867032677***

---

## ಉದಯ್ ಆಚಾರ್



ಉದಯ್ ಆರ್ಟ್ಸ್ ಮಾಲಿಕರಾದ ಇವರು 28ವರ್ಷಗಳಿಂದ ಲಾವಣ್ಯ(ರಿ)ಬೈಂದೂರು ಸಂಘಟನೆಯಲ್ಲಿ ಸಕ್ರಿಯರು. ನೇಪಥ್ಯ ಕಲಾವಿದರಾದ ಇವರು ಲಾವಣ್ಯದ ಪ್ರಮುಖ ನಾಟಕಗಳಿಗೆ ರಂಗಸಜ್ಜಿಕೆ, ಬೆಳಕಿನ ವಿನ್ಯಾಸ, ಮಾಡುತ್ತಾ ನಾಟಕಗಳಲ್ಲೂ ಸಣ್ಣ ಪುಟ್ಟ ಪಾತ್ರಗಳನ್ನು ನಿರ್ವಹಿಸುತ್ತಾ ಬಂದಿದ್ದಾರೆ. 1998–2004ರವರೆಗೆ ಲಾವಣ್ಯದ ಪ್ರಧಾನ ಕಾರ್ಯದರ್ಶಿಯಾಗಿ ಲಾವಣ್ಯದ ಬೆಳ್ಳಿ ಹಬ್ಬ ಆಚರಣೆ ಮತ್ತು ಕಟ್ಟಡ ನಿರ್ಮಾಣದಲ್ಲಿ ಪ್ರಮುಖ ಪಾತ್ರವಹಿಸಿರುತ್ತಾರೆ. ನಾಯಿಕತೆ, ಬೇಲಿ ಮತ್ತು ಹೊಲ, ಮುದ್ದಣ್ಣನ ಪ್ರಮೋಷನ್ ಪ್ರಸಂಗ ಮುಂತಾದ ನಾಟಕಗಳಿಗೆ ರಂಗಸಜ್ಜಿಕೆ ಮಾಡಿರುತ್ತಾರೆ. ಉದಯ ಆರ್ಟ್ಸ್ ಮೂಲಕ ಅನೇಕ ನಾಟಕಗಳಿಗೆ ಸೆಟ್‌ಡಿಸೈನ್ ಮಾಡಿದ್ದಾರೆ.

***ಮೊ: 9343888444***

---

## ರೋಷನ್ ಕುಮಾರ್



ಶಾಲಾ ದಿನಗಳಲ್ಲೆ ನಾಟಕಗಳಲ್ಲಿ ಪಾತ್ರ ನಿರ್ವಹಣೆ. ಗಣೇಶ ಕಾರಂತ, ಸತ್ಯಾನಾ ಕೊಡೇರಿ, ಸೀತಾರಾಮ ಕೂರಾಡಿ, ಸುರೇಶ್ ಆನಗಳ್ಳಿ, ರಾಜೇಂದ್ರ ಕಾರಂತ, ಗಿರೀಶ್ ಬೈಂದೂರು, ಯೋಗೀಶ್ ಬಂಕೇಶ್ವರರವರ ನಿರ್ದೇಶನದ ನಾಟಕಗಳಲ್ಲಿ ಅಭಿನಯ. ಧಾಣಡಂಗುರ, ಬಂಗಾರದ ಗಿಣಿ, ಶಿವಭೂತಿ, ದೃಷ್ಟಿ, ಏಕಲವ್ಯ,

ಮರಣ ಮೃದಂಗ, ಮುದ್ದಣ್ಣನ ಪ್ರಮೋಷನ್ ಪ್ರಸಂಗ, ಗಾಂಧಿಗೆ ಸಾವಿಲ್ಲ ಮುಂತಾದ ನಾಟಕಗಳಲ್ಲಿ ಅಭಿನಯ. ಸತ್ರು ಅಂದ್ರೆ ಸಾಯ್ತಾರಾ, ನಾಣಿ ಭಟ್ಟನ ಸ್ವರ್ಗದ ಕನಸು ಹೂವುಗಳು ಅರಳಲಿ ಮಕ್ಕಳಿಗೆ ನಿರ್ದೇಶಿಸಿದ ನಾಟಕಗಳು.

***ಮೊ:9535295045***

---

## ಉಮೇಶ ಕುಮಾರ್ ಬೈಂದೂರು




ನಟ, ಸಂಘಟಕ, ಕಲಾಪೋಷಕರಾಗಿರುವ ಇವರು ಲಾವಣ್ಯ (ರಿ)ಬೈಂದೂರು ಸ್ಥಾಪಕ ಸದಸ್ಯರಾಗಿ ಸಂಸ್ಥೆಯ ನಾಟಕೋತ್ಸವ ನಾಟಕ ಪ್ರದರ್ಶನಗಳಲ್ಲಿ ಪ್ರಧಾನ ಪಾತ್ರ ವಹಿಸಿರುತ್ತಾರೆ.
ಮೀನಿನ ಹೆಜ್ಜೆ, ಕಲೆಯ ಕೊಲೆ, ಹೂವುಮುಳ್ಳು, ರೊಟ್ಟಿ ಋಣ, ಯಾರು ನನ್ನವರು, ತ್ಯಾಗಿ, ಸಮಾಜಕ್ಕೆ ಸವಾಲ್, ಲಾಟರಿ ಟಿಕೆಟ್, ಗಾಳಿಪಟ, ಸರ್ಪಚುಂಬನ, ಒಡೆದ ಹಾಲು ಮುಂತಾದ ನಾಟಕಗಳಲ್ಲಿ ಅಭಿನಯಿಸಿರುತ್ತಾರೆ.

***ಮೊ:9141456564***

---

## ಗಣಪತಿ ಎಸ್. ಬಂಕೇಶ್ವರ



ಪ್ರೌಢಶಾಲಾ ಶಿಕ್ಷಕನಾಗಿ ಬಡ್ತಿ ಹೊಂದಿದ ಬಳಿಕ ಭಜನೆ, ಯಕ್ಷಗಾನ, ನಾಟಕಗಳಲ್ಲಿ ಆಸಕ್ತಿವಹಿಸಿ, ಯಕ್ಷಗಾನ ತಾಳಮದ್ದಳೆಗಳಲ್ಲಿ ಅರ್ಥಧಾರಿಯಾಗಿ ಭಾಗಿಯಾದರು. ಎನ್.ಎಸ್.ರಾವ್‌ರವರ ವಿಷಜ್ವಾಲೆ ಇವರ ಮೊದಲ ನಾಟಕ. ಬೆಂಗಳೂರಿನಿಂದ ಬೈಂದೂರಿಗೆ ವರ್ಗವಾಗಿ ಬಂದ ಮೇಲೆ ಪಡುವರಿಯ ಮಿತ್ರ ಮಂಡಳಿ ನಾಟಕಗಳಲ್ಲಿ ಪಾತ್ರ ನಿರ್ವಹಣೆ.
1987ರಿಂದ ಲಾವಣ್ಯದ ಸಕ್ರಿಯ ಸದಸ್ಯರಾಗಿ ಉಪಾಧ್ಯಕ್ಷರಾಗಿ, ಅಧ್ಯಕ್ಷರಾಗಿ, ಗೌರವಾಧ್ಯಕ್ಷರಾಗಿ, ವ್ಯವಸ್ಥಾಪಕರಾಗಿ ಕಾರ್ಯ ನಿರ್ವಹಣೆ. ಲಾವಣ್ಯದ ಪ್ರಶಸ್ತಿ ವಿಜೇತ ನಾಟಕಗಳಾದ ಉದ್ಭವ, ಬೇಲಿ ಮತ್ತು ಹೊಲ, ಏಕಲವ್ಯ, ದೃಷ್ಟಿ, ಚೋರಚರಣದಾಸ, ಕತ್ತಲೆ ದಾರಿ ದೂರ, ಮರಣ ಮೃದಂಗ ನಾಟಕಗಳಲ್ಲಿ ಅಭಿನಯಿಸಿರುತ್ತಾರೆ. ರಾಜ್ಯ ಮಟ್ಟದ ನಾಟಕ ಸ್ಪರ್ಧೆಯ ತೀರ್ಪುಗಾರರಾಗಿ, ಹಲವಾರು ನಾಟಕೋತ್ಸವಗಳ ಸಂಯೋಜಕರಾಗಿಯೂ ಕೆಲಸ ಮಾಡಿದ ಅನುಭವ ಇವರದು. ಇವರ ರಂಗಸಾಧನೆಯನ್ನು ಗುರುತಿಸಿ ಕರ್ನಾಟಕ ನಾಟಕ ಅಕಾಡೆಮಿ 2012ರಲ್ಲಿ ಬೈಂದೂರಿನ ನಾಟಕೋತ್ಸವದಲ್ಲಿ ಗೌರವಿಸಿದೆ.

***ಮೊ:9008595748***

*ರಂಗಮಾಧ್ಯಮ ಮನುಷ್ಯರ ನಡುವಿನ ಭಾವನಾತ್ಮಕ ಬೆಸುಗೆಯನ್ನು ಗಟ್ಟಿಗೊಳಿಸುವ ಒಂದು ಸೇತುವೆ.*

## ಕೃಷ್ಣ ಅಡಿಗ ಬಿಜೂರು




ಲಾವಣ್ಯ(ರಿ)ಬೈಂದೂರು ಸಂಸ್ಥೆಯ ಸ್ಥಾಪಕ ಸದಸ್ಯರಾಗಿರುವ ಇವರು ತುಮಕೂರಿನ ಹೆಚ್.ಎಂ.ಟಿ.ಯಲ್ಲಿ ನಟರಾಗಿ, ನಿರ್ದೇಶಕರಾಗಿ, ಹಲವಾರು ನಾಟಕಗಳನ್ನು ಸಂಘಟಿಸಿದ್ದಾರೆ. ಬೈಂದೂರಿನ ಗೆಳೆಯರ ಬಳಗದಲ್ಲೂ ಹಲವಾರು ನಾಟಕಗಳಲ್ಲಿ ನಟಿಸಿರುತ್ತಾರೆ. ಮೀನಿನಹೆಜ್ಜೆ, ಕಲೆಯ ಕೊಲೆ, ಹೂ ಮುಳ್ಳು, ರೊಟ್ಟಿಭೂತ, ಸಮಾಜಕ್ಕೆ ಸವಾಲ್, ಪವಿತ್ರ ಪ್ರೇಮ, ಅನಂದ ನಿವಾಸ, ಯಾರು ನನ್ನವರು, ಪ್ರಾರಾಬ್ಧಕರ್ಮ, ತ್ಯಾಗಿ, ಸಾವಿಲ್ಲದಾಗ ಮುಂತಾದ ನಾಟಕಗಳಲ್ಲಿ ನಟಿಸಿದ ಅನುಭವಿ.

***ಮೊ:9880280378***

---

## ಸತ್ಯ ಪ್ರಸನ್ನ



ಅರೆಸರ್ಕಾರಿ ನೌಕರನಾಗಿರುವ ಇವರು ನಟನೆ ಮತ್ತು ನಿರ್ದೇಶನಗಳಲ್ಲಿ ತೊಡಗಿಸಿಕೊಂಡಿರುತ್ತಾರೆ. ಕಳೆದ 25 ವರ್ಷಗಳಿಂದ ಲಾವಣ್ಯ(ರಿ) ಬೈಂದೂರು ಸಂಸ್ಥೆಯಲ್ಲಿ ಕ್ರಿಯಾಶೀಲರಾಗಿರುವ ಇವರು ಸತ್ಯಹರಿಶ್ಚಂದ್ರ, ನಾಳೆಬನ್ನಿ, ಉದ್ಭವ, ಬದುಕಿಲ್ಲದವನ ಭಾವಗೀತೆ, ಏಕಲವ್ಯ, ಚೋರ ಚರಣದಾಸ, ಪರಿಹಾರ, ಮಾವಮಾವ ಕತೆಕೇಳು, ನಾವೆಲ್ಲೋಗಬೇಕು, ಪುಟ್ಟಕ್ಕನ ಮೆಡಿಕಲ್ ಕಾಲೇಜು, ನಾಯಿಕತೆ, ದಾರಿಯಾವುದಯ್ಯ ,ಬೇಲಿ ಮತ್ತು ಹೊಲ, ಗಾಂಧಿಗೆ ಸಾವಿಲ್ಲ ಮುಂತಾದ ನಾಟಕಗಳಲ್ಲಿ ಅಭಿನಯಿಸಿರುತ್ತಾರೆ. ಪನ್ನದಾಸಿ, ಎಚ್ಚಮನಾಯಕ, ಬಿಚ್ಚುಗತ್ತಿ, ಕಲೆಯ ಕೊಲೆ, ಟಿಪ್ಪು ಸುಲ್ತಾನ, ತ್ಯಾಗಿ, ಕಂಬನಿ, ಕೃಷ್ಣದೇವರಾಯ, ನಾಳೆಬನ್ನಿ, ವೇಷಾಂತರ ಪ್ರಸಂಗ, ಕನಸಿನವರು ಮುಂತಾದ ನಾಟಕಗಳನ್ನು ತನ್ನ ಪರಿಸರದ ಶಾಲಾ ಕಾಲೇಜುಗಳಿಗೆ ನಿರ್ದೇಶಿಸಿದ್ದಾರೆ.

***ಮೊ:9964718022***

---

## ವಿಶ್ವನಾಥ ಆಚಾರ್ಯ




ಶಾಲಾಕಾಲೇಜು ದಿನಗಳಿಲ್ಲಿಯೇ ನಾಟಕದ ಆಸಕ್ತಿ ಹೊಂದಿದ್ದು ಮುಂದೆ ನಟರಾಗಿ ಸಂಘಟಕರಾಗಿ ರಂಗಭೂಮಿ ಕೆಲಸಗಳಲ್ಲಿ ತೊಡಗಿಸಿಕೊಂಡರು. 15 ವರ್ಷಗಳಿಂದ ಲಾವಣ್ಯ(ರಿ) ಬೈಂದೂರು ಸಂಸ್ಥೆಯಲ್ಲಿದ್ದು ಪ್ರಸ್ತುತ ಜೊತೆ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಕತ್ತಲೆ ದಾರಿ ದೂರ, ದುಷ್ಟ ಬುದ್ಧಿ ಮಹಾಮಂತ್ರ, ದೃಷ್ಟಿ, ತಂತಿ, ಮರಣ ಮೃದಂಗ, ಮುದ್ದಣ್ಣಿ ಪ್ರಮೋಷನ್ ಪ್ರಸಂಗ, ಕರ್ನಾಟಕ ರಮಾರಮಣ, ದಿವ್ಯ ದರ್ಶನ ಗಾಂಧಿಗೆ ಸಾವಿಲ್ಲ ಮುಂತಾದ ನಾಟಕಗಳಲ್ಲಿ ಅಭಿನಯ ನಾಣಿಭಟ್ಟನ ಸ್ವರ್ಗದ ಕನಸು,

ಶಿವಭೂತಿ, ದೃಷ್ಟಿ, ಆಲೀಬಾಬಾ ಮತ್ತು ನಲವತ್ತು ಕಳ್ಳರು, ಪೋಲೀಸ್, ಮುದ್ದಣ್ಣನ ಪ್ರಮೋಷನ್ ಪ್ರಸಂಗ ಮೊದಲಾದ ನಾಟಕಗಳಿಗೆ ನೇಪಥ್ಯ ಕಲಾವಿದನಾಗಿ ಕೆಲಸ ನಿರ್ವಹಣೆ.

---

## ಸದಾಶಿವ ಡಿ. ಪಡುವರಿ




ಉದ್ಯಮಿಯಾಗಿರುವ ಇವರು ಒಳ್ಳೆಯ ನಟ, ಮತ್ತು ಸಂಘಟಕ. ಮಿತ್ರಮಂಡಳಿ(ರಿ) ಪಡುವರಿಯ ಸಕ್ರೀಯ ಸದಸ್ಯರಾಗಿದ್ದು ಬೆಲೂರು ಕೃಷ್ಣಮೂರ್ತಿಯವರ ನಾಟಕಗಳಲ್ಲದೆ 20ಕ್ಕೂ ಹೆಚ್ಚು ನಾಟಕಗಳಲ್ಲಿ ಅಭಿನಯಿಸಿದ್ದಾರೆ. 1996ರಲ್ಲಿ ಲಾವಣ್ಯ(ರಿ) ಬೈಂದೂರು ಸಂಸ್ಥೆಗೆ ಸದಸ್ಯನಾಗಿ, ಮುಂದೆ ವಿಂಶತಿ ಸಮಿತಿಯ ಕಾರ್ಯದರ್ಶಿಯಾಗಿ, ಬೆಳ್ಳಿ ಹಬ್ಬದ ಕೋಶಾಧ್ಯಕ್ಷರಾಗಿ, 2007 ರಂಗಲಾವಣ್ಯ 30 ನಾಟಕ ಪರ್ವದ ಅಧ್ಯಕ್ಷರಾಗಿ, 2010ರಲ್ಲಿ ದಿ.ಶ್ರೀನಿವಾಸ ಸ್ಮರಣಾರ್ಥ ನಾಟಕ ಸ್ಪರ್ಧೆ ಸಮಿತಿಯ ಅಧ್ಯಕ್ಷರಾಗಿ ಸೇವೆ. ಲಾವಣ್ಯ ರಂಗಮನೆಯ ನಿರ್ಮಾಣದಲ್ಲಿ ಪ್ರಮುಖ ಪಾತ್ರವಹಿಸಿರುವುದಲ್ಲದೆ, 2011-2012 ಸಾಲಿನ ಅಧ್ಯಕ್ಷರಾಗಿ, 2013-2014ರಲ್ಲಿ ಗೌರವಾಧ್ಯಕ್ಷರಾಗಿ ಲಾವಣ್ಯದ ಎಲ್ಲ ಚಟುವಟಿಕೆಗಳಲ್ಲಿ ಸಕ್ರಿಯರಾಗಿ ಭಾಗವಹಿಸಿ ಕಲಾವಿದರಿಗೆ ಪ್ರೋತ್ಸಾಹ ನೀಡುತ್ತಿರುತ್ತಾರೆ. ಇವರು ತಮ್ಮ ಅಧ್ಯಕ್ಷ ಅವಧಿಯಲ್ಲಿ 5 ವಿಭಿನ್ನ ನಾಟಕಗಳ ಪಂಚರಂಗಿ ನಾಟಕೋತ್ಸವ ಮತ್ತು ಕರ್ನಾಟಕ ನಾಟಕ ಅಕಾಡೆಮಿ ಸಹಯೋಗದೊಂದಿಗೆ ಜಿಲ್ಲಾ ನಾಟಕೋತ್ಸವವನ್ನು ಯಶಸ್ವಿಯಾಗಿ ಸಂಘಟಿಸಿದ ಹಿರಿಮೆ ಇವರದು.

***ಮೊ:9448428680***

---

## ಅನಿಲ್‌ಕುಮಾರ್ ಶ್ಯಾನುಭಾಗ್



1973ರಲ್ಲಿ ರಂಗಭೂಮಿ ಪ್ರವೇಶ. ಗೆಳೆಯರ ಬಳಗದಲ್ಲಿ ರಂಗನಟ, ಭರತನಾಟ್ಯ, ಯಕ್ಷಗಾನ ಕಲಾವಿದರಾಗಿ ಸೇವೆ. ಲಾವಣ್ಯದ ಸ್ಥಾಪಕ ಸದಸ್ಯನಾಗಿ, ಕಾರ್ಯದರ್ಶಿಯಾಗಿ, ಯುವ ಕಲಾವಿದರಿಗೆ ಮಾರ್ಗದರ್ಶಕರಾಗಿದ್ದಾರೆ. ಮೀನಿನ ಹೆಜ್ಜೆ, ಕಲೆಯ ಕೊಲೆ, ಹೂ ಮುಳ್ಳು, ರೊಟ್ಟಿಭೂತ, ಸಮಾಜಕ್ಕೆ ಸವಾಲ್, ಪವಿತ್ರ ಪ್ರೇಮ, ಹೀಗೆ ಹಲವಾರು ನಾಟಕಗಳಲ್ಲಿ ಪ್ರಧಾನ ಪಾತ್ರಧಾರಿಯಾಗಿ ಅಭಿನಯಿಸಿದ್ದಾರೆ.

ಸುರೇಶ ಆನಗಳ್ಳಿ, ಸೀತಾರಾಮ ಶೆಟ್ಟಿಯವರ ರಂಗತರಬೇತಿ ಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ಇವರು ಅಭಿನಯಿಸಿದ ಉದ್ಭವ ನಾಟಕದ ರಾಘಣ್ಣ ಪಾತ್ರಕ್ಕೆ 3 ಬಾರಿ ರಾಜ್ಯಮಟ್ಟದ ಬಹುಮಾನ ದೊರೆತಿದೆ. ತನ್ನದೇ ಆದ ಅಭಿನಯ ಚಾತುರ್ಯವನ್ನು ಮೈಗೂಡಿಸಿಕೊಂಡಿರುವ ಇವರನ್ನು ಹಲವಾರು ಸಂಘ ಸಂಸ್ಥೆಗಳು ಗುರುತಿಸಿ ಗೌರವಿಸಿದೆ.

***ಮೊ:9448144799***

## ಯದುರಾಜ್ ಬೈಂದೂರು,



ಇವರು 28ವರ್ಷಗಳಿಂದ ನಟನೆ, ನಿರ್ದೇಶನ, ಗಾಯನ, ಚಿತ್ರಕಲೆ ಹೀಗೆ ವೃತ್ತಿ ಮತ್ತು ಪ್ರವೃತ್ತಿಯನ್ನು ಒಂದೇ ಮಾಡಿಕೊಂಡಿರುವ ಯದುರಾಜ್ ಪ್ರಸ್ತುತ ಉಡುಪಿ ನಿವಾಸಿ. ಗೆಳೆಯರ ಬಳಗ ಸಂಘಟನೆ ಶಾಲಾ ಕಾಲೇಜುಗಳಲ್ಲಿ ಸಣ್ಣ ಪುಟ್ಟ ಪಾತ್ರಗಳ ನಿರ್ವಹಣೆ. 1990ರ ನಂತರ ಲಾವಣ್ಯ (ರಿ) ಬೈಂದೂರು ಸಂಸ್ಥೆಯನ್ನು ಸೇರಿ ಜೊತೆ ಕಾರ್ಯದರ್ಶಿಯಾಗಿ ಕೆಲ ವರ್ಷಗಳ ಸೇವೆ. ಕುಂದಾಪುರ ಕನ್ನಡದ ಗರ್ ಗರ್ ಮಂಡ್ಲ ಹಾಗೂ ಬಿಲಿಂಡರ್ ಸಿನಿಮಾಕ್ಕೆ ಕಂಠದಾನ ಮಾಡಿರುವ ಇವರು ಸುಗಮ ಸಂಗೀತ ಕ್ಷೇತ್ರದಲ್ಲಿ 1500ಕ್ಕೂ ಹೆಚ್ಚು ಕಾರ್ಯಕ್ರಮ ನೀಡಿರುತ್ತಾರೆ. ನಾವೆಲ್ಲೋಗಬೇಕು, ಚೋರಚರಣದಾಸ, ಏಕಲವ್ಯ, ಬಣ್ಣದೂಂದ್ ಆಟಿದೂಂದ್, ಕನಸಿನವರು, ನಾಯಿಕತೆ, ದಾರಿ ಯಾವುದಯ್ಯ ಮುಂದೆ ಹೀಗೆ ಹಲವಾರು ನಾಟಕಗಳಲ್ಲಿ ಅಭಿನಯ. ಸಿನಿ ಮಹಾತ್ಮೆಯ ನಿರ್ದೇಶಕ ಪನ್ನಾದಾಸಿ, ಮಳೆಹುಚ್ಚ, ಸತ್ರು ಅಂದ್ರೆ ಸಾಯ್ತರೆ, ಕುಹೂ ಕುಹೂ ಕೋಗಿಲೆ ಅಲ್ಲದೆ ಹಲವಾರು ಪೌರಣಿಕ ಮತ್ತು ನಾಟಕಗಳನ್ನು ಮಕ್ಕಳಿಗಾಗಿ ನಿರ್ದೇಶನ ಮಾಡಿರುತ್ತಾರೆ.

***ಮೊ: 9743916714***

---

## ಬಿ.ನರಸಿಂಹ ನಾಯಕ್ ಉಪ್ಪುಂದ



ವಿಜಯವಾಣಿ ವರದಿಗಾರರಾಗಿರುವ ಇವರು ಗಾಯನ ನಟನೆ ಸಂಘಟನೆ ಕ್ಷೇತ್ರದಲ್ಲಿ ಗುರುತಿಸಿಕೊಂಡವರು. ಲಾವಣ್ಯ (ರಿ)ಬೈಂದೂರು ಸಂಸ್ಥೆಯ ಕಾರ್ಯದರ್ಶಿಯಾಗಿ ತಮ್ಮ ಅವಧಿಯಲ್ಲಿ 2 ನಾಟಕೋತ್ಸವಗಳನ್ನು ಸಂಘಟಿಸಿದ್ದಾರೆ. ಸಂಜೆ ಮೆಲೋಡಿಸ್ ಎಂಬ ರಸಮಂಜರಿ ಎಂಬ ಸಂಘಟನೆ ಪ್ರಾರಂಭಿಸಿ ಹಲವಾರು ಸಂಗೀತ ಕಾರ್ಯಕ್ರಮಗಳನ್ನು ನೀಡಿದ್ದಾರೆ. ನಾಳೆಬನ್ನಿ, ಏಕಲವ್ಯ, ಚೋರಚರಣದಾಸ, ಮಾವಮಾವ ಕತೆಕೇಳು, ಮರಣ ಮೃದಂಗ, ಎಣ್ಣೂದ್ ಒಂದು ಆಪುದೊಂದ್, ಬೇಲಿ ಮತ್ತು ಹೋಲ, ಸಾಲಿಗ್ಹೋಪ ಸಂಕ್ರಣ್ಣ, ಯಾರು ನನ್ನವರು ಮುಂತಾದ ನಾಟಕಗಳಲ್ಲಿ ಅಭಿನಯಿಸಿರುತ್ತಾರೆ.

***ಮೊ:9448409638***

---

## ಬಿ.ನಾಗರಾಜ ಕಾರಂತ



ಹೊಟೇಲ್ ಉದ್ಯಮಿಯಾಗಿರುವ ಇವರು ನಟನೆ, ಬೆಳಕು, ನೇಪತ್ಯ, ಸಂಘಟನೆಯನ್ನು ಪ್ರವೃತ್ತಿಯಾಗಿಸಿಕೊಂಡವರು. 25ವರ್ಷಗಳಿಂದ ಲಾವಣ್ಯ ಬೈಂದೂರು ಸಂಸ್ಥೆಯ ಕ್ರಿಯಾಶೀಲ ಸದಸ್ಯರಾಗಿ ರಂಗನೇಪಥ್ಯದಲ್ಲಿ ಪ್ರಮುಖ ಪಾತ್ರವಹಿಸಿರುತ್ತಾರೆ. ನಾಯಿಕತೆ, ಬೇಲಿ ಮತ್ತು ಹೋಲ, ಕತ್ತಲೆದಾರಿ, ರಾಘವೇಂದ್ರ

ಮಹಾತ್ಮ, ಟಿಪ್ಪು ಸುಲ್ತಾನ, ಚೋರಚರಣದಾಸ, ಏಕಲವ್ಯ, ಉದ್ಧವ ನಾಟಕಗಳಲ್ಲಿ ಅಭಿನಯ. ಮುದ್ದಣ್ಣನ ಪ್ರಮೋಷನ್ ಪ್ರಸಂಗ, ತಂತಿ, ನಾಗಿಭಟ್ಟನ ಸ್ವರ್ಗದ ಕನಸು, ಶಿವಭೂತಿ, ಅಲಿಬಾಬಾ ಮತ್ತು ನಲವತ್ತು ಕಳ್ಳರು, ಮಳೆಹುಚ್ಚ, ಢಾಣಡಂಗುರ, ಬಂಗಾರದ ಗಿಣಿ ಬದುಕಿಲ್ಲದವನ ಭಾವಗೀತೆ, ಪೋಲೀಸ್, ದಿವ್ಯದರ್ಶನ, ಕರ್ನಾಟಕ ರಾಮಾಯಣ ಮುಂತಾದ ನಾಟಕಗಳಗೆ ಬೆಳಕಿನ ವಿನ್ಯಾಸಕಾರಾಗಿ ದುಡಿದ ಅನುಭವಿ. ***ಮೊ:9482823048***

---

## ಬಿ. ಪದ್ಮರಾಜ್ ರಾವ್



ಕಳೆದ 30 ವರ್ಷಗಳಿಂದ"ಕೂಡ್ಲಿ ಕಲಾವಿದರ್"ಪೆರ್ಡೂರು ತಂಡದಲ್ಲಿ ಸದಸ್ಯನಾಗಿದ್ದು 150ಕ್ಕೂ ಹೆಚ್ಚು ಕನ್ನಡ ಮತ್ತು ತುಳು ನಾಟಕಗಳಲ್ಲಿ ಅಭಿನಯಿಸಿದ್ದಾರೆ. ನಾಟಕ ಸ್ಪರ್ಧೆಗಳಲ್ಲಿ ಉತ್ತಮ ಪೋಷಕ ನಟ, ಉತ್ತಮ ಹಾಸ್ಯ ನಟ ಪ್ರಶಸ್ತಿಯನ್ನು ಪಡೆದಿರುತ್ತಾರೆ. ಅಲ್ಲದೆ ಸುಮಾರು 12 ತುಳು ನಾಟಕಗಳನ್ನು ಬರೆದಿರುತ್ತಾರೆ. ಕೃಷಿಯ ಜೊತೆಗೆ ರಂಗಭೂಮಿಯಲ್ಲಿ ಸಂಪೂರ್ಣ ತೊಡಗಿಸಿಕೊಂಡ ಇವರು ಉಡುಪಿ ತಾಲೂಕು ಪಂಚಾಯತ್ ಮಾಜಿ ಸದಸ್ಯರಾಗಿರುತ್ತಾರೆ. ***ಮೊ: 9901190537***

---

## ಕಾತ್ಯಾಯಿನಿ ಕುಂಜಿಬೆಟ್ಟು



ಪ್ರಸಿದ್ಧ ರಂಗಕರ್ಮಿ ಸೋದರಮಾವ ಗುರುರಾಜ ಮಾರ್ಪಳ್ಳಿಯವರ ಪ್ರಭಾವದಿಂದ ಸಂಗೀತ, ಸಾಹಿತ್ಯ, ನಾಟಕ ಕಲೆಗಳಲ್ಲಿ ಆಸಕ್ತಿ. ಪಿ.ಯು.ಸಿ. ವಿದ್ಯಾರ್ಥಿಯಾಗಿದ್ದಾಗಲೆ ರಥಬೀದಿ ಗೆಳೆಯರು ಸಂಸ್ಥೆಯಲ್ಲಿ ಕೆ.ಜಿ.ನಾರಾಯಣ ನಿರ್ದೇಶನದ ಗಿರೀಶ್ ಕಾರ್ನಾಡರ ಯಯಾತಿ ನಾಟಕದಲ್ಲಿ ಮಾರ್ಪಳ್ಳಿಯವರ ಸಂಗೀತ ನಿರ್ದೇಶನದಲ್ಲಿ ಹಿನ್ನೆಲೆ ಗಾಯಕಿಯಾಗಿ ನಾಟಕರಂಗಕ್ಕೆ ಪ್ರವೇಶ. ರಂಗಭೂಮಿ(ರಿ) ಉಡುಪಿಯಲ್ಲಿ ಮಂಡ್ಯ ರಮೇಶ್ ನಿರ್ದೇಶನದ ಯುಗಾಂತ ನಾಟಕದಲ್ಲಿ ವಿದ್ವಾನ್ ರವಿಕಿರಣ ಸಂಗೀತ ನಿರ್ದೇಶನದಲ್ಲಿ ಹಿನ್ನೆಲೆ ಗಾಯನ. ನಾಟಕ ಸಾಹಿತ್ಯ, ಮಹಿಳೆ ಮತ್ತು ರಂಗಭಾಷೆ ಮುಂತಾದ ರಂಗಭೂಮಿಗೆ ಸಂಬಂಧಿಸಿದ ವಿಷಯಗಳ ಕುರಿತ ಉಪನ್ಯಾಸ ನೀಡಿರುವುದು. ಬಿ.ವಿ.ರಾಜಾರಾಂ ಸಂಪಾದಕತ್ವದಲ್ಲಿ ನಿದ್ರಾನಗರಿ ನಾಟಕ ಅಲ್ಲದೆ ಐದು ಮಕ್ಕಳ ನಾಟಕಗಳು, ಗುಳಿಯಪ್ಪ ಮತ್ತು ಕೋರೆಹಲ್ಲು ಎರಡು ನಾಟಕಗಳು ಪ್ರಕಟಗೊಂಡು ಹಲವಾರು ಸಂಸ್ಥೆಗಳಿಂದ ರಾಜ್ಯಾದ್ಯಂತ ಪ್ರದರ್ಶನಗೊಂಡಿದೆ. ನಿದ್ರಾನಗರಿ ನಾಟಕಕ್ಕೆ ರಥಬೀದಿ ಗೆಳೆಯರು ಸಂಸ್ಥೆಯ ಕೆ.ಎಸ್.ಕೆದ್ಲಾಯ ಬಹುಮಾನ, ಮಕ್ಕಳ ಮೂರು ನಾಟಕಗಳು ಕೃತಿಗೆ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಕನ್ನಡ ಸಾಹಿತ್ಯ ಪರಿಷತ್ತು ಅರಳು ಪ್ರಶಸ್ತಿ, ಅತ್ತಿಮಬ್ಬೆ ಪ್ರತಿಷ್ಠಾನದ ಅತ್ತಿಮಬ್ಬೆ ಪ್ರಶಸ್ತಿ ಅಲ್ಲದೆ ಗುಳಿಯಪ್ಪ ಮಕ್ಕಳ ನಾಟಕಕ್ಕೆ

ಕರ್ನಾಟಕ ನಾಟಕ ಅಕಾಡೆಮಿ ಪ್ರಥಮ ಬಹುಮಾನ, ಪಗಡೆ ಹಾಸು ದೊಡ್ಡವರ ನಾಟಕಕ್ಕೆ ಕರ್ನಾಟಕ ನಾಟಕ ಅಕಾಡೆಮಿ ಬಹುಮಾನ ಲಭಿಸಿದೆ.

---


**ರವಿರಾಜ್. ಹೆಚ್.ಪಿ.**



ಬಾಲ್ಯದಿಂದಲೂ ರಂಗಾಸಕ್ತಿ. ಉಡುಪಿಯ ರಥಬೀದಿ ಗೆಳೆಯರು ಸಂಸ್ಥೆ ಹಾಗೂ ರಂಗಭೂಮಿ (ರಿ) ಉಡುಪಿ ಸಂಸ್ಥೆಗಳ ಹಲವಾರು ನಾಟಕಗಳಲ್ಲಿ ನಟಿಸಿದ ಅನುಭವ. ಕಳೆದ25 ವರ್ಷಗಳಿಂದ ರಂಗಭೂಮಿ (ರಿ) ಉಡುಪಿ ಸಂಸ್ಥೆಯಲ್ಲಿ ಸಂಘಟಕನಾಗಿ, ನಿರ್ದೇಶಕನಾಗಿ ಸಕ್ರಿಯರಾಗಿರುವ ಇವರು ಬೇರೆ ಬೇರೆ ನಾಟಕಗಳ 350ಕ್ಕೂ ಹೆಚ್ಚು ರಂಗಪ್ರಯೋಗಗಳಲ್ಲಿ ನಟನಾಗಿ ಗುರುತಿಸಿಕೊಂಡವರು. ರಾಷ್ಟ್ರಮಟ್ಟದ ನಾಟಕ ಸ್ಪರ್ಧೆಗಳಲ್ಲಿ ಇವರ ನಿರ್ದೇಶನದ ನಾಟಕಗಳು ಬಹುಮಾನಗಳನ್ನು ಪಡೆದಿವೆ. ಲಚ್ಚಿ, ಸಾವಿತ್ರಿ, ನಾಗಮಂಡಲ (ತುಳು ಮತ್ತು ಕನ್ನಡ), ಚೋರ ಚರಣದಾಸ, ಐ.ಸಿ.ಯು, ನಿದ್ರಾನಗರಿ (ಮಕ್ಕಳ ನಾಟಕ), ನನ್ನೊಳಗಿನ ಅವಳು (ಏಕವ್ಯಕ್ತಿ ಪ್ರದರ್ಶನ) ಹೀಗೆ ಹಲವಾರು ನಾಟಕಗಳಿಗೆ ನಿರ್ದೇಶನ, ಬೆಳಕಿನ ವಿನ್ಯಾಸ ಮಾಡಿರುತ್ತಾರೆ. ಹಲವಾರು ರಂಗ ಶಿಬಿರಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ, ತೀರ್ಪುಗಾರರಾಗಿ ಭಾಗವಹಿಸಿರುತ್ತಾರೆ. ಹಲವಾರು ಸಂಘ ಸಂಸ್ಥೆಗಳಿಂದ ಇವರ ರಂಗಸೇವೆಗೆ ಮನ್ನಣೆ ದೊರೆತಿದೆ.

---

**ಅಕ್ಷತ್**



ಶಾಲಾ ದಿನಗಳಲ್ಲಿ ಅಭಿನಯದ ಆಸಕ್ತಿ ಹೊಂದಿದ್ದ ಇವರು ರಾಷ್ಟ್ರೀಯ ನಾಟಕ ಶಾಲೆ ಬೆಂಗಳೂರು ಕೇಂದ್ರದಲ್ಲಿ ಒಂದು ವರ್ಷದ ಅಭಿನಯ ತರಬೇತಿ ಪಡೆದಿರುತ್ತಾರೆ. ಆಟಿಕೆ ಗೊಂಬೆ, ಹುಲಿಯ ನೆರಳು, ಭೀಷ್ಮನ ಕೊನೆಯ ದಿನಗಳು ,ದಾರಾಶಿಕೋ, ಮಾರೀಚನ ಬಂಧುಗಳು, ಅಕ್ಕ ಮಹಾದೇವಿ, ವರ್ತಮಾನದ ಚರಿತ್ರೆ, ರಥಯಾತ್ರೆ, ಅವ್ವ, ಮುಂತಾದ ಕನ್ನಡ ನಾಟಕಗಳಲ್ಲದೆ ಹಲವಾರು ತುಳು ನಾಟಕಗಳಲ್ಲೂ ಅಭಿನಯಿಸಿರುತ್ತಾರೆ.

***ಮೊ:7760173898/797512485***

---

**ಶ್ರೀಮತಿ ಅಕ್ಷತಾ ವಿಶು ರಾವ್**



ಸುಮಾರು 40ಕ್ಕೂ ಮಿಕ್ಕಿ ನಾಟಕಗಳಿಗೆ ಹಿನ್ನೆಲೆ ಗಾಯಕಿಯಾಗಿ ದುಡಿದಿರುವರು. ಲಲಿತಕಲಾ ವಿಭಾಗದಲ್ಲಿ ಕರ್ನಾಟಿಕ್ ಶಾಸ್ತ್ರೀಯ ಸಂಗೀತ ಮತ್ತು ಭರತನಾಟ್ಯ ಪದವೀಧರೆ. ಕರ್ನಾಟಿಕ್ ಶಾಸ್ತ್ರೀಯ ಸಂಗೀತ ಮತ್ತು ಭರತನಾಟ್ಯ ಸೀನಿಯರ್ ಪರೀಕ್ಷೆಗಳಲ್ಲಿ ವಿಶಿಷ್ಟ ಶ್ರೇಣಿಯಲ್ಲಿ ಉತ್ತೀರ್ಣ. ಹೆಸರಾಂತ ಭರತನಾಟ್ಯ ತಂಡಗಳಿಗೆ ಹಿಮ್ಮೇಳದಲ್ಲಿ ಗಾಯಕಿಯಾಗಿ ಕಾರ್ಯ ನಿರ್ವಹಿಸುವಿಕೆ.

ದೂರದರ್ಶನ ಚಂದನದ ಕಲಾವಿದೆ ಮತ್ತು ಮಧುರ ಮಧುರವೀ ಮಂಜುಳಗಾನ ಕಾರ್ಯಕ್ರಮದಲ್ಲಿ ಭಾಗವಹಿಸುವಿಕೆ. ರಾಜ್ಯಮಟ್ಟದ ಸಂಗೀತ ಸ್ಪರ್ಧೆಗಳಲ್ಲಿ ತೀರ್ಪುಗಾರರಾಗಿ, ಗಾಯಕಿಯಾಗಿ ಕಾರ್ಯ.

---

## ಶಶಿಪ್ರಭಾ ಕಾರಂತ್



15 ವರ್ಷಗಳಿಂದ ರಂಗದಲ್ಲಿ ಸೇವೆ. ಬಾಸುಮ ಕೊಡಗು ನಿರ್ದೇಶನದ ಚಮ್ಮಾರನ ಚಾಲಾಕಿ ಹೆಂಡತಿ ನಾಟಕದ ಮೂಲಕ ರಂಗಪ್ರವೇಶ. ಹೇಮಂತ. ಜೋಕುಲು ಬಾಲೆಲು, ಭಾಸ ಭಾರತ, ಕಾಲಚಕ್ರ, ಸಾಂಬಶಿವ ಪ್ರಹಸನ, ನಮ್ಮಿಲಯಿದಾಯೆ ಹೀಗೆ ಕನ್ನಡ ತುಳು ಭಾಷೆಯ ಹಲವು ನಾಟಕಗಳಲ್ಲಿ ಪಾತ್ರ ವಹಿಸಿದಲ್ಲದೆ ರಾಜ್ಯ ಮಟ್ಟದ ಸ್ಪರ್ಧೆಗಳಲ್ಲಿ ಬಹುಮಾನ ಪಡೆದಿದ್ದಾರೆ. ರಂಗಗಾಯಕಿ. ಮಾಲತೇಶ್ ಬಡಿಗೇರ್, ಬಾಸುಮ ಕೊಡಗು, ಪ್ರಸಾದ್ ರಾವ್, ಪ್ರದೀಪ್‌ಚಂದ್ರ ಮೊದಲಾದವರ ನಿರ್ದೇಶನದಲ್ಲಿ ನಟಿಸಿದ್ದಾರೆ.

---

## ಭಾವನ ಕೆರೆಮಠ



ಕಳೆದ ಹತ್ತು ವರ್ಷಗಳಿಂದ ರಂಗಭೂಮಿ(ರಿ) ಉಡುಪಿ ಸಂಸ್ಥೆಯಲ್ಲಿ ಇದ್ದುಕೊಂಡು ಪಂಜರಶಾಲೆ, ನೀಲಿಕುದುರೆ, ಕೋರೆಹಲ್ಲಿನ ಭೂತ, ನಿದ್ರಾನಗರಿ, ನಾಗಮಂಡಲ ಮತ್ತು ರೂಪ ರೂಪಗಳನು ದಾಟಿ ನಾಟಕಗಲ್ಲಿ ಅಭಿನಯಿಸಿ ಪ್ರಸ್ತುತ ಐ.ಸಿ.ಯು. ನಾಟಕದಲ್ಲಿ ನಟಿಸುತ್ತಿದ್ದಾರೆ. ಕನ್ನಡ ಮತ್ತು ಸಂಸ್ಕೃತ ಏಕಪಾತ್ರಾಭಿನಯ ಸ್ಪರ್ಧೆಗಳಲ್ಲಿ ಭಾಗವಹಿಸಿ ಜಿಲ್ಲೆ ಮತ್ತು ರಾಜ್ಯ ಮಟ್ಟದಲ್ಲಿ ಹಲವಾರು ಬಹುಮಾನಗಳನ್ನು ಗಳಿಸಿರುತ್ತಾರೆ. ಬಿಂಬದೊಳಗಿನ ಅರ್ಥ ಎಂಬ ಮಕ್ಕಳ ನಾಟಕವನ್ನು, ಅಭಿವೃದ್ಧಿ ಮತ್ತು ಜನಸಂಖ್ಯಾ ಸ್ಫೋಟದ ಕುರಿತು ಬೀದಿ ನಾಟಕಗಳನ್ನು ರಚಿಸಿದ್ದಾರೆ.

---

## ಜನಾರ್ದನ ಹಾವಂಜೆ



ಚಿತ್ರಕಲೆಯಲ್ಲಿ ಉನ್ನತ ಪದವಿಯನ್ನು ಪಡೆದ ಇವರು, ಸುಮಾರು ಹದಿನೇಳು ವರ್ಷಗಳಿಂದ ರಂಗಭೂಮಿಯ ನಾಟಕಗಳಿಗೆ ಮತ್ತು ಬೀದಿ ನಾಟಕಗಳಿಗೆ ರಂಗ ಪರಿಕರ, ರಂಗ ವಿನ್ಯಾಸ ಮತ್ತು ರಂಗ ಭೂಮಿಯ ಚಟುವಟಿಕೆಗಳಿಗೆ ಪರಿಸರ ವಿನ್ಯಾಸ ಮತ್ತು ವಿಶೇಷ ವಿನ್ಯಾಸದ ಸ್ಮರಣಿಕೆಗಳನ್ನು ವಿವಿಧ ಮಾಧ್ಯಮಗಳಲ್ಲಿ ರಚಿಸಿ ನೀಡುತ್ತಿರುವರು.

ಉಡುಪಿಯಿಂದ ಹದಿನಾಲ್ಕು ಕಿ.ಮೀ. ದೂರದ ಹಾವಂಜೆ ಎಂಬ ಹಳ್ಳಿಯಲ್ಲಿ ಭಾವನಾ ಫೌಂಡೇಶನ್ ಎಂಬ ಸಂಸ್ಥೆಯನ್ನು ಕಟ್ಟಿಕೊಂಡು ಕಲೆ, ರಂಗಭೂಮಿ,

ಸಾಮಾಜಿಕ ಹಾಗೂ ನವ್ಯ ನಾಟಕ, ಯಕ್ಷಗಾನ, ಸಂಗೀತ ಹೀಗೆ ಹಲವು ಕ್ಷೇತ್ರಗಳಲ್ಲಿ ದುಡಿಯುತ್ತಿರುವವರು. ರಂಗಭೂಮಿಯ ಚಟುವಟಿಕೆಗಳನ್ನು ಮತ್ತು ಕಲೆಯ ಬಗೆಗಿನ ಕಾರ್ಯಕ್ರಮ ಹಾಗೂ ಪ್ರದರ್ಶನಗಳ ವಿಮರ್ಶೆ ಮತ್ತು ಲೇಖನಗಳನ್ನು ಸಾಪ್ತಾಹಿಕ ಪುರವಣಿ ಮತ್ತು ದಿನಪತ್ರಿಕೆಗಳಲ್ಲಿ ಬರೆಯುತ್ತಿರುವವರು. ಮಕ್ಕಳ ರಂಗಭೂಮಿಯೊಂದಿಗೆ ವಿಶೇಷವಾಗಿ ದುಡಿಯುತ್ತಾ ಮಕ್ಕಳ ಹಕ್ಕುಗಳ ಬಗೆಗಿನ ಜಾಗೃತಿ ಕಾರ್ಯಕ್ರಮ, ಚಂದನ ವಾಹಿನಿಯಲ್ಲಿ ಪ್ರಸಾರವಾಗುತ್ತಿದ್ದ ಮಕ್ಕಳ ತೂಫಾನ್ ಕಾರ್ಯಕ್ರಮಗಳಲ್ಲೆಲ್ಲಾ ಕಲಾ ನಿರ್ದೇಶಕರಾಗಿ, ಸಂಗೀತಕಾರರಾಗಿ ದುಡಿದಿರುವವರು. ಕೆಲವು ತುಳುನಾಡಿನ ಧಾರಾವಾಹಿಗಳು, ಕನ್ನಡ ಚಲನಚಿತ್ರಗಳಲ್ಲೆಲ್ಲಾ ಸಹ ಕಲಾನಿರ್ದೇಶಕರಾಗಿ ಕೆಲಸ ನಿರ್ವಹಿಸಿರುವವರು.

ಶ್ರೀಯುತರು ರಾಷ್ಟ್ರದಾದ್ಯಂತ ಸುಮಾರು ಐವತ್ತಕ್ಕೂ ಹೆಚ್ಚು ಕಲಾ ಶಿಬಿರಗಳಲ್ಲಿ, ನೂರಕ್ಕೂ ಮಿಕ್ಕಿ ಕಲಾ ಪ್ರದರ್ಶನಗಳಲ್ಲಿ ಭಾಗವಹಿಸಿರುವವರು. 2017ರಲ್ಲಿ ರಷ್ಯಾದಲ್ಲಿ ನಡೆದ ಸಮೂಹ ಕಲಾಪ್ರದರ್ಶನದಲ್ಲಿ ಭಾಗವಹಿಸಿರುವವರು. ಭಾರತ ಸರಕಾರದ ಸಂಸ್ಕೃತಿ ನಿರ್ದೇಶನಾಲಯದ ಜೂನಿಯರ್ ಫೆಲೋಶಿಪ್ ಪಡೆದಿರುವ ಶ್ರೀಯುತರು ತಮ್ಮ ಕಲಾಕೃತಿಗಳಿಗಾಗಿ ಹತ್ತರಷ್ಟು ಪ್ರಶಸ್ತಿ ಪುರಸ್ಕಾರಗಳನ್ನು ಪಡೆದಿರುವವರು. ಪ್ರಸ್ತುತ ಕರಾವಳಿಯ ಜನಪದ ಕಲೆಯ ಕುರಿತಾಗಿ ಅಧ್ಯಯನ ಮತ್ತು ಸಂಶೋಧನ ನಿರತರು.

*ಸಂಚಾರಿ –9845650544 / 9844729339*

---


## ಅಲ್ವಿನ್ ಅಂದಾದ್ರೆ



ಕನ್ನಡ ಮತ್ತು ಕೊಂಕಣಿ ನಾಟಕಗಳ ರಚನೆಕಾರರಾದ ಇವರು ನಟ ಹಾಗೂ ನಿರ್ದೇಶಕರೂ ಹೌದು. ದುಬೈ ಹುಡ್ಗ, ಯಾರು ಸಮಾ ಇಲ್ಲಾ, ಎಲ್ಲಾ ಸಮಾ ಆತ್, ಎಲ್ಲಾ ದೇವ್ರಕಾಂತ ನಮ್ಮ ತಲಿಬಿಸಿ ನಮ್ಗೆ, ಇತ್ಯಾದಿ ನಾಟಕಗಳ ರಚನೆ ಮತ್ತು ನಿರ್ದೇಶನ ಹಾಗೂ ನಟನೆ. ಕೊಂಕಣಿ ಸಮಾನಾಂತ್(ಕೊಂಕಣಿ)ಹಲವಾರು ಪ್ರಹಸನ ರಚನೆ ಮತ್ತು ಎರಡು ಕೊಂಕಣಿ ಚಲನಚಿತ್ರಗಳಲ್ಲಿ ನಟಿಸಿರುತ್ತಾರೆ. ಗಲ್ಫ್, ಮುಂಬೈ, ಬೆಂಗಳೂರು ಮುಂತಾದ ಸ್ಥಳಗಳಲ್ಲಿ ನಾಟಕ ಮತ್ತು ಹಾಸ್ಯ ಪ್ರಹಸನಗಳ ಪ್ರದರ್ಶನ ನೀಡಿರುತ್ತಾರೆ. ಡೈಜಿವಲ್ಡ್, ಮುಕ್ತ ಹಾಗೂ ಇನ್ನಿತರ ಹಲವಾರು ರಿಯಾಲಿಟಿ ಹಾಸ್ಯ ಸ್ಪರ್ಧೆಗಳಲ್ಲಿ ಪ್ರಥಮ ಬಹುಮಾನ ಪಡೆದಿರುತ್ತಾರೆ. 'ವಾಯ್ಸ್ ಆಫ್ ಕರಾವಳಿ' ಸಿಂಗಿಂಗ್ ಸ್ಟಾರ್ ರಾಜ್ಯ ಮಟ್ಟದ ಕಿರು ಸ್ಪರ್ಧೆ ಮುಂತಾದ ಸ್ಪರ್ಧೆಗಳ ಆಯೋಜನೆ ಮಾಡಿದ ಹಿರಿಮೆ ಇವರದು.

*ಕರಾವಳಿ ರಂಗಭೂಮಿಯ ಬಹುತೇಕ ಪ್ರಯೋಗಗಳಲ್ಲಿ ಇಲ್ಲಿನ ಧಾರ್ಮಿಕ, ಸಾಮಾಜಿಕ, ಜನಪದೀಯ ಹಾಗು ಯಕ್ಷಗಾನದ ಅಂಶಗಳು ಸಂಮಿಳಿತಗೊಂಡಿತ್ತವೆ. ಶೈಲಿಯ ದೃಷ್ಟಿಯಿಂದಲೂ ಇವುಗಳ ಪ್ರಭಾವವನ್ನು ಅಲ್ಲಗಳೆಯುವಂತಿಲ್ಲ. ಇತ್ತೀಚೆಗೆ ಅಸಂಗತ ಪ್ರಯೋಗಗಳ ಪ್ರಯತ್ನಗಳು ನಡೆಯುತ್ತಿವೆ.*


## ಪ್ರವೀಣ್‌ಕುಮಾರ್ ಹೆಗ್ಡೆ



ತುಳು ರಂಗಭೂಮಿಯಲ್ಲಿ 25 ವರ್ಷಗಳ ಅನುಭವ. ಬಿ.ಪದ್ಮನಾಭರಾವ್ ಬೈರುಕಳ್ಳಿಯವರ ಪೊದು ನಿಶ್ಚಯ ಮೊದಲ ನಾಟಕ. ಇದುವರೆಗೂ ಸುಮಾರು 60 ನಾಟಕಗಳಲ್ಲಿ ಸಹನಟನಾಗಿ, ನಾಯಕ ನಟನಾಗಿ, ಖಳನಾಯಕನಾಗಿ ಪೋಷಕ ನಟನಾಗಿ ಅಭಿನಯ. ವೃತ್ತಿ ಹಾಗೂ ಪ್ರಯೋಗ ರಂಗಭೂಮಿಯ ನಾಟಕಗಳಲ್ಲಿ ಅಧ್ಯಯನಶೀಲರು.

---

## ಸುದರ್ಶನ್ ಸುವರ್ಣ



ರಂಗಸಂಗೀತ ನಿರ್ದೇಶಕರದ ಇವರು, ಉಡುಪಿಯ ಸ್ಕೂಲ್ ಆಫ್ ಮ್ಯೂಸಿಕ್ ಇಲ್ಲಿ ಗುರುಗಳಾದ ಮಾಧವ ಆಚಾರ್ಯರಿಂದ ತಬಲಾದಲ್ಲಿ ವಿದ್ವತ್ ಪಡೆದು, ಮಂಗಳೂರು ಆಕಾಶವಾಣಿಯ ಬಿ.ಗ್ರೇಡ್ ಕಲಾವಿದರಾಗಿರುತ್ತಾರೆ. 2003ರಲ್ಲಿ ಕರ್ನಾಟಕ ರಾಜ್ಯ ಯುವಜನೋತ್ಸವದಲ್ಲಿ ರಾಜ್ಯಮಟ್ಟದ ಶಾಸ್ತ್ರೀಯ ತಬಲಾ ಸ್ಪರ್ಧೆಯಲ್ಲಿ ರಾಜ್ಯಕ್ಕೆ ದ್ವಿತಿಯ ಸ್ಥಾನವನ್ನು ಇವರು ದೆಹಲಿ ಕರ್ನಾಟಕ ಸಂಘದ ಸಾಹಿತ್ಯ ಸಾಂಸ್ಕೃತಿಕ ಉತ್ಸವ, ಕರ್ನಾಟಕ ಸಂಘ ಮುಂಬಯಿ ಅಖಿಲ ಭಾರತ ಏಕಾಂಕ ನಾಟಕ ಸ್ಪರ್ಧೆ ಹಾಗೂ ಮಡಿಕೇರಿಯಲ್ಲಿ ನಡೆದ 80ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ "ಕಾವೇರಿ ನೆಲದಲ್ಲಿ ಕಲಾ ವೈಭವ"ಪ್ರಶಂಸನಾ ಪತ್ರ ಪಡೆದಿರುತ್ತಾರೆ.

ಟ್ರಿನಿಟಿ ಕಾಲೇಜ್ ಲಂಡನ್‌ನಿಂದ ಕೊಡಲ್ಪಡುವ ಎಲೆಕ್ಟ್ರಾನಿಕ್ ಕೀ ಬೋರ್ಡ್‌ನಲ್ಲಿ ಟ್ರನಿಟಿ ಗೈಲ್ಡದಾಲ್ ಪ್ರಶಸ್ತಿ ಪ್ರಶಸ್ತಿಗೆ ಭಾಜನರಾದ ಇವರು ಉಡುಪಿ ಜಿಲ್ಲೆಯಲ್ಲೆ ಪ್ರಥಮ ಬಾರಿಗೆ ಹ್ಯಾಂಡ್‌ಸಾನಿಕ್ ಎಂಬ ಎಲೆಕ್ಟ್ರಾನಿಕ್ ಸಂಗೀತ ಉಪಕರಣದಲ್ಲಿ ತಬಲಾ ನುಡಿಸುವುದನ್ನು ಪರಿಚಯಸಿದ ಹೆಗ್ಗಳಿಕೆಗೆ ಪಾತ್ರರಾದವರು. ಸಿಂಫನಿ ಎಂಬ ಸಂಗೀತ ಸಂಸ್ಥೆಯನ್ನು ಸ್ಥಾಪಿಸಿ ದೇಶಾದಾದ್ಯಂತ ಹಲವಾರು ಸಂಗೀತ ಕಾರ್ಯಕ್ರಮಗಳನ್ನು ನೀಡುತ್ತಿರುವ ಇವರು ಚಲನ ಚಿತ್ರ, ನಾಟಕ, ಸಾಕ್ಷ್ಯಚಿತ್ರ ಹಾಗೂ ಜಾಹೀರಾತುಗಳಿಗೆ ಸಂಗೀತ ಸಂಯೋಜನೆ ಮತ್ತು ಸಂಕಲನಕಾರರಾಗಿ ದುಡಿದಿರುತ್ತಾರೆ.

---

## ವಿಶು ರಾವ್ ಹಾವಂಜೆ



1998ರಿಂದ ಸಕ್ರಿಯವಾಗಿ 800ಕ್ಕೂ ಸಾಮಾಜಿಕ ನಾಟಕಗಳಲ್ಲಿ, 30ಕ್ಕೂ ಹೆಚ್ಚು ಪ್ರಾಯೋಗಿಕ ರಂಗ ನಾಟಕಗಳಲ್ಲಿ ಅಭಿನಯ. ಸುಮಾರು 60ಕ್ಕೂ ಮಿಕ್ಕಿ ಸಾಮಾಜಿಕ ನಾಟಕಗಳ ನಿರ್ದೇಶನ ಹಾಗೂ ಕಿರುಚಿತ್ರದ ರಚನೆ, ಸಂಭಾಷಣೆ, ಸ್ಕ್ರೀನ್ ಪ್ಲೇ ಮತ್ತು ನಿರ್ದೇಶನ. ಹಲವಾರು ನಾಟಕ ಸ್ಪರ್ಧೆಗಳಲ್ಲಿ ಭಾಗವಹಿಸಿರುವುದಲ್ಲದೇ ಕೆಲ ವೈಯಕ್ತಿಕ ಬಹುಮಾನಗಳು

ಬಂದಿರುತ್ತವೆ. ಮೇಕಪ್ ಮ್ಯಾನ್, ಬೆಳಕಿನ ಸಂಯೋಜಕನಾಗಿಯೂ ಹತ್ತು ಹಲವು ನಾಟಕಗಳಲ್ಲಿ ಕಾರ್ಯ ನಿರ್ವಹಿಸಿರುತ್ತಾರೆ. ಸುಮಾರು 10ಕ್ಕೂ ಹೆಚ್ಚು ನಾಟಕಗಳ ರಚನೆ, 25ಕ್ಕೂ ಮಿಕ್ಕಿ ಕಿರು ನಾಟಕಗಳ ರಚನೆ ಮಾಡಿರುತ್ತಾರೆ. ಉಡುಪಿ ಮಂಗಳೂರಿನ ಹೆಸರಾಂತ ನಾಟಕ ತಂಡಗಳಲ್ಲಿ ಅತಿಥಿ ಕಲಾವಿದನಾಗಿ, ಖಾಯಂ ಸದಸ್ಯನಾಗಿ ನಾಟಕ ಕ್ಷೇತ್ರಕ್ಕೆ ಸೇವೆ ಸಲ್ಲಿಸಿರುತ್ತಾರೆ. ಭಾವನಾ ಕಲಾವಿದರು ತಂಡದ ಸ್ಥಾಪಕ ಸದಸ್ಯ ಮತ್ತು ನಿರ್ದೇಶಕರಾಗಿ ರುವರಲ್ಲದೇ ತಮ್ಮ ವಿನೂತನ ನಟನಾ ಶೈಲಿಗೆ "ನಮನ ಬೊಳ್ಳಿ" ಬಿರುದನ್ನೂ ಪಡೆದಿರುತ್ತಾರೆ. 2017ರಲ್ಲಿ ರಾಜ್ಯಮಟ್ಟದ ಕಿರುಚಿತ್ರದ ಸ್ಪರ್ಧೆಯನ್ನು ಭಾವನಾ ಸಂಸ್ಥೆಯ ಮುಖೇನ ಆಯೋಜಿಸಿರುವ ಶ್ರೀಯುತರು ನಾಟಕದ ಗೀತ ರಚನೆ, ಕವನಗಳ ರಚನೆ ಮಾತ್ರವಲ್ಲದೇ ಆರೋಗ್ಯ ಶಿಬಿರ ಮತ್ತು ಸಾಮಾಜಿಕ ಕಾರ್ಯಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುತ್ತಾರೆ.

***ಸಂಚಾರಿ : 9880052105***

---

## ಯೊಗೀಶ್.ಎನ್. ಗಾಣಿಗ



ಇವರು ರಂಗಭೂಮಿಯಲ್ಲಿ ನಟ, ನಿರ್ದೇಶಕ, ಸಂಪನ್ಮೂಲ ವ್ಯಕ್ತಿ ಹಾಗೂ ನಿರೂಪಕ. ಭೀಷ್ಮನ ಕೊನೆಯ ದಿನಗಳು, ಗಡಿಬಿಡಿ ಸಂಸಾರ, ಮುದ್ರಾರಾಕ್ಷಸ, ರಾವಿನದಿಯ ದಂಡೆಯಲ್ಲಿ, ಎಲ್ಲರೂ ನನ್ನ ಮಕ್ಕಳೆ, ದಾರಾಶಿಕೋ, ದಾಸ್ಯ ಸಂಕೋಲೆ, ರಥಯಾತ್ರೆ ನಂಗ್ಯಾಕೊ ಡೌಟು, ಅವ್ವ ಮುಂತಾದ ಕನ್ನಡ ನಾಟಕಗಳ ಜೊತೆಗೆ ತುಳುನಾಟಕಗಳಲ್ಲೂ ಅಭಿನಯಿಸಿದ ಅನುಭವ. ಸತ್ತ್ರ ಅಂದ್ರೆ ಸಾಯ್ತಾರೆ, ಕಿಂದರಿಜೋಗಿ, ಈ ಬದುಕು, ಜೆಪುಣ ಮೈದಾಸ, ಸತ್ಯ ಹರಿಶ್ಚಂದ್ರ ಚಂದ್ರಗುಪ್ತ, ಅಮ್ಮ, ಮರಣ ದುಂದುಬಿ, ಪನ್ನಾದಾಸಿ, ಭಕ್ತ ಪ್ರಹ್ಲಾದ, ಹಸಿರೇ ಉಸಿರು ಮುಂತಾದ ಕನ್ನಡ ಮತ್ತು ತುಳು ನಾಟಕಗಳ ನಿರ್ದೇಶನ ಮಾಡಿರುತ್ತಾರೆ.

ಭಾಸ್ಕರ್ ಕಾಂಚನ, ಬಾಸುಮ ಕೊಡಗು, ಜಯರಾಂ ನೀಲಾವರ, ಗುರುರಾಜ ಮಾರ್ಪಳ್ಳಿ, ಬಾಲಕೃಷ್ಣ ಕೊಡವೂರು, ಕೃಷ್ಣಮೂರ್ತಿ ಕವತ್ತಾರು, ವಿದ್ದು ಉಚ್ಚಿಲ್, ಚೇತನ್ ನೀನಾಸಂ, ಬನ್ನಂಜೆ ಸಂಜೀವ ಸುವರ್ಣ ಮುಂತಾದ ನಿರ್ದೇಶಕರ ನಾಟಕಗಳಲ್ಲಿ ಅಭಿನಯಿಸಿದ ಇವರು ಗೀತೋಪದೇಶ, ಚಿತ್ರಪಟ ರಾವಣ ಯಕ್ಷಗಾನದಲ್ಲೂ ಪಾತ್ರನಿರ್ವಹಿರುತ್ತಾರೆ.

---


## ನಾಗೇಶ್ ಕುಂದಾಪುರ

2011–2012ರಲ್ಲಿ ಸಾಣೆಹಳ್ಳಿಯಲ್ಲಿ ಒಂದು ವರ್ಷದ ನಾಟಕ ಡಿಪ್ಲಮೊ ಪದವಿಯನ್ನು ಪಡೆದಿರುತ್ತಾರೆ. ಏಕಲವ್ಯ, ಕುಸುಮಬಾಲೆ, ಭಾರತ ಯಾತ್ರೆ, ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಮ್, ಅಹಲ್ಯೆ, ನೀರ ಹಕ್ಕಿಯ ಜಾಡ ಹಿಡಿದು, ವದೂಟಿ, ನಾಟಕಗಳಲ್ಲಿ ಅಭಿನಯಿಸಿದ ಇವರು ಚಿದಂಬರರಾವ್ ಜಂಬೆ, ಮಾಲತಿ,

ನಟರಾಜ್ ಹೊನ್ನವಳ್ಳಿ, ಮಹಾದೇವ ಹಡಪದ್, ಶ್ರೀಪಾದ್ ಭಟ್, ಅತುಲ್ ಪೇಟೆ, ಗಣೇಶ ಎಂ, ಯತೀಶ್ ಕೊಳ್ಳೇಗಾಲ, ಇವರೊಂದಿಗೆ ಕೆಲಸ ಮಾಡಿದ ಅನುಭವಿ. ಇವರು ಬಸವ ಸಂಚಾರ, ಶಿವಸಂಚಾರ, ಭಾರತಸಂಚಾರ, ಜನಮನದಾಟ, ಆಟಮಾಟ, ಸಮುದಾಯ ತಿರುಗಾಟ, ತಮಾಶ ತಿರುಗಾಟ ಹೀಗೆ ರಾಜ್ಯಾದ್ಯಂತ ನಾಟಕದ ಪ್ರದರ್ಶನ ನೀಡಿರುತ್ತಾರೆ. 9 ವರ್ಷಗಳ ರಂಗ ಅನುಭವ ಇರುವ ಇವರು ಮಕ್ಕಳ ರಂಗಭೂಮಿಯಲ್ಲಿ ನಿರ್ದೇಶನ ಜೊತೆಗೆ ಪಂಜರಶಾಲೆ, ನಾಣಿಭಟ್ಟನ ಸ್ವರ್ಗದ ಕನಸು, ತಲೆದಂಡ, ನಾಯಿತಿಪ್ಪ, ನೀಲಿಕುದುರೆ, ದೇವರ ಹೆಣ, ಬೆಪ್ಪು ತಕ್ಕಡಿ ಬೋಳೆಶಂಕರ ಹೀಗೆ 50ಕ್ಕೂ ಹೆಚ್ಚು ನಾಟಕಗಳಲ್ಲಿ ಅಭಿನಯಿಸಿರುತ್ತಾರೆ.

---

## ಮಿಥುನ್ ಅಮೀನ್



ವನಸುಮ(ರಿ)ಕಟಪಾಡಿ ತಂಡದ ಸದಸ್ಯ. ಶೂದ್ರತಪಸ್ವಿ, ಅಗ್ನಿ ಮತ್ತು ಮಳೆ, ಮಲಾಲ ಅಲ್ಲ, ಪೂರ್ವಿಕಲ್ಯಾಣಿ ನಾಟಕಗಳಲ್ಲಿ ಅಭಿನಯ. ಹಲವಾರು ನಾಟಕಗಳಿಗೆ ರಂಗಸಜ್ಜಿಕೆ, ಪರಿಕರ, ಪ್ರಸಾಧನ ಮಾಡಿದ ಅನುಭವಿ. ಬಾಸುಮ ಕೊಡಗು ಇವರ ರಂಗಶಿಬಿರದಲ್ಲಿ ರಂಗಕ್ಕೆ ಪ್ರವೇಶ ಪಡೆದವರು.

*ಮೊ:7411176225*

---

## ಪೂರ್ಣಿಮಾ ಸುರೇಶ್




'ಅಮೋಘ' ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕಿಯಾಗಿ ಸಾಹಿತ್ಯ & ಸಾಂಸ್ಕೃತಿಕ ಚಟುವಟಿಕೆಗಳ ಆಯೋಜನೆ. ಸಂಸ್ಥೆಯ ಸಹಯೋಗದಲ್ಲಿ 'ಸಂಬಂಧ' 'ಸಿದ್ಧತೆ' 'ಕರ್ಮಾಧೀನ' ನಾಟಕಗಳ ನಿರ್ಮಾಣ, ಪ್ರದರ್ಶನ. 'ರಂಗಭೂಮಿ' ಉಡುಪಿ ಕಾರ್ಯಕಾರಿಣಿ ಸಮಿತಿ ಸದಸ್ಯೆ. 'ರಂಗಸ್ಥಳ (ರಿ.)' ಉಡುಪಿ ಕಾರ್ಯಕಾರಿಣಿ ಸಮಿತಿ ಸದಸ್ಯೆ.

ಕನ್ನಡ ಸಿನೆಮಾಗಳಾದ ಗುಲಾಬಿ ಟಾಕೀಸ್, ಶಂಕರ ಪುಣ್ಯಕೋಟಿ, ವಿದಾಯ, ದೇವರ ನಾಡಿನಲ್ಲಿ ಇವುಗಳಲ್ಲಿ ಅಭಿನಯ. ತುಳುವಿನ ಬ್ರಹ್ಮ ಗುರುನಾರಾಯಣ ಸ್ವಾಮಿ, ಕೊಂಕಣಿಯ ಉಜ್ವಾಡು ಸಿನೆಮಾಗಳಲ್ಲೂ ಅಭಿನಯ. ಆಕಾಶವಾಣಿಯ 'ಬಿ' ಗ್ರೂಫ್ ಕಲಾವಿದೆ. ನಾಟಕದ ಅಭಿನೇತ್ರಿಯಾಗಿ 'ಚಮ್ಮಾರನ ಚಾಲಕಿ ಹೆಂಡತಿ' 'ಹೇಮಂತ' 'ಸಂಬಂಧ' 'ಸಿದ್ಧತೆ' 'ಕರ್ಮಾಧೀನ' 'ಅಮ್ಮ ರಿಟ್ಯಾರ್ಡ್ ಆಗ್ತಾಳೆ' ನಾಟಕಗಳಲ್ಲಿ ಅಭಿನಯಿಸಿರುತ್ತಾರೆ. ಕೋಟಿಚೆನ್ನಯ ಧಾರಾವಾಹಿಯಲ್ಲಿ ನಟಿಸಿದ ಅನುಭವ.

2012 ರಲ್ಲಿ ಬೆಂಗಳೂರಿನಲ್ಲಿ ನಡೆದ ಕರ್ನಾಟಕ ನಾಟಕ ಅಕಾಡೆಮಿಯಿಂದ ಪ್ರಾಯೋಜಿತ ರಾಜ್ಯ ಮಟ್ಟದ ರಂಗ ನಟಿಯರ ಸಮ್ಮೇಳನದಲ್ಲಿ ಉಡುಪಿ ಜಿಲ್ಲಾ ಪ್ರತಿನಿಧಿಯಾಗಿ ಭಾಗವಹಿಸುವಿಕೆ.

**ಮೊ: 9731812468**

## ಪಿ.ಸತೀಶ್ ಆಚಾರ್



25ವರ್ಷಗಳಿಂದ"ಕೂಡ್ಲಿ ಕಲಾವಿದರ್"ಪೆರ್ಡೂರು ತಂಡದ ಸದಸ್ಯನಾಗಿದ್ದು 200ಕ್ಕೂ ಹೆಚ್ಚು ಕನ್ನಡ ಮತ್ತು ತುಳು ನಾಟಕಗಳಲ್ಲಿ ಅಭಿನಯಿಸಿರುತ್ತಾರೆ. ರಾಜ್ಯ ಮಟ್ಟದ ನಾಟಕ ಸ್ಪರ್ಧೆಯಲ್ಲಿ ಉತ್ತಮ ನಟ, ಉತ್ತಮ ನಿರ್ದೇಶನಕ್ಕೆ ಪ್ರಶಸ್ತಿ ಪಡೆದಿರುತ್ತಾರೆ. ಬೆಂಗಳೂರು ದೂರದರ್ಶನ ಚಂದನದಲ್ಲಿ "ಕೋಣಕೋದಂಡ" ಎಂಬ ಕನ್ನಡ ನಾಟಕದಲ್ಲಿ ಅಭಿನಯಿಸಿರುವ ಇವರು ಕನ್ನಡ ಮತ್ತು ತುಳು ಸಿನಿಮಾಗಳಲ್ಲೂ ಪಾತ್ರ ನಿರ್ವಹಿಸಿದ್ದಾರೆ. ಪ್ರಸ್ತುತ ಫೋಟೋ ಪ್ರೇಮ್ ಕೆಲಸಮಾಡುತ್ತಿದ್ದಾರೆ. ***ಮೊ:9743758890***

---

## ಯೋಗೀಶ್ ಬಂಕೇಶ್ವರ



ಕಳೆದ 27 ವರ್ಷಗಳಿಂದ ರಂಗಭೂಮಿ ಕಲಾವಿದನಾಗಿರುವ ಇವರು ಆಲಿಬಾಬ ಮತ್ತು ನಲವತ್ತು ಕಳ್ಳರು, ಏಕಲವ್ಯ, ಚೋರ ಚರಣದಾಸ, ಉದ್ಭವ ಬೇಲಿ ಮತ್ತು ಹೊಲ, ಕನಸಿನವರು, ನಾವೇಲ್ಲೋಗಬೇಕು, ಮಾವಮಾವ ಕತೆ ಕೇಳು, ರಾಘವೇಂದ್ರ ಮಹಾತ್ಮೆ, ದಾರಿ ಯಾವುದಯ್ಯ ಮುಂದೆ, ನಾಯಿ ಕತೆ, ಬಾವಿ ಕಳೆದಿದೆ, ಪರಿಹಾರ, ನೆರೆಕೆರೆ, ಪೊಲೀಸ್, ದೃಷ್ಟಿ, ಕರ್ನಾಟಕ ರಮಾರಮಣ, ಬದುಕಿಲ್ಲದವನ ಭಾವಗೀತೆ, ಗಂಗಾವತರಣ, ಮರಣ ಮೃದಂಗ, ಮುದ್ದಣ್ಣನ ಪ್ರಮೋಷನ್ ಪ್ರಸಂಗ, ಕಾವ್ಯರಂಗ, ಅಕ್ಕು, ಕಥಾಸಂಗಮ, ನಮ್ಮ ನಿಮ್ಮಳೊಗೊಬ್ಬ, ಪಿಸುಣಾರಿ ಪ್ರೇಮ ಪ್ರಕರಣ, ಚೋಮನ ದುಡಿ ಮುಂತಾದ ನಾಟಕಗಳಲ್ಲಿ ಅಭಿನಯಿಸಿರುತ್ತಾರೆ. ಹಾಗೇ 20ಕ್ಕೂ ಹೆಚ್ಚು ನಾಟಕಗಳನ್ನು ಕಾಲೇಜು ವಿದ್ಯಾರ್ಥಿಗಳಿಗಾಗಿ, ಲಾವಣ್ಯದ ಕಲಾವಿದರಿಗಾಗಿ, ಸುರಭಿ ಕಲಾವಿದರಿಗಾಗಿ, ಮಕ್ಕಳಿಗಾಗಿ ನಿರ್ದೇಶಿಸಿರುತ್ತಾರೆ.

ಲಾವಣ್ಯ ಬೈಂದೂರು ರಂಗಗೀತೆ ತಂಡದ ಹಾಡುಗಾರನಾಗಿ ವಿಶ್ವ ಕನ್ನಡ ಸಮ್ಮೇಳನ ಸೇರಿದಂತೆ ಹಲವಾರು ಕಡೆ ರಂಗಗೀತೆ ಹಾಡಿರುತ್ತಾರೆ. ಭಾರ್ಗವಿ ನಿರ್ದೇಶನದ– ಅಕ್ಕು, ಸುನೀಲ್ ಪುರಾಣಿಕ್ ಅವರ ನಿರ್ದೇಶನದ–ಬಂಧ, ನಿಖಿಲ್ ಮಂಜು ನಿರ್ದೇಶನದ –ಭಗೀರಥ, ವಿನೋದ್ ವಿ.ಧೋಂಡಳೆ ನಿರ್ದೇಶನದ–ಯಶೋಧೆ ಮತ್ತು ಶಾಂತಂ ಪಾಪಂ, ರವಿ ಆರ್.ಗರಣಿಯವರ–ಅಮೃತವರ್ಷಿಣಿ, ಕೆ.ಎಸ್. ರಾಮೋಜಿಯವರ ಅಕ್ಕ, ಮುಂತಾದ ದಾರಾವಾಹಿಗಳಲ್ಲದೆ ವಿನೋದ್ ಗಂಗೊಳ್ಳಿ ಯವರ–ಏಸು ಸ್ವಾಮಿಯ ಸಾಮತಿಗಳ(ಕಿರುಚಿತ್ರ)ಸುಜಿತ್ ಸುಂದರರವರ –ಚಂದನ ಮೆರ್ಸ್ಯು (ಏಷ್ಯನೆಟ್ ಮಲಿಯಾಳಿ ವಾಹಿನಿ), ಬಾಸುಮ ಕೊಡಗು ನಿರ್ದೇಶನ– ಅಣ್ಣಿ, ಜಿ.ಮೂರ್ತಿಯವರ–ಕರುನಾಡು ಮತ್ತು ವೈಷ್ಣವಿ, ನಿಖಿಲ್ ಮಂಜೂರವರ – ಹಜ್ ಮತ್ತು ಗೆರೆಗಳು, ಅನನ್ಯ ಕಾಸರವಳ್ಳಿಯವರ–ಹರಿಕಥಾಪ್ರಸಂಗ, ರಾಜೀವ ಕೋಠಾರಿಯವರ–ಹ್ಯಾಕ್, ಅಂಬಳಿಕೆ ರವಿಯವರ–ವಿಷದ ಬರ್ಸಾ, ಕಿರುತೆರೆ ಹಾಗೂ

ಚಲನ ಚಿತ್ರಗಳಲ್ಲಿ ಅಭಿನಯಿಸಿದ ಅನುಭವಿ. ರಂಗಭೂಮಿ (ರಿ) ಉಡುಪಿಯ ರಾಜ್ಯಮಟ್ಟದ ನಾಟಕ ಸ್ಪರ್ಧೆಗಳಲ್ಲಿ ದೃಷ್ಟಿ ನಾಟಕದ–ವಿಶ್ವಾಮಿತ್ರ ಪಾತ್ರಕ್ಕೆ, ಪೋಲೀಸ್ ನಾಟಕದ–ಕೃಷ್ಣ ಪಾತ್ರಕ್ಕೆ, ಮರಣ ಮೃದಂಗ ನಾಟಕದ–ನರಸಿಂಹರಾವ್ ಪಾತ್ರಕ್ಕೆ ಶ್ರೇಷ್ಠ ನಟ ಪ್ರಶಸ್ತಿ ಮತ್ತು 2018ರ ಸಿಜಿಕೆ ಪ್ರಶಸ್ತಿ ಇವರ ರಂಗಸೇವೆಗೆ ಸಂದ ಪ್ರಶಸ್ತಿಗಳು.

---


## ಪ್ರವೀಣಚಂದ್ರ ತೋನ್ಸೆ



ಶಾಲಾದಿನಗಳಲ್ಲಿಯೆ ನಾಟಕ, ಏಕಪಾತ್ರಾಭಿನಯ, ಆಶುಭಾಷಣ, ಹೀಗೆ ಹಲವು ಕ್ಷೇತ್ರಗಳಲ್ಲಿ ಆಸಕ್ತಿ ಬೆಳೆಸಿಕೊಂಡು ಬಂದವರು. ಮೊದಲ ಗುರು ಶಂಭು ಪೂಜಾರಿಯವರ ಗರಡಿಯಲ್ಲಿ ಪಳಗಿ ಸ್ಥಳೀಯ ಸಂಸ್ಥೆ ಕಲಾದೇಗುಲ(ರಿ)ಮೂಡುತೋನ್ಸೆಯಲ್ಲಿ ಹಲವಾರು ನಾಟಕದಲ್ಲಿ ಅಭಿನಯಿಸಿದರು. ಭಾಸ್ಕರ್ ಕಾಂಚನ್ ನಿರ್ದೇಶನದ ಹಲವಾರು ನಾಟಕಗಳಲ್ಲಿ ಅಭಿನಯಿಸುತ್ತ ರಂಗ ಆಯಾಮದ ಕುರಿತು ಅಭ್ಯಸಿಸುತ್ತಾ ಮಾತೃ ಸಂಸ್ಥೆಯಾದ ಕಲಾದೇಗುಲದ ನಾಟಕಕ್ಕೆ ನಿರ್ದೇಶನ ಮಾಡಿ 23ರ ವಯಸ್ಸಿನಲ್ಲೆ ನಿರ್ದೇಶಕನಾಗಿ ರಂಗಪಯಣ ಪ್ರಾರಂಭ. ಹೊಸ ಅಲೆಯ ನಾಟಕಗಳ ಪರಿಚಯವಾಗುತಿದ್ದಂತೆ ಎಂ.ಎಸ್.ಭಟ್ ಪ್ರೋತ್ಸಾಹದಿಂದ ರಂಗಭೂಮಿ(ರಿ) ಉಡುಪಿ ತಂಡದಲ್ಲಿ ನಟನಾಗಿ ಸೇರ್ಪಡೆ, ಅಲ್ಲಿ ಗುರುಗಳು ರಂಗನಿರ್ದೇಶಕರಾದ ಬಾಸುಮ ಕೊಡಗು ನಿರ್ದೇಶನದ ನಾಟಕದಲ್ಲಿ ಅಭಿನಯ. ನಂತರ ಸುಮನಸಾ ಕೊಡವೂರು ತಂಡದ ನಟನಾಗಿ ಸದಸ್ಯನಾಗಿ 16ವರ್ಷಗಳಿಂದ ಸಕ್ರೀಯರು. ಈ ಸಂದರ್ಭದಲ್ಲಿ ಬಾಸುಮ ಕೊಡಗು, ಬಾಲಕೃಷ್ಣ ಕೊಡವೂರು, ಎಂ.ಎಸ್.ಭಟ್, ಜಯರಾಮ್ ನೀಲಾವರ, ಗುರುರಾಜ ಮಾರ್ಪಳ್ಳಿ, ವಿದ್ದು ಉಚ್ಚಿಲ್, ಪ್ರವೀಣ.ಜಿ. ಹೀಗೆ ಹಲವಾರು ನಿರ್ದೇಶಕರ ನಾಟಕಗಳಲ್ಲಿ ನಟಿಸಿ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಶ್ರೇಷ್ಠ ನಟ, ಪೋಷಕ ನಟ ಪ್ರಶಸ್ತಿ ಪಡೆದಿರುತ್ತಾರೆ.

---

## ಮಧುಕರನ್ ಅಮೀನ್ ಪಲಿಮಾರ್



ಇವರು 1993ರಲ್ಲಿ ನಂದಾದೀಪ ನಾಟಕದಲ್ಲಿ ಸ್ತ್ರೀ ಪಾತ್ರ ಮಾಡುವ ಮೂಲಕ ರಂಗಭೂಮಿ ಪ್ರವೇಶಿಸಿದರು. ಹಲವಾರು ರಂಗ ತಂಡಗಳ ನಾಟಕಗಳಲ್ಲಿ ಅಭಿನಯಿಸಿದ ಇವರು ಹನ್ನೊಂದು ವರ್ಷಗಳಿಂದ ಲೀಲಾಧರ ಶೆಟ್ಟಿಯವರ ರಂಗ ತರಂಗ ಕಾಪು ತಂಡದಲ್ಲಿ ಬೇರೆ ಬೇರೆ ನಾಟಕಗಲ್ಲಿ ಅಭಿನಯಿಸುತ್ತಾ ಸುಮಾರು 1500ಕ್ಕೂ ಹೆಚ್ಚು ಪ್ರದರ್ಶನವನ್ನು ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಅಲ್ಲದೆ ಕುವೈತ್, ದುಬೈ, ಬಹರೈನ್, ಸಾರ್ಜಾ ಮುಂತಾದ ಹೊರ ರಾಷ್ಟ್ರಗಳಲ್ಲೂ ನೀಡಿರುತ್ತಾರೆ. ಹಲವು ಧಾರಾವಾಹಿಗಳಲ್ಲೂ ಅಭಿನಯಿಸಿದ ಅನುಭವ ಇವರದು.

## ಸುರೇಂದ್ರ ಮುದ್ರಾಡಿ



ನಮ ತುಳುವೆರ್ ಕಲಾ ಸಂಘಟನೆಯ ಸದಸ್ಯರಾದ ಇವರು ಸಿರಿಸಂಪಿಗೆ, ದಂಗೆಯ ಮುಂಚಿನ ದಿನಗಳು, ಪಿಲಿಪತ್ತಿ ಗಡಸ್, ಕಿಟ್ಟಪ್ಪನ ಕಿತಾಪತಿ, ಮಂಡೋದರಿ ರಾಮಾಯಣ, ಪಂಪನಿಗೆ ಬಿದ್ದ ಕನಸುಗಳು, ಅಸುದ್ದೋ, ಮೂರು ಹೆಜ್ಜೆ ಮೂರು ಲೋಕ, ಕಾಳಾಪುರದ ಕಿಲೆಸಿ, ಮೀಡಿಯಾ, ದಶಾನನ ಸ್ವಪ್ನ ಸಿದ್ದಿ, ಕಾತ್ಯಾಯನಿ, ನಾ ತುಕಾರಾಂ ಅಲ್ಲ, ಹಳಿಯ ಮೇಲಿನ ಸದ್ದು. ಕತ್ತಲೆಗ್ ಪತ್ ತರೆ, ನಾಯಿಕತೆ, ದೊಂಬರೆ ಚೆನ್ನಿ, ಸಾಹೇಬರು ಬರುತ್ತಾರೆ ಮುಂತಾದ ಕನ್ನಡ ಮತ್ತು ತುಳು ನಾಟಕಗಳಲ್ಲಿ 25 ವರ್ಷಗಳಿಂದ ಅಭಿನಯ. ಜನ ಜಾಗೃತಿಗಾಗಿ ಹಲವಾರು ಬೀದಿನಾಟಕಗಳಲ್ಲೂ ಅಭಿನಯ. ಕೆಮ್ತೂರು ತುಳು ನಾಟಕ ಸ್ಪರ್ಧೆಗಳಲ್ಲಿ ಉತ್ತಮ ನಿರ್ದೇಶಕ ಪ್ರಶಸ್ತಿ, ಉತ್ತಮ ಪೋಷಕ ನಟ ಪ್ರಶಸ್ತಿ ಲಭಿಸಿದೆ. ಚಲನಚಿತ್ರ ಹಾಗೂ ಧಾರಾವಾಹಿಗಳಲ್ಲಿ ಅಭಿನಯಿಸಿರುತ್ತಾರೆ. ಸರ್ಪಸಂಪಿಗೆ, ತಿಪ್ಪಜ್ಜಿ ಸರ್ಕಲ್, ಶಿವಭೂತಿ ಹೀಗೆ ದೊಡ್ಡವರಿಗೆ ಹಾಗೂ ಮಕ್ಕಳಿಗೆ ನಾಟಕಗಳ ನಿರ್ದೇಶನ ಅಲ್ಲದೆ ಹಲವಾರು ನಾಟಕಗಳಿಗೆ ಸಂಗೀತ ನಿರ್ದೇಶನ ಮಾಡಿದ ಅನುಭವ ಹೊಂದಿರುತ್ತಾರೆ.

---

## ಉಮೇಶ್ ಕಲ್ಮಾಡಿ



ನಮ ತುಳುವರ್ ಕಲಾಸಂಘಟನೆ ಸದಸ್ಯರು. 15 ವರ್ಷಗಳಿಂದ ನಮ ತುಳುವೆರ್ ಕಲಾಸಂಘಟನೆಯ ಹೆಚ್ಚಿನ ನಾಟಕಗಳಲ್ಲಿ ಅಭಿನಯಿಸಿರುತ್ತಾರೆ. ಅಲ್ಲದೆ ನೇಪಥ್ಯ ಕಾರ್ಯಗಳಲ್ಲೂ ತೊಡಗಿಸಿಕೊಂಡಿದ್ದಾರೆ. ಕತ್ತಲೆಗ್ ಪತ್‌ತರೆ, ನಾಯಿಕತೆ, ದೊಂಬರೆ ಚೆನ್ನಿ, ಸಾಹೇಬರು ಬರುತ್ತಾರೆ ಸೇರಿದಂತೆ 15 ಕ್ಕೂ ಹೆಚ್ಚು ಕನ್ನಡ ಮತ್ತು ತುಳು ನಾಟಕಗಳಲ್ಲಿ ಅಭಿನಯ.


---

## ಸುಧೀಂದ್ರ ಮುದ್ರಾಡಿ



ನಮ ತುಳುವೆರ್ ಕಲಾ ಸಂಘಟನೆಯ ಸದಸ್ಯರಾದ ಇವರು ಸಿರಿಸಂಪಿಗೆ, ದಂಗೆಯ ಮುಂಚಿನ ದಿನಗಳು, ಪಿಲಿಪತ್ತಿ ಗಡಸ್, ಕಿಟ್ಟಪ್ಪನ ಕಿತಾಪತಿ, ಮಂಡೋದರಿ ರಾಮಾಯಣ, ಪಂಪನಿಗೆ ಬಿದ್ದ ಕನಸುಗಳು, ಅಸುದ್ದೋ, ಮೂರು ಹೆಜ್ಜೆ ಮೂರು ಲೋಕ, ಕಾಳಾಪುರದ ಕಿಲೆಸಿ, ಮೀಡಿಯಾ, ದಶಾನನ ಸ್ವಪ್ನ ಸಿದ್ಧಿ, ಕಾತ್ಯಾಯನಿ, ನಾ ತುಕಾರಾಂ ಅಲ್ಲ, ಹಳಿಯ ಮೇಲಿ ಸದ್ದು. ಕತ್ತಲೆಗ್ ಪತ್‌ತರೆ, ನಾಯಿಕತೆ, ದೊಂಬರೆ ಚೆನ್ನಿ, ಸಾಹೇಬರು ಬರುತ್ತಾರೆ, ಒಂದು ಚೂರಿಯ ಕತೆ, ಕೋರ್ಟ್ ಮಾರ್ಷಲ್, ಮುಂತಾದ ಕನ್ನಡ ಮತ್ತು ತುಳು ನಾಟಕಗಳಲ್ಲಿ ಅಭಿನಯ. ಜನ ಜಾಗೃತಿಗಾಗಿ ಹಲವಾರು ಬೀದಿನಾಟಕಗಳಲ್ಲೂ ಅಭಿನಯ.

## ಸುಕುಮಾರ್ ಮೋಹನ್



ಮುದ್ರಾಡಿ ಎಂಬ ಹಳ್ಳಿಗೆ ನಾಟ್ಕದೂರು ಹೆಸರು ತಂದ ರಂಗ ಸಾಧಕ. ಉಡುಪಿ ಜಿಲ್ಲೆಯ ಕಾರ್ಕಳದ ಮುದ್ರಾಡಿಯಲ್ಲಿ ತಮ್ಮ ತಂದೆ ಧರ್ಮಯೋಗಿ ಮೋಹನ್‌ರವರು 1987ರಲ್ಲಿ ಸ್ಥಾಪಿಸಿದ ನಿಲಯದ ಕಲಾವಿದರು ತಂಡವನ್ನು ತನ್ನ 24 ನೇ ವಯಸ್ಸಿನಲ್ಲಿ ನಮ ತುಳುವೆರ್ ಕಲಾ ಸಂಘಟನೆಯಾಗಿ ರೂಪಿಸಿದವರು ಇವರು. 2000ನೇ ಇಸವಿಯಲ್ಲಿ ನವರಂಗೋತ್ಸವ ಪ್ರಾರಂಭಿಸಿದ ಇವರು 2007ರಲ್ಲಿ ಸಂಘಟನೆಯ ವಿಂಶತಿ ಉತ್ಸವ ಹಮ್ಮಿಕೊಂಡು 20 ನಾಟಕಗಳ ಪ್ರದರ್ಶನ ನೀಡಲಾಗಿತ್ತು. ಸಂಘಟನೆಯ ಬೆಳ್ಳಿ ಹಬ್ಬದ ಸಂದರ್ಭದಲ್ಲಿ ವರ್ಷಂಪೂರ್ತಿ ತಿಂಗಳಿಗೊಂದು ನಾಟಕ ಆಡಿಸಿ 'ನಾಟ್ಕ ಸಮ್ಮಾನ್ ಪ್ರಶಸ್ತಿ' ಸ್ಥಾಪಿಸಿ ನೀಡಿತ್ತು. ತನ್ನ ಕುಟುಂಬದ ಸದಸ್ಯರನ್ನೆಲ್ಲ ಸೇರಿಸಿಕೊಂಡು ಮನೆಯಲ್ಲೆ ನಾಟಕ ತಂಡ ಕಟ್ಟಿ ನಾಟಕಗಳನ್ನು ನಿರ್ದೇಶಿಸಿ 5 ಬಾರಿ ಉತ್ತಮ ನಿರ್ದೇಶಕ ಪ್ರಶಸ್ತಿ ಅಲ್ಲದೆ 47 ಬಾರಿ ಉತ್ತಮ ನಟ ಪ್ರಶಸ್ತಿ ತನ್ನದಾಗಿಸಿಕೊಂಡವರು. ಆಧುನಿಕ ನಾಟಕಗಳನ್ನು ಗ್ರಾಮಾಂತರ ಪ್ರದೇಶಕ್ಕೆ ಪರಿಚಯಿಸಿ ಸಿರಿಸಂಪಿಗೆ, ದಂಗೆಯ ಮುಂಚಿನ ದಿನಗಳು, ಪಿಲಿಪತ್ತಿ ಗಡಸ್, ಕಿಟ್ಟಪ್ಪನ ಕಿತಾಪತಿ, ಮಂಡೋದರಿ ರಾಮಾಯಣ, ಪಂಪನಿಗೆ ಬಿದ್ದ ಕನಸುಗಳು, ಅಸುದ್ಧೋ, ಮೂರು ಹೆಜ್ಜೆ ಮೂರು ಲೋಕ, ಕಾಳಾಪುರದ ಕಿಲೆಸಿ, ಮೀಡಿಯಾ, ದಶಾನನ ಸ್ವಪ್ನ ಸಿದ್ಧಿ, ಕಾತ್ಯಾಯನಿ, ನಾ ತುಕಾರಾಂ ಅಲ್ಲ, ಹಳಿಯ ಮೇಲಿ ಸದ್ದು. ಕತ್ತಲೆಗ್ ಪತ್ ತರೆ, ನಾಯಿಕತೆ, ದೊಂಬರೆ ಚೆನ್ನಿ, ಸಾಹೇಬರು ಬರುತ್ತಾರೆ ಮುಂತಾದ ನಾಟಕಗಳನ್ನು ತನ್ನ ನಿರ್ದೇಶಿಸಿದಲ್ಲದೆ ರಾಜ್ಯದ ಬೇರೆ ಬೇರೆ ನಿರ್ದೇಶಕರಿಂದಲೂ ನಾಟಕಗಳನ್ನು ಮಾಡಿಸಿರುತ್ತಾರೆ. ಕಾಲೇಜು ವಿದ್ಯಾರ್ಥಿಗಳಿಗಾಗಿ ರಂಗ ಶಿಬಿರ, ವಿಚಾರ ಸಂಕಿರಣಗಳ ಆಯೋಜನೆ ಅಲ್ಲದೆ ಬೀದಿನಾಟಕಗಳ ಪ್ರದರ್ಶನ ನೀಡಿರುವ ಹಿರಿಮೆ ಇವರದು.

---

## ರಮೇಶ್ ಕಪಿಲೇಶ್ವರ



ಕಳೆದ 20 ವರ್ಷಗಳಿಂದ ನಿರಂತರವಾಗಿ ರಂಗಭೂಮಿಯಲ್ಲಿ ಸಕ್ರಿಯರು. ಹಲವಾರು ಶಾಲೆಗಳಲ್ಲಿ ಮಕ್ಕಳನಾಟಕ ನಿರ್ದೇಶಿಸಿದ್ದಾರೆ. ಅಲ್ಲಾವುದ್ದೀನ್ ಮಾಯಾದೀಪ, ಸತ್ತು ಅಂದ್ರೆ ಸಾಯ್ತಾರೆ, ಶಿವಭೂತಿ, ಗುರುದಕ್ಷಿಣೆ, ಮಾಯಾಪುರದ ಮಾಟಗಾತಿ, ಅವಿವೇಕಿರಾಜ, ಅರೆಹುಚ್ಚು ಮಂತ್ರಿ ರೈಲುಭೂತ, ಭಂಡ ನನ್ನ ಗಂಡ ಇವರ ನಿರ್ದೇಶಿಸಿದ ಮಕ್ಕಳ ನಾಟಕಗಳು. ಭೂಮಿಕಾ ಹಾರಾಡಿ ರಂಗತಂಡದ ಮೂಲಕ ಮಾರನಾಯಕ, ಕಾತ್ಯಾಯನಿ, ಅರಗಿನಬೆಟ್ಟ, ಸಂಗ್ಯಾಬಾಳ್ಯ, ಅಗ್ನಿಲೋಕ ನಾಟಕಗಳಲ್ಲಿ ಅಭಿನಯಿಸಿರುತ್ತಾರೆ.
ಸುಮಾರು 40ಕ್ಕೂ ಹೆಚ್ಚು ನಾಟಕಗಳಿಗೆ ವರ್ಣಾಲಂಕಾರ ಮಾಡಿರುತ್ತಾರೆ.

***ಮೊ:9964645039***

## ಸುಗಂಧಿ ಉಮೇಶ್ ಕಲ್ಮಾಡಿ



ನಮ ತುಳುವೆರ್ ಕಲಾ ಸಂಘಟನೆಯ ಸದಸ್ಯರಾದ ಇವರು ಸಿರಿಸಂಪಿಗೆ, ದಂಗೆಯ ಮುಂಚಿನ ದಿನಗಳು, ಪಿಲಿಪತ್ತಿ ಗಡೇಸ್, ಕಿಟ್ಟಪ್ಪನ ಕಿತಾಪತಿ, ಮಂಡೋದರಿ ರಾಮಾಯಣ, ಪಂಪನಿಗೆ ಬಿದ್ದ ಕನಸುಗಳು, ಅಸುದ್ದೋ, ಮೂರು ಹೆಜ್ಜೆ ಮೂರು ಲೋಕ, ಕಾಳಾಪುರದ ಕಿಲೆಸಿ, ಮೀಡಿಯಾ, ದಶಾನನ ಸ್ವಪ್ನ ಸಿದ್ದಿ, ಕಾತ್ಯಾಯನಿ, ನಾ ತುಕಾರಾಂ ಅಲ್ಲ, ಹಳಿಯ ಮೇಲಿ ಸದ್ದು. ಕತ್ತಲೆಗ್ ಪತ್‌ತರೆ, ನಾಯಿಕತೆ, ದೊಂಬರೆ ಚೆನ್ನಿ, ಸಾಹೇಬರು ಬರುತ್ತಾರೆ, ಒಂದು ಚೂರಿಯ ಕತೆ, ಕೋರ್ಟ್‌ಮಾರ್ಷಲ್ ಮುಂತಾದ ಕನ್ನಡ ಮತ್ತು ತುಳು ನಾಟಕಗಳಲ್ಲಿ ಅಭಿನಯ. ಜನ ಜಾಗೃತಿಗಾಗಿ ಹಲವಾರು ಬೀದಿನಾಟಕಗಳಲ್ಲೂ ಅಭಿನಯ. ಮಾಡಿದಲ್ಲದೆ ಹಲವು ಬಹುಮಾನಗಳನ್ನು ಪಡೆದಿರುತ್ತಾರೆ. ಕಪ್ಪುಕಾಗೆಯ ಹಾಡು, ಒಂದು ಹೆಣ್ಣಿನ ಕತೆ ನಾಟಕಗಳ ನಿರ್ದೇಶನ ಮಾಡಿದ ಅನುಭವ ಹೊಂದಿರುತ್ತಾರೆ.

---

## ವಾಣಿ ಸುಕುಮಾರ್



ಸದಸ್ಯರು ನಮ ತುಳುವರ್ ಕಲಾ ಸಂಘಟನೆ. ನಾ ಬದುಕಲಿಕ್ಕೊಲ್ಲಪ್ಪೊ, ಬರ್ತ್‌ಡೇ ಗಿಪ್ಟ್, ದಶಾನನ ಸ್ವಪ್ನ ಸಿದ್ಧಿ, ಕಾತ್ಯಾಯನಿ, ಚೆಕಾವ್, ಪಿಲಿಪತ್ತಿ ಗೆಡೆಸ್, ಮೂರು ಹೆಜ್ಜೆ ಮೂರು ಲೋಕ, ಮಂಡೋದರಿ ರಾಮಾಯಣ, ಕತ್ತಲೆಗ್ ಪತ್ತ್ ತರೆ, ಹಳಿಯ ಮೇಲಿನ ಸದ್ದು ಪಟ್ಟೆ ತತ್ತಂಡ್ ಮುಂತಾದ ನಾಟಕಗಳಲ್ಲಿ ಅಭಿನಯ. ಜನ ಜಾಗೃತಿಗಾಗಿ ಹಲವಾರು ಬೀದಿ ನಾಟಕಗಳಲ್ಲಿ ಅಭಿನಯಿಸಿದ ಇವರಿಗೆ ಬರ್ತ್‌ಡೇ ಗಿಪ್ಟ್, ಕಾತ್ಯಾಯನಿ ನಾಟಕಗಳಲ್ಲಿ ಅಭಿನಯಕ್ಕಾಗಿ ಬಹುಮಾನಗಳು ಲಭಿಸಿವೆ.

---

## ಪ್ರಭಾತ್ ಶೆಟ್ಟಿ ಮೂಳೂರು




ವನಸುಮ ವೇದಿಕೆ ಕಟಪಾಡಿ ಇದರ ಸಕ್ರೀಯ ಸದಸ್ಯ. ಬಾಲ್ಯದಲ್ಲಿ ತುಳು ಹವ್ಯಾಸಿ ನಾಟಕಗಳಲ್ಲಿ ಅಭಿನಯಿತ್ತಿದ್ದು, ಮುಂದೆ ಉದ್ಯೋಗನಿಮಿತ್ತ ಮುಂಬೈಯಲ್ಲಿ ನೆಲೆಸಿದರು. ಅಲ್ಲಿ ರಂಗ ಸಂಘಟಕನಾಗಿ ಕರಾವಳಿಯ ಹಲವಾರು ನಾಟಕಗಳು ಮುಂಬೈಯಲ್ಲಿ ಪ್ರದರ್ಶನವಾಗಲು ಅವಕಾಶ ಮಾಡಿಕೊಟ್ಟರು. ಮುಂದೆ ಮತ್ತೆ ಕಾಪುವುನಲ್ಲಿ ಬಂದು ನೆಲೆಸಿ ತನ್ನನ್ನು ಆಧುನಿಕ ನಾಟಕ ಹಾಗೂ ಸಿನೆಮಾಗಳಲ್ಲಿ ತೊಡಗಿಸಿಕೊಂಡರು. ಬಾಸುಮ ಕೊಡಗು ನಿರ್ದೇಶನದ ಮಲಾಲ ಅಲ್ಲ, ಅಗ್ನಿ ಮತ್ತು ಮಳೆ, ಪೂರ್ವಿ ಕಲ್ಯಾಣಿ ಸೇರಿದಂತೆ ಹಲವಾರು ನಿರ್ದೇಶಕರ ನಾಟಕ ಹಾಗೂ ಸಿನೆಮಾಗಳಲ್ಲೂ ಅಭಿನಯಿಸಿರುತ್ತಾರೆ. ಕಾಪು ರಂಗತರಂಗ ತಂಡದೊಂದಿಗೂ ಗುರುತಿಸಿಕೊಂಡಿದ್ದಾರೆ. ಊರಿನ ಹಲವಾರು ಸಾಂಸ್ಕೃತಿಕ

ಸಂಘಟನೆಗಳು ಆಯೋಜಿಸುವ ಕಾರ್ಯಕ್ರಮಗಳಗೆ ಸ್ವಯಂಸೇವಕರಾಗಿ ಯಶಸ್ಸಿಗೆ ಸಹಕರಿಸುವುದು ಇವರ ಹವ್ಯಾಸ.

---

## ಯು.ಕೆ.ಭಾಸ್ಕರ್



ಶಾಲಾದಿನಗಳಲ್ಲಿಯೇ ನಾಟಕಗಳಲ್ಲಿ ಭಾಗವಹಿಸಿದ ಇವರು, ಮುಂದೆ ಯುವಕ ಮಂಡಳಿಗಳು, ಸಮುದಾಯ ಸಂಘಟನೆಗಳ ಕಲಾವಿದರಿಗೆ ನಾಟಕ ನಿರ್ದೇಶನ ಹಾಗೂ ನಟನೆಯಲ್ಲಿ ತೊಡಗಿಸಿಕೊಂಡಿದ್ದರು. ಗಾಯಕರಾದ ಇವರು ಹಲವು ನಾಟಕಗಳಿಗೆ ಹಿನ್ನೆಲೆ ಗಾಯಕರಾಗಿಯೂ, ಗಿಟಾರ್ ವಾದಕರಾಗಿಯೂ ಸೇವೆ ಸಲ್ಲಿಸಿದ್ದಾರೆ. ಬಿ.ಆರ್. ನಾಗೇಶ್, ನಾರಾಯಣ ಗಾಣಿಗ, ಕ್ಯಾಥ್ರಿನ್ ರೋಡ್ರಿಗಸ್, ಬಾಸುಮ ಕೊಡಗು ಮುಂತಾದ ನಿರ್ದೇಶಕರೊಡನೆ, ಕಬೇದಿ, ಸಂಕ್ರಾಂತಿ, ಮಲಾಲ ಅಲ್ಲ, ಪೂರ್ವಿ ಕಲ್ಯಾಣಿ ಮೊದಲಾದ ಆಧುನಿಕ ನಾಟಕಗಳಲ್ಲೂ ಪಾತ್ರ ನಿರ್ವಹಿಸಿರುತ್ತಾರೆ. ಮುಂಬೈ ಕರ್ನಾಟಕ ಸಂಘ ಏರ್ಪಡಿಸಿದ ನಾಟಕೋತ್ಸವದಲ್ಲೂ ಭಾಗವಹಿಸಿರುತ್ತಾರೆ. ಬಾಸುಮ ಕೊಡಗು ನಿರ್ದೇಶನದ ಬಾಡಿಗೆ ತಾಯಿ ಕಿರುಚಿತ್ರದಲ್ಲೂ ಅಭಿನಯಿಸಿರುತ್ತಾರೆ.

---


## ರವೀಂದ್ರ ಕಿಣಿ



ಇವರು ವೃತ್ತಿಯಲ್ಲಿ ಉದ್ಯಮಿ. ನಟನೆ, ಸಾಮಾಜಿಕ, ಧಾರ್ಮಿಕ ಸೇವಾಕ್ಷೇತ್ರ ಶೈಕ್ಷಣಿಕ ಕ್ಷೇತ್ರದಲ್ಲಿ ವಿಶೇಷ ಆಸಕ್ತಿ. ಶ್ರೀ ಗಜಾನನ ನಾಟಕ ಮಂಡಳಿ, ಯುವಕ ಮಂಡಲ, ಇನ್ನಿತರ ಸಂಘ ಸಂಸ್ಥೆಗಳಲ್ಲಿ 25ಕ್ಕೂ ಹೆಚ್ಚು ಪೌರಾಣಿಕ ಹಾಗೂ ಸಾಮಾಜಿಕಗಳಲ್ಲಿ ಅಭಿನಯ. ಸುತ್ತಮುತ್ತಲ ಯುವಕ ಮಂಡಲಗಳಗೆ ಹಾಗೂ ಬೇರೆ ಬೇರೆ ಕಡೆಗಳಲ್ಲಿ ಸುಮಾರು 80ಕ್ಕೂ ಹೆಚ್ಚು ಕನ್ನಡ ಹಾಗೂ ಕೊಂಕಣಿ ನಾಟಕಗಳ ನಿರ್ದೇಶನ. ನಾಟಕವಲ್ಲದೆ ಸಾಮಾಜಿಕ ಕ್ಷೇತದಲ್ಲೂ ತೊಡಗಿಸಿಕೊಂಡ ಇವರು ಹಲವಾರು ಸಂಘ ಸಂಸ್ಥೆಗಳ ಪದಾಧಿಕಾರಿಯಗಿದ್ದಾರೆ. ಲಾವಣ್ಯ(ರಿ)ಬೈಂದೂರು, ಕರ್ನಾಟಕ ನಾಟಕ ಅಕಾಡೆಮಿ ಜಿಲ್ಲಾ ನಾಟಕೋತ್ಸವ, ಸುರಭಿ ಬೈಂದೂರು, ಕೊಂಕಣ ಸಾಹಿತ್ಯ ಅಕಾಡೆಮಿ ಕೊಂಕಣಿರತ್ನ ಹೀಗೆ ಹಲವಾರು ಸಂಘಸಂಸ್ಥೆಗಳಿಂದ ಸನ್ಮಾನ ಪುರಸ್ಕಾರಗಳು ದೊರೆತಿದೆ.

*ಕರಾವಳಿ ರಂಗಭೂಮಿಯಲ್ಲಿ ಗಮನಿಸಬೇಕಾದ ಒಂದು ಮುಖ್ಯ ಅಂಶ ಹವ್ಯಾಸಿ ಮತ್ತು ಅರೆವೃತ್ತಿ ರಂಗತಂಡಗಳು ಮತ್ತು ಆಧುನಿಕ ರಂಗಪ್ರಯೋಗಗಳನ್ನಾಡುವ ರಂಗತಂಡಗಳ ನಡುವೆ ಇದ್ದ ಒಂದು ಕಂದಕ ಮತ್ತು ಇತ್ತೀಚೆಗೆ ಆ ಕಂದಗ ಕಿರಿದಾಗುತ್ತಾ ಒಂದೇ ವಾಹಿನಿಯಲ್ಲಿ ಸಾಗುವ ಪ್ರಯತ್ನಗಳು ಆಗುತ್ತಿರುವುದು.*

## ಸತ್ಯ ಪ್ರಸಾದ್



ಹೊಟೇಲ್ ಉದ್ಯಮಿಯಾಗಿರುವ ಇವರು ಒಳ್ಳೆಯ ನಟ. ಜಿ.ಸೀತಾರಾಮ ಕೂರಾಡಿ ಮತ್ತು ಸುರೇಶ್ ಆನಗಳ್ಳಿಯವರಿಂದ ರಂಗತರಬೇತಿ ಪಡದಿರುವ ಇವರು ಲಾವಣ್ಯ(ರಿ)ಬೈಂದೂರು ಇದರ ಪ್ರಮುಖ ನಟರು. ಸತ್ಯ ಹರಿಶ್ಚಂದ್ರ, ಉದ್ಭವ, ಚೋರಚರಣ ದಾಸ, ವೇಷಾಂತರ ಪ್ರಸಂಗ, ಮಾವ ಮಾವ ಕತೆ ಕೇಳು, ಬೇಲಿ ಮತ್ತು ಹೊಲ, ರಾಘವೇಂದ್ರ ಮಹಾತ್ಮೆ, ಲಚ್ಚಿ, ಯಾರು ನನ್ನವರು, ಎಣ್ಣೊದೊಂದ್ ಆಪ್‌ದೊಂದ್ ಹೀಗೆ ಹಲವಾರು ನಾಟಕಗಳಲ್ಲಿ ನಟಿಸಿದ ಅನುಭವಿ. ಇವರ ನಟನೆಯ ಏಕಲವ್ಯ ನಾಟಕ ರಾಜ್ಯದ ಅನೇಕ ಕಡೆಗಳಲ್ಲಿ ಪ್ರದರ್ಶನಗೊಂಡು ಪ್ರಶಂಸೆಗೆ ಪಾತ್ರವಗಿದೆ. ರಂಗಭೂಮಿ (ರಿ) ಉಡುಪಿ ಹಾಗೂ ಜೋಗ್‌ಫಾಲ್ಸ್ ಆಯೋಜಿಸಿದ ರಾಜ್ಯ ಮಟ್ಟದ ನಾಟಕ ಸ್ಪರ್ಧೆಯಲ್ಲಿ ನಟನೆಗೆ ಪ್ರಥಮ ಪ್ರಶಸ್ತಿ ಲಭಿಸಿದೆ. ***ಮೊ:9844301040***

---

## ಸುಕೇಶ್ ಶೆಟ್ಟಿ ಕೊರ್ಗಿ



ಕಾಲೇಜು ದಿನಗಳಲ್ಲಿ ರಂಗಭೂಮಿಯತ್ತ ಆಕರ್ಷಿತರಾಗಿ ಕಳೆದ 6 ವರ್ಷಗಳಿಂದ ನಿರಂತರ ರಂಗಚಟುವಟಿಕೆಯಲ್ಲಿ ಭಾಗವಹಿಸಿರುತ್ತಾರೆ. ಭೂಮಿಕಾ ಹಾರಾಡಿಯ ಮೂಲಕ ರಂಗಭೂಮಿ ಪ್ರವೇಶಿಸಿದ ಯುವ ಕಲಾವಿದ ಮದುವೆ ಹೆಣ್ಣು, ಅಗ್ನಿಲೋಕ, ಅರಗಿನ ಬೆಟ್ಟ, ವೃತ್ತದ ವೃತ್ತಾಂತ, ಮಾರೀಕಾಡು ನಾಟಕಗಳಲ್ಲಿ ಅಭಿನಯಿಸಿದ ಇವರು ನಾಡಿನ ಬೇರೆ ಬೇರೆ ಭಾಗಗಳಲ್ಲಿ ನಾಟಕ ಪ್ರದರ್ಶನಗಳನ್ನು ನೀಡಿರುತ್ತಾರೆ. ಪ್ರಸ್ತುತ ವಿದೇಶದಲ್ಲಿ ಕನ್ನಡ ನಾಟಕಗಳಲ್ಲಿ ಅಭಿನಯಿಸುತ್ತಾ ಕನ್ನಡ ರಂಗಭೂಮಿ ಬೆಳೆಯಲು ಶ್ರಮಿಸುತಿದ್ದಾರೆ. ***ಮೊ:97338873036***


---

## ರವಿ.ಎಸ್. ಪೂಜಾರಿ ಬೈಕಾಡಿ



ರಂಗಭೂಮಿಯಲ್ಲಿ 9ವರ್ಷಗಳಿಂದ ಭೂಮಿಕಾ ರಂಗ ತಂಡದಲ್ಲಿ ಕಾರ್ಯನಿರ್ವಹಣೆ. ಪ್ರಸ್ತುತ ಭೂಮಿಕಾ ರಂಗತಂಡದ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದು ಹಲವಾರು ಗ್ರಾಮೀಣ ಯುವ ಪ್ರತಿಭೆಗಳನ್ನು ರಂಗಭೂಮಿಗೆ ಪರಿಚಯಿಸಿದ್ದಾರೆ. ಇವರ ಅಧ್ಯಕ್ಷತೆಯ ಅವಧಿಯಲ್ಲಿ ಬ್ರಹ್ಮಾವರವನ್ನು ಕೇಂದ್ರವಾಗಿಟ್ಟುಕೊಂಡು 'ಬಣ್ಣ' ನಾಟಕೋತ್ಸವವನ್ನು ಯಶಸ್ವಿಯಾಗಿ ಆಯೋಜಿಸುತ್ತಾ ಬಂದಿರುತ್ತಾರೆ. ಅಗ್ನಿಲೋಕ, ಅರಗಿನ ಬೆಟ್ಟ, ವೃತ್ತದ ವೃತ್ತಾಂತ, ಮದುವೆ ಹೆಣ್ಣು, ಮಾನಿಷಾದ, ಕಾತ್ಯಾಯನಿ ಮುಂತಾದ ಕನ್ನಡ ಮತ್ತು ತುಳು ನಾಟಕಗಳಲ್ಲಿ ಅಭಿನಯಿಸಿ ರಾಜ್ಯ ಮತ್ತು ಹೊರ ರಾಜ್ಯಗಳಲ್ಲಿ ನಾಟಕ ಪ್ರದರ್ಶನಗಳನ್ನು ನೀಡಿರುತ್ತಾರೆ.

## ವಿನಯ್ ಮುಂಡ್ಕೂರು



ಶಾಲಾದಿನಗಳಲ್ಲಿಯೇ ನಾಟಕಗಳಲ್ಲಿ ಭಾಗವಹಿಸಿದ ಇವರು, ಮುಂದೆ ಊರಿನ ಸಂಘಟನೆಗಳ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ, ಜನಪದ ಮೇಳಗಳಲ್ಲಿ ಸಕ್ರೀಯರಾಗಿ ತೊಡಗಿಸಿಕೊಂಡವರು. ವೃತ್ತಿ ಜೀವನ ಆರಂಭಿಸಿದ ಮೇಲೆ ವನಸುಮ ವೇದಿಕೆಯ ಕಾರ್ಯದರ್ಶಿಯಾಗಿದ್ದುಕೊಂಡು, ಬಾಸುಮ ಕೊಡಗು, ಗುರುರಾಜ್ ಮಾರ್ಪಳ್ಳಿ, ಪದ್ಮಾ ಕೊಡಗು ಮುಂತಾದ ನಿರ್ದೇಶಕರೊಡನೆ, ಕೋವಿ ಮತ್ತು ಕೊಳಲು, ಅಂತರಾಳ, ಕಳ್ಳ ಸುಳ್ಳ ಮಳ್ಳ, ದಗಲ್ಬಾಜಿಲು, ಅಗ್ನಿ ಮತ್ತು ಮಳೆ, ಪೂರ್ವಿ ಕಲ್ಯಾಣಿ ಮೊದಲಾದ ನಾಟಕಗಳಲ್ಲೂ ಪಾತ್ರ ನಿರ್ವಹಿಸಿರುತ್ತಾರೆ.

---


## ಕಾವ್ಯವಾಣಿ ಬಿ. ಕೊಡಗು



ಆರನೇ ತರಗತಿಯಲ್ಲಿದ್ದಾಗಲೇ ರಂಗಭೂಮಿಗೆ ಪ್ರವೇಶ. ನಂತರ ನಿರಂತರ ಶಾಲಾದಿನಗಳಲ್ಲಿ, ಕಾಲೇಜು ಶಿಕ್ಷಣ ಮುಗಿಯುವವರೆಗೂ ಹಲವಾರು ನಾಟಕಗಳಲ್ಲಿ ಹಿನ್ನೆಲೆ ಗಾಯಕಿಯಾಗಿ, ನಟಿಯಾಗಿ ಅನುಭವವನ್ನು ವಿಸ್ತರಿಸಿಕೊಂಡವರು. ತಿಪ್ಪೇಕ್ರಾಸಿನ ಹುಡುಗಿ, ಜೇತವನ, ಉಡಲ್‌ದ ಬರ್ಸ, ಮೃಚ್ಛಕಟಿಕ, ಬಂಗಾರ್ದ ಬಂಡಿ, ಕೂಡಲಸಂಗಮ, ತಲೆದಂಡ, ಮಹಾಕಾಲ, ದಗಲ್ಬಾಜಿಲು, ಅಂತರಾಳ, ಉರುಳು, ಹುಲಿಯ ನೆರಳು, ಮಾರನಾಯಕ, ಚಮ್ಮಾರನ ಚಾಲಾಕಿ ಹೆಂಡತಿ, ಆಯೆ ಸುಬಗೆ, ಸಂಭಾವಿತರು, ಅಗ್ನಿ ಮತ್ತು ಮಳೆ, ಕೋವಿ ಮತ್ತು ಕೊಳಲು, ಕಳ್ಳ ಸುಳ್ಳ ಮಳ್ಳ, ಮಲಾಲ ಅಲ್ಲಾ. ಪೂರ್ವಿಕಲ್ಯಾಣಿ, ಮರಣಬಲೆ, ಸಂಸಾರ್ ಅಪಾರ್ಟ್‌ಮೆಂಟ್, ಶೂದ್ರ ತಪಸ್ವಿ ನಾಟಕಗಳಲ್ಲಿ ವಿವಿಧ ಪಾತ್ರಗಳನ್ನು ಮಾಡಿದಲ್ಲದೆ ವಿವಿಧ ಸ್ಪರ್ಧೆಗಳಲ್ಲೂ ಅಭಿನಯ ಹಾಗೂ ರಂಗಸಂಗೀತ ನಿರ್ದೇಶನಕ್ಕೆ ಬಹುಮಾನಗಳನ್ನು ಪಡೆದಿದ್ದಾರೆ. ಗಿರೀಶ್ ಕಾಸರವಳ್ಳಿ ನಿರ್ದೇಶನದ ಗುಲಾಬಿ ಟಾಕೀಸ್ ಸೇರಿದಂತೆ ಹತ್ತಾರು ಸಿನೆಮಾ, ಧಾರಾವಾಹಿ, ಕಿರುಚಿತ್ರಗಳಲ್ಲೂ ಅಭಿನಯಿಸಿರುತ್ತಾರೆ. ಬಾಸುಮ ಕೊಡಗು, ಗುರುರಾಜ್ ಮಾರ್ಪಳ್ಳಿ, ಪದ್ಮಾ ಕೊಡಗು, ಜೀನಿ ರಂಗಾಯಣ, ಗಂಗಾಧರ ಸ್ವಾಮಿ, ಸುರೇಶ್ ಆನಗಳ್ಳಿ ಇವರ ನಿರ್ದೇಶನದಲ್ಲಿ ತನ್ನ ರಂಗಾನುಭವಗಳನ್ನು ವಿಸ್ತರಿಸಿಕೊಂಡಿದ್ದಾರೆ. ಹಲವಾರು ಧ್ವನಿ ಸುರುಳಿಗಳಲ್ಲಿ ಹಾಡಿರುವ ಇವರು ಆಕಾಶವಾಣಿ ಕಲಾವಿದೆ. ಲಾವಣಿ, ರಂಗಗೀತೆ, ಭಜನೆ, ಜನಪದಗೀತೆ, ಸುಗಮಸಂಗೀತ ಮತ್ತು ಗೀಗಿಪದಗಳಲ್ಲಿ ಸತತ ಆರು ಬಾರಿ ರಾಜ್ಯ ಯುವಜನ ಮೇಳಗಳಲ್ಲಿ ವೈಯಕ್ತಿಕ ಪ್ರಶಸ್ತಿ ಪಡೆದಿರುತ್ತಾರೆ. ಕಟಪಾಡಿಯ ಗಾನಪಲ್ಲವಿ ತಂಡದೊಂದಿಗೆ ಹಲವಾರು ಕಡೆಗಳಲ್ಲಿ ಸುಗಮಸಂಗೀತ ಮತ್ತು ರಂಗಗೀತೆಗಳನ್ನು ನೀಡುತ್ತಿದ್ದಾರೆ.

*ಉಡುಪಿ ಜಿಲ್ಲೆಯಲ್ಲಿ ಕಳೆದ ದಶಕದ (2000) ಆರಂಭದಿಂದ ಹುಟ್ಟಿಕೊಂಡ ರಂಗತಂಡಗಳ ಮತ್ತು ತಯಾರಾದ ರಂಗಕಲಾವಿದರ ಅಭಿವೃದ್ಧಿ 300% ವೇಗದಲ್ಲಿತ್ತು.*


## ಅಶೋಕ ಡಿ. ಶೆಟ್ಟಿ ಕೆಮ್ತೂರು



ತುಳು ರಂಗಭೂಮಿಯ ಮಹಾಸಾಧಕ ದಿ. ಕೆಮ್ತೂರು ದೊಡ್ಡಣ್ಣ ಶೆಟ್ಟಿಯವರ ಪುತ್ರ. 1984ರಿಂದ ಕೆಮ್ತೂರು ದೊಡ್ಡಣ್ಣ ಶೆಟ್ಟಿಯವರ ತುಳುನಾಡು ನಾಟಕಮಂಡಳಿ(ರಿ) ಉಡುಪಿ ಇದರಲ್ಲಿ ತೊಡಗಿಸಿಕೊಂಡು ಮೆರೆದ ಅಶೋಕರವರು ಶಾಲಾಮಕ್ಕಳಿಗಾಗಿ ತಯಾರಿಸಿದ ನಿಜ ಜೀವನ ಈ ನಾಟ್ಕದಲ್ಲಿ ಮಾಡಿದ ಖಳನಾಯಕ ರಘು ಪಾತ್ರದ ಮೂಲಕ ಪ್ರಚಾರಕ್ಕೆ ಬಂದರು. ದೇವರೆ ಗತಿ ತುಳುನಾಟಕದಲ್ಲಿ ಕಥಾನಾಯಕ ಸಂಪತ್ತು ಮದ್ಮೆದ ಮರ್ಲ ನಾಟಕದಲ್ಲಿ ಕವಿರಾಜರಾಂ, ಕಲಿಯುಗದ ಸೂರ್ಪನಖಿಯಲ್ಲಿ ವಸಂತ ಪಾತ್ರ ನಿರ್ವಹಿಸಿರುತ್ತಾರೆ. ಎರಡು ದಶಕಗಳ ಕಾಲ ನಾಟಕ ಮಂಡಳಿಯ ತಿರುಗಾಟದಲ್ಲಿ ವರ್ಷಪೂರ್ತಿ ಶಾಲೆಗಳಲ್ಲಿ ಹಗಲು ಎರೆಡೆರಡು ಪ್ರದರ್ಶನ, ಹಾಗೂ ರಾತ್ರಿ 9.30ರಿಂದ 2 ಗಂಟೆಯವರೆಗೆ ಟೆಂಟಿನ ನಾಟಕ ನಡೆಯುತ್ತಿತ್ತು. 1984ರಲ್ಲಿ ಪ್ರತಿ ಶಾಲೆಗೆ ಸಂಚರಿಸಿ ದ.ಕ, ಉಡುಪಿ, ಕುಂದಾಪುರ, ಚಿಕ್ಕಮಗಳೂರು, ತೀರ್ಥಹಳ್ಳಿ, ಕೊಪ್ಪ, ಬೆಂಗಳೂರು, ಮೈಸೂರು, ಕೊಡಗು ಮುಂತಾದ ಸ್ಥಳಗಳಲ್ಲಿ ಎರಡೂವರೆ ಗಂಟೆಯ ನಾಟಕಗಳನ್ನು ಶಾಲೆಗಳಲ್ಲಿ ಪ್ರದರ್ಶಿಸಿದವರು. ಇಂಚಾಂಡ ಎಂಚ, ಕಣ್ಣೀರ್ದ ಕರಿಯಮಣಿ ನಾಟಕಗಳನ್ನು ಬರೆದು ನಿರ್ದೇಶಿಸಿರುತ್ತಾರೆ.

---

## ಪ್ರಭಾಕರ ಬಿ. ಕುಂದರ್




ಹವ್ಯಾಸಿ ಕಲಾವಿದರಾಗಿದ್ದ ತಂದೆಯ ಜೊತೆಗೆ ತಾನೂ ಕಲಾಸಕ್ತಿ ಬೆಳೆಸಿಕೊಂಡು ಸ್ನೇಹಿತರು ಹಾಗೂ ಊರಿನ ಜನರ ಸಹಾಯದಿಂದ 1980ರಲ್ಲಿ ಯಕ್ಷಗಾನ ಮಂಡಳಿ, 1983ರಲ್ಲಿ ಕಸ್ತೂರಿ ಕನ್ನಡ ಯುವಕಮಂಡಲ ಸ್ಥಾಪಿಸಿ ಯಕ್ಷಗಾನ ನಾಟಕಗಳನ್ನು ಸಿದ್ಧಪಡಿಸಿ ಕೆಲವು ಕಡೆ ಪ್ರದರ್ಶನ ನೀಡುತ್ತಾ ನಟನೆಯನ್ನು ಮುಂದುವರಿಸುತ್ತಾ ಬಂದವರು. ನಂತರ ರಘುಪಾಂಡೇಶ್ವರರವರ ಸಾಧನ ಕಲಾತಂಡದ ಎಲ್ ಕಂಡ್ರು ಹಿಂಗೆ, ಪಾತ್ರಿ ಪಾಂಡು ನಾಟಕದಲ್ಲಿ ಅಭಿನಯ. ಸೀತಾರಾಮ ಕೂರಾಡಿಯವರ ನಿರ್ದೇಶನದ ನಾಯಿಕತೆ, ದೇವದಾಸಿ, ಇಂಥವರು ಇದ್ದಾರೆ, ಜಯರಾಂ ನೀಲಾವರ ಅವರ ಬೆಲ್ಲ, ಸಂಗೋಳ್ಳಿ ರಾಯಣ್ಣ, ಬಾಸುಮಕೊಡಗುರವರ ಕೆಂಪುಕಣಗಿಲೆ, ಸುಧಾ ಮಣೂರುರವರ ಕುಲವೆಂಬುದು ಕುಲವಲ್ಲ, ರಾಮಚಂದ್ರ ಐತಾಳರ ಕಲೆಯ ಕೊಲೆ ನಾಟಕಗಳಲ್ಲಿ ಅಭಿನಯಿಸಿ ಹಲವಾರು ನಾಟಕ ಸ್ಪರ್ಧೆಗಳಲ್ಲಿ ಇವರ ನಟನೆಗೆ ಹಲವಾರು ಪ್ರಶಸ್ತಿ ಪಡೆದಿರುತ್ತಾರೆ. ಗಿರೀಶ್‌ಕಾಸರವಳ್ಳಿಯವರ ನಿರ್ದೇಶನದ–ಗುಲಾಬಿ ಟಾಕೀಸ್, ಅನನ್ಯ ಕಾಸರವಳ್ಳಿಯವರ–ಹರಿಕಥಾಪ್ರಸಂಗ, ಜೀ.ಮೂರ್ತಿಯವರ–ವೈಷ್ಣವಿ, ಸುಗಂಧಿ, ಪಿ.ಶೇಷಾದ್ರಿಯವರ ಮೂಖಜ್ಜಿಯ ಕನಸುಗಳು, ಬಾಸುಮ ಕೊಡಗುರವರ– ಅಣ್ಣು(ಕುಂದಾಪುರ ಕನ್ನಡ), ರಕ್ಷಿತ್ ಶೆಟ್ಟಿಯವರ–ಉಳಿದವರು ಕಂಡಂತೆ, ಆನಂದ ಪಿ.ರಾಜುರವರ–ಕೋಟಿಚೆನ್ನಯ(ತುಳು). ಚಂಪಾ ಶೆಟ್ಟಿಯವರ ಅಮ್ಮಚ್ಚಿಯೆಂಬ ನೆನಪು (ಕುಂದಾಪುರ

ಕನ್ನಡ) ಮುಂತಾದ ಕಲಾತ್ಮಕ ಚಿತ್ರಗಳಲ್ಲಿ ನಟಿಸಿದ ಅನುಭವಿ ಇವರು. ಮುಗುಳುನಗೆ, ರಿಕ್ಕಿ, ಶತಾಯ ಗತಾಯ, ಅರಬ್ಬಿ ಕಡಲ ತೀರದಲ್ಲಿ, ಸೂಜಿದಾರ, ಅಜ್ಜ, ಚಿತ್ತಚಂಚಲ, ಗರ್ ಗರ್ ಮಂಡಲ, ಬಿಲಿಂಡರ್, ಅನುಕ್ತ, ಅಳಿದುಳಿದವರು, ಯೆರೆಗಾವೇ ಈ ಕಿರಿಕಿರಿ ಮೊದಲಾದ ಸಿನೆಮಾಗಳಲ್ಲಿ ಹಾಗೂ ಪ್ರೀತಿಯಿಂದ, ಶುಭವಿವಾಹ, ಜೋಡಿ ಹಕ್ಕಿ ಮೊದಲಾದ ಧಾರಾವಾಹಿಗಳಲ್ಲೂ ಅಭಿನಯಿಸಿದ್ದಾರೆ. ನಾಟಕ ಅಭಿನಯಕ್ಕಾಗಿ ಹಲವು ಬಹುಮಾನಗಳನ್ನೂ ಪಡೆದಿರುತ್ತಾರೆ.

---

## ರಾಮಾಂಜಿ ನಂಭೂಮಿ



ಬಾಸುಮ ಕೊಡಗು, ಕೆ.ಎಸ್.ಶ್ರೀಧರಮೂರ್ತಿ, ಬಾಲಕೃಷ್ಣ ಕೊಡವೂರು, ಗುರುರಾಜ ಮಾರ್ಪಳ್ಳಿ, ಜಯಶೇಖರ್ ಮಡಪ್ಪಾಡಿ, ಎ.ಕೆ.ಹಿಮಕರ, ಬಿ.ಸುರೇಶ್, ಚಿದಂಬರರಾವ್ ಜಂಬೆ, ಕ್ರಿಷ್ಣಮೂರ್ತಿ ಕವಾತ್ತಾರ್, ಎಂ.ಗಣೇಶ ಮೊದಲಾದವರ ರಂಗಶಿಬಿರಗಳಲ್ಲಿ ತರಬೇತಿ. ಗುರು ಸಂಜೀವ ಸುವರ್ಣ, ಸುಂದರ ಬಾಯಾರ್, ಕೆ.ಜಿ.ಮಂಜುನಾಥರವರಿಂದ ಯಕ್ಷಗಾನ ತರಬೇತಿ. ಸೇವಂತಿ ಪ್ರಸಂಗ, ಪಂಚವಟಿ, ಶೂದ್ರ ತಪಸ್ವಿ, ಕೋಪಿ ಮತ್ತು ಕೊಳಲು, ಒಂದು ಬೊಗಸೆ ನೀರು, ಮನೆಗೆ ಬಂದ ನೀಲಿ ಕುದುರೆ, ಎಸೆದು ನೋಡಿ, ಸುಟ್ಟುನೋಡಿ ಮೊದಲಾದ ನಾಟಕಗಳಲ್ಲಿ ಅಭಿನಯ. ಮಹಾನದಿ, ಅನ್ವೇಷಿ, ದೇವರನಾಡು, ಹರಿಕಥಾ ಪ್ರಸಂಗ, ಸೂಜಿದಾರ, ಹುತ್ತದ ಸುತ್ತ, ಪುಂಡಿಪಣವು(ತುಳು), ಯಶೋದೆ, ಪ್ರೀತಿ ಇಲ್ಲದ ಮೇಲೆ, ಹುಡುಕಾಟ, ರಿಯಲ್ ಹೀರೋಸ್, ಏಕೆ ಮನಸ್ ಮೊದಲಾದ ಸಿನೆಮಾ, ಧಾರಾವಾಹಿ, ಕಿರುಚಿತ್ರಗಳಲ್ಲಿ ಅಭಿನಯ. ಹಲವಾರು ಯಕ್ಷಗಾನಗಳಲ್ಲಿ ಭಾಗಿ. ನಂದಗೋಕುಲ, ಶ್ರೀನಿವಾಸ ಕಲ್ಯಾಣ, ಚೆಲುವ ಕನ್ನಡ ನಾಡು, ಪುಣ್ಯಕೋಟಿ ನೃತ್ಯರೂಪಕಗಳಲ್ಲಿ ಅಭಿನಯ. ಉಡುಪಿಯ ವಿವಿಧ ರಂಗತಂಡಗಳಲ್ಲಿ ಸಕ್ರೀಯ.

---


## ಹರಿಪ್ರಸಾದ್ ಕುಂಪಲ



ಶಾಲಾ ದಿನಗಳಲ್ಲಿಯೇ ರಂಗಭೂಮಿಯ ಕಡೆಗೆ ಒಲವು ತೋರಿದ ಇವರು ಹೊಸ ಅಲೆಯ ನಾಟಕಗಳ ಕಡೆಗೆ ಹೆಚ್ಚು ತೊಡಗಿಸಿಕೊಂಡವರು. ಅಭಿವ್ಯಕ್ತ ಮಂಗಳೂರು, ಸದಾನಂದ ಸುವರ್ಣ ಸಾಂಸ್ಕೃತಿಕ ಪ್ರತಿಷ್ಠಾನ, ವನಸುಮ ವೇದಿಕೆ ಕಟಪಾಡಿ ಸಂಸ್ಥೆಗಳಲ್ಲಿ ಗುರುತಿಸಿಕೊಂಡ ಇವರು ಒಥೆಲೋ, ಕಕೇಶಿಯನ್ ಚಾಕ್ ಸರ್ಕಲ್, ಕೊಡಿಮರ, ಕೋರ್ಟ್ ಮಾರ್ಷಲ್, ದೃಷ್ಠಿ, ಮಲಾಲಾ ಅಲ್ಲಾ ಮೊದಲಾದ ನಾಟಕಗಳಲ್ಲಿ ಅಭಿನಯಿಸಿರುತ್ತಾರೆ. ಸುರೇಶ್ ಆನಗಳ್ಳಿ, ಮೋಹನ್ ಚಂದ್ರ, ಬಿ.ವಿ.ಕಾರಂತ, ಸದಾನಂದ ಸುವರ್ಣ, ಕಾಸರಗೋಡು ಚಿನ್ನಾ, ಬಾಸುಮ ಕೊಡಗು ಮೊದಲಾದ ನಿರ್ದೇಶಕರ ನಾಟಕಗಳಲ್ಲಿ ಪಾತ್ರ ನಿರ್ವಹಿಸಿರುತ್ತಾರೆ.

*ಮೊ: **9945833608***

## ಗುರುರಾಜ ಮಾರ್ಪಳ್ಳಿ



1970ರ ದಶಕದಲ್ಲಿ ಯಕ್ಷಗಾನ ಕ್ಷೇತ್ರದಲ್ಲಿ ಡಾ. ಶಿವರಾಮ ಕಾರಂತರ ಒಡನಾಟದಲ್ಲಿ ಕಲಿಕೆ ಆರಂಭಿಸಿದ ಇವರು ಸಾಂಪ್ರದಾಯಿಕ ಯಕ್ಷಗಾನದಲ್ಲಿ ಬಹಳಷ್ಟು ಅಧ್ಯಯನ ಮಾಡಿದವರು. 1987ರ ವರೆಗೆ ವಿವಿಧ ವೃತ್ತಿಪರ ಮೇಳಗಳಲ್ಲಿ ಕಲಾವಿದನಾಗಿಯೂ ದುಡಿದವರು. 1982ರ ಹೊತ್ತಿಗೆ ರಂಗಭೂಮಿಯ ಕಡೆಗೆ ಒಲವು ತೋರಿದ ಇವರು ನೀನಾಸಂ ಕಡೆ ಮುಖ ಮಾಡಿದರು. ಆರಂಭದಲ್ಲಿ ನಾಟಕಗಳಿಗೆ ನೃತ್ಯ ಸಂಯೋಜಕನಾಗಿ ಕೆಲಸ ಆರಂಭಿಸಿ ಅನೇಕ ಪಾಶ್ಚಾತ್ಯ ಹಾಗೂ ಪೌರಾತ್ಯ ನಾಟಕಗಳಿಗೆ ಚಲನೆ ವಿನ್ಯಾಸ ಮಾಡಿದರು. ನಂತರ ರಂಗಸಂಗೀತ ನಿರ್ದೇಶಕರಾಗಿ ಬಿ.ವಿ.ಕಾರಂತ್, ಚಿದಂಬರರಾವ್ ಜಂಬೆ, ಕೆ.ವಿ.ಅಕ್ಷರ, ಕೆ.ಜಿ. ಕೃಷ್ಣಮೂರ್ತಿ, ವೆಂಕಟ್ರಮಣ ಐತಾಳ್ ಒಳಗೊಂಡಂತೆ ಭಾರತದ ಅನೇಕ ನಿರ್ದೇಶಕರ ನಾಟಕಗಳಿಗೆ ರಂಗಸಂಗೀತ ನಿರ್ದೇಶನ ಮಾಡಿರುತ್ತಾರೆ. ದೆಹಲಿಯ ನ್ಯಾಶನಲ್ ಸ್ಕೂಲ್ ಆಫ್ ಡ್ರಾಮಾ ವಿದ್ಯಾರ್ಥಿಗಳಿಗೂ ನಿರ್ದೇಶನ ಮಾಡಿರುತ್ತಾರೆ. ವಿವಿಧ ಸಂಗೀತ ವಾದ್ಯಗಳಲ್ಲಿ ಪರಿಣತರಾಗಿರುವ ಇವರು ನಿನಾದ ಎಂಬ ಸಂಗೀತ ತಂಡವನ್ನು ಕಟ್ಟಿಕೊಂಡು ನೂರಾರು ಕಾರ್ಯಕ್ರಮಗಳನ್ನು ನೀಡಿದ್ದಾರೆ.

ನಾಟಕ ರಚನೆಯಲ್ಲೂ ತೊಡಗಿಸಿಕೊಂಡಿರುವ ಇವರು 15ಕ್ಕೂ ಹೆಚ್ಚು ನಾಟಕಗಳನ್ನು ರಚಿಸಿದಲ್ಲದೆ 'ಪಂಚರಂಗಿ' ಎಂಬ ನಾಟಕಗಳ ಸಂಪುಟವನ್ನೂ ಹೊರತಂದಿದ್ದಾರೆ. ಹಲವಾರು ಕವನಸಂಕಲನಗಳನ್ನೂ ಪ್ರಕಟಿಸಿರುತ್ತಾರೆ. ಹತ್ತಾರು ವಿಮರ್ಶೆಗಳೂ ಪ್ರಕಟಗೊಂಡಿವೆ. ಆಕಾಶವಾಣಿ ದೂರದರ್ಶನಗಳಲ್ಲೂ ಹಲವಾರು ಬಾನುಲಿ ಹಾಗೂ ರಂಗಪ್ರದರ್ಶನಗಳನ್ನು ನೀಡಿರುತ್ತಾರೆ. ಉಡುಪಿ ಹಾಗೂ ರಾಜ್ಯದ ಅನೇಕ ರಂಗತಂಡಗಳಿಗೆ ನಾಟಕಗಳನ್ನು ನಿರ್ದೇಶನ ಮಾಡಿರುತ್ತಾರೆ. ವನಸುಮ ವೇದಿಕೆ ಕಟಪಾಡಿ ಇದರ ಮಾರ್ಗದರ್ಶಕರಾಗಿರುತ್ತಾರೆ.

---

## ವಿಶ್ವೇಶ್ವರ ಪರ್ಕಳ



ಮುಂಬೈ ಕರ್ನಾಟಕ ಸಂಘದ ಕಲಾಭಾರತಿ ತಂಡದಲ್ಲಿ ಗುರುತಿಸಿಕೊಂಡಿರುವ ಇವರು, ನೇಪಥ್ಯ ಕಲಾವಿದರು, ರಂಗ ವಿಮರ್ಶಕರು ಹಾಗೂ ಗೊಂಬೆನಾಟಕ ನಿರ್ದೇಶಕರು. ಸುಮಾರು 35 ನಾಟಕಗಳಿಗೆ ಪೂರ್ಣ ಪ್ರಮಾಣದಲ್ಲಿ ರಂಗವಿನ್ಯಾಸ ಮತ್ತು ರಂಗಪರಿಕರಗಳನ್ನು ಮಾಡಿರುತ್ತಾರೆ. ಒಂದು ಜಾದೂ ಧಾರಾವಾಹಿಗೂ ವಿನ್ಯಾಸ ಮಾಡಿರುತ್ತಾರೆ. ಮಕ್ಕಳ ನಾಟಕ ನಿರ್ದೇಶನಕ್ಕಾಗಿ ತಾಲೂಕು ಮಟ್ಟದ ಸ್ಪರ್ಧೆಯಲ್ಲಿ ಬಹುಮಾನಿತರು. ತುಳುಕೂಟ ಉಡುಪಿ ಸ್ಪರ್ಧೆಯಲ್ಲಿ ರಂಗವಿನ್ಯಾಸಕ್ಕಾಗಿ 3 ಬಾರಿ ಬಹುಮಾನಿತರು. ಚಿತ್ರಕಲಾ ಶಾಲೆಯ ಪ್ರಾಂಶುಪಾಲರಾಗಿದ್ದುಕೊಂಡು ಮಕ್ಕಳಿಗೆ ಹಲವಾರು ಗೊಂಬೆ ನಾಟಕಗಳನ್ನು ನಿರ್ದೇಶಿಸಿರುತ್ತಾರೆ.

# ಪದ್ಮಾ ಕೊಡಗು



ಮೂಲತ: ಕೊಡಗಿನ ಮಡಿಕೇರಿಯವರಾದ ಇವರು ಪತಿ ಕೃಷ್ಣಾ ಪಾಸ್ತೆಯವರೊದಿಗೆ ಹುಬ್ಬಳ್ಳಿಯಲ್ಲಿ ವಾಸ. ರಂಗನಿರ್ದೇಶಕ ಸಹೋದರ ಬಾಸುಮ ಕೊಡಗು ಅವರ ಪ್ರೋತ್ಸಾಹದೊಂದಿಗೆ ರಂಗಭೂಮಿ ಪ್ರವೇಶಿಸಿದ ಇವರು ಚಿದಂಬರರಾವ್ ಜಂಬೆ, ಕೆ.ವಿ.ಸುಬ್ಬಣ್ಣ, ಅಕ್ಷರ ಕೆ.ವಿ., ವೆಂಟಕರಮಣ ಐತಾಳ್, ಮಹಾಬಲೇಶ್ವರ್ ರಾವ್, ರುಸ್ತಂ ಬರೂಚ, ಬಿ.ವಿ.ಕಾರಂತ ಹೀಗೆ ಹಲವಾರು ರಂಗದಿಗ್ಗಜರ ರಂಗ ವಿದ್ಯಾರ್ಥಿ. ಎರಿಕ್ ಬ್ರಾಸ್ನರ್, ಎವಿಲಿಯನ್ ಫುಲೇನ್ಸ್, ಮರಿಯಾ ವೀಸ್ಟೆ, ರೂಸ್‌ಬರ್ಗ್, ಲೀನಾ ಲಿಂಡೆಲ್, ಮ್ಯಾಥ್ಯೂ ಹೀಗೆ ಮಕ್ಕಳ ರಂಗಭೂಮಿಯಲ್ಲಿ ಪರಿಣತ ನಿರ್ದೇಶಕರ ನಾಟಕದಲ್ಲಿ ನಟನೆ ಮತ್ತು ಕೆಲಸ ಮಾಡಿದ ಅನುಭವ. ನೀನಾಸಂ–ರಂಗ ಶಿಕ್ಷಣ ಕೇಂದ್ರದಿಂದ ನಾಟಕ ಡಿಪ್ಲೊಮೊ ಪದವಿ ಮತ್ತು ಜಾನಪದ ಲೋಕ ಬೆಂಗಳೂರು–ಜನಪದ ಡಿಪ್ಲೊಮೊ ಪದವಿ ಪಡೆದ ಇವರು ವೃತಿಯಲ್ಲಿ ಹವ್ಯಾಸಿ ರಂಗ ಕಲಾವಿದೆ/ ತರಬೇತುದಾರಳು.

ನಿರ್ದೇಶನ, ಅಭಿನಯ, ರಂಗಸಜ್ಜಿಕೆ, ರಂಗಪರಿಕರ, ವಸ್ತ್ರವಿನ್ಯಾಸ, ಪ್ರಸಾದನ, ನಾಟಕ ರಚನೆ, ಶಿಕ್ಷಣದಲ್ಲಿ ರಂಗಭೂಮಿ ತರಬೇತಿ, ಗೊಂಬೆ ನಾಟಕ ಇತ್ಯಾದಿ ಇವರ ರಂಗ ಹಾಗೂ ವೃತ್ತಿ ಕೌಶಲ್ಯಗಳು. ಇವರು ನೀನಾಸಂ ತಿರುಗಾಟದ ಕಲಾವಿದೆಯಾಗಿ ಅಲ್ಲದೆ ನಾಡಿನ ಪ್ರಸಿದ್ಧ ನಿರ್ದೇಶಕರ, ನಾಟಕಾರರ 100ಕ್ಕೂ ಹೆಚ್ಚು ನಾಟಕಗಳಲ್ಲಿ ಅಭಿನಯಿಸಿದ ಅನುಭವ ಹೊಂದಿರುತ್ತಾರೆ.

ತುಮಕೂರಿನ ರವಿವರ್ಮ ಸಂಗೀತ ಮತ್ತು ನಾಟಕ ಶಾಲೆಯ ಪ್ರಾಧ್ಯಾಪಿಕೆಯಾಗಿ, ರಾಷ್ಟ್ರೀಯ ನಾಟಕ ಶಾಲೆ ಬೆಂಗಳೂರಿನ ಶಿಕ್ಷಣದಲ್ಲಿ ರಂಗಭೂಮಿ ಯೋಜನೆಯ ಸಂಚಾಲಕಿ ಮತ್ತು ಸಂಪನ್ಮೂಲ ವ್ಯಕ್ತಿಯಾಗಿ 5 ವರ್ಷ ಸೀಡಾ ಮತ್ತು ಸ್ವೀಡಿಷ್ ಐ.ಟಿ.ಐ. ಮತ್ತು ರಂಗಾಯಣ ಮೈಸೂರು ಯೋಜನೆಯ ರಂಗಕಿಶೋರ ತಂಡದ ಸಂಪನ್ಮೂಲ ವ್ಯಕ್ತಿಯಾಗಿ, ಧಾರವಾಡ, ಬೆಳಗಾವಿ, ಮೈಸೂರು ಕೇಂದ್ರ ಕಾರಾಗೃಹಗಳ ಖೈದಿಗಳಿಗೆ ಹಮ್ಮಿಕೊಂಡ ಮನಪರಿವರ್ತನ ಶಿಬಿರದ ನಿರ್ದೇಶಕಿ ಹಾಗೂ ಸಂಚಾಲಕಿಯಾಗಿ ದುಡಿದ ಅನಭವ. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಮತ್ತು ರಾಷ್ಟ್ರಮಟ್ಟದಲ್ಲಿ ಹಲವಾರು ಸಂಘ ಸಂಸ್ಥೆಗಳು ಆಯೋಜಿಸಿದ ಸುಮಾರು 80 ಕ್ಕೂ ಹೆಚ್ಚು ರಂಗ ಶಿಬಿರಗಳು ಅಲ್ಲದೇ 100 ಕ್ಕೂ ಹೆಚ್ಚು ಬೇಸಿಗೆ ಶಿಬಿರಗಳಲ್ಲಿ ನಿರ್ದೇಶಕಿಯಾಗಿ, ಸಂಪನ್ಮೂಲ ವ್ಯಕ್ತಿಯಾಗಿ ಸುಮಾರು 100ಕ್ಕೂ ಹೆಚ್ಚು ನಾಟಕಗಳಲ್ಲಿ, ಸಾಕ್ಷ್ಯಚಿತ್ರಗಳಲ್ಲಿ, ಧಾರವಾಹಿಗಳಲ್ಲಿ ನಟಿಯಾಗಿ, ನಿರ್ದೇಶಕಿಯಾಗಿ ರಾಜ್ಯ ಮತ್ತು ರಾಷ್ಟ್ರ ಮಟ್ಟದ ನಾಟಕ ಸ್ಪರ್ಧೆಗಳಲ್ಲಿ ಅತ್ಯುತ್ತಮ ನಟಿ ಪ್ರಶಸ್ತಿ ಪಡೆದ ನಟಿಯಾಗಿ, ನಿರ್ದೇಶಕಿಯಾಗಿ ಕೆಲಸ ಮಾಡಿದ ಅನುಭವ. ರಾಷ್ಟ್ರಮಟ್ಟದ ನಾಟಕ ಸ್ಪರ್ಧೆಗಳ ತೀರ್ಪುಗಾರಳಾಗಿ/ ಸಂಚಾಲಕಿಯಾಗಿ. ಸಂಪನ್ಮೂಲ ವ್ಯಕ್ತಿಯಾಗಿ ರಾಷ್ಟ್ರೀಯ ಭಾವೈಕ್ಯತಾ ಶಿಬಿರಗಳಲ್ಲಿ, ತಾಲೂಕು, ಜಿಲ್ಲೆ, ರಾಜ್ಯ ಪ್ರತಿನಿಧಿಯಾಗಿ ಸೇವೆ.


ಕೃಪಾಸನ್ನಿಧಿ ಸಾಂಸ್ಕೃತಿಕ ಕಲಾಕೇಂದ್ರ (ರಿ) ಧಾರವಾಡ, ವನಸುಮ ವೇದಿಕೆ (ರಿ)

ಕಟಪಾಡಿ ಉಡುಪಿ, ವನಸುಮ ಟ್ರಸ್ಟ್ (ರಿ) ಕಟಪಾಡಿ ಉಡುಪಿ, ಕರ್ನಾಟಕ ಜಾನಪದ ಅಭಿವೃದ್ಧಿ ಕೇಂದ್ರ (ರಿ)ಧಾರವಾಡ, ಗಜಾನನ ಮಹಾಲೆ ಕಲಾ ಪ್ರತಿಷ್ಠಾನ (ರಿ) ಧಾರವಾಡ, ಪ್ರಜ್ವಲ ಕನ್ನಡ ಹಾಗೂ ಕೊಂಕಣಿ ಕಲಾಸಂಘ (ರಿ) ಧಾರವಾಡ, ಹೀಗೆ ಹಲವಾರು ಸಂಘ ಸಂಸ್ಥೆಗಳ ಪದಾಧಿಕಾರಿ. ಆಕಾಶವಾಣಿ ಮಡಿಕೇರಿ ಕೇಂದ್ರದ ಬಿ ಗ್ರೇಡ್ (ನಾಟಕ)ಕಲಾವಿದೆ. ಮಕ್ಕಳ ರಂಗಭೂಮಿಯ ಇವರ ಸಾಧನೆಗೆ 2017ರಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಕೊಡುವ ಮಕ್ಕಳ ಕ್ಷೇತ್ರದಲ್ಲಿ ವೈಯಕ್ತಿಕ ಪ್ರಶಸ್ತಿಯಾದ "ಮಕ್ಕಳ ಕಲ್ಯಾಣ ರಾಜ್ಯ ಪ್ರಶಸ್ತಿ" ಲಭಿಸಿದೆ.

***ಮೊ: 8762445445, 9900600207***

---

## ಡಾ. ಭಾಸ್ಕರಾನಂದ ಕುಮಾರ್



ಅದ್ಭುತ ರಂಗಸಂಘಟಕ. ಮೂಲತಃ ಯಕ್ಷಗಾನ ಕಲಾವಿದನಾಗಿ ತನ್ನ ಅಪ್ರತಿಮ ದೇಹಭಾಷೆಯಿಂದಾಗಿ ಪ್ರೇಕ್ಷಕರ ಗಮನ ಸೆಳೆದವರು. ವೃತ್ತಿಯಲ್ಲಿ ಬಹುಬೇಡಿಕೆಯ ವೈದ್ಯನಾಗಿದ್ದರೂ ಕಲಾಸೇವೆಯಲ್ಲಿ ನಿರಂತರವಾಗಿ ತೊಡಗಿಸಿಕೊಂಡಿದ್ದಾರೆ. ಉಡುಪಿಯ ತುಳುಕೂಟ ಎನ್ನುವ ಸಂಸ್ಥೆಯ ಸ್ಥಾಪಕಾಧ್ಯಕ್ಷರಾಗಿ ನಿರಂತರ ತುಳು ನಾಟಕ ಸ್ಪರ್ಧೆಯನ್ನು ಏರ್ಪಡಿಸುವುದರ ಮೂಲಕ ಆಧುನಿಕ ನಾಟಕಗಳು ತುಳುವಿನಲ್ಲೂ ತಯಾರಾಗುವಂತೆ ಪ್ರೋತ್ಸಾಹಿಸಿದರು. ನೂರಾರು ರಂಗಕಲಾವಿದರಿಗೆ ಇಲ್ಲಿ ವೇದಿಕೆ ಸೃಷ್ಟಿಯಾಯಿತು. ಭೀಷ್ಮನ ಕೊನೆಯ ದಿನಗಳು ಎಂಬ ನಾಟಕವೊಂದನ್ನು ಬರೆಯುವ ಮೂಲಕ ನಾಟಕ ರಚನೆಗೆ ಮುಂದಾದರು. ಇದನ್ನು ಪ್ರಪ್ರಥಮವಾಗಿ ಖ್ಯಾತ ನಿರ್ದೇಶಕ ಬಾಸುಮ ಕೊಡಗು ನಿರ್ದೇಶಿಸುವುದರ ಮೂಲಕ ಯಶಸ್ವೀ ರಂಗಪ್ರಯೋಗವಾಗಿ ಮೂಡಿಬಂತು. ಮುಂದೆ ಈ ನಾಟಕಕೃತಿ ಮಂಗಳೂರು ವಿಶ್ವವಿದ್ಯಾನಿಲಯದ ಪದವಿ ಪಠ್ಯಪುಸ್ತಕವಾಗಿ ಆಯ್ಕೆಗೊಂಡದ್ದು ಈ ಕೃತಿಯ ಗಟ್ಟಿತನದ ಪ್ರತೀಕ. ಇತ್ತೀಚೆಗೆ ಅದೇ ಕೃತಿ ಮಲೆಯಾಳಂ ಭಾಷೆಗೆ ತರ್ಜುಮೆಗೊಂಡು ಪ್ರದರ್ಶನಕ್ಕೆ ಸಿದ್ಧವಾಗಿದೆ.

---

## ಲೀಲಾಧರ ಶೆಟ್ಟಿ ಕಾಪು



ಕಾಪು ರಂಗತರಂಗ ಸಂಸ್ಥೆಯ ಮೂಲಕ ಕರಾವಳಿ ಜಿಲ್ಲೆಯಲ್ಲದೆ, ಮುಂಬೈ, ದೆಹಲಿ ಹಾಗೂ ಕೊಲ್ಲಿ ರಾಷ್ಟ್ರಗಳಲ್ಲಿ ಮನೆಮಾತಾದ ರಂಗಸಂಘಟಕ ಹಾಗೂ ನಟ. ತುಳು ಹವ್ಯಾಸಿ ರಂಗಭೂಮಿಗೊಂದು ಹೊಸ ಆಯಾಮ ಕೊಟ್ಟ ಹಿರಿಮೆ ಇವರದು. ಆಧುನಿಕ ರಂಗತಂತ್ರಗಳನ್ನು ಹವ್ಯಾಸಿ/ಅರೆವೃತ್ತಿ ನಾಟಕಗಳಲ್ಲಿ ಅಳವಡಿಸುವ ಮೂಲಕ ಎಲ್ಲ ಅಭಿರುಚಿಯ ಪ್ರೇಕ್ಷಕರನ್ನು ಸೆಳೆಯುವಲ್ಲಿ ಯಶಸ್ವಿಯಾದವರು. ಇವರ ಸಂಸ್ಥೆಯ ಕಲಾವಿದರಿಗೆ ಬಾಸುಮ ಕೊಡಗು ನಿರ್ದೇಶಿಸಿದ 'ಆಯೆ ಸುಬಗೆ' ಎನ್ನುವ ರಂಗಪ್ರಯೋಗ ಸುಮಾರು 350ಕ್ಕೂ ಪ್ರದರ್ಶನ

ಕಂಡಿರುವುದು ಇವರ ಹೊಸತನದ ತುಡಿತಕ್ಕೆ ಸಂದ ಫಲ. ತಿಲಕೆ ತಿರ್ಗಯೆ, ಮೋಕೆ, ಪಿರ ಬನ್ನಗ ಹೀಗೆ 20ಕ್ಕೂ ಹೆಚ್ಚು ರಂಗಪ್ರಯೋಗಗಳನ್ನು ಸಿದ್ಧಪಡಿಸಿ 2000ಕ್ಕೂ ಹೆಚ್ಚು ಪ್ರದರ್ಶನ ನೀಡಿದ ಹೆಗ್ಗಳಿಕೆ ಇವರ ತಂಡದ್ದು.

---

## ಗೋಪಿನಾಥ್ ಹಳೆಯಂಗಡಿ



ಹಿರಿಯ ರಂಗನಟ, ಚಿತ್ರನಟ. ಉಡುಪಿ ದ.ಕ. ಜಿಲ್ಲೆಗಳಲ್ಲಿ ಹಾಗೂ ದೇಶದ ವಿವಿದೆಡೆ ನೂರಾರು ನಾಟಕಗಳಲ್ಲಿ ಅಭಿನಯಿಸಿದ ಅನುಭವಿ. ಕರ್ನಾಟಕ ಸಂಘ ಮುಂಬೈ ಇವರಿಂದ ಅಭಿನಯ ಚಕ್ರವರ್ತಿ ಬಿರದಾಂಕಿತರು. ತನ್ನ ಅಂಗವೈಕಲ್ಯವನ್ನೂ ಲೆಕ್ಕಿಸದೆ, ಯಾವುದೇ ಸಂಪಾದನೆಯ ಮೂಲ ಇಲ್ಲದೆಯೂ ನಾಟಕ ತಂಡ ಕಟ್ಟಿಕೊಂಡು ಮುಂಬೈಯಂತಹ ಪಟ್ಟಣಕ್ಕೆ ಹೋಗಿ ಪ್ರದರ್ಶನ ಮಾಡಿದ ಸಾಹಸಿ ಇವರು. ರಂಗತರಂಗ ಕಾಪು ತಂಡದ ಸ್ಥಾಪಕರು ಮತ್ತು ನಟರು. ಶ್ರೀ ಲಕ್ಷ್ಮೀನಾರಾಯಣ ಕಲಾವೃಂದ ಪೊಲಿಪು ಇದರ ಸ್ಥಾಪಕಾಧ್ಯಕ್ಷರು ಮತ್ತು ನಿರ್ದೇಶಕರು. ರಾಜು ಬಿ. ತೋನ್ಸೆಯವರ ಮಾರ್ಗದರ್ಶನದಲ್ಲಿ ರಂಗಭೂಮಿಗೆ ಪ್ರವೇಶಿಸಿದ ಇವರು, ತುಳು ಮಾತ್ರವಲ್ಲದೆ ಕನ್ನಡ ನಾಟಕಗಳಲ್ಲೂ ಅಭಿನಯಿಸಿರುತ್ತಾರೆ. ಹಲವಾರು ಸಿನಿಮಾಗಳಲ್ಲೂ ಅಭಿನಯಿಸಿರುತ್ತಾರೆ.

---

## ರವಿಕುಮಾರ್ ಕಡೆಕಾರ್




ನಾಟಕರಂಗದಲ್ಲಿ 24ವರ್ಷಗಳಿಂದ ದುಡಿಯುತ್ತಿರುವ ಇವರು ಕಡೆಕಾರ್ ವಿಠೋಭಾ ಭಜನಾ ಮಂದಿರವು ಆಯೋಜಿಸಿದ ಪೊರ್ತು ಕಂತ್‌ಂಡ್ ನಾಟಕದ ಮೂಲಕ ನಟನೆಯ ಬದುಕನ್ನು ಪ್ರಾರಂಭಿಸಿದರು. ಕತ್ತಲೆ ಕಬಿನಗ, ಬಯ್ಯಮಲ್ಲಿಗೆ, ಬೂದಣ್ಣನ ಮಗೆ ಅಣ್ಣು, ವಜ್ರದ ಕರಿಮಣಿ, ಈ ದಾಯೆ ಬತ್ತಾ, ಪಾನ್ ಬೀಡಾ ಪಾಂಡುರಂಗ, ಮಾಯೊದ ಬೊಲ್ಪು, ಕಲ್ಪೆರ ಮಸ್ತುಂಡು ಮತ್ತು ನನಲಾ ಬರೆದ್ ಮುಗಿದಿಜಿ ಹೀಗೆ 400ಕ್ಕೂ ಹೆಚ್ಚು ತುಳುನಾಟಕಗಳಲ್ಲಿ ಹಾಸ್ಯ ನಟ, ನಾಯಕಿ, ನಾಯಕ, ಪೋಷಕ ಹೀಗೆ ಬೇರೆ ಪಾತ್ರಗಳಲ್ಲಿ ನಟಿಸಿರುತ್ತಾರೆ. ಸೂರ್ಯಕಂತಿಯೆ, ಬರೆದ್ ಮುಗಿದಿಜಿ, ಪಾನ್‌ಬೀಡಾ ಪಾಂಡುರಂಗ, ಗೋಪಾಲ ಪಾತೆರುಜೆ, ಕಲ್ಪೆರ ಮಸ್ತುಂಡು ಮುಂತಾದ ನಾಟಕಗಳ ನಿರ್ದೇಶನ ಮಾಡಿ ಅಲ್ಲೂ ಸೈ ಅನ್ನಿಸಿಕೊಂಡವರು. ನಂತರ ಬರವಣಿಗೆಯಲ್ಲಿ ತೊಡಗಿಸಿಕೊಂಡ ಇವರು ಮಾಯದ ಬೊಲ್ಪು, ತೆರಿದ್ಲಾ ತೆರಿಯಂದಿನಕ್ಲು, ಯಾನ್ ಮಲ್ತಿನೆಂಚಿನ, ಭೈರಪುರದ ಭೈರಪ್ಪೆ, ಮಲ್ಲ್ ಕಟ್ಟಾಯಿ ಪಟ್ಲೊ, ರಂಗ ಮಾಜಿನಗ ಮುಂತಾದ ನಾಟಕ ಕೃತಿಗಳನ್ನು ರಚಿಸಿ ಆರು ನಾಟಕಗಳಿಗೆ ರತ್ನವರ್ಮ ಹೆಗ್ಗಡೆ ಪ್ರಶಸ್ತಿ ಪಡೆದಿರುತ್ತಾರೆ. ಇವರ ಪಾನ್ ಬೀಡಾ ಪಾಂಡುರಂಗ ನಾಟಕ 100ಕ್ಕೂ ಹೆಚ್ಚು ಪ್ರದರ್ಶನ ಕಂಡರೆ ಸೂರ್ಯಕಂತಿಯೆ ನಾಟಕ 500ಕ್ಕೂ ಹಚ್ಚು ಪ್ರದರ್ಶನ ಕಂಡಿದೆ. ಇವರ ಸಾಧನೆಯನ್ನು

ಗುರುತಿಸಿದ ಅನೇಕ ಸಂಘಸಂಸ್ಥೆಗಳಿಂದ 500 ಕ್ಕೂ ಹೆಚ್ಚು ಸನ್ಮಾನ ಪಡೆದಿರುವ ಇವರಿಗೆ, ಉಡುಪಿ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಸಂದಿದೆ. ಸನ್ನಿಧಿ ಕಲಾತಂಡವನ್ನು ಮುನ್ನಡೆಸುತ್ತಿರುವ ಮೂಲಕ ರಾಜ್ಯ ಹಾಗೂ ಹೊರ ರಾಜ್ಯಗಳಲ್ಲಿ ನಾಟಕ ಪ್ರದರ್ಶನ ಮಾಡುತ್ತಾ ಅನೇಕ ಹೊಸ ಕಲಾವಿದರನ್ನು ರಂಗಭೂಮಿಗೆ ಪರಿಚಯಿಸಿದ ಹೆಗ್ಗಳಿಕೆ ಇವರದು

---

## ಜಯಶೇಖರ ಮಡಪ್ಪಾಡಿ



ನೀನಾಸಂ ಪದವೀಧರರಾದ ಇವರು ಬೆಳಕಿನ ವಿನ್ಯಾಸ ಕಾರರಾಗಿ ಹೆಸರಾದವರು. ನೀನಾಸಂ ತಿರುಗಾಟದಲ್ಲಿ ಹಲವಾರು ವರ್ಷ ಸೇವೆ ಸಲ್ಲಿಸಿ, ದುಡಿಮೆಗಾಗಿ ಕುಂದಾಪುರದಲ್ಲಿ ನೆಲೆಸಿದ್ದಾರೆ. ಕರಾವಳಿಯ ಬಹುತೇಕ ಎಲ್ಲಾ ಸಂಘಟನೆಗಳ ನಾಟಕಗಳಿಗೆ ನೇಪಥ್ಯದಲ್ಲಿ ದುಡಿಯುವ ಕ್ರೀಯಾಶೀಲ ಕಲಾವಿದ. ಪ್ರತಿ ವರ್ಷ ನಡೆಯುವ ನಾಟಕ ಸ್ಪರ್ಧೆಗಳಲ್ಲೂ ಸಕ್ರೀಯವಾಗಿ ಭಾಗವಹಿಸು ತ್ತಿದ್ದಾರೆ. ಬೀದಿ ಮಕ್ಕಳ ಶ್ರೇಯೋಭಿವೃದ್ಧಿಗೆ ಸಂಬಂಧಿಸಿದಂತೆ ಹಲವಾರು ಬೀದಿನಾಟಕಗಳನ್ನು ನಿರ್ದೇಶಿಸಿರುತ್ತಾರೆ. ನಟನಾಗಿಯೂ ಸೈ ಎನಿಸಿಕೊಂಡಿದ್ದಾರೆ. ಒಳ್ಳೆಯ ರಂಗವಿಮರ್ಶಕರು ಹೌದು. ಪತ್ರಕರ್ತರಾಗಿ ದುಡಿಯುತ್ತಾ ಹಲವಾರು ರಂಗಗೋಷ್ಠಿಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿರುತ್ತಾರೆ. ಹಲವಾರು ನಾಟಕ ಸ್ಪರ್ಧೆಗಳಿಗೆ ತೀರ್ಪುಗಾರರಾಗಿ ಸೇವೆ ಸಲ್ಲಿಸಿದ್ದಾರೆ. ಮುಂಬೈ, ದೆಹಲಿ, ಬೆಂಗಳೂರು ಸೇರಿದಂತೆ ರಾಜ್ಯದ ವಿವಿದೆಡೆ ನಾಟಕಗಳಿಗೆ ಬೆಳಕಿನ ವಿನ್ಯಾಸ ಮಾಡಿರುತ್ತಾರೆ.

---

## ರೇವತಿ ನಾಡಗೀರ



ಮಣಿಪಾಲ ಯುನಿವರ್ಸಲ್ ಪ್ರೆಸ್, ಮಣಿಪಾಲ ಮಾರುಕಟ್ಟೆ ವಿಭಾಗದ ಮುಖ್ಯ ಕಾರ್ಯ ನಿರ್ವಾಹಕರು. ಭರತಾಂಜಲಿ ಕಿರದಾರ್ ಥಿಯೇಟರ್ ಟ್ರೇನಿಂಗ್ ಗ್ರೂಪ್ ಉಡುಪಿ ಇದರ ನಿರ್ದೇಶಕಿ. ಸಿರಿಸಂಪಿಗೆ, ಜಡಭರತನ ಕನಸುಗಳು, ಮೃಚ್ಛ ಕಟಿಕ, ಬೆಂದಕಾಳು ಆನ್ ಟೋಸ್ಟ್, ನಾಗಮಂಡಲ, ಯು ಟರ್ನ್, ಆನಿವರ್ಸರಿ ನಾಟಕಗಳಲ್ಲಿ ಪಾತ್ರ ನಿರ್ವಹಣೆ. ಸುಳ್ಳು ನಮ್ಮಲ್ಲಿಲ್ಲವಯ್ಯಾ ಸುಳ್ಳೇ ನಮ್ಮನೀ ದೇವರು ಎಂಬ ವಸುಧೇಂದ್ರರವರ ಕತೆಯನ್ನು ನಾಟಕ ರೂಪಾಂತರ ಮಾಡಿ ನಿರ್ದೇಶನ ಮಾಡಿದ್ದಾರೆ. ನೀನಾಸಮ್‌ನ 21 ದಿನದ ನಾಟಕ ಶಿಬಿರದಲ್ಲಿ ಭಾಗವಹಿಸಿರುತ್ತಾರೆ. ಆಕಾಶವಾಣಿ ಮಂಗಳೂರು, ಬಿ ಗ್ರೇಡ್ ಆರ್ಟಿಸ್ಟ್, ಭರತಾಂಜಲಿಯ ಕಿರದಾರ್ ಥೇಯಟರ್ ಟ್ರೇನಿಂಗ ಗ್ರೂಪ್ ಎಂಬ ನಾಟಕ ತರಬೇತಿ ಕೇಂದ್ರದ ಮೂಲಕ ಯುವಕ ಯುವತಿಯರಿಗೆ ರಂಗ ತರಬೇತಿ ನೀಡುತ್ತಿದ್ದಾರೆ.

## ವಿವೇಕಾನಂದ ಪಾಂಗಣ್ಣಾಯ



ರಂಗಭೂಮಿ ಉಡುಪಿ ಆಯೋಜಿಸಿದ ಬಾಸುಮ ಕೊಡಗು ನಿರ್ದೇಶನದ ಹೇಮಂತ ನಾಟಕದ ಮೂಲಕ ಆಧುನಿಕ ನಾಟಕಗಳ ರಂಗಪ್ರವೇಶ. ಭಾಸ ಭಾರತ, ನಮ್ಮುಲಯಿದಾಯೆ, ತೆಂಬರೆ, ಕಳ್ಳ ಸುಳ್ಳ ಮಳ್ಳ, ದಗಲ್ಬಾಜಿಲು, ಕತ್ತಲೆ ದಾರಿ ದೂರ, ಕಾಲಚಕ್ರ, ಐಸಿಯು, ಜೋಕುಲು ಬಾಲೆಲು, ಪೂರ್ವಿ ಕಲ್ಯಾಣಿ ಹೀಗೆ ಕನ್ನಡ ಮತ್ತು ತುಳು ನಾಟಕಗಳಲ್ಲಿ ನಿರಂತರ 18 ವರ್ಷಗಳಿಂದ ಸಕ್ರೀಯರಾಗಿದ್ದಾರೆ. ವನಸುಮ ವೇದಿಕೆ ಕಟಪಾಡಿ, ರಂಗಭೂಮಿ ಮತ್ತು ಇನ್ನಿತರ ಸಂಸ್ಥೆಗಳಲ್ಲಿ ಸಕ್ರೀಯರಾಗಿದ್ದಾರೆ.

---

## ಎಮ್. ಜಾನಕಿ ಬ್ರಹ್ಮಾವರ



ನಾಟಕಕಾರ್ತಿಯಾಗಿರುವ ಇವರು 'ಅಮರ್‌ಬೈದೆರ್ಲ್', 'ತುಳುನಾಡ್‌ದ ಬೊಳ್ಳಿಲ್'(ಕಾಂತಾಬಾರೆ– ಬೂದಾಬಾರೆ) 'ತಿಬಿಲೆದ ತುಡರ್' 'ಕೋಡ್ದಬ್ಬು – ತನ್ನಿಮಾನಿಗ', 'ಮೈಮೆದ ಮಣಿಕಂಠೆ' ಮೊದಲಾದ ಹೊಸ ಶೈಲಿಯ ತುಳು ಕೃತಿಗಳನ್ನು ನೀಡಿದ್ದಾರೆ. ಕನ್ನಡದ ಹೆಸರಾಂತ ನಾಟಕಗಳಾದ 'ಏಕಲವ್ಯ', 'ರಕ್ತಾಕ್ಷಿ', 'ಶೂದ್ರತಪಸ್ವಿ' 'ಸ್ಮಶಾನ ಕುರುಕ್ಷೇತ್ರ', 'ಕೋರ್ಟ್ ಮಾರ್ಷಲ್', 'ಮಾಯೊದ ಮುರ್ಗ' ಮೊದಲಾದವುಗಳನ್ನು ತುಳು ಭಾಷೆಗೆ ಅನುವಾದ ಮಾಡುವ ಮೂಲಕ ತುಳು ರಂಗಭೂಮಿಯಲ್ಲಿ ಆಧುನಿಕ ನಾಟಕಗಳ ಬೆಳವಣಿಗೆಗೆ ಕಾರಣರಾದರು. ಲೇಖಕಿಯಾಗಿರುವ ಇವರು ಹಲವಾರು ಕಾದಂಬರಿ, ಕಥೆ, ಕವನ ಸಂಕಲನಗಳನ್ನು ಹೊರತಂದಿದ್ದಾರೆ. ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷೆಯಾಗಿಯೂ ಸೇವೆ ಸಲ್ಲಿಸಿರುತ್ತಾರೆ. ಇವರ ಕೃತಿಗಳಿಗೆ, ಇವರಿಗೆ ಪಣಿಯಾಡಿ ಪ್ರಶಸ್ತಿ, ಸಂದೇಶ ಪ್ರಶಸ್ತಿ, ವೀರರಾಣಿ ಅಬ್ಬಕ್ಕ ಪ್ರಶಸ್ತಿ, ರಾಣಿಚೆನ್ನಮ್ಮ ಪ್ರಶಸ್ತಿ, ವಿಶುಕುಮಾರ್ ಸಾಹಿತ್ಯ ಪ್ರಶಸ್ತಿ, ಸಾಹಿತ್ಯ ಸಂಗಮ ಪ್ರಶಸ್ತಿ ಹೀಗೆ ಹಲವಾರು ಪ್ರಶಸ್ತಿಗಳು ಸಂದಿವೆ.

---

## ರಾಘವೇಂದ್ರ ರಾವ್ ಕಟಪಾಡಿ




ಶಾಲಾದಿನಗಳಲ್ಲಿಯೇ ನಾಟಕಗಳಲ್ಲಿ ಪಾತ್ರ ಮಾಡಲು ಪ್ರಾರಂಭಿಸಿ, ನಿರಂತರ ವಿವಿಧ ನಿರ್ದೇಶಕರ ನಾಟಕಗಳಲ್ಲಿ ಅಭಿನಯಿಸುತ್ತಾ ತಮ್ಮ ಅನುಭವ ಹೆಚ್ಚಿಸಿಕೊಂಡವರು. ಆರಂಭದಲ್ಲಿ ಹವ್ಯಾಸಿ ನಾಟಕಗಳಲ್ಲಿ ಪಾತ್ರ ಮಾಡುತ್ತಾ ಕ್ರಮೇಣ ಆಧುನಿಕ ನಾಟಕಗಳ ತರಬೇತಿ ಪಡೆದುಕೊಂಡರು. ಸೂರ್ಯಶಿಕಾರಿ, ಚಮ್ಮಾರನ ಚಾಲಾಕಿ ಹೆಂಡತಿ, ಹೇಮಂತ, ಕೇಸ್ ನಂ 99, ಸುಳಿಯಲ್ಲಿ ಸಿಕ್ಕವರು ಹೀಗೆ ಹಲವಾರು ನಾಟಕಗಳಲ್ಲಿ ಪಾತ್ರ ಮಾಡಿದಲ್ಲದೆ ರಾಜ್ಯ ಮಟ್ಟದ ಸ್ಪರ್ಧೆಗಳಲ್ಲಿ ಅಭಿನಯ ಹಾಗೂ ನಿರ್ದೇಶನಕ್ಕೆ ಬಹುಮಾನ

ಪಡೆದಿರುತ್ತಾರೆ. ಕಟಪಾಡಿಯಲ್ಲಿ ರಂಜನಾ ಕಲಾವಿದರು ಸಂಸ್ಥೆಯನ್ನು ಸ್ಥಾಪಿಸಿ ಪ್ರತೀ ವರ್ಷ ನಾಟಕೋತ್ಸವಗಳನ್ನು ಮಾಡುತ್ತಿದ್ದಾರೆ. ಹೆಸರಾಂತ ನಿರ್ದೇಶಕರಾದ ಬಾಸುಮ ಕೊಡಗು, ಜೀವನ್ ರಾಮ್ ಸುಳ್ಯ, ಕಾಸರಗೋಡು ಚಿನ್ನಾ, ಮಾಲತೇಶ ಬಡಿಗೇರ ಮೊದಲಾದವರ ನಿರ್ದೇಶನದಲ್ಲಿ ಅಭಿನಯಿಸಿರುತ್ತಾರೆ.

---

## ಗಣೇಶ್‌ರಾವ್ ಎಲ್ಲೂರು



1980ರಲ್ಲಿ 9ನೇ ವಯಸ್ಸಿನಲ್ಲಿ ಯಕ್ಷಗಾನ ಹಾಗೂ ನಾಟಕ ರಂಗ ಪ್ರವೇಶ. 1980ರಿಂದ2000ರವರೆಗೆ ಶಾಲೆ, ಕಾಲೇಜ್, ಸಂಘ ಸಂಸ್ಥೆಗಳಲ್ಲಿ ಕನ್ನಡ ಮತ್ತು ತುಳು ನಾಟಕದಲ್ಲಿ ನಟನೆ, ನಿರ್ದೇಶನ ಮಾಡಿದ್ದಾರೆ. 2001ರಲ್ಲಿ ಮರಾಠಿ ರಂಗಭೂಮಿ ಪ್ರವೇಶಿಸಿದ ಇವರು 5 ನಾಟಕಗಳಲ್ಲಿ ಅಭಿನಯ, 2 ನಾಟಕದಲ್ಲಿ ಸಹನಿರ್ದೇಶನ, 1 ನಾಟಕದ ನಿರ್ದೇಶನ ಮಾಡಿರುತ್ತಾರೆ. ಇದುವರೆಗೆ ಕನ್ನಡದ 30ನಾಟಕಗಲ್ಲಿ ಅಭಿನಯ, 25 ನಾಟಕಗಳ ನಿರ್ದೇಶನ, 15 ನಾಟಕಗಳಿಗೆ ಸಂಗೀತ ನಿರ್ದೇಶನ ಮಾಡಿರುತ್ತಾರೆ. 2 ನಾಟಕದ ನಿರ್ದೇಶನ ಮತ್ತು 3 ನಾಟಕದ ಸಂಗೀತ ನಿರ್ವಹಣೆಗೆ ಪ್ರಶಸ್ತಿ ದೊರೆತಿದೆ. ತುಳು ರಂಗಭೂಮಿಯಲ್ಲಿ 40 ನಾಟಕಗಳಲ್ಲಿ ಅಭಿನಯ, 30ಕ್ಕೂ ಹೆಚ್ಚು ನಾಟಕಗಳ ನಿರ್ದೇಶನ, 10 ನಾಟಕಗಳ ಸಂಗೀತ ಮಾಡಿರುವ ಇವರ ನಿರ್ದೇಶನದ 4 ನಾಟಕಗಳಿಗೆ, 2 ನಾಟಕಗಳ ಸಂಗೀತ ನಿರ್ದೇಶನಕ್ಕೆ, ಬೆಳಕಿನ ಸಂಯೋಜನೆಗೆ ಪ್ರಶಸ್ತಿ ಲಭಿಸಿವೆ. ಸಂಸ್ಕೃತ ನಾಟಕ ನಿರ್ದೇಶಿಸಿ ರಾಷ್ಟ್ರ ಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಿರುತ್ತಾರೆ. ಕೊಂಕಣಿ ನಾಟಕದ ನಿರ್ದೇಶನದ ಜೊತೆಗೆ 5 ಭಾಷೆಗಳಲ್ಲಿ ನಾಟಕ ನಿರ್ದೇಶನ ಮಾಡಿರುತ್ತಾರೆ. ರಂಗಶಿಬಿರಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗಿ, ಹಲವಾರು ಸಂಘ ಸಂಸ್ಥೆಗಳಲ್ಲಿ ಪದಾಧಿಕಾರಿ ಸೇವೆ. ಸ್ವತ: 'ಸ್ನೇಹ ಜೀವಿ' ಸಂಸ್ಥೆಯನ್ನು ನಡೆಸುತ್ತಾ ಯಕ್ಷಗಾನ, ನಾಟಕ, ಸಂಗೀತ, ಮಕ್ಕಳ ರಂಗಭೂಮಿಯ ತರಬೇತಿ ನೀಡುವಿಕೆ. 'ರಂಗಸ್ನೇಹಿ'ಪ್ರಶಸ್ತಿ ಪುರಸ್ಕೃತರು. ರಂಗಭೂಮಿಯ ಜೊತೆ ಸಿನಿಮಾರಂಗದಲ್ಲೂ ಸೇವೆ.

---

## ಗಿರೀಶ್ ಬೈಂದೂರು



ಹವ್ಯಾಸಿ ರಂಗಭೂಮಿಯಲ್ಲಿ ಕಳೆದ ನಾಲ್ಕು ದಶಕಗಳಿಂದ ನಟರಾಗಿ, ನಿರ್ದೇಶಕರಾಗಿ ತೊಡಗಿಸಿಕೊಂಡಿರುವ ಇವರು ನಾಯಿಕತೆ, ಬೇಲಿ ಮತ್ತು ಹೊಲ, ಚೋರ ಚರಣದಾಸ, ಮರಣಮೃದಂಗ ಮುಂತಾದ ಪ್ರಮುಖ ನಾಟಕಗಳಲ್ಲಿ ಅಭಿನಯಿಸಿರುವುದಲ್ಲದೆ, ಗಾಂಧಿಗೆ ಸಾವಿಲ್ಲ ಮತ್ತು ಮುದ್ದಣ್ಣನ ಪ್ರಮೋಷನ್ ಪ್ರಸಂಗ ನಾಟಕಗಳನ್ನು ನಿರ್ದೇಶಿಸಿದ್ದಾರೆ. ಇವರ ನಾಟಕಗಳ ಅಭಿನಯ ಹಾಗೂ ನಿರ್ದೇಶನಕ್ಕೆ ವಿವಿಧ ಸ್ಪರ್ಧೆಗಳಲ್ಲಿ ಬಹುಮಾನ ಬಂದಿರುತ್ತದೆ. ಕಿರುತೆರೆ ಮತ್ತು ಬೆಳ್ಳಿತೆರೆಯಲ್ಲೂ ಶ್ರಮಿಸಿದ್ದಾರೆ.

## ಬಾಸುಮ ಕೊಡಗು




ನಾಲ್ಕನೇ ತರಗತಿಯಲ್ಲಿದ್ದಾಗ ಮೊದಲ ಭಾರಿಗೆ ನಾಟಕ ಮಾಡಿದ ಅನುಭವ. ಮುಂದೆ ಐ.ಕೆ. ಬೊಳುವಾರು, ಮೋಹನ್ ಸೋನಾ, ಗೋಪಾಡ್ಕರ್ ಮೊದಲಾದವರು ನಡೆಸಿದ ರಂಗಶಿಬಿರಗಳಲ್ಲೂ ಭಾಗಿ. ಆ ಸಮಯಕ್ಕೆ ಬಿ.ವಿ.ಕಾರಂತರ ರಂಗಸಾಧನೆಗಳನ್ನು ಕಣ್ಣಾರೆ ಕಂಡು ರಂಗಕ್ಕೆ ಸಮರ್ಪಣೆ.

ಮುಂದೆ ಯುವಜನಮೇಳಗಳಿಗೆ ನಾಟಕ ನಿರ್ದೇಶಿಸಿ, ತಾಲೂಕು, ಜಿಲ್ಲೆ, ವಿಭಾಗ ಹಾಗೂ ರಾಜ್ಯ ಮಟ್ಟದಲ್ಲಿ ಬಹುಮಾನಿತನಾದದ್ದು, ರಂಗಕ್ಕೆ ಹೆಚ್ಚು ಅಂಟಿಕೊಳ್ಳಲು ಕಾರಣವಾಯಿತು. ಕಾಲೇಜಿನಲ್ಲಿದ್ದಾಗಲೇ ರಂಗತಂಡ ಕಟ್ಟಿಕೊಂಡು ನಾಟಕಗಳನ್ನು ಮಾಡಲು ಆರಂಭಿಸಿದರು.

ಪದವಿ ಬಳಿಕ ನೀನಾಸಂ ರಂಗಶಿಕ್ಷಣ ಕ್ಷೇತ್ರದಲ್ಲಿ ರಂಗ ಶಿಕ್ಷಣ ಪದವಿ. ಮುಂದೆ ಭಾರತದ ಹಲವು ಶ್ರೇಷ್ಠ ನಿರ್ದೇಶಕರೊಡನೆ ಸಹಾಯಕನಾಗಿ ದುಡಿದು ರಂಗಾನುಭವವನ್ನು ವಿಸ್ತರಿಸಿಕೊಂಡರು. ನಿರ್ದೇಶನ, ಅಭಿನಯ, ರಂಗವಿನ್ಯಾಸ, ಪ್ರಸಾದನ, ವಸ್ತ್ರವಿನ್ಯಾಸ, ಬೆಳಕಿನ ಸಂಯೋಜನೆ, ಸಂಗೀತ ಸಂಯೋಜನೆ ಹೀಗೆ ರಂಗದ ಎಲ್ಲಾ ಆಯಾಮಗಳಲ್ಲೂ ಹಲವು ವರ್ಷಗಳ ಕಾಲ ಪ್ರಯೋಗ ಮಾಡುತ್ತಾ, ಇಂದು ಕರ್ನಾಟಕದ ಬೇಡಿಕೆಯ ನಿರ್ದೇಶಕರ ಸಾಲಿನಲ್ಲಿ ಗುರುತಿಸಲ್ಪಟ್ಟಿದ್ದಾರೆ.

ಇದುವರೆಗೂ ಸುಮಾರು 80 ಪೂರ್ಣಾವಧಿ, 33 ಅಲ್ಪಾವಧಿ ನಾಟಕಗಳನ್ನು, ಕನ್ನಡ, ತುಳು, ಮಲೆಯಾಳಂ, ಕೊಂಕಣಿ, ಹಿಂದಿ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ನಿರ್ದೇಶಿಸಿದ್ದಾರೆ. ಅವುಗಳಲ್ಲಿ 28 ಮಕ್ಕಳ ನಾಟಕಗಳು. ರಂಗಾಯಣ, ರಂಗಭಾರತಿ ಬೇಸಿಗೆ ಶಿಬಿರಗಳು ಸೇರಿದಂತೆ ಸುಮಾರು 60ರಷ್ಟು ರಂಗಶಿಬಿರಗಳನ್ನು ರಾಜ್ಯಾದ್ಯಂತ ಹಾಗೂ ನೆರೆರಾಜ್ಯಗಳಲ್ಲಿ ನರ್ದೇಶಿಸಿರುತ್ತಾರೆ. ರಾಜ್ಯದ ಹಲವಾರು ರಂಗತಂಡಗಳಿಗೆ ನಾಟಕ ನಿರ್ದೇಶನ ಮಾಡಿದ್ದು, ಇದುವರೆಗೆ 15 ನಾಟಕಗಳಿಗೆ ರಾಜ್ಯಮಟ್ಟದ ಸ್ಪರ್ಧೆಗಳಲ್ಲಿ ಬಹುಮಾನ ಬಂದಿದೆ. 3 ನಾಟಕಗಳಿಗೆ ರಾಷ್ಟ್ರ ಮಟ್ಟದ ಸ್ಪರ್ಧೆಗಳಲ್ಲಿ ಬಹುಮಾನ ಬಂದಿದೆ. ಸುಮಾರು 14 ನಾಟಕ ಕೃತಿಗಳನ್ನು ದೊಡ್ಡವರಿಗಾಗಿ, 15 ನಾಟಕಗಳನ್ನು ಮಕ್ಕಳಿಗಾಗಿ ರಚಿಸಿರುತ್ತಾರೆ. ಅವುಗಳಲ್ಲಿ 5 ನಾಟಕ ಕೃತಿಗಳು ಮಾತ್ರ ಅಚ್ಚಾಗಿದ್ದು, ಉಳಿದವು ಅಚ್ಚಾಗುವ ಅದೃಷ್ಟದ ನಿರೀಕ್ಷೆಯಲ್ಲಿವೆ. ಉಡುಪಿಯಲ್ಲಿ ವಾಸ್ತವ್ಯ ಆರಂಭಿಸಿದ ಮೇಲೆ 2002ರಲ್ಲಿ "ಸುಮನಸಾ ಕೊಡವೂರು- ಉಡುಪಿ(ರಿ.)" ಸಂಸ್ಥೆ ಆರಂಭಿಸಿ, 2012 ರಲ್ಲಿ ದಶಮಾನೋತ್ಸವದಲ್ಲಿ ರಾಷ್ಟ್ರೀಯ ಬಹುಭಾಷಾ ನಾಟಕೋತ್ಸವ ಆಯೋಜಿಸಿರುತ್ತಾರೆ. ಇದೀಗ ಕಟಪಾಡಿಯಲ್ಲಿ ನೆಲೆಸಿದ್ದು "ವನಸುಮ ವೇದಿಕೆ (ರಿ) ಕಟಪಾಡಿ" ಹಾಗೂ "ವನಸುಮ ಟ್ರಸ್ಟ್ (ರಿ) ಕಟಪಾಡಿ" ಸಂಸ್ಥೆಗಳನ್ನು ಸ್ಥಾಪಿಸಿಕೊಂಡು ರಂಗಚಟುವಟಿಕೆಗಳಲ್ಲಿ ಸಕ್ರೀಯವಾಗಿರುತ್ತಾರೆ. ರಾಜ್ಯದ ಬಹುತೇಕ ಎಲ್ಲ ಜಿಲ್ಲೆಗಳಲ್ಲಿ ರಂಗಶಿಬಿರಗಳನ್ನು ನಿರ್ದೇಶಿಸಿರುತ್ತಾರೆ.



## ಹರಿಶ್ಚಂದ್ರ ಹೆಬ್ಬಾರ್

ಮಿತ್ರಮಂಡಳಿ ಸ್ಥಾಪಕರು. ಮೈಕೋ ಉದ್ಯೋಗಿಯಾಗಿದ್ದುಕೊಂಡೇ ಹಲವಾರು ನಾಟಕಗಳಲ್ಲಿ ಭಾಗಿಯಾದವರು.



## ಗುರುವ ಕಾಂಚನ

ಮಿತ್ರಮಂಡಳಿ ನಟರು, ವೇಷಭೂಷಣ, ವರ್ಣಾಲಂಕಾರ, ರಂಗವಿನ್ಯಾಸ, ರಂಗಪರಿಕರಗಳಲ್ಲಿ ನಿಷ್ಣಾತ. ವೃತ್ತಿಯಲ್ಲಿ ಕೃಷಿಕ, ಪ್ರವೃತ್ತಿಯಲ್ಲಿ ನಟ ನಿರ್ದೇಶಕ.




## ಕೆ.ಕೃಷ್ಣಮೂರ್ತಿ ಐತಾಳ

ಎಚ್ಚಮ ನಾಯಕ 36ಅಲ್ಲ63 ಹೀಗೆ ಪೌರಾಣಿಕ ಮತ್ತು ಹಾಸ್ಯ ನಾಟಕಗಳೆಡರಲ್ಲೂ ಪಾತ್ರಮಾಡಿ ಸೈ ಎನಿಸಿಕೊಂಡವರು. 50ಕ್ಕೂ ಹೆಚ್ಚು ನಾಟಕಗಳಲ್ಲಿ ಹಾಸ್ಯಪಾತ್ರ ಮಾಡಿ ಜನಮನ್ನಣೆ ಗಳಿಸಿದವರು.




## ಎಚ್. ಶ್ರೀಧರ ಹಂದೆ.

ಎಚ್ಚಮ, ಟಿಪ್ಪು ಸುಲ್ತಾನ, ಪಂಚಭೂತ ಹೀಗೆ ಹತ್ತಾರು ನಾಟಕಗಳಲ್ಲಿ ಅಭಿನಯಿಸಿದ ಇವರು ಯಕ್ಷಗಾನ ಗುರುಗಳು. ಮಕ್ಕಳ ಮೇಳದಿಂದ ಪ್ರಸಿದ್ಧರಾದವರು.




## ವಿ. ರಂಗಪ್ಪಯ್ಯ ಹೊಳ್ಳ

ಕಲಿ ಕಂಠೀರವ, ಎಚ್ಚಮ, ಟಿಪ್ಪು ಸುಲ್ತಾನ, ಮಹಾತಪಸ್ವಿ ಮೊದಲಾದ ಹಲವಾರು ನಾಟಕಗಳಲ್ಲಿ ಅಭಿನಯಿಸಿರುತ್ತಾರೆ. ಒಳ್ಳೆಯ ರಂಗಸಂಘಟಕ ಎಂದು ಹೆಸರಾದವರು.



## ರಾಮಚಂದ್ರ ಐತಾಳ

ನಟ ಹಾಗೂ ನಿರ್ದೇಶಕ. ಚಾಣಕ್ಯ, ಎಚ್ಚಮ, ಟಿಪ್ಪು ಸುಲ್ತಾನ, ಮಹಾತಪಸ್ವಿ ಮೊದಲಾದ ಹಲವಾರು ನಾಟಕಗಳಲ್ಲಿ ಅಭಿನಯಿಸಿರುತ್ತಾರೆ.




## ರಾಮದೇವ ಐತಾಳ

ಟಿಪ್ಪು, ಚಾಣಕ್ಯ, ಕಲಿ ಕಂಠೀರವ ಮಹಾತಪಸ್ವೀ ಮೊದಲಾದ ನಾಟಕಗಳಲ್ಲಿ ವಿಭಿನ್ನ ಪಾತ್ರಗಳನ್ನು ಮಾಡಿದವರು. ಹಲವು ನಾಟಕಗಳನ್ನು ಬರೆದವರು.



## ಪಾರಂಪಳ್ಳಿ ನರಸಿಂಹ ಐತಾಳ

ಮಿತ್ರಮಂಡಳಿಯ ಬಹುತೇಕ ಎಲ್ಲ ನಾಟಕಗಳಲ್ಲಿ ಪೋಷಕ ಪಾತ್ರಧಾರಿ ಎಂದೇ ಹೆಸರಾದವರು. ಏಕಪಾತ್ರಾಭಿನಯದಲ್ಲೂ ಎತ್ತಿದ ಕೈ.




## ಮಣೂರು ನರಸಿಂಹ ಮಧ್ಯಸ್ಥ

ನಾಟಕಕಾರರು ಆಗಿರುವ ಇವರು, ಸ್ತ್ರೀ ಪಾತ್ರಧಾರಿಯಾಗಿ ಪ್ರಸಿದ್ಧರು. ಮಿತ್ರಮಂಡಳಿಯ ಎಲ್ಲಾ ನಾಟಕಗಳಲ್ಲಿಯೂ ನಾಯಕಿ ಪಾತ್ರದಲ್ಲಿ ಮಿಂಚಿದವರು.



## ಗಿಳಿಯಾರು ಶ್ರೀನಿವಾಸ ಅಡಿಗ

ಪೋಷಕ ನಟನಾಗಿ, ಸ್ತ್ರೀ ಪಾತ್ರಧಾರಿಯಾಗಿ ಪ್ರಸಿದ್ಧರು. ದಿವ್ಯದರ್ಶನ ನಾಟಕದ ಅಂಬಿಕೆಯ ಪಾತ್ರದಿಂದಾಗಿ ಬಹುಬೇಡಿಕೆಯ ನಟರಾದವರು.




## ಸುಜಯೀಂದ್ರ ಹಂದೆ

ಯಕ್ಷಗಾನ ಹಾಗೂ ನಾಟಕ ನಿರ್ದೇಶಕ. ಮಕ್ಕಳ ತಂಡ ಮತ್ತು ಮಕ್ಕಳ ಮೇಳದ ನಿರ್ವಾಹಕ. ಉತ್ತಮ ನಟ, ಸಂಘಟಕ.




## ಉಪೇಂದ್ರ ಸೋಮಯಾಜಿ

ಪೌರಾಣಿಕ ಮತ್ತು ಐತಿಹಾಸ ನಾಟಕಗಳಲ್ಲಿ ಪರಿಣತರು. ರಂಗದ ಎಲ್ಲ ಆಯಾಮಗಳಲ್ಲೂ ಕೈಯಾಡಿಸಿದವರು. ನಟನೆಯಲ್ಲೂ ಬಹುಮಾನಿತರು.




ತುಳು ಹವ್ಯಾಸಿ ನಾಟಕದ ಸಾಂಪ್ರದಾಯಿಕ ರಂಗಸಜ್ಜಿಕೆ



ತುಳು ಆಧುನಿಕ ನಾಟಕದ ಕ್ರೀಯಾಶೀಲ ರಂಗಸಜ್ಜಿಕೆ




ತುಳು ಆಧುನಿಕ ನಾಟಕದ ಸಾಂಕೇತಿಕ ರಂಗಸಜ್ಜಿಕೆ




ವನಸುಮ ವೇದಿಕೆ ಕಟಪಾಡಿ 'ಅಂತರಾಳ' ನಾಟಕ




ನವಸುಮ ರಂಗಮಂಚ ಕೊಡವೂರು 'ಅಗ್ನಿ ಮತ್ತು ಮಳೆ' ನಾಟಕ



ಸುಮನಸಾ ಕೊಡವೂರು 'ಒಂದು ಬೊಗಸೆ ನೀರು' ನಾಟಕ




ನಾಟ್ಕ ಮುದ್ರಾಡಿ ತಂಡದ 'ಹುಲಿಯ ನೆರಳು' ನಾಟಕ



ರಂಗಭೂಮಿ ಉಡುಪಿ ತಂಡದ 'ಯುಗಾಂತ' ನಾಟಕ



ರಸರಂಗ ಕದ್ರಿಕಟ್ಟು ಕೋಟ ತಂಡದ 'ಕೆಂಪು ಕಣಗಿಲೆ'



ಕರಾವಳಿ ಕಲಾವಿದರು ತಂಡದ 'ಪಂಚವಟಿ' ನಾಟಕ



ಸಂಚಲನ ಹೊಸೂರು ತಂಡದ ಮಕ್ಕಳ ನಾಟಕ



ಅಮೋಘ ಉಡುಪಿ ತಂಡದ 'ಸಂಬಂಧ' ನಾಟಕ